VEC, Library
004241
4241

(4261)

VEC, Library
004241

ACCN. No. 4241
SECTION
COST
Date 23·2·23 Librarian.

ತ್ರೈವಾರ್ಷಿಕ ಯೋಜನೆಯ ಪುಸ್ತಕಮಾಲೆ-೫೪

ಭಾರತ-ಪಾಕಿಸ್ತಾನ ಯುದ್ಧದಲ್ಲಿ ಭಾಗವಹಿಸಿದ

ಕರ್ನಾಟಕದ ವೀರಯೋಧರು

ಬಿ. ನ. ಸುಂದರರಾವ್
(ವನವಿಹಾರಿ)

4241

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ
ಚಾಮರಾಜಪೇಟೆ :: ಬೆಂಗಳೂರು-೧೮

ಪ್ರಥಮ ಮುದ್ರಣ : ೧೯೭೨

ಎಲ್ಲ ಹಕ್ಕುಗಳನ್ನು ಕಾದಿರಿಸಲಾಗಿದೆ.

ಬೆಲೆ : ೫-೦೦

ಸಾಧಾರಣ ಪ್ರತಿ : ೫-೦೦

ಕ್ಯಾಲಿಕೋ ಪ್ರತಿ : ೮-೦೦

ಮುದ್ರಕರು :

ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟ

ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು-೧೮

ಪ್ರಸ್ತಾವನೆ

ಕನ್ನಡ ನಾಡು ನುಡಿ ಸಂಸ್ಕೃತಿಯ ಪುರೋಭಿವೃದ್ಧಿಗಾಗಿ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಾಭಿಮಾನಿಗಳ ಸಲಹೆ ಸಹಕಾರ ಪಡೆದು ತ್ರೈವಾರ್ಷಿಕ ಯೋಜನೆಯನ್ನು ರೂಪಿಸಿದೆ. ಈ ಯೋಜನೆಯಲ್ಲಿ ಅಡಕವಾಗಿರುವ ಅಂಶಗಳನ್ನು ೧೯೭೦ನೆಯ ಜನವರಿಯಿಂದ ಮೂರು ವರ್ಷಗಳ ಕಾಲಾವಧಿಯಲ್ಲಿ ಕಾರ್ಯಗತ ಮಾಡಬೇಕಾಗಿದ್ದು ಈ ಯೋಜನೆಗೆ ತಗಲುವ ವೆಚ್ಚವು ಇಪ್ಪತ್ತು ಲಕ್ಷ ರೂಪಾಯಿಗಳೆಂದು ಅಂದಾಜಾಗಿದೆ. ಈ ಮೊತ್ತದ ಮೂರನೆಯ ಒಂದು ಭಾಗದಷ್ಟು ಹಣವನ್ನು ಪುಸ್ತಕಗಳ ಪ್ರಕಟಣೆಗಾಗಿ ಯೋಜನೆಯಲ್ಲಿ ಮೀಸಲಾಗಿರಿಸಿದೆ.

ಪರಿಷತ್ತು ಪ್ರಾರಂಭವಾದ ತರುವಾಯ ಕನ್ನಡದಲ್ಲಿ ಅನೇಕ ವಿದ್ವತ್ಪೂರ್ಣ ಗ್ರಂಥಗಳನ್ನು ಪ್ರಕಟಿಸಿದ್ದು ಅವು ಓದುಗರ ಮನ್ನಣೆಗೆ ಪಾತ್ರವಾಗಿವೆಯಷ್ಟೆ. ಇದರ ಜೊತೆಗೆ ಪರಿಷತ್ತಿನ ತ್ರೈವಾರ್ಷಿಕ ಯೋಜನೆಯ ಅವಧಿಯಲ್ಲಿ ಒಂದು ನೂರು ಪುಸ್ತಕಗಳನ್ನಾದರೂ ಹೊರತರಬೇಕೆಂದು ನಿಯೋಜಿಸಲಾಗಿದೆ. ಪುನರ್ಮುದ್ರಣವಾಗಬೇಕಾದ ಕೆಲವು ಪ್ರಾಚೀನ ಗ್ರಂಥಗಳನ್ನು ಪ್ರಕಟಿಸುವುದಲ್ಲದೆ ಶಾಸ್ತ್ರ, ಸಾಹಿತ್ಯ, ಕಲೆ, ವಿಜ್ಞಾನ ಮೊದಲಾದ ನಾನಾ ವಿಷಯಗಳನ್ನು ಕುರಿತ ಗ್ರಂಥಗಳನ್ನೂ ಭಾಷಾಂತರ ಕೃತಿಗಳನ್ನೂ ಜೊತೆಗೆ ವಿದ್ಯಾರ್ಥಿಗಳಿಗೂ ಜನಸಾಮಾನ್ಯರಿಗೂ ಹೆಚ್ಚು ಪ್ರಯೋಜನವಾಗುವಂತೆ ಒಂದು ಸಂಕ್ಷಿಪ್ತ ಶಬ್ದಕೋಶವನ್ನೂ ಆದಷ್ಟು ಜಾಗ್ರತೆ ಪ್ರಕಟಿಸಬೇಕೆಂದು ತೀರ್ಮಾನಿಸಿದೆ.

ಓದುಗರ ದೃಷ್ಟಿಯಿಂದ ಪುಸ್ತಕದ ಬೆಲೆ ದುಬಾರಿಯಾಗದಂತೆ ನೋಡಿಕೊಳ್ಳುವುದು, ಕೆಲವು ಪುಸ್ತಕಗಳನ್ನು ಸಹಾಯಧನ ಪಡೆದು ಕಡಮೆ ಬೆಲೆಗೆ ಮಾರಾಟ ಮಾಡುವುದು ಇವು ಪರಿಷತ್ತಿನ ಆಶಯಗಳಾಗಿವೆ.

ಪ್ರಕಟಣೆಗೆ ಸಂಬಂಧಿಸಿದ ಎಲ್ಲ ವಿಷಯಗಳನ್ನೂ ಗಮನದಲ್ಲಿಟ್ಟುಕೊಂಡು ಪ್ರಕಟಣೆಯ ಕಾರ್ಯವನ್ನು ಕಾರ್ಯಗತ ಮಾಡಲು ಗ್ರಂಥಪ್ರಕಟಣ ಸಲಹಾ ಸಮಿತಿಯೊಂದನ್ನು ರಚಿಸಿದ್ದು ಆ ಸಮಿತಿಯಲ್ಲಿ ಡಾ|| ಹಾ. ಮಾ. ನಾಯಕ, ಡಾ|| ಜಿ. ಎಸ್. ಶಿವರುದ್ರಪ್ಪ, ಡಾ|| ಆರ್. ಸಿ. ಹಿರೇಮಠ, ಪ್ರೊ|| ಎಂ. ಮರಿಯಪ್ಪ ಭಟ್ಟ, ಶ್ರೀ ಹೆಚ್. ಎಲ್. ನಾಗೇಗೌಡ ಮತ್ತು ಶ್ರೀ ಸಿದ್ಧಯ್ಯ ಪುರಾಣಿಕ ಇವರುಗಳು ಸದಸ್ಯರಾಗಿದ್ದಾರೆ. ಡಾ|| ರಂ. ಶ್ರೀ. ಮುಗಳಿಯವರು ಪ್ರಧಾನ ಸಂಪಾದಕತ್ವದ ಹೊಣೆ ಹೊತ್ತಿದ್ದಾರೆ. ಮತ್ತು

ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಶ್ರೀ ವೆಂಕಟೇಶ ಸಾಂಗ್ಲಿ, ಶ್ರೀ ಹಂಪ ನಾಗರಾಜಯ್ಯ ಅವರುಗಳು ಈ ಸಮಿತಿಯ ಕಾರ್ಯದರ್ಶಿಗಳಾಗಿದ್ದಾರೆ. ಇವರೆಲ್ಲರಿಗೂ ಪರಿಷತ್ತು ಆಭಾರಿಯಾಗಿದೆ.

ಈ ಸಮಿತಿಯ ಸಹಕಾರದಿಂದ ಪ್ರಕಟವಾಗುವ ಪರಿಷತ್ತಿನ ಪ್ರಕಟಣೆಗಳನ್ನು ಕನ್ನಡಾಭಿಮಾನಿಗಳು ಆದರದಿಂದ ಬರಮಾಡಿಕೊಂಡು ಆಸ್ಥೆಯಿಂದ ಓದಬೇಕಾಗಿ ಪ್ರಾರ್ಥನೆ.

ದೇಶಹಳ್ಳಿ ಜಿ. ನಾರಾಯಣ
ಅಧ್ಯಕ್ಷ,
ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರು
೩-೧೧-೧೯೭೨

ಮುನ್ನುಡಿ

ಇತ್ತೀಚಿಗೆ ನಡೆದ ಭಾರತ ಪಾಕಿಸ್ತಾನಗಳ ನಡುವೆ ಆದ ಯುದ್ಧದ ನೆನಪು ಎಲ್ಲರ ಮನಸ್ಸಿನಿಂದ ಇನ್ನೂ ಅಳಿಸಿಲ್ಲ. ಭಾರತರಾಷ್ಟ್ರ ಕೈಕೊಂಡ ನಿಲುವು, ಸಂಪಾದಿಸಿದ ಗೆಲುವು ಎಂದೂ ಮರೆಯುವಂಥದೂ ಅಲ್ಲ.

ಅಖಂಡ ಭಾರತದಿಂದ ಸಿಡಿದು ಹೋದ ಭೂಭಾಗಗಳು ಪಾಕಿಸ್ತಾನವಾಗಿ ಹೊಸದೊಂದು ರಾಷ್ಟ್ರವಾಯಿತು. ಈ ಹೊಸ ರಾಷ್ಟ್ರ ಭಾರತದ ಮೇಲೆ ಒಂದಲ್ಲ ಒಂದು ರೀತಿಯಿಂದ ಅಸೂಯೆ ತಾಳಿ ದ್ವೇಷವನ್ನೇ ಸಾಧಿಸುತ್ತ ಬಂದಿದೆ. ಈ ದ್ವೇಷಾಗ್ನಿ ಆರುವುದೋ ಇಲ್ಲವೋ ಎಂಬಂತೆ ಗಡಿಪ್ರದೇಶಗಳಲ್ಲಿ ಕಿಡಿಗಳನ್ನು ಹೊತ್ತಿಸುತ್ತಲೇ ಇದೆ. ಪಾಕಿಸ್ತಾನದ ಪೂರ್ವಭಾಗವಾದ ಬಾಂಗ್ಲಾ ಮೇಲೆ ಪಶ್ಚಿಮಭಾಗ ಯುದ್ಧ ಘೋಷಿಸಿತು. ಆಗಲೂ ಭಾರತದ ಗಡಿಯ ಆಕ್ರಮಣವೇ ಉದ್ದೇಶವಾಗಿತ್ತೋ ಏನೊ? ಆದರೆ ಅದು ಮತ್ತೊಂದು ರೂಪತಾಳಿ ಭಾರತಕ್ಕೆ ತಡೆಯಲಾರದ ಹಿಂಸಾರೂಪವಾಗಿ ಪರಿಣಮಿಸಿತು. ಭಾರತ ಸುಮ್ಮನೆ ಕೈಕಟ್ಟಿ ಕುಳಿತುಕೊಳ್ಳುವಂತಿರಲಿಲ್ಲ. ನೇರವಾಗಿ ಯುದ್ಧದಲ್ಲಿ ಭಾಗವಹಿಸುವಂತಿರಲಿಲ್ಲ.

ಪಾಕಿಸ್ತಾನದ ಹಿಂಸಾಚಾರವನ್ನು ತಾಳಲಾರದ ಬಾಂಗ್ಲಾ ನಿವಾಸಿಗಳು ನಿರಾಶ್ರಿತರಾಗಿ ಭಾರತವನ್ನು ಪ್ರವೇಶಿಸಿ ಭಾರತದ ಆಶ್ರಯವನ್ನು ಪಡೆದರು. ಒಂದು ಕೋಟಿ ಜನ ನಿರಾಶ್ರಿತರಾಗಿ ಬಂದರು. ಇವರನ್ನು ಹಿಂದಿರುಗಿಸಲು ಪ್ರಯತ್ನಿಸಬೇಕೆಂದು ಭಾರತ ಪಾಕಿಸ್ತಾನವನ್ನು ಮಾತ್ರವಲ್ಲದೆ ಪ್ರಪಂಚದ ಪ್ರಮುಖರಾಷ್ಟ್ರಗಳಿಗೆ ಮನವಿ ಮಾಡಿತು. ಸ್ವಯಂ ಮಹಾ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರು ಕೂಡ ಪ್ರಪಂಚ ಪರ್ಯಟನೆ ಮಾಡಿ ಬಂದರು ಆದರೆ ಅದರಿಂದ ಯಾವ ಪ್ರಯೋಜನವೂ ಆಗಲಿಲ್ಲ. ನಿರುಪಾಯವಾಗಿ ಭಾರತ ಬಾಂಗ್ಲಾ ದೇಶದ ನೆರವಿಗೆ ಹೋಯಿತು. ಪರಿಣಾಮವಾಗಿ ಪಾಕಿಸ್ತಾನ ಸೋತು ಸ್ವತಂತ್ರವಾದ ಬಾಂಗ್ಲಾದೇಶದ ಉದಯವಾಯಿತು.

ಕನ್ನಡ ಸಾಹಿತ್ಯ ಪರಿಷತ್ತು ತನ್ನ ಸಾಹಿತ್ಯ ಕಾರ್ಯಗಳ ಜೊತೆಗೆ ಈ ಯುದ್ಧದಲ್ಲಿ ಭಾಗವಹಿಸಿದ ಕರ್ನಾಟಕದ ವೀರರ ಪರಿಚಯವನ್ನು ಕನ್ನಡಿಗರಿಗೆ ಮತ್ತು ಇತರರಿಗೆ ಮಾಡಿಕೊಡಬೇಕೆಂದು ಬಯಸಿತು. ಕನ್ನಡಿಗರೂ ಸಾಹಸಿಗಳು, ಧೈರ್ಯಸ್ಥರು, ದೇಶಾಭಿಮಾನಿಗಳು ಎಂಬ ಮಾತುಗಳನ್ನು ಈ ಪುಸ್ತಕಗಳಲ್ಲಿ ಬರುವ ಕೆಲವೇ ವ್ಯಕ್ತಿಗಳ ಪರಿಚಯ ಸಮರ್ಥನೆ ಮಾಡುತ್ತದೆ.

ಇಂಥ ವೀರಾಧಿವೀರರ ಪರಿಚಯದಿಂದ ಕನ್ನಡಿಗರಲ್ಲಿ ಅಭಿಮಾನಮೂಡು ವಂತಾಗಲಿ, ಸಾಹಸಕಾರ್ಯಗಳಲ್ಲಿ ಉತ್ಸಾಹ ತುಂಬಿಬರುವಂತಾಗಲಿ, ಯುದ್ಧದಲ್ಲಿ ಭಾಗವಹಿಸಿ ಕೀರ್ತಿಪಡೆದ ಯೋಧರ ಶೌರ್ಯ-ವೀರ್ಯಗಳು ಇತರರಿಗೆ ಮಾರ್ಗ ದರ್ಶಕವಾಗಲಿ ಎಂಬ ಉದ್ದೇಶದಿಂದ ಈ ಪುಸ್ತಕವನ್ನು ಪ್ರಕಟಿಸಲಾಗಿದೆ.

ಓದುಗರು ಇದನ್ನು ಹೆಮ್ಮೆಯಿಂದ ಸ್ವಾಗತಿಸುವರೆಂದು ನಂಬಲಾಗಿದೆ.

ಶ್ರೀ ಬ. ನ. ಸುಂದರರಾಯರು ಸಮರವೀರರ ಪರಿಚಯಗಳನ್ನು ಸಾಹಸ ದಿಂದಲೇ ಸಂಗ್ರಹಿಸಿ ಉತ್ತಮ ಗ್ರಂಥವೊಂದನ್ನು ರಚಿಸಿಕೊಟ್ಟು ಉಪಕಾರ ಮಾಡಿ ದ್ದಾರೆ. ಅವರಿಗೆ ಪರಿಷತ್ತಿನ ಹಾರ್ದಿಕ ವಂದನೆಗಳು ಸಲ್ಲುತ್ತವೆ. ಶ್ರೀ ಸುಂದರ ರಾಯರ ಪುಸ್ತಕ ಲೇಖನಕ್ಕೆ ಅತ್ಯಂತ ಆಸ್ಥೆಯಿಂದ ಸಹಾಯಮಾಡಿರುವ ಮತ್ತು ಅವರ ಹಸ್ತಪ್ರತಿಯನ್ನು ವಿವರವಾಗಿ ಪರಿಶೀಲಿಸಿರುವ ಕರ್ನಲ್ ಎ. ಎಂ. ಕಡಕೋಳ ಅವರಿಗೂ ನಮ್ಮ ಧನ್ಯವಾದಗಳು ಸಲ್ಲುತ್ತವೆ.

ಬೆಂಗಳೂರು-೧೦
೩-೧೧-೭೨

ರಂ. ಶ್ರೀ. ಮುಗಳಿ
ಪ್ರಧಾನ ಸಂಪಾದಕರು

ಪೀಠಿಕೆ

"ಕರ್ನಾಟಕದ ವೀರಯೋಧರು" ಎಂದು ಈ ಪುಸ್ತಕಕ್ಕೆ ಹೆಸರನ್ನಿಟ್ಟಿರುವುದು ಸರಿಯಷ್ಟೆ. ಕರ್ನಾಟಕದಲ್ಲಿ ಆಗಿ ಹೋದ ಎಲ್ಲ ವೀರರ ಪರಿಚಯವೂ ಇಲ್ಲಿದೆಯೆಂದು ಯಾರೂ ಭಾವಿಸಬಾರದು. ರಾಮಾಯಣ-ಭಾರತಗಳ ಕಾಲದಿಂದ ಇಂದಿನವರೆಗೆ ಎಷ್ಟೋ ಕನ್ನಡ ವೀರರು ಆಗಿಹೋಗಿದ್ದಾರೆ. ಅವರೆಲ್ಲರ ಪರಿಚಯವನ್ನೂ ಮಾಡಿಕೊಡುವುದು ಈ ಪುಸ್ತಕದ ಉದ್ದೇಶವಲ್ಲ. ಇದರಲ್ಲಿ ಪರಿಚಯ ಮಾಡಿಕೊಟ್ಟಿರುವ ವೀರರೆಂದರೆ ಇತ್ತೀಚಿನ, ಅಂದರೆ ಡಿಸೆಂಬರ್ ೧೯೭೧ರಲ್ಲಿ ನಡೆದ ಭಾರತ-ಪಾಕ್ ಯುದ್ಧದಲ್ಲಿ ಭಾಗವಹಿಸಿ ಪ್ರಶಸ್ತಿ ಪಡೆದ, ಗಾಯಗೊಂಡ ಮತ್ತು ವೀರಸ್ವರ್ಗವನ್ನೇರಿದ ಯೋಧರು ಮಾತ್ರ.

ಈ ಯುದ್ಧದಲ್ಲಿ ಭಾಗವಹಿಸಿ ಪ್ರಶಸ್ತಿ ಪಡೆದ ಎಲ್ಲಾ ವೀರರ ಪರಿಚಯವೂ ಇಲ್ಲಿದೆಯೆಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ ಅನೇಕ ಯೋಧರ ವಿಳಾಸಗಳೇ ನಮಗೆ ದೊರಕಲಿಲ್ಲ. ಕೇಂದ್ರ ಸರ್ಕಾರದ ರಕ್ಷಣಾಖಾತೆಯವರು ಕೃಪೆಯಿಟ್ಟು 'ಗ್ಯಾಲಂಟ್ರಿ' ಪಟ್ಟಿಗಳನ್ನೇನೊ ನಮಗೆ ಒದಗಿಸಿಕೊಟ್ಟರು. ಅವರಿಗೆ ನಾವು ಚಿರ ಋಣಿಗಳು. ಆದರೆ ಆ ಪಟ್ಟಿಯಲ್ಲಿ ಕನ್ನಡ ನಾಡಿನವರು ಯಾರೆಂಬುದನ್ನು ಕಂಡು ಹಿಡಿಯುವುದೇ ಒಂದು ಸಮಸ್ಯೆಯಾಯಿತು. ಆ ಪಟ್ಟಿಯಲ್ಲಿ ಹೆಸರುಗಳು ಮಾತ್ರ ಇದ್ದು ವಿಳಾಸಗಳು ನಮೂದಾಗಿರಲಿಲ್ಲ.

ಮೈಸೂರು ಸರ್ಕಾರವು ಪ್ರಶಸ್ತಿ ಪಡೆದ ವೀರಯೋಧರಿಗೆ, ಗಾಯಗೊಂಡವರಿಗೆ ಮತ್ತು ಮೃತಪಟ್ಟವರ ಸಮೀಪದ ಬಂಧುಗಳಿಗೆ ನಗದು ರೂಪದಲ್ಲಿ ನೆರವು ನೀಡುತ್ತಿರುವುದು ಸರಿಯಷ್ಟೆ. ಈ ವಿಚಾರ ನನಗೆ ತಿಳಿದ ಕೂಡಲೇ ಸಂಬಂಧಪಟ್ಟ ಸರ್ಕಾರೀ ಅಧಿಕಾರಿಗಳ ಬೆನ್ನುಹತ್ತಿದರೆ ಕೆಲವರ ವಿಳಾಸವಾದರೂ ದೊರಕೀತೆಂದು ಭಾವಿಸಿದೆ. ಕೂಡಲೇ ವಿಧಾನಸೌಧಕ್ಕೆ ಹೋಗಿ ಗೃಹಕಾರ್ಯದರ್ಶಿಗಳಾದ ಶ್ರೀ ಎನ್. ಲಕ್ಷ್ಮಣರಾವ್‌ರವರನ್ನು ಭೇಟಿ ಮಾಡಿ ನನ್ನ ಉದ್ದೇಶವನ್ನು ತಿಳಿಸಿದೆ. ಪರಿಷತ್ ಅಧ್ಯಕ್ಷರಾದ ಶ್ರೀ ಜಿ. ನಾರಾಯಣರವರಿಂದ ಈ ಬಗ್ಗೆ ಒಂದು ಪತ್ರವನ್ನೂ ಒಯ್ದಿದ್ದೆ. ಈ ಪತ್ರವನ್ನೋದಿದ ಕೂಡಲೇ ಅವರು ಕ|| ಎ. ಎಂ. ಕಡಕೋಳ್‌ರವರಿಗೆ ಟೆಲಿಫೋನ್‌ಮಾಡಿ, ನನಗೆ ಎಲ್ಲ ವಿಧವಾದ ನೆರವನ್ನೂ ನೀಡಬೇಕೆಂದು ತಿಳಿಸಿದರು.

ಶ್ರೀ ಎ. ಎಂ. ಕಡಕೋಳ್‌ರವರು ಮೈಸೂರು ರಾಜ್ಯದ ಸೈನಿಕ, ನಾವಿಕ ಮತ್ತು ವೈಮಾನಿಕ ಮಂಡಳಿಯ ಕಾರ್ಯದರ್ಶಿಗಳಾಗಿದ್ದಾರೆ. ಮೈಸೂರು

ಸರ್ಕಾರದ ವತಿಯಿಂದ ಸೈನಿಕರಿಗೆ ಧನಸಹಾಯಮಾಡುವ ಅಧಿಕಾರಿಗಳಾಗಿದ್ದಾರೆ. ಆಗಾಗ್ಗೆ ನಾನು ಅವರನ್ನು ಭೇಟಿಮಾಡುತ್ತ ಬಂದೆ. ಅವರ ಭೇಟಿಯಿಂದ ವಿಳಾಸಗಳಿಗೆ ಬದಲಾಗಿ ಖುದ್ದಾಗಿ ಯೋಧರ ಪರಿಚಯವೇ ಲಭಿಸುವಂತಾಯಿತು. ಯೋಧರು ಭಾಗವಹಿಸುವ ಸಮಾರಂಭಗಳಿಗೂ, ಮಿಲಿಟರಿ ಆಸ್ಪತ್ರೆಗೂ ಅವರು ನನ್ನನ್ನು ಕರೆದೊಯ್ದರು. ಆ ಯೋಧರೊಂದಿಗೆ ಮುಖತಃ ಮಾತನಾಡಿ ಅವರಿಂದ ಹೆಚ್ಚು ಮಾಹಿತಿ ಪಡೆಯಲು ಅನುಕೂಲವಾಯಿತು. ಇಷ್ಟೇ ಅಲ್ಲದೆ ಕರ್ನಲ್ ಕಡಕೋಳ್‌ರವರಿಂದ ಮತ್ತೊಂದು ದೊಡ್ಡ ಉಪಕಾರವಾಗಿದೆ. ಈ ಪುಸ್ತಕದ ಹಸ್ತಪ್ರತಿಯನ್ನು ಅವರು ಆಮೂಲಾಗ್ರವಾಗಿ ಪರಿಶೀಲಿಸಿ, ಅನೇಕ ಉಪಯುಕ್ತವಾದ ಸಲಹೆಗಳನ್ನೂ ನೀಡಿರುವರು. ಇದಕ್ಕಾಗಿ ನಾನು ಅವರಿಗೆಷ್ಟು ಋಣಿಯಾಗಿದ್ದರೂ ಸಾಲದು.

ಈ ಪುಸ್ತಕದ ರಚನೆಯಲ್ಲಿ ತೊಡಗಿದ್ದಾಗ ಅನೇಕ ಎಡರುತೊಡರುಗಳನ್ನು ಎದುರಿಸಬೇಕಾಯಿತು. ಕೆಲವು ಪ್ರಶಸ್ತಿವಿಜೇತರುಗಳಿಂದ ನಾನು ಬರೆದ ಪತ್ರಗಳಿಗೆ ಉತ್ತರವೇ ಬರಲಿಲ್ಲ. ಮತ್ತೆ ಕೆಲವರು ತಮ್ಮ ಪರಿಚಯ ಪ್ರಬಂಧಗಳನ್ನು ಬರೆದು ಕಳುಹಿಸುವುದಾಗಿ ತಿಳಿಸಿ ಅನಂತರ ಮರೆತೇಬಿಟ್ಟರು. ಅಂಥವರೊಡನೆ ಪರಿಷತ್ತಿನ ಮೂಲಕ ಪತ್ರವ್ಯವಹಾರ ನಡೆಸಲಾಯಿತು. ಆದರೂ ಉತ್ತರವಿಲ್ಲ. ಬಹುಶಃ ಅವರ ವಿಳಾಸಗಳು ಬದಲಾಗಿರಬೇಕು. ಮತ್ತೆ ಕೆಲವರು ಪರಿಚಯಗಳನ್ನು ಕಳುಹಿಸಿದ್ದಾರೆ. ಆದರೆ ಭಾವಚಿತ್ರಗಳನ್ನು ಕಳುಹಿಸಿಲ್ಲ. ಕೆಲವು ಯೋಧರ ಮಾಹಿತಿಗಳಿಗೆ ದಿನಪತ್ರಿಕೆಗಳ ಸುದ್ದಿಯೇ ನಮಗೆ ಆಧಾರವಾಗಿದೆ. ಹೀಗಾಗಿ ಎಲ್ಲ ಯೋಧರ ಭಾವಚಿತ್ರಗಳೂ ನಮಗೆ ದೊರಕದೇ ಹೋದುವು. ಕೆಲವರ ಬಗ್ಗೆ ಮಾಹಿತಿಯೂ ಮೊಟಕಾಗಬೇಕಾಯಿತು.

ದಿನ ಪತ್ರಿಕೆಗಳಲ್ಲಿ ಯೋಧರ ಬಗ್ಗೆ ಸುದ್ದಿ ಬರುತ್ತಲೇ ಇತ್ತು. ನಾನು ಆ ಪತ್ರಿಕಾಲಯಗಳಿಗೆ ಹೋಗಿ ಆ ಚಿತ್ರವನ್ನು ಪಡೆಯಬೇಕೆಂದು ಮನಸ್ಸುಮಾಡಿ ಅಲ್ಲಿಗೆ ಹೋಗುವುದು ಸ್ವಲ್ಪ ತಡವಾದರೂ ಮತ್ತೆ ಯಾರೋ ಆ ಯೋಧರ ಬಂಧು ಬಳಗದವರು ಆ ಚಿತ್ರವನ್ನು ಒಯ್ದು ಬಿಡುತ್ತಿದ್ದರು. ಆದರೂ ಕೆಲವು ಪತ್ರಿಕಾ ಸಂಪಾದಕರು ನನ್ನ ಮೇಲಣ ವಿಶ್ವಾಸದಿಂದ ಎಷ್ಟೋ ಚಿತ್ರಗಳನ್ನು ಕೊಟ್ಟು ಉಪಕರಿಸಿದ್ದಾರೆ. ಅವರಲ್ಲಿ ಮುಖ್ಯವಾಗಿ 'ಪ್ರಜಾವಾಣಿ' ಸಂಪಾದಕರಾದ ಶ್ರೀ ಟಿ.ಎಸ್. ರಾಮಚಂದ್ರರಾಯರು, 'ಕನ್ನಡಪ್ರಭ' ಸಂಪಾದಕರಾದ ಶ್ರೀ ಕೆ. ಎಸ್. ರಾಮಕೃಷ್ಣಮೂರ್ತಿಯವರು ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಯ ಸುದ್ದಿ ಸಂಪಾದಕರಾದ ಶ್ರೀ ಆರ್. ಶೇಷಾದ್ರಿಯವರು. ಇವರೆಲ್ಲರಿಗೂ ನನ್ನ ಹಾರ್ದಿಕ ವಂದನೆಗಳು.

ಸಂಯುಕ್ತ ಕರ್ನಾಟಕ ಪತ್ರಿಕೆಯ ಪ್ರಧಾನ ಸಂಪಾದಕರಾದ ಡಾ|| ರಂಗ

ನಾಥ ರಾಮಚಂದ್ರ ದಿವಾಕರರವರು ಹಲವು ಚಿತ್ರಗಳನ್ನು ಕೊಡಿಸಿದ್ದಲ್ಲದೆ ನನಗೆ ಅನೇಕ ಉಪಯುಕ್ತ ಸಲಹೆಗಳನ್ನೂ ಕೊಟ್ಟರು. ಆ ಸಲಹೆಗಳನ್ನು ನಾನು ಚಾಚೂ ತಪ್ಪದೆ ನಡೆಸಿಕೊಂಡುಬಂದಿದ್ದೇನೆ.

ಹೀಗೆಯೇ ಎಷ್ಟೋ ವೃತ್ತಪತ್ರಿಕೆಗಳಿಂದ ನಾನು ನೆರವನ್ನು ಪಡೆದಿದ್ದೇನೆ. ಅವುಗಳಲ್ಲಿ ಮುಖ್ಯವಾದುವೆಂದರೆ ಹಿಂದೂ, ಇಂಡಿಯನ್ ಎಕ್ಸ್‌ಪ್ರೆಸ್, ಟೈಂಸ್ ಆಫ್ ಇಂಡಿಯಾ, ಇಲ್ಲಸ್ಟ್ರೇಟೆಡ್ ವೀಕ್ಲಿ, ಡೆಕ್ಕನ್ ಹೆರಾಲ್ಡ್, ಪ್ರಜಾವಾಣಿ, ಕನ್ನಡಪ್ರಭ, ಸಂಯುಕ್ತ ಕರ್ನಾಟಕ, ಸುಧಾ ಮತ್ತು ಜನವಾಣಿ ಪತ್ರಿಕೆಗಳು. ಈ ಪತ್ರಿಕಾವರ್ಗದವರೆಲ್ಲರಿಗೂ ನನ್ನ ಮನಃಪೂರ್ವಕ ವಂದನೆಗಳು ಸಲ್ಲುತ್ತವೆ.

ಈ ಗ್ರಂಥದ ಆರಂಭದಲ್ಲಿ ಕನ್ನಡನಾಡಿನ ಹಿರಿಯ ಯೋಧರುಗಳಾದ ಜ|| ಕೆ. ಎಂ. ಕರಿಯಪ್ಪ ಮತ್ತು ದಿ|| ಕೆ. ಎಸ್. ತಿಮ್ಮಯ್ಯನವರ ಪರಿಚಯಮಾಡಿಕೊಡುವುದರ ಮೂಲಕ ಅವರಿಗೆ ನನ್ನ 'ನಮನ'ವನ್ನರ್ಪಿಸಿದ್ದೇನೆ. ಮುಂದೆ 'ಸಮರ ಶಿಲ್ಪಿಗಳು' ಎಂಬ ವಿಭಾಗದಲ್ಲಿ ಇತ್ತೀಚಿನ ಯುದ್ಧದಲ್ಲಿ ಜಯಭೇರಿ ಹೊಡೆದ ವೀರತ್ರಯರಾದ ಜ|| ಮಣಿಕ್ ಷಾ, ಅಡ್ಮಿರಲ್ ನಂದಾ ಮತ್ತು ಏರ್ ಚೀಫ್‌ಮಾರ್ಷಲ್ ಪಿ. ಸಿ. ಲಾಲ್‌ರವರ ಪರಿಚಯವನ್ನೂ ಮಾಡಿಕೊಡಲಾಗಿದೆ. ಹಾಗೆಯೇ ಅಚ್ಚ ಕನ್ನಡಿಗರೂ, ಧೀರಸೇನಾನಿಗಳೂ ಆದ ಕರ್ನಲ್ ಎ. ಎಂ. ಕಡಕೋಳ್‌ರವರ ಪರಿಚಯವನ್ನೂ ಮಾಡಿಕೊಡಲಾಗಿದೆ.

ಇಲ್ಲಿಂದ ಮುಂದೆ ಕರ್ನಾಟಕದ ವೀರಯೋಧರು ಕಾಣಿಸಿಕೊಳ್ಳುತ್ತಾರೆ. ಮೊದಲನೆಯವರೇ ರಿಯರ್ ಅಡ್ಮಿರಲ್ ಎಲೆಂಜಕಲ್ ಚಾಂಡಿ ಕುರುವಿಲ್ಲಾರವರು. ಬಹಳ ತಡವಾಗಿ ಮಾಹಿತಿ ದೊರಕಿದ ಕಾರಣ ದಿ|| ಎಂ. ಎಸ್. ಜಿ. ರಾವ್ ಅವರ ಪರಿಚಯವನ್ನು ಕೊನೆಯಲ್ಲಿ ಮಾಡಿಕೊಡಲಾಗಿದೆ. ಮೊದಲು-ಕೊನೆ ಎಂಬುದು ಇಲ್ಲಿ ಮುಖ್ಯವಲ್ಲ. ಅವರು ತೋರಿರುವ ದೇಶಾಭಿಮಾನ, ನಿಸ್ವಾರ್ಥ ಸೇವೆ ಮತ್ತು ಅಪೂರ್ವತ್ಯಾಗ ಇವುಗಳೇ ಮುಖ್ಯ.

ಮತ್ತೊಂದು ಮುಖ್ಯ ಸಂಗತಿಯನ್ನು ಇಲ್ಲಿ ತಿಳಿಸಬೇಕಾದುದು ಅತ್ಯಗತ್ಯ. ಕೆಲವು ಪ್ರಶಸ್ತಿ ವಿಜೇತರು ಕನ್ನಡನಾಡಿನಲ್ಲಿಯೇ ಜನಿಸಿದವರಾಗಿದ್ದರೂ, ಬೇರೆ ಪ್ರಾಂತಗಳಲ್ಲಿ ಬೆಳೆದು, ನೆಲಸಿ ತಮ್ಮ ವಿಳಾಸಗಳನ್ನು ಆಯಾ ಪ್ರಾಂತಗಳಿಗೆ ಸೇರಿದಂತೆ ಕೊಟ್ಟಿರುತ್ತಾರೆ. ಇಂಥವರಲ್ಲಿ ಹಲವರು ಮಹಾರಾಷ್ಟ್ರಕ್ಕೆ ಸೇರಿರುವರು. ಮತ್ತೆ ಕೆಲವರು ಆಂಧ್ರ, ಕೇರಳ ಮೊದಲಾದ ಪ್ರಾಂತದಲ್ಲಿ ಸೇರಿರುವರು. ಉದಾಹರಣೆಗೆ ಶ್ರೀ ಸಖಾರಾಮ್ ಬೆನಗಲ್ ಮತ್ತು ದಿ|| ಎಂ. ಓ. ಅಲೆಕ್ಸಾಂಡರ್‌ರವರು. ಬೆನಗಲ್ ಎಂಬುದು ದಕ್ಷಿಣ ಕನ್ನಡಜಿಲ್ಲೆಯ ಒಂದು ಗ್ರಾಮ. ಈ ಗ್ರಾಮದವರಾದ ಶ್ರೀ ಸಖಾರಾಮ್‌ರವರು ಮಹಾರಾಷ್ಟ್ರದವರೆಂದು ಪರಿಗಣಿಸಲ್ಪಟ್ಟಿದ್ದಾರೆ.

ದಿ|| ಎಂ. ಓ. ಅಲೆಕ್ಸಾಂಡರ್‌ರವರ ವಾಸ ಬೆಂಗಳೂರಿನ ರಿಚ್‌ಮಂಡ್‌ರಸ್ತೆಯಲ್ಲಿ: ಅವರ ಅಂತ್ಯ ಸಂಸ್ಕಾರ ನಡೆದದ್ದೂ ಬೆಂಗಳೂರಿನಲ್ಲಿಯೇ. ಆದರೂ ಅವರು ಕೇರಳದ ವಿಳಾಸ ಕೊಟ್ಟಿರುವುದರಿಂದ ಅವರನ್ನು ಕೇರಳದವರೆಂದೇ ಪರಿಗಣಿಸ ಲಾಗಿದೆ. ಕೇವಲ ಕರ್ನಾಟಕದ ಯೋಧರಿಗೆ ಮಾತ್ರ ಮೈಸೂರು ಸರ್ಕಾರದವರು ಧನಸಹಾಯ ಮಾಡುತ್ತಾರಲ್ಲದೆ ಇತರ ಪ್ರಾಂತಗಳದವರೆಂದಮೇಲೆ ಅವರಿಗೆ ಆ ಸೌಲಭ್ಯ ಲಭಿಸುವುದಿಲ್ಲ.

ಈ ಪುಸ್ತಕದಲ್ಲಿ ಪ್ರಶಸ್ತಿವಿಜೇತರನ್ನಷ್ಟೇ ಅಲ್ಲದೆ ಗಾಯಗೊಂಡವರ ಹಾಗೂ ಸಮರದಲ್ಲಿ ಹೋರಾಡಿ ಮಡಿದವರ ಸಂಕ್ಷಿಪ್ತ ಪರಿಚಯವನ್ನೂ ಮಾಡಿಕೊಡ ಲಾಗಿದೆ. ಈ ಬಗ್ಗೆ ಮಾಹಿತಿಗಳು ನಮಗೆ ಆಯಾ ಜಿಲ್ಲಾಧಿಕಾರಿಗಳ ಕಛೇರಿ ಗಳಿಂದ ಅಥವಾ ಜಿಲ್ಲಾ ಸೈನಿಕ, ನಾವಿಕ ಮತ್ತು ವೈಮಾನಿಕ ಮಂಡಳಿ ಕಾರ್ಯ ದರ್ಶಿಗಳಿಂದ ಲಭ್ಯವಾಗಿವೆ. ಈ ಸಂದರ್ಭದಲ್ಲಿ ನನಗೆ ವಿಶೇಷ ಮಾಹಿತಿಗಳ ನ್ನೊದಗಿಸಿಕೊಟ್ಟ ಕೊಡಗು ಜಿಲ್ಲೆಯ ನಾಪೊಕ್ಲು ಗ್ರಾಮದ ಶ್ರೀ ಎಂ. ಎಸ್. ಸುಬ್ಬರಾಯರವರಿಗೆ ವಂದನೆಗಳನ್ನರ್ಪಿಸುತ್ತೇನೆ.

ಜ|| ಕರಿಯಪ್ಪ ಮತ್ತು ಜ|| ತಿಮ್ಮಯ್ಯನವರ ಫೋಟೋಗಳನ್ನು ಒದಗಿಸಿ ಉಪ ಕರಿಸಿದ ಓರಿಯಂಟ್ ಪವರ್‌ಪ್ರೆಸ್‌ನ ಮಾಲೀಕರಾದ ಶ್ರೀ ಜಿ. ಶ್ರೀನಿವಾಸನ್‌ರವರಿಗೆ ನನ್ನ ವಂದನೆಗಳು ಸಲ್ಲುತ್ತವೆ.

ಮೈಸೂರು ಸರ್ಕಾರದ ವಾರ್ತಾ ಇಲಾಖೆಯವರಿಂದ ನನಗೆ ತುಂಬಾ ಸಹಾಯವಾಗಿದೆ. ಆಯಾ ಜಿಲ್ಲಾಧಿಕಾರಿಗಳು ಮೃತಯೋಧರ ತಂದೆ-ತಾಯಿ ಗಳಿಗೋ, ಪತ್ನಿಯವರಿಗೋ ಪರಿಹಾರಧನವನ್ನೀಯುವ ಚಿತ್ರಗಳೊಂದಿಗೆ ಸಂಕ್ಷಿಪ್ತ ಪರಿಚಯಗಳನ್ನೂ ಕಳುಹಿಸಿಕೊಟ್ಟಿದ್ದಾರೆ. ಆದರೆ ಆ ಚಿತ್ರಗಳೆಲ್ಲವನ್ನೂ ಈ ಪುಸ್ತಕದಲ್ಲಿ ಅಳವಡಿಸಲು ಸಾಧ್ಯವಾಗದೇ ಹೋದುದಕ್ಕಾಗಿ ವಿಷಾದಿಸುತ್ತೇನೆ. ಈ ರೀತಿಯಲ್ಲಿ ನನಗೆ ನೆರವು ನೀಡಿರುವ ವಾರ್ತಾ ಇಲಾಖೆಯ ಮುಖ್ಯಾಧಿಕಾರಿ ಗಳಾದ ಶ್ರೀ ಕೆ. ಎಸ್. ಎನ್. ಮೂರ್ತಿ ಅವರಿಗೂ ಡೆಪ್ಯುಟಿ ಡೈರೆಕ್ಟರ್ ಶ್ರೀ ಬಿ.ಜಿ. ಕುಲಕರ್ಣಿಯವರಿಗೂ, ಆಡಳಿತಾಧಿಕಾರಿಗಳಾದ ಶ್ರೀ ಎನ್. ಭೂಪಾಲಾಚಾರ್‌ರವ ರಿಗೂ, ಅ|| ಡೈರೆಕ್ಟರ್ ಶ್ರೀ ಬಿ.ವಿ. ಕಾತ್‌ಗಡೆಯವರಿಗೂ ನಾನು ಋಣಿಯಾಗಿ ದ್ದೇನೆ.

ಹೀಗೆಯೇ ಎಷ್ಟೋ ಮಂದಿ ಅಧಿಕಾರಿಗಳು ಈ ದಿಶೆಯಲ್ಲಿ ನನಗೆ ನೆರವು ನೀಡಿದ್ದಾರೆ. ಅವರಲ್ಲಿ ಮುಖ್ಯವಾಗಿ ಬೆಳಗಾಂ ಜಿಲ್ಲೆಯ ಜಿಲ್ಲಾಧಿಕಾರಿಗಳಾದ ಶ್ರೀ ಸಿದ್ಧಯ್ಯ ಪುರಾಣಿಕ್‌ರವರಿಗೂ, ಕೊಡಗು ಜಿಲ್ಲೆಯ ಸೈನಿಕ ಕಛೇರಿಯ ಕಾರ್ಯದರ್ಶಿಗಳಾದ ಶ್ರೀ ಕೆ. ಪುಟ್ಟರಾಜ್‌ರವರಿಗೂ ನಾನು ತುಂಬಾ ಆಭಾರಿ ಯಾಗಿದ್ದೇನೆ. ಕೇಂದ್ರ ಸರ್ಕಾರದ ವಾರ್ತಾ ಇಲಾಖಾಧಿಕಾರಿಗಳಾದ ಶ್ರೀ ಎಸ್. ನರೇಂದ್ರರವರಿಗೂ ನನ್ನ ವಂದನೆಗಳು.

ಈ ಪುಸ್ತಕದ ಪ್ರಕಟಣೆಯ ಬಗ್ಗೆ ಪರಿಷತ್ ಅಧ್ಯಕ್ಷರಾದ ಶ್ರೀ ಜಿ. ನಾರಾಯಣ ಅವರು ಪತ್ರಿಕೆಗಳ ಮೂಲಕ ಹೇಳಿಕೆಗಳನ್ನು ಕೊಡುತ್ತಿದ್ದುದು ಸರಿಯಷ್ಟೆ. ಈ ಪತ್ರಿಕಾ ಪ್ರಕಟನೆಗಳನ್ನು ಕಂಡು, ಓದಿ ಅನೇಕರು ನನಗೆ ಪತ್ರಗಳನ್ನು ಬರೆದು ಮಾಹಿತಿಗಳನ್ನು ಒದಗಿಸಿದ್ದಾರೆ. ಸಮರ ಸೈನಿಕರ ಸಮೀಪದ ಬಂಧುಗಳನೇಕರು, ತಾಯಿ ತಂದೆಗಳು, ಕೆಲವು ಯೋಧರ ಪತ್ನಿಯರು ಇನ್ನು ಕೆಲವು ಯೋಧರ ಮಾವಂದಿರು ನನಗೆ ಪತ್ರಗಳನ್ನು ಬರೆದು ಮಾಹಿತಿಗಳನ್ನೊದಗಿಸಿದ್ದಾರೆ. ಕನ್ನಡ ನಾಡಿನ ಯೋಧರ ಪರಿಚಯಮಾಡಿಕೊಡುವ ಈ ಪ್ರಯತ್ನ ಶ್ಲಾಘನೀಯವಾದುದೆಂದೂ ಇದರಿಂದಾಗಿ ಅವರಿಗೆಲ್ಲ ಬಹಳ ಹರ್ಷವುಂಟಾಗಿದೆಯೆಂದೂ ಈ ಪತ್ರಗಳಿಂದ ವ್ಯಕ್ತಪಟ್ಟಿದೆ.

ಕರ್ನಾಟಕ ವೀರಯೋಧರ ಚರಿತ್ರೆಯನ್ನು ಪರಿಷತ್ತು ಪ್ರಕಟಿಸಬೇಕೆಂದು ಮೊದಲು ಸೂಚನೆ ನೀಡಿದವರು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಶ್ರೀ ಜಿ. ನಾರಾಯಣರವರು. ಈ ಪರಿಚಯಾತ್ಮಕ ಗ್ರಂಥದ ಮೂಲಕ ಅವರೊಂದು ಹೊಸ ಮಾರ್ಗವನ್ನೇ ತೋರಿಸಿಕೊಟ್ಟಿದ್ದಾರೆ. ಈ ಗ್ರಂಥ ರಚನೆಯ ಜವಾಬ್ದಾರಿಯನ್ನು ನನಗೆ ವಹಿಸಿಕೊಟ್ಟು ಅನೇಕ ಉಪಯುಕ್ತ ಸಲಹೆಗಳನ್ನಿತ್ತು ಅವರು ನನಗೆ ಪ್ರೋತ್ಸಾಹ ನೀಡಿದ್ದಾರೆ. ನಾನು ಅವರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನರ್ಪಿಸುತ್ತೇನೆ. ಪರಿಷತ್ತಿನ ಪ್ರಕಟಣಾ ಸಮಿತಿಯ ಅಧ್ಯಕ್ಷರಾದ ಡಾ|| ರಂ. ಶ್ರೀ. ಮುಗಳಿಯವರು ಹಸ್ತಪ್ರತಿಯನ್ನೋದಿ ಅನೇಕ ಸಲಹೆಗಳನ್ನಿತ್ತು ಈ ಪುಸ್ತಕವನ್ನು ಪ್ರಕಟಿಸಲು ಅವಕಾಶ ಕಲ್ಪಿಸಿಕೊಟ್ಟಿರುವುದಕ್ಕಾಗಿ ಅವರಿಗೆ ಅನಂತಾನಂತ ವಂದನೆಗಳನ್ನು ಅರ್ಪಿಸುತ್ತೇನೆ. ಹಾಗೆಯೇ ಪರಿಷತ್ತಿನ ಕಾರ್ಯದರ್ಶಿಗಳಿಗೂ, ಅಧಿಕಾರ ವರ್ಗದವರಿಗೂ, ಈ ಗ್ರಂಥದ ಪ್ರಕಟಣೆಯ ಹೊಣೆಯನ್ನು ಹೊತ್ತು ಅಂದವಾಗಿ ಮುದ್ರಿಸಿರುವ ಬಿ. ಎಂ. ಶ್ರೀ. ಅಚ್ಚುಕೂಟದ ವ್ಯವಸ್ಥಾಪಕರಾದ ಶ್ರೀ ಸೀತಾರಾಮಸೆಟ್ಟಿ ಅವರಿಗೂ ನನ್ನ ವಂದನೆಗಳು ಸಲ್ಲುತ್ತವೆ.

ಕಡೆಯದಾಗಿ ಒಂದು ಬಿನ್ನಹ. ಉದ್ದೇಶಪೂರ್ವಕವಾಗಿ ನಾನು ಯಾವ ಪ್ರಶಸ್ತಿ ವಿಜೇತನ ಹೆಸರನ್ನೂ ಬಿಟ್ಟಿಲ್ಲ. ಒಂದು ವೇಳೆ ಬಿಟ್ಟುಹೋಗಿದ್ದರೆ ಅವರ ವಿಳಾಸಗಳ ಅಭಾವವೇ ಅದಕ್ಕೆ ಕಾರಣ. ಇನ್ನು ಮುಂದೆ ವಿವರಗಳೇನಾದರೂ ದೊರೆತಲ್ಲಿ ಮುಂದಣ ಮುದ್ರಣದಲ್ಲಿ ಅಳವಡಿಸಿ ಪ್ರಕಟಿಸಲಾಗುವುದು.

ಬೆಂಗಳೂರು
೩-೧೧-೭೨



ಪರಿವಿಡಿ

ಪ್ರಸ್ತಾವನೆ
ಮುನ್ನುಡಿ
ಪೀಠಿಕೆ
ಭಾರತ-ಪಾಕ್ ಯುದ್ಧ ೧

ಹಿರಿಯ ಯೋಧರಿಗೆ ನಮನ

೧ ಜನರಲ್ ಕೆ. ಎಂ. ಕಾರಿಯಪ್ಪನವರು ೩೯
೨ ದಿ|| ಜನರಲ್ ಕೆ. ಎಸ್. ತಿಮ್ಮಯ್ಯನವರು ೪೨

ಭಾರತದ ಸಮರ ಶಿಲ್ಪಿಗಳು

೩ ಜನರಲ್ ಮಣಿಕ್ ಷಾ ೪೭
೪ ಅಡ್ಮಿರಲ್ ಎಸ್. ಎಂ. ನಂದಾ ೪೯
೫ ಏರ್ ಚೀಫ್ ಮಾರ್ಷಲ್ ಪಿ. ಸಿ. ಲಾಲ್ ೫೦
೬ ಧೀರಸೇನಾನಿ ಕರ್ನಲ್ ಎ. ಎಂ. ಕಡಕೋಳ್ ೫೧

ಕರ್ನಾಟಕದ ವೀರಯೋಧರು

ಪರಮ ವಿಶಿಷ್ಟಸೇವಾಪದಕ

೭ ರಿಯರ್ ಅಡ್ಮಿರಲ್ ಇ. ಸಿ. ಕುರುವಿಲ್ಲ ೫೭
೮ ಏರ್ ಕಮೋಡರ್ ಸಿ. ಆರ್. ಕುರ್‌ಪಾಡ್ ೬೧

ಮಹಾವೀರ ಚಕ್ರ

೯ ಲೆಫ್ಟಿನೆಂಟ್ ಕಮ್ಯಾಂಡರ್ ಜೆ. ಪಿ. ಎ. ನರೋನ್ಹಾ ೬೨
೧೦ ಬ್ರಿಗೇಡಿಯರ್ ಆಂತೋಣಿ ಹೆರಾಲ್ಡ್ ಎಡ್ವರ್ಡ್ ಮಿಚಿಗನ್ ೬೫
೧೧ ಕ್ಯಾಪ್ಟನ್ ಓ. ಎಸ್. ಡಾಸನ್ ೬೮
೧೨ ಕ್ಯಾಪ್ಟನ್ ಕೆ. ಪಿ. ಗೋಪಾಲರಾವ್ ೬೯

ಅತಿವಿಶಿಷ್ಟಸೇವಾಪದಕ

೧೩ ಗ್ರೂಪ್ ಕ್ಯಾಪ್ಟನ್ ಜೆ. ಎಂ. ರಾವ್ ೭೧
೧೪ ವಿಂಗ್ ಕಮ್ಯಾಂಡರ್ ವಿ. ಕೆ. ಮೂರ್ತಿ ೭೩
೧೫ ವಿಂಗ್ ಕಮ್ಯಾಂಡರ್ ಕೆ. ಆರ್. ರಾವ್ ೭೪
೧೬ ಕರ್ನಲ್ ಗುರುರಾಜ ಕೃಷ್ಣರಾವ್ ಬುರ್ಲಿ ೭೭
೧೭ ಬ್ರಿಗೇಡಿಯರ್ ಎಚ್. ಆರ್. ಗೋಪಾಲ್ ೮೦

ವೀರಚಕ್ರ

೧೮ ಫ್ಲೈಟ್ ಲೆಫ್ಟಿನೆಂಟ್ ಎಂ. ಎ. ಗಣಪತಿ ೮೧
೧೯ ಫ್ಲೈಟ್ ಲೆಫ್ಟಿನೆಂಟ್ ಕೆ. ಎಸ್. ಸುರೇಶ್ ೮೫
೨೦ ಫ್ಲೈಟ್ ಲೆಫ್ಟಿನೆಂಟ್ ಎ. ರಘುನಾಥ್ ೮೯
೨೧ ಲೆಫ್ಟಿನೆಂಟ್ ಕಮ್ಯಾಂಡರ್ ಜಾರ್ಜ್ ಮಾರ್ಟಿಸ್ ೯೦
೨೨ ಲೆಫ್ಟಿನೆಂಟ್ ಎಸ್. ಮಂಜುನಾಥ್ ೯೩
೨೩ ಮೇಜರ್ ಎಂ. ಎಂ. ರವಿ ೯೫
೨೪ ಫ್ಲೈಟ್ ಆಫೀಸರ್ ಬಲ್ಲಚಂದ್ರ ಚೆಂಗಪ್ಪ ಕರುಂಬಯ್ಯ ೯೭
೨೫ ಫ್ಲೈಟ್ ಲೆಫ್ಟಿನೆಂಟ್ ಎಸ್. ಆರ್. ಜಯೇಂದ್ರ ೯೯
೨೬ ಫ್ಲೈಯಿಂಗ್ ಆಫೀಸರ್ ರಮೇಶ್ ಬರ್ಟಿನ್ ೧೦೦
೨೭ ಮೇಜರ್ ಕೆ. ಪಿ. ನಂಜಪ್ಪ ೧೦೧
೨೮ ಮೇಜರ್ ಬಿ. ಆರ್. ನಾಯಕ್ ೧೦೪
೨೯ ಲೆಫ್ಟಿನೆಂಟ್ ಪ್ರೇಂಕುಮಾರ್ ೧೦೬
೩೦ ಸ್ಕ್ವಾಡ್ರನ್ ಲೀಡರ್ ದಿನೇಶ್‌ಚಂದ್ರ ಭಂಡಾರಿ ೧೦೮

ನವ್‌ಸೇನಾಪದಕ

೩೧ ಲೆಫ್ಟಿನೆಂಟ್ ಸುಂದರರಾಜ್ ಸಂಪತ್‌ಗೋಪಾಲ್ ೧೦೯
೩೨ ಲೆಫ್ಟಿನೆಂಟ್ ಆಂಥೋಣಿ ಡಿ ಸ್ಯಾವ್ ಲಜಾರೋ ೧೧೨

ವಾಯುಸೇನಾಪದಕ

೩೩ ವಾರೆಂಟ್ ಆಫೀಸರ್ ರಂಗಪ್ಪ ರಂಗಸ್ವಾಮಿ ೧೧೩

ಸೇನಾಪದಕ

೩೪ ಲೆಫ್ಟಿನೆಂಟ್ ರಾಯದುರ್ಗ ರಾಮಮೂರ್ತಿ ೧೧೬
೩೫ ಹವಾಲ್ದಾರ್ ಮನೋಹರ ಬಾಬಾಸಾಹೇಬ ರಾನೆ ೧೧೮
೩೬ ಸೆಕೆಂಡ್ ಲೆಫ್ಟಿನೆಂಟ್ ಜಿ. ಆರ್. ಗಾಂವ್‌ಕರ್ ೧೧೯

೩೭ ಲೆಫ್ಟಿನೆಂಟ್ ಜಾನ್ ಟಿ. ಡಿಸೌಜ ೧೨೦
೩೮ ಸ್ಕ್ವಾಡ್ರನ್‌ಲೀಡರ್ ಎನ್. ಜೆ. ಡಿ. ಕಾನ್ಸಿಕಾವೋ ೧೨೧
೩೯ ಮೇಜರ್ ಸಿ. ಕೆ. ಕರುಂಬಯ್ಯ ೧೨೧
೪೦ ಕ್ಯಾಪ್ಟನ್ ಎಂ. ಎ. ಕರಿಯಪ್ಪ ೧೨೩
೪೧ ಮೇಜರ್ ಪ್ರಹ್ಲಾದ ತೋರೋ ೧೨೪
೪೨. ಲೆಫ್ಟಿನೆಂಟ್ ಸಮಿರ್ ರಾಮಮೋಹನ್ ಚಂದಾವರ್ಕರ್ ೧೨೮
೪೩. ಕ್ಯಾಪ್ಟನ್ ಎಂ. ಎಸ್. ಗದಗ್‌ಕರ್ ೧೩೦
೪೪. ಮೇಜರ್ ವಿ. ಎ. ಮಿಸಲ್ ೧೨೩
೪೫. ಸುಬೇದಾರ್ ವಿಕ್ಟರ್ ಸೆಕ್ವೇರಾ ೧೩೩

ವಿಶಿಷ್ಟಸೇವಾಪದಕ

೪೬ ಕಮ್ಯಾಂಡರ್ ಬಿ. ಆರ್. ವಸಂತ್ ೧೩೫
೪೭ ಮೇಜರ್ ಹೆನ್ರಿ ಪಿಂಟೋ ೧೩೮
೪೮ ಲೆಫ್ಟಿನೆಂಟ್ ಕರ್ನಲ್ ಜಿ. ಎಂ. ಶಿವಮಲ್ಲಪ್ಪ ೧೩೯

ಮೆನ್‌ಷನ್ ಇನ್ ಡೆಸ್‌ಪ್ಯಾಚಸ್

೪೯ ಕ್ಯಾಪ್ಟನ್ ಕೃಷ್ಣಪ್ರಸಾದ್ ಶೇಷಾದ್ರಿ ೧೩೯
೫೦ ಲೆಫ್ಟಿನೆಂಟ್ ಸತೀಶ್‌ಚಂದ್ರ ಸುರೇಶ್ ಬಂಗಾರ ೧೪೩
೫೧ ಲೆಫ್ಟಿನೆಂಟ್ ಕನರಾಡಿ ಮಾಧವರಾವ್ ೧೪೫
೫೨ ಚೀಫ್‌ಪೆಟಿ ಆಫೀಸರ್ ಎಂ. ಆರ್. ವಿ. ಸುಬ್ರಹ್ಮಣ್ಯಂ ೧೪೭
೫೩ ಎಂ. ಗಣಪತಿಪ್ರಭು ೧೫೦
೫೪ ಫ್ಲೈಟ್ ಲೆಫ್ಟಿನೆಂಟ್ ಶಾಮಣ್ಣ ಸುಬ್ಬರಾವ್ ಕುರುಪಾಡ್ ೧೫೧
೫೫ ಲೆಫ್ಟಿನೆಂಟ್ ಎಸ್. ಆರ್. ಧಾರೇಶ್ವರ್ ೧೫೨
೫೬ ಸುಬ್ರಹ್ಮಣ್ಯ ಶಂಕರ್ ೧೫೪
೫೭ ಸ್ಕ್ವಾಡ್ರನ್ ಲೀಡರ್ ಎಚ್. ಎಸ್. ರಘುನಾಥ್ ೧೫೭
೫೮ ಕ್ಯಾಪ್ಟನ್ ಮೂವೇರ ಚಿಣ್ಣಪ್ಪ ನಂಜಪ್ಪ ೧೬೦
೫೯ ವಾರೆಂಟ್ ಆಫೀಸರ್ ಹರೇಕಲ್ ಲಕ್ಷ್ಮಣ ೧೬೦

ಕಮೆಂಡೇಷನ್ ಕಾರ್ಡ್

೬೦ ಕ್ಯಾಪ್ಟನ್ ಶೇಷಗಿರಿರಾವ್ ಪ್ರಕಾಶ್ ೧೬೧

ಗಾಯಗೊಂಡವರು

೬೧ ಕ್ಯಾಪ್ಟನ್ ಪಿ. ಕೆ. ಅಪ್ಪಯ್ಯ ೧೬೩

೬೨ ಸಿಪಾಯಿ ವೆಂಕಟರಮಣಪ್ಪ ೧೬೪

೬೩ ಸಿಪಾಯಿ ಕೋಲಾರ ವೆಂಕಟಪ್ಪ ೧೬೪

೬೪ ಸೈನಿಕ ಶಿವರಾಮನ್ ೧೬೫

೬೫ ಯೋಧ ಪಿ. ಪಿ. ಭೀಮಯ್ಯ ೧೬೫

೬೬ ಸಿಪಾಯಿ ಮುನಿಸ್ವಾಮಿ ೧೬೬

೬೭ ಸಿಪಾಯಿ ನಂಜುಂಡ ೧೬೭

೬೮ ಕ್ಯಾಪ್ಟನ್ ಟಿ. ಜಿ. ಥಾಮಸ್ ೧೬೮

೬೯ ಮೇಜರ್ ಪಟ್ಟಡಚೆಟ್ಟಿಯಪ್ಪ ಉತ್ತಪ್ಪ ೧೬೮

೭೦ ಮೇಜರ್ ಕೆ. ಸುಂದರವತನನ್ ೧೬೯

ಸಮರ ಖೈದಿ

೭೧ ಸಿಪಾಯಿ ಪುರುಷೋತ್ತಮನ್ ೧೭೦

ಹುತಾತ್ಮರು

೭೨ ಮೇಜರ್ ಪಿ. ಎಂ. ಮಧು ೧೭೧

೭೩ ಮೇಜರ್ ಕೆ. ಕೆ. ರಾವ್ ೧೭೫

೭೪ ಲೆಫ್ಟಿನೆಂಟ್ ಅಶೋಕ್ ಮುಲ್ಲೇಕರ್ ೧೭೭

೭೫ ಫ್ಲೈಟ್ ಲೆಫ್ಟಿನೆಂಟ್ ಕೆ. ಕೆ. ಮೋಹನ್ ೧೭೯

೭೬ ಕೆ. ಎಂ. ಮುಂದಣ್ಣ ೧೭೯

೭೭ ಕ್ಯಾಪ್ಟನ್ ರಾಜಾ ಸ್ವಾಮಿಾಜಿ ೧೮೦

೭೮ ಹವಾಲ್ದಾರ್ ಸಂಗಣ್ಣಗೌಡ ಈರಣ್ಣಗೌಡ ಪಾಟೀಲ ೧೮೨

೭೯ ಹವಾಲ್ದಾರ್ ರಾಮಚಂದ್ರಪ್ಪ ಮಲ್ಲಪ್ಪ ಹಿಪ್ಪರಗಿ ೧೮೨

೮೦ ಲೆಫ್ಟಿನೆಂಟ್ ವಿಜಯ ಸುಮಂತ ೧೮೩

೮೧ ಡೇವಿಡಪ್ಪ ೧೮೪

೮೨ ಸತ್ಯನಾರಾಯಣ ಶೆಟ್ಟಿ ೧೮೫

೮೩ ದತ್ತಾತ್ರೇಯ ಬನೆ ೧೮೭

೮೪ ನಾಯಕ್ ಸಹದೇವನ್ ಕೊಟ್ಟಾಯಿ ೧೮೮

೮೫ ಸಿಪಾಯಿ ಸಿದ್ದಪ್ಪ ೧೮೯

೮೬ ಜಯಶೀಲನ್ ೧೯೦

೮೭	ಸಿಪಾಯಿ ಬೆಂಗಳೂರು ವೆಂಕಟ	೧೯೧
೮೮	ಪುಟ್ಟಮಾದೇಗೌಡ	೧೯೧
೮೯	ಕಲ್ಲಪ್ಪ ಗುರಪ್ಪ ಪೂಜಾರಿ	೧೯೨
೯೦	ಲಿಂಬಪ್ಪ ದಾಮುಲೆ ಲಮಾನೆ	೧೯೨
೯೧	ಬಸವಯ್ಯ ಮುರಿಗೆಯ್ಯ ಹಿರೇಮಠ	೧೯೩
೯೨	ಅನ್ವರ್ ಪಾಷಾ	೧೯೪
೯೩	ಎಸ್. ಆರ್. ಪಳಂಗಪ್ಪ	೧೯೪
೯೪	ಶರಣಪ್ಪ	೧೯೬
೯೫	ಜವಾನ್ ಮಲ್ಲಪ್ಪ ಮಾದರ	೧೯೬
೯೬	ಎಂ. ಎಸ್. ಪೊನ್ನಣ್ಣ	೧೯೭
೯೭	ಸದಾಶಿವ ಬಸಲಿಂಗ ಪಡದಾಳೆ	೧೯೮
೯೮	ಬಲ್ಯಂಡ ಕಾವೇರಪ್ಪ	೧೯೯
೯೯	ಸಿಪಾಯಿ ಮರಿ	೨೦೦
೧೦೦	ಮೇಜರ್ ಎಂ. ಎಸ್. ಜಿ. ರಾವ್	೨೦೦
	ಅನುಬಂಧ–೧	೨೦೩
	ಅನುಬಂಧ–೨	೨೦೬



ಭಾರತದ ರಾಷ್ಟ್ರಾಧ್ಯಕ್ಷ ಶ್ರೀ ವಿ. ವಿ. ಗಿರಿಯವರು

ಭಾರತದ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು



ರಾಜ್ಯಪಾಲ ಶ್ರೀ ಮೋಹನಲಾಲ್ ಸುಖಾಡಿಯಾರವರು

ಭಾರತ ಮತ್ತು ಪಾಕ್ ಯುದ್ಧ

(ಒಂದು ಸಂಗ್ರಹ)

೧೯೪೭ರ ಆಗಸ್ಟ್ ೧೫. ಭಾರತ ಪಾಕಿಸ್ತಾನಗಳು ಸ್ವಾತಂತ್ರ್ಯ ಪಡೆದ ಸುದಿನ. ಭಾರತದ ಪ್ರಜೆಗಳಿಗೆ ಸ್ವಾತಂತ್ರ್ಯ ದೊರಕಿತೆಂಬ ಸಂತೋಷವಾಗಿತ್ತು, ನಿಜ: ಆದರೆ ದೇಶವಿಭಜನೆಯಾಗಿತ್ತಾದ ಕಾರಣ ಅಷ್ಟೇ ದುಃಖವೂ ಆಗಿತ್ತು. ಆದರೆ ಮುಸ್ಲಿಂ ಲೀಗ್ ಮತ್ತು ಜಿನ್ನಾರವರ ಅನುಯಾಯಿಗಳಿಗೆ ಅದು ಅತ್ಯಂತ ಸಂತೋಷ ಸಂಭ್ರಮಗಳ ಸಂದರ್ಭವಾಗಿತ್ತು. ಕಾರಣ ಅವರಿಗೆ ನಿರಾಯಾಸ ವಾಗಿ ಸ್ವರಾಜ್ಯ ಲಭಿಸಿತ್ತು. ಭಾರತದ ನಾಯಕರಂತೆ ಅವರೇನೂ ವರ್ಷಗಟ್ಟಲೆ ಸೆರೆಮನೆಯಲ್ಲಿ ಕೊಳೆಯಲಿಲ್ಲ: ಲಾಠಿ ಪೆಟ್ಟುಗಳ ಹೊಡೆತಕ್ಕೆ ಸಿಕ್ಕಲಿಲ್ಲ. ಆಸ್ತಿ, ಮಡದಿ ಮಕ್ಕಳುಗಳನ್ನು ತ್ಯಾಗಮಾಡಿ, ದೇಶಕ್ಕಾಗಿ ಕಷ್ಟಪಟ್ಟು ಹೋರಾಡಿ ಭಾರತದ ನಾಯಕರು ಸ್ವರಾಜ್ಯ ಗಳಿಸಿದಾಗ ತಾವೂ ಭಾಗಸ್ಥರಾಗಿ ಮಧ್ಯೆ ಪ್ರವೇಶಿಸಿ ಹಕ್ಕು ಸಾಧಿಸಿ ಮುಸ್ಲಿಂ ನಾಯಕರು ರಾಜ್ಯವನ್ನು ಗಿಟ್ಟಿಸಿಕೊಂಡರು.

ಪಶ್ಚಿಮ ಪಂಜಾಬ್, ಸಿಂಧ್, ವಾಯುವ್ಯ ಗಡಿಪ್ರಾಂತ, ಬ್ರಿಟಿಷ್ ಬೆಲೂಚಿ ಸ್ತಾನ ಮತ್ತು ಅಸ್ಸಾಂನ ಸಿಲ್ಹೆಟ್ ಜಿಲ್ಲೆಯನ್ನೊಳಗೊಂಡ ಪೂರ್ವ ಬಂಗಾಳ—ಇಷ್ಟು ಪ್ರಾಂತಗಳು ಸೇರಿ ಒಂದು ಮುಸ್ಲಿಂ ರಾಷ್ಟ್ರವಾಗಿ ಅದಕ್ಕೆ ಪಾಕಿಸ್ತಾನವೆಂದು ಹೆಸರಾಯಿತು. ಪೂರ್ವದಲ್ಲಿ ಒಂದು ಭಾಗ: ಪಶ್ಚಿಮದಲ್ಲಿ ಒಂದು ಭಾಗ. ಈ ಎರಡು ಭಾಗಗಳನ್ನೂ ತೆಗೆದುಹಾಕಿದ ಭಾರತದ ಭೂಪಠವನ್ನು ನೋಡಿದಾಗ ಭಾರತ ಮಾತೆಯ ಎರಡು ಕೈಗಳನ್ನೂ ಕತ್ತರಿಸಿದಂತೆ ಕಾಣುವುದು.

ಈ ಪೂರ್ವ ಪಶ್ಚಿಮ ಪಾಕಿಸ್ತಾನಗಳು ಎಷ್ಟೋ ವಿಚಾರಗಳಲ್ಲಿ ವಿಭಿನ್ನವಾಗಿರು ವುದರಿಂದ ಇವುಗಳನ್ನು ಒಂದೇ ದೇಶ ಎಂದು ಹೇಳುವುದು ಸ್ವಲ್ಪ ಕಷ್ಟವೇ. ಮೊದಲನೆಯದಾಗಿ ಈ ಎರಡೂ ಭಾಗಗಳು ಒಂದಕ್ಕೊಂದು ೧,೨೦೦ ಮೈಲಿಗಳಷ್ಟು ದೂರದಲ್ಲಿವೆ. ಬೇರೆ ಬೇರೆ ಭಾಗಗಳು: ಜನಗಳ ಭಾಷೆ ಬೇರೆ: ಸಂಸ್ಕೃತಿ ಬೇರೆ: ಆರ್ಥಿಕ ಪರಿಸ್ಥಿತಿಯೇ ಬೇರೆ: ನಡೆನುಡಿ, ರೀತಿನೀತಿಗಳೇ ಬೇರೆ. ಈ ಎರಡೂ ಭಾಗಗಳಲ್ಲಿ ಒಂದೇ ಧರ್ಮ ಅಥವ ಮತವಿರುವುದೆಂಬ ಅಂಶ ಮತ್ತು ಒಂದು ಸಣ್ಣ ಇತಿಹಾಸ ಹಾಗೂ ಒಂದೇ ಕೇಂದ್ರ ಸರ್ಕಾರ—ಈ ಅಂಶಗಳನ್ನು ಬಿಟ್ಟರೆ ಮತ್ತಾವ ಹೊಂದಾಣಿಕೆಗಳೂ ಇಲ್ಲವೆನ್ನಬಹುದು.

ಪಾಕಿಸ್ತಾನ ಜನ್ಮ ತಳೆದಂದಿನಿಂದಲೂ ಪೂರ್ವ ಬಂಗಾಳಕ್ಕೆ ಒದಗುತ್ತಿರುವ ಪ್ರಯೋಜನ ಅತ್ಯಲ್ಪ. ಪೂರ್ವ ಬಂಗಾಳದ ಆರ್ಥಿಕ ಮತ್ತು ರಾಜಕೀಯ ಹಕ್ಕು

ಬಾಧ್ಯತೆಗಳು ಪಶ್ಚಿಮ ಪಾಕಿಸ್ತಾನದ ಆರ್ಥಿಕ ಮತ್ತು ರಾಜಕೀಯ ಹಕ್ಕುಬಾಧ್ಯತೆಗಳ ಅಧೀನಕ್ಕೊಳಪಟ್ಟಿದೆಯೆಂಬುದು ದಿನೇ ದಿನೇ ಹೆಚ್ಚು ಹೆಚ್ಚು ಸ್ಪಷ್ಟವಾಗತೊಡಗಿತು.

ಆರಂಭದಿಂದ ನಡೆದು ಬಂದ ಘಟನಾವಳಿಯತ್ತ ಒಮ್ಮೆ ದೃಷ್ಟಿ ಹರಿಸಿದ್ದೇ ಆದರೆ ಪಶ್ಚಿಮ ಪಾಕಿಸ್ತಾನದ ಅಭಿವೃದ್ಧಿ ಮತ್ತು ಪಂಜಾಬಿಗಳ ಉನ್ನತಿ—ಇವೇ ಪಾಕಿಸ್ತಾನದ ಆಡಳಿತಗಾರರ ಮಹೋನ್ನತ ಗುರಿಯಾಗಿತ್ತೆನ್ನುವುದು ಸುಸ್ಪಷ್ಟವಾಗುತ್ತದೆ.

ಪಶ್ಚಿಮ ಪಾಕಿಸ್ತಾನದ ಆಡಳಿತಗಾರರು ಈ ರೀತಿ ಮನಸ್ವೇಚ್ಛೆಯಾಗಿ ಆಡಳಿತ ನಡೆಸಲು ಒಂದು ಪ್ರಮುಖ ಕಾರಣವೆಂದರೆ ಪಾಕಿಸ್ತಾನದಲ್ಲಿ ಆರಂಭದಿಂದಲೂ ಒಂದು ಸಂವಿಧಾನವಿಲ್ಲದಿರುವುದು. ಆಡಳಿತ ನಡೆಸಲು ಬಂದವರೆಲ್ಲರೂ ಹಿಂದಿನವರು ಮಾಡಿದ ಸಂವಿಧಾನವನ್ನು ಕಿತ್ತೊಗೆದು, ತಮ್ಮ ಮನಸ್ಸಿಗೆ ಬಂದಂತೆ ಹೊಸ ಸಂವಿಧಾನವನ್ನು ರಚಿಸತೊಡಗಿದುದು. ಇದು ಪಾಕಿಸ್ತಾನದ ಒಂದು ವೈಶಿಷ್ಟ್ಯ. ಈ ಸಂವಿಧಾನರಚನೆಯಲ್ಲಿ ಪಾಕಿಸ್ತಾನ ಇದುವರೆಗೂ ವಿಫಲಗೊಂಡಿದೆಯೆಂದೇ ಹೇಳಬಹುದು.

ಈ ಅಂಶಗಳನ್ನು ಮನಗಂಡ ಪೂರ್ವ ಪಾಕಿಸ್ತಾನದ ಬಂಗಾಳಿಗಳಿಗೆ ಮುಸ್ಲಿಂ ಲೀಗ್ ಅರ್ಥಾತ್ ಪಶ್ಚಿಮದ ಆಡಳಿತಗಾರರು ಪ್ರಜಾಪ್ರಭುತ್ವದ ಕಡೆಗೆ ಗಮನ ಹರಿಸುತ್ತಿಲ್ಲವೆಂಬುದು ಚೆನ್ನಾಗಿ ಮನವರಿಕೆಯಾಯಿತು. ಆದ್ದರಿಂದ ಅವರು ಮುಸ್ಲಿಂ ಲೀಗಿಗೆ ಬೆಂಬಲ ನೀಡುವುದನ್ನು ನಿಲ್ಲಿಸಿದರು. ಮುಸ್ಲಿಂ ಲೀಗ್‌ಗೆ ವಿರೋಧವಾಗಿ ನಿಂತ-ಅವಾಮಿ ಲೀಗ್, ಗಣತಂತ್ರೀದಳ ಮತ್ತು ಕೃಷಿಕ್ ಶ್ರಮಿಕ್ ಪಕ್ಷ—ಈ ಪಕ್ಷಗಳೇ ಬಂಗಾಳದಲ್ಲಿ ಹೆಚ್ಚು ಜನಪ್ರಿಯವಾಗತೊಡಗಿದುವು.

ಈ ಮೂರು ಪಕ್ಷಗಳಲ್ಲಿ ಅವಾಮಿ ಲೀಗ್ ಹೆಚ್ಚಿನ ಪ್ರಾಶಸ್ತ್ಯ ಗಳಿಸಿತು. ಈ ಪಕ್ಷದ ಮೊದಲ ಹೆಸರು—ಜಿನ್ನಾ ಅವಾಮಿ ಮುಸ್ಲಿಂ ಲೀಗ್-ಎಂದು. ಈ ಹೆಸರಿನಲ್ಲಿ ಮತೀಯ ಭಾವನೆ ಎದ್ದು ಕಾಣುತ್ತಿದ್ದುದರಿಂದ ಈ ಪಕ್ಷದ ನಾಯಕರು ತಮ್ಮ ಪಕ್ಷದ ಹೆಸರಿನ ಅರ್ಥವನ್ನು ಇನ್ನೂ ವಿಶಾಲಗೊಳಿಸಲು ಯೋಚಿಸಿದರು. ಅದರಂತೆ ಮುಸ್ಲಿಂ ಎಂಬ ಪದವನ್ನು ತೆಗೆದುಹಾಕಿ, ಮುಸ್ಲಿಮೇತರರನ್ನೂ ತಮ್ಮ ಪಕ್ಷಕ್ಕೆ ಸೇರಿಸಿಕೊಂಡು, ತಮ್ಮ ಪಕ್ಷಕ್ಕೆ 'ಅವಾಮಿ ಲೀಗ್' ಎಂದಷ್ಟೇ ಹೆಸರಿರಬೇಕೆಂದು ೧೯೫೫ರಲ್ಲಿ ತೀರ್ಮಾನಿಸಿದರು. ೧೯೫೭ರ ಡಿಸೆಂಬರ್‌ನಲ್ಲಿಯೇ ಹುಸೇನ್ ಸಹೀದ್ ಸುಹ್ರವರ್ದಿ ಅವರ ನಾಯಕತ್ವದಲ್ಲಿ ಈ ಪಕ್ಷದ ಸಮ್ಮೇಳನವೊಂದು ನಡೆದು ಪಕ್ಷದ ಕಾರ್ಯಕ್ರಮಗಳು, ಧ್ಯೇಯಗಳು ಪ್ರಕಟಗೊಂಡಿದ್ದುವು. ಈ ಪಕ್ಷ ಘೋಷಿಸಿದ್ದ ಧ್ಯೇಯಗಳೆಂದರೆ—ತೆರಿಗೆಗಳ ಇಳುವರಿ, ೩೩೦ ಎಕರೆ ಜಮೀನಿಗಿಂತ ಹೆಚ್ಚು ಆಸ್ತಿ ಇರಬಾರದೆಂಬ ಒಂದು ಮಿತಿ, ಹೆಚ್ಚಿನ ಆದಾಯವುಳ್ಳವರಿಂದ ಸರ್ ಟ್ಯಾಕ್ಸ್ (sur tax) ವಸೂಲಿ, ಪ್ರಮುಖ ಉದ್ಯಮಗಳ ರಾಷ್ಟ್ರೀಕರಣ, ಲಂಚದ ವಿರುದ್ಧ

ಹೋರಾಟ, ಪ್ರಜಾಸತ್ತಾತ್ಮಕವಾಗಿ ಪ್ರಸಕ್ತ ರಾಜಕೀಯ ಆಡಳಿದ ಪರಿವರ್ತನೆ, ಪ್ರಾತಿನಿಧಿಕವಲ್ಲದ ರಾಜ್ಯಾಂಗ ಸಭೆಯ ವಿಸರ್ಜನೆ—ಇವೇ ಮೊದಲಾದುವು.

ಅವಾಮಿ ಪಕ್ಷದ ಈ ಕಾರ್ಯಕ್ರಮಗಳು ಮತ್ತು ಧ್ಯೇಯಗಳು ಜನರ ಮನ್ನಣೆಯನ್ನು ಅಪಾರವಾಗಿ ಗಳಿಸಿದುವು.

ಇನ್ನೊಂದು ಪ್ರಮುಖ ಪಕ್ಷ ಗಣತಂತ್ರೀ ದಳ. ಇದು ೧೯೫೩ರ ಜನವರಿಯಲ್ಲಿ ಜನ್ಮ ತಾಳಿತು. ಪೂರ್ವ ಬಂಗಾಳದ ಬುದ್ಧಿಜೀವಿಗಳೆಲ್ಲ ಸೇರಿ ಈ ಪಕ್ಷವನ್ನು ಪ್ರಾರಂಭಿಸಿದ್ದರು. ಪ್ರಜಾಸತ್ತಾತ್ಮಕ ಸಂಯುಕ್ತ ಗಣರಾಜ್ಯವಾಗಿ ಪಾಕಿಸ್ತಾನದ ಪರಿವರ್ತನೆ, ಪೂರ್ವ ಪಾಕಿಸ್ತಾನಕ್ಕೆ ಪೂರ್ಣ ಸ್ವಯಮಾಡಳಿತಾಧಿಕಾರ ಮತ್ತು ಸಮಾನತೆ ನೀಡಿಕೆ, ಜಮೀನ್‌ದಾರಿ ಪದ್ಧತಿಯ ರದ್ದತಿ, ರಾಷ್ಟ್ರೀಯ ಕೈಗಾರಿಕೋದ್ಯಮದ ಅಭಿವೃದ್ಧಿ—ಇವು ಈ ಪಕ್ಷದ ಧ್ಯೇಯಗಳು.

ಈ ಉನ್ನತ ಧ್ಯೇಯಗಳಿಂದಾಗಿ ಈ ಪಕ್ಷವೂ ಪೂರ್ವ ಬಂಗಾಳದಲ್ಲಿ ಸಾಕಷ್ಟು ಜನಾನುರಾಗಿಯಾಯಿತು. ಕೋಮುವಾರು ಮತ್ತು ಮತೀಯ ತತ್ವಗಳನ್ನು ಬದಿಗಿಟ್ಟು ಈ ಪಕ್ಷವು ಮುಸ್ಲಿಮರಿಗೂ, ಮುಸ್ಲಿಮೇತರರಿಗೂ ಸಮಾನವಾಗಿಯೇ ತನ್ನ ಉಚ್ಚಸ್ಥಾನಗಳನ್ನು ನೀಡಿತು.

೧೯೫೩ರ ಬೇಸಿಗೆಯಲ್ಲಿ ಫಜಲುಲ್ ಹಕ್ ಅವರು ಮತ್ತೊಂದು ಪಕ್ಷವನ್ನು ಸ್ಥಾಪಿಸಿದರು. ಅದೇ ಕೃಷಿಕ್ ಶ್ರಮಿಕ್ ಪಕ್ಷ. ಹೆಸರೇ ಸೂಚಿಸುವಂತೆ ಇದು ಮುಖ್ಯವಾಗಿ ಕೃಷಿಕರ ಹಾಗೂ ಕಾರ್ಮಿಕರ ಪಕ್ಷ. ಕೋಮುವಾರು ಮತ್ತು ಮತೀಯ ಭಾವನೆಗಳು ಸುಳಿಯಲು ಈ ಪಕ್ಷದಲ್ಲಿ ಒಂದಿನಿತೂ ಅವಕಾಶವಿರಲಿಲ್ಲ. ಪೂರ್ವ ಬಂಗಾಳಕ್ಕೆ ಸ್ವಯಮಾಡಳಿತಾಧಿಕಾರ ನೀಡಿಕೆ, ಸರ್ಕಾರೀ ಭಾಷೆಯಾಗಿ ಬಂಗಾಳೀ ಭಾಷೆಗೆ ಮನ್ನಣೆ, ರಾಜಕೀಯ ಖೈದಿಗಳ ತಕ್ಷಣದ ಬಿಡುಗಡೆ ಮತ್ತು ನ್ಯಾಯಾಂಗ ಶಾಖೆಯಿಂದ ಆಡಳಿತ ಶಾಖೆಯನ್ನು ಬೇರ್ಪಡಿಸುವುದು—ಇವು ಈ ಪಕ್ಷದ ಧ್ಯೇಯಗಳು.

ಈ ಮೂರು ಪಕ್ಷಗಳೂ ಬೇರೆ ಬೇರೆಯಾಗಿದ್ದರೂ ಎಲ್ಲದರ ಮುಖ್ಯ ಗುರಿಯೂ ಒಂದೇ ಆಗಿತ್ತು. ಆ ಗುರಿಯೆಂದರೆ ಪ್ರಾಂತೀಯ ಸ್ವಯಮಾಡಳಿತಾಧಿಕಾರ, ಪ್ರಜಾಸತ್ತೆ, ಮತ್ತು ವ್ಯಕ್ತಿ ಸ್ವಾತಂತ್ರ್ಯಕ್ಕೆ ನೀಡಿದ ಪ್ರಾಶಸ್ತ್ಯ.

೧೯೫೪ರ ಫೆಬ್ರುವರಿಯಲ್ಲಿ ಪೂರ್ವ ಬಂಗಾಳದಲ್ಲಿದ್ದ ಮುಸ್ಲಿಂ ಲೀಗ್‌ನ ವಿರೋಧ ಪಕ್ಷಗಳೆಲ್ಲ ಸೇರಿ ಸಂಯುಕ್ತರಂಗವೊಂದನ್ನು ರಚಿಸಿಕೊಂಡವು. ಈ ರಂಗವೂ ಸಹ ಬಹಳ ಬೇಗ ಜನಪ್ರಿಯತೆ ಗಳಿಸಿತು. ಫಜಲುಲ್ ಹಕ್‌ರವರೇ ಈ ರಂಗದ ನಾಯಕರಾಗಿದ್ದರು. ಈ ರಂಗವು ತನ್ನ ಬೇಡಿಕೆಗಳನ್ನು ಮುಂದಿಟ್ಟಿತು. ಆ ಬೇಡಿಕೆಗಳೆಂದರೆ—ಪೂರ್ವ ಪಾಕಿಸ್ತಾನಕ್ಕೆ ಪೂರ್ಣ ಪ್ರಾಂತೀಯ ಸ್ವಯಮಾಡಳಿತಾಧಿಕಾರ ದೊರೆಯಬೇಕು, ರಕ್ಷಣೆ, ವಿದೇಶಾಂಗ ವ್ಯವಹಾರ, ಚಲಾವಣೆಯ ಹಣ ಇವುಗಳಲ್ಲಿ ಮಾತ್ರ ಕೇಂದ್ರ ಸರ್ಕಾರ ಜವಾಬ್ದಾರಿ ವಹಿಸಬೇಕು, ಸಾಮಾನ್ಯ

ಸಿಬ್ಬಂದಿ ಮತು ನೌಕಾದಳದ ಮುಖ್ಯ ಕಛೇರಿಯನ್ನು ಪೂರ್ವ ಪಾಕಿಸ್ತಾನಕ್ಕೆ ವರ್ಗಾಯಿಸಬೇಕು, ಯುದ್ಧೋಪಕರಣಗಳ ಕಾರ್ಖಾನೆಯನ್ನು ಪೂರ್ವ ಬಂಗಾಳದಲ್ಲಿ ಸ್ಥಾಪಿಸಬೇಕು, ಬಂಗಾಳಿ ಭಾಷೆಗೆ ಸರ್ಕಾರಿ ಭಾಷೆಯೆಂದು ಮನ್ನಣೆ ನೀಡಬೇಕು ಮತ್ತು ಉಚಿತ ಕಡ್ಡಾಯ ಪ್ರಾಥಮಿಕ ಶಿಕ್ಷಣ ಪದ್ಧತಿಯನ್ನು ಎಲ್ಲೆಡೆ ಜಾರಿಗೆ ತಂದು ಸ್ಥಳೀಯ ಭಾಷೆಯಲ್ಲಿಯೇ ಬೋಧಿಸುವ ಅವಕಾಶವಿರಬೇಕು.

ಈ ಎಲ್ಲ ಅಂಶಗಳು ಬಂಗಾಳಿಗಳಲ್ಲಿ ಹೊಸ ಆಶಾಕಿರಣವನ್ನು ಮೂಡಿಸಿದರೆ, ಮುಸ್ಲಿಂ ಲೀಗ್‌ಗೆ ಎದೆಯಲ್ಲಿ ದಳ್ಳುರಿಯಿಟ್ಟಂತಾಯಿತು. ಏನಾದರಾಗಲಿ? ಚುನಾವಣೆಗಳು ನಡೆಯಬೇಕಷ್ಟೆ. ಪಶ್ಚಿಮ ಪಾಕ್ ನಾಯಕರು ಅಲ್ಲಸಲ್ಲದ ನೆಪಗಳನ್ನು ಮುಂದೊಡ್ಡಿ ೧೯೫೪ರ ಫೆಬ್ರವರಿ ೧೫ರಂದು ನಡೆಯಬೇಕಾಗಿದ್ದ ಚುನಾವಣೆಗಳನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಿತು. ಕೊನೆಗೆ ಮುಂದಿನ ಮಾರ್ಚ್ ತಿಂಗಳಿನಲ್ಲಿಯೇ ಚುನಾವಣೆ ನಡೆಯಿತು. 'ಬಂಗಾಳಿಗಳಿಗೆ ಬಂಗಾಳ' ಎಂಬ ಬೇಡಿಕೆಯನ್ನು ಎತ್ತಿಹಿಡಿದು ಚುನಾವಣೆಗೆ ನಿಂತ ಸಂಯುಕ್ತರಂಗ ೨೩೭ ಮುಸ್ಲಿಂ ಸ್ಥಾನಗಳಲ್ಲಿ ೨೨೩ ಸ್ಥಾನಗಳನ್ನು: ಗಳಿಸಿ ಪ್ರಚಂಡ ಜಯ ಗಳಿಸಿತು. ಇದರಲ್ಲಿಯೂ ಹೆಚ್ಚಿನ ಸ್ಥಾನಗಳನ್ನು ಅಂದರೆ ೧೪೨ ಸ್ಥಾನಗಳನ್ನು ಅವಾಮಿ ಪಕ್ಷ ಗಳಿಸಿತ್ತು. ಕೂಡಲೇ ಅಂದರೆ ೧೯೫೪ರ ಏಪ್ರಿಲ್ ೩ರಂದು ಪೂರ್ವ ಬಂಗಾಳದಲ್ಲಿ ಪ್ರತಿನಿಧಿಗಳ ಸರ್ಕಾರ ಅಸ್ತಿತ್ವಕ್ಕೆ ಬಂದು ಫಜಲುಲ್ ಹಕ್‌ರವರೇ ಮುಖ್ಯ ಮಂತ್ರಿಯಾದರು. ತನ್ನ ಪಕ್ಷದ ಧ್ಯೇಯಗಳನ್ನೇ ಗುರಿಯಾಗಿಟ್ಟುಕೊಂಡು, ಈ ಸರ್ಕಾರ ಕಾರ್ಯ ನಿರ್ವಹಿಸುತ್ತಿತ್ತು.

ಹೀಗೆ ನಿರಾತಂಕವಾಗಿ ಆಡಳಿತ ನಡೆಸತೊಡಗಿದ್ದ ಪೂರ್ವ ಬಂಗಾಳವನ್ನು ಕಂಡು ಮುಸ್ಲಿಂ ಲೀಗ್ ಅರ್ಥಾತ್ ಪಶ್ಚಿಮ ಪಾಕ್ ಅಧಿಕಾರಿಗಳಿಗೆ ಸಹನೆಯಾಗಲಿಲ್ಲ. ಪೂರ್ವ ಬಂಗಾಳದ ಮುಖ್ಯ ಮಂತ್ರಿ ಫಜಲುಲ್ ಹಕ್ ಸ್ವತಂತ್ರ ಪೂರ್ವ ಪಾಕಿಸ್ತಾನದ ಸ್ಥಾಪನೆಗೆ ತೊಡಗಿರುವರೆಂಬ (ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯ ಒಂದು ತಪ್ಪು ವರದಿಯನ್ನೇ ಆಧಾರವಾಗಿಟ್ಟುಕೊಂಡು) ಆಪಾದನೆ ಹೊರಿಸಿ, ಅವರನ್ನು ರಾಷ್ಟ್ರದ್ರೋಹಿಯೆಂದು ಘೋಷಿಸಿತು. ಈ ಆರೋಪವನ್ನು ತಿರಸ್ಕರಿಸಿ ಹಕ್ ಅವರ ಸರ್ಕಾರವು ನೀಡಿದ ವಿಶೇಷ ಹೇಳಿಕೆಗಳಿಗೆ ಪಾಕಿಸ್ತಾನದ ಕೇಂದ್ರ ಸರ್ಕಾರ ಕಿವಿಗೊಡಲಿಲ್ಲ. ತನ್ನ ಛಲವನ್ನೇ ಸಾಧಿಸಿ ಪೂರ್ವ ಬಂಗಾಳದ ವಿಧಾನ ಸಭೆಯನ್ನು ವಿಸರ್ಜಿಸಿ, ಸಂಯುಕ್ತ ಸರ್ಕಾರವನ್ನು ಉರುಳಿಸಿ, ಗೌವರ್ನರ್ ಆಡಳಿತವನ್ನು ಜಾರಿಗೆ ತಂದಿತು. ಗೌವರ್ನರ್ ಆಡಳಿತದಲ್ಲಿ ಬಂಗಾಳಿಗಳು ಪಟ್ಟ ಬವಣೆಯನ್ನು ಬೇರೆ ಹೇಳಬೇಕಾಗಿಯೇ ಇಲ್ಲ: ಎಷ್ಟಾಗಲಿ ಛಲ ಸಾಧಿಸಲು ನೇಮಕವಾದ ಆಡಳಿತವದು.

ಮುಂದೆ ಪಾಕಿಸ್ತಾನದ ಕೇಂದ್ರ ಸರ್ಕಾರದಲ್ಲಿ ಸಂವಿಧಾನದ ರಚನೆ, ಅದನ್ನು ರದ್ದುಗೊಳಿಸುವುದು ; ಸಲಹೆಗಳ ನೀಡಿಕೆ, ಅದರ ತಿರಸ್ಕಾರ—ಇವು ಅವ್ಯಾಹತ

ವಾಗಿ ಸಾಗಿತು. ಎಲ್ಲಕ್ಕಿಂತ ಮುಖ್ಯವಾಗಿ ೧೯೫೬ರಲ್ಲಿ ರೂಪುಗೊಂಡ ಸಂವಿಧಾನ ಬಂಗಾಳಿಗಳನ್ನು ರೊಚ್ಚಿಗೆಬ್ಬಿಸಿತು. ಈ ಸಂವಿಧಾನದಲ್ಲಿ ಪಾಕಿಸ್ತಾನದ ಪೂರ್ವ ವಿಭಾಗದ ಹೆಸರನ್ನು ಮೊತ್ತಮೊದಲಬಾರಿಗೆ 'ಪೂರ್ವ ಬಂಗಾಳ' ಎಂದಿದ್ದುದನ್ನು 'ಪೂರ್ವ ಪಾಕಿಸ್ತಾನ' ಎಂದು ಅಧಿಕೃತವಾಗಿ ಬದಲಾಯಿಸಲಾಗಿತ್ತು.

ತಮ್ಮ ರಾಜ್ಯದ ಹೆಸರಿನ ಈ ಬದಲಾವಣೆಯನ್ನು ನೋಡಿ ಬಂಗಾಳಿಗಳು ಸಿಡಿದೆದ್ದರು. ಸಂವಿಧಾನವನ್ನು ವಿರೋಧಿಸಿ ಪೂರ್ವ ಬಂಗಾಳದಲ್ಲಿ ಚಳುವಳಿಗಳು ಆರಂಭವಾದುವು. ಪೂರ್ವ ಮತ್ತು ಪಶ್ಚಿಮ ಪಾಕಿಸ್ತಾನಗಳ ಪ್ರಾತಿನಿಧ್ಯದ ಅನಂತರದ ಬಗೆಗೂ ಬಂಗಾಳಿಗಳಿಗೆ ಅಸಮಾಧಾನವಾಗಿತ್ತು. ಈ ಕಾರಣಗಳೆಲ್ಲ ಒಂದಾಗಿ, ತಮ್ಮ ಬೇಡಿಕೆಗಳನ್ನು ಪೂರೈಸಲಾಗದ ಒಂದು ದುರ್ಬಲ ಸಾಧನವೆಂದು ಅವರು ಸಂವಿಧಾನವನ್ನು ಅಲ್ಲಗಳೆದರು. ಪ್ರಾಂತೀಯ ಸ್ವಯಮಾಡಳಿತವೇ ಬೇಕೆಂದು ಪಟ್ಟುಹಿಡಿದರು.

ಇತ್ತ ಪೂರ್ವದಲ್ಲಿ ಈ ಕತೆಯಾದರೆ ಅತ್ತ ಪಶ್ಚಿಮದ ಕತೆ ಇನ್ನೊಂದು ರೀತಿ. ಎಲ್ಲೆಲ್ಲಿಯೂ ದಂಗೆ, ಚಳುವಳಿ, ಹರತಾಳ ಇತ್ಯಾದಿ. ರಾಷ್ಟ್ರೀಯ ಸಭೆಯ ರಚನೆ, ಸಂವಿಧಾನದ ರಚನೆ, ವಾದವಿವಾದಗಳು ಒಮ್ಮೊಮ್ಮೆ ಅತಿರೇಕವನ್ನು ತಲುಪಿ, ಅಧಿಕಾರಿಗಳ ಕೊಲೆಯಲ್ಲಿ ಪರ್ಯವಸಾನಗೊಳ್ಳುತ್ತಿದ್ದುವು. ೧೯೪೭ರಿಂದ ೧೯೫೮ರ ವರೆಗೆ ಪಾಕ್ ಆಡಳಿತದ ಒಂದು ವಿಹಂಗಮ ನೋಟದ ಕಡೆ ದೃಷ್ಟಿ ಹರಿಸಿದರೆ ಕಂಡುಬರುವ ಮುಖ್ಯಾಂಶಗಳಿವು:

೧೯೪೭ರಿಂದ ೧೯೫೮ರ ವರೆಗೆ ಪಾಕಿಸ್ತಾನದಲ್ಲಿ ಮೂವರು ಗವರ್ನರ್ ಜನರಲ್‌ಗಳು ಅಧ್ಯಕ್ಷರಾದರು. ಏಳು ಮಂತ್ರಿಮಂಡಲಗಳು ಆಡಳಿತ ನಡೆಸಿದುವು. ಕಡೆಯ ೧೯೫೫ರಿಂದ ೧೯೫೮ರ ವರೆಗಿನ ಕೇವಲ ಮೂರು ವರ್ಷಗಳ ಅವಧಿಯಲ್ಲಿ ನಾಲ್ವರು ಮುಖ್ಯ ಮಂತ್ರಿಗಳಾಗಿ ಹೋದರೆಂದರೆ ರಾಜಕೀಯದ ದುಃಸ್ಥಿತಿಯ ಕಲ್ಪನೆ ಎಂಥವರಿಗಾದರೂ ಮೂಡೀತು. ರಾಜಕೀಯ ದುಃಸ್ಥಿತಿ, ಆಡಳಿತ ದುರ್ಬಲತೆ, ಅಧಿಕಾರಿಗಳ ಸ್ವಾರ್ಥತೆ, ಆರ್ಥಿಕ ಅವನತಿ, ಜನತೆಯ ಅಸಂತುಷ್ಟಿ ಪಾಕಿಸ್ತಾನದಲ್ಲಿ ತಾಂಡವವಾಡಿತು. ತತ್ಫಲವಾಗಿ ಅಲ್ಲಿ ಮಿಲಿಟರಿ ಆಡಳಿತ ಜಾರಿಗೆ ಬರುವಂತಾಯಿತು.

ಪಾಕಿಸ್ತಾನದ ಸೇನಾಧಿಕಾರಿಗಳಾಗಿದ್ದ ಜನರಲ್ ಅಯೂಬ್‌ಖಾನರು ೧೯೫೮ರ ಅಕ್ಟೋಬರ್ ೭ರಂದು ಪಾಕ್ ಅಧ್ಯಕ್ಷರನ್ನೂ, ರಾಷ್ಟ್ರೀಯ ಸಭೆಯನ್ನೂ ರದ್ದುಗೊಳಿಸಿ ತಾವೇ ಸರ್ವಾಧಿಕಾರಿಯಾದರು. ಇವರ ಅಧಿಕಾರ ೧೯೫೮ರಿಂದ ೧೯೬೯ರ ವರೆಗೆ ಹನ್ನೊಂದು ವರ್ಷಗಳ ಕಾಲ ನಡೆಯಿತು. ಅವರು ಆಡಳಿತವನ್ನು ಹೇಗೇ ನಡೆಸಿರಲಿ, ಪಾಕಿಸ್ತಾನದಲ್ಲಿ ದೀರ್ಘಕಾಲ ಆಡಳಿತ ನಡೆಸಿದವರು ಇವರೇ ಎಂಬ ಕೀರ್ತಿ ಮಾತ್ರ ಸಂದಿತು.

ಅಯೂಬರ ಆಡಳಿತವೇನೂ ಸುಗಮವಾಗಿ ಸಾಗಿರಲಿಲ್ಲ. ಪೂರ್ವ ಪಶ್ಚಿಮ

ಪಾಕಿಸ್ತಾನಗಳ ಜತೆಯಲ್ಲಿ ಅಸಮಾಧಾನದ ಬೇಗುದಿ ಇದ್ದೇ ಇತ್ತು. ಜೊತೆಗೆ ಭಾರತದೊಡನೆ ಯುದ್ಧ, ತಾಷ್ಕೆಂಟ್ ಒಪ್ಪಂದಗಳೂ ಇವರ ಕಾಲದಲ್ಲಿ ನಡೆದ ಘಟನೆಗಳು.

ಮಿಲಿಟರಿ ನಾಯಕರಾದ ಅಯೂಬರ ಕಿವಿಗೆ ರಾಜಕೀಯ ನೀತಿ ನಿಯಮಗಳು ಬಿದ್ದೀತೇ ? ಅವರು ಅರಿತಿರುವುದೆಂದರೆ ಯುದ್ಧ. ಹೊಡಿ, ಬಡಿ, ಕಡಿ— ಎಂಬುದಿಷ್ಟೆ. ಬಂಗಾಳಿಗಳನ್ನು ಕಂಡರಂತೂ ಅವರಿಗೆ ಎಂದಿನಿಂದಲೂ ತಿರಸ್ಕಾರವೇ ಇತ್ತು. ಪಕ್ಷದ ನಾಯಕರನ್ನು ಕಂಡರಂತೂ ಅವರಿಗೆ ಎಲ್ಲಿಲ್ಲದ ದ್ವೇಷ, ಅಸೂಯೆ. ತಮ್ಮ ದಬ್ಬಾಳಿಕೆಯಲ್ಲಿ ಆ ನಾಯಕರನ್ನೆಲ್ಲ ಬಂಧನಕ್ಕೊಳಪಡಿಸಿ, ಸಾಕಷ್ಟು ಕಿರುಕುಳಗಳನ್ನು ಕೊಟ್ಟು ತೃಪ್ತಿಪಟ್ಟುಕೊಂಡರು. ಅವರಿಗೆ ತೃಪ್ತಿಯಾದುದೇನೋ ಸರಿ: ಆದರೆ ಪ್ರಜೆಗಳ ವಿಶ್ವಾಸವನ್ನು ಮಾತ್ರ ಅವರು ಗಳಿಸಲಾಗಲಿಲ್ಲ. ೧೯೬೯ರಲ್ಲಿ ಪೂರ್ವ ಮತ್ತು ಪಶ್ಚಿಮ ಪಾಕಿಸ್ತಾನಗಳೆರಡರಲ್ಲೂ ಭಾರಿ ಪ್ರಮಾಣದ ಮುಷ್ಕರ, ಚಳುವಳಿಗಳು ವ್ಯಾಪಕವಾಗಿ ಹಬ್ಬಿದುದರಿಂದ ಅಯೂಬ್‌ಖಾನ್ ಬಲಾತ್ಕಾರವಾಗಿ ರಾಜೀನಾಮೆ ಕೊಡಬೇಕಾಗಿ ಬಂದಿತು. ೧೯೬೯ರ ಮಾರ್ಚ್ ೨೫ರಂದು ಪಾಕಿಸ್ತಾನದ ಪ್ರಧಾನ ದಂಡನಾಯಕ ಜ|| ಯಹ್ಯಾಖಾನರಿಗೆ ಅಧಿಕಾರವನ್ನು ಬಿಟ್ಟುಕೊಟ್ಟು ಅಯೂಬ್‌ಖಾನರು ಸರ್ವಾಧಿಕಾರಿ ಪಟ್ಟದಿಂದ ಕೆಳಗಿಳಿದರು.

* * * *

ಹೀಗೆ ಪಶ್ಚಿಮ ಪಾಕಿಸ್ತಾನದಲ್ಲಿ ಸಂವಿಧಾನದ ಗೊಂದಲಗಳುಂಟಾದುದರ ಪರಿಣಾಮವಾಗಿ ಪೂರ್ವ ಬಂಗಾಳದ ಮೇಲೆ ಭಾರಿ ಪರಿಣಾಮವೇ ಆಯಿತು. ಪಾಕಿಸ್ತಾನದ ಕೇಂದ್ರ ಸರ್ಕಾರ ಪಶ್ಚಿಮ ಪಾಕಿಸ್ತಾನೀಯರ ಕೈಗೊಂಬೆಯಾಗಿದ್ದುದರಿಂದ ಬಂಗಾಳಿಗಳಿಗೆ ಪಕ್ಷಪಾತವು ಪ್ರಾಪ್ತವಾದುದು ಸಹಜವೇ.

ಒಟ್ಟಿನಲ್ಲಿ ಹೇಳುವುದಾದರೆ ಆರ್ಥಿಕ ದೃಷ್ಟಿಯಿಂದ, ಸಾಮಾಜಿಕ ದೃಷ್ಟಿಯಿಂದ ಮತ್ತು ಧಾರ್ಮಿಕ ದೃಷ್ಟಿಯಿಂದ ಬಂಗಾಳಿಗಳಿಗೆ ಭಾರಿ ಅನ್ಯಾಯವಾಗಿದೆಯೆಂದು ಹೇಳಬಹುದು. ಪಾಕಿಸ್ತಾನವು ಜನ್ಮ ತಳೆದಂದಿನಿಂದಲೂ ಅದರ ಆರ್ಥಿಕ ನೀತಿ ಪೂರ್ವ ಬಂಗಾಳಕ್ಕೆ ಅನುಕೂಲಿಸುವ ಬದಲು ಹೆಚ್ಚಿನ ತೊಂದರೆಗಳನ್ನೇ ತಂದೊಡ್ಡಿತ್ತು. ಮುಖ್ಯವಾಗಿ ಕೈಗಾರಿಕೆ ಮತ್ತು ಕೃಷಿ ಕ್ಷೇತ್ರಗಳಲ್ಲಿ ಪೂರ್ವ ಬಂಗಾಳಕ್ಕೆ ಪಕ್ಷಪಾತವಾಗಿತ್ತು.

ರಾಷ್ಟ್ರದ ಸಂಪನ್ಮೂಲಗಳನ್ನು ಮತ್ತು ವಿದೇಶಿ ನೆರವನ್ನು ಪಾಕ್ ಸರ್ಕಾರವು ಸಂಪೂರ್ಣವಾಗಿ ಪಶ್ಚಿಮ ಪಾಕಿಸ್ತಾನದ ಅಭಿವೃದ್ಧಿಗೇ ಬಳಸಿಕೊಳ್ಳುತ್ತಿತ್ತು. ಈ ದಿಸೆಯಲ್ಲಿ ಅದು ಪೂರ್ವ ಬಂಗಾಳವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿತೆನ್ನಬಹುದು. ಇಡೀ ಪಾಕಿಸ್ತಾನಕ್ಕೆಂದು ತರಿಸಲಾದ ನೆರವು ಪಶ್ಚಿಮ ಪಾಕಿಸ್ತಾನಕ್ಕೆ ಸಾಲದಾಗುತ್ತಿತ್ತು. ಒಮ್ಮೊಮ್ಮೆ ಪಾಕ್ ಸರ್ಕಾರವು ಪೂರ್ವ ಬಂಗಾಳವನ್ನು ಒತ್ತೆಯಿಟ್ಟು

ವಿದೇಶೀ ಸಾಲ ಪಡೆಯುತ್ತಿತ್ತು. ಆದರೆ ಆ ಸಾಲದ ಶೇ. ೮೦ರಷ್ಟು ಪಾಲನ್ನು ಪಶ್ಚಿಮ ಪಾಕೀಸ್ತಾನವೇ ಬಳಸಿಕೊಳ್ಳುತ್ತಿತ್ತು. ಎಪ್ಪತ್ತಕ್ಕೂ ಹೆಚ್ಚು ವಿದೇಶಿ ವಿನಿಮಯ ಗಳಿಸುತ್ತಿದ್ದ ಅಪರಾಧಕ್ಕಾಗಿ ಪೂರ್ವ ಬಂಗಾಳ ಶೇ. ೮೦ರಷ್ಟು ವಿದೇಶೀ ಸಾಲವನ್ನು ತೀರಿಸಬೇಕಾಗಿತ್ತು. ಯಾವ ಒಂದು ಸಣ್ಣ ರಾಜ್ಯ ವಿದೇಶೀ ವಿನಿಮಯಕ್ಕೆ ಹೆಚ್ಚಿನ ಕಾಣಿಕೆಯನ್ನಿತ್ತಿತ್ತೋ ಅದೇ ರಾಜ್ಯ ಆ ವಿದೇಶೀ ವಿನಿಮಯದ ಅತ್ಯಲ್ಪ ಭಾಗವನ್ನು ಮಾತ್ರ ಪಡೆಯುತ್ತಿತ್ತು. ಇದೆಂಥ ಅನ್ಯಾಯ ?

೧೯೫೨-೫೩ರಲ್ಲಿ ಆಹಾರ ವಸ್ತುಗಳ ಅಭಾವದಿಂದ ಕ್ಷಾಮ ತಲೆದೋರಿತು. ಆಗ ಪಾಕ್ ಸರ್ಕಾರ ಮಾಡಿದ ಉಪಾಯವೇನು ? ಪೂರ್ವ ಬಂಗಾಳದಲ್ಲಿ ತೆರಿಗೆ ಮತ್ತು ಕರಗಳ ದರಗಳನ್ನು ಇನ್ನಷ್ಟು ಹೆಚ್ಚಿಸಿ, ಅದರಿಂದ ಬಂದ ಆದಾಯವನ್ನು ತಾನೇ ಕಬಳಿಸಿತಷ್ಟೆ.

ಅಯೂಬರ ಸರ್ಕಾರದಿಂದಲೂ ಪೂರ್ವ ಬಂಗಾಳಕ್ಕೆ ಅಗತ್ಯವೆನಿಸುವಷ್ಟು ಸಹಾನುಭೂತಿ ದೊರಕಲಿಲ್ಲ. ಬದಲಾಗಿ ಪೂರ್ವ ಬಂಗಾಳದ ಆರ್ಥಿಕ ಸ್ಥಿತಿ ಮತ್ತಷ್ಟು ಕುಂಠಿತಗೊಂಡಿತು. ಪೂರ್ವ ಬಂಗಾಳಕ್ಕೆ ಸಾಕಷ್ಟು ರಕ್ಷಣೆಯಿಲ್ಲವೆಂದು ಪಾಕ್ ಸರ್ಕಾರವೇ ಒಪ್ಪಿಕೊಂಡಿತು. ಪಶ್ಚಿಮ ಪಾಕಿಸ್ತಾನದ ಗಡಿಪ್ರದೇಶಗಳ ರಕ್ಷಣಾ ವೆಚ್ಚ ಒದಗಿಬಂದುದರಿಂದ ಪೂರ್ವ ಬಂಗಾಳದ ಆರ್ಥಿಕ ನೆರವಿಗೆ ಅವಕಾಶ ವಾಗಲಿಲ್ಲವೆಂದು ಸಮಾಧಾನವನ್ನೂ ಹೇಳಿತು. ಹೀಗೆ ನಾನಾ ಕಾರಣಗಳಿಂದ ಪೂರ್ವ ಬಂಗಾಳದ ಆರ್ಥಿಕ ಪ್ರಗತಿ ಕುಂಟುತ್ತ, ಎಡುವುತ್ತ, ಮುಗ್ಗರಿಸುತ್ತಲೇ ಸಾಗಿಬಂದಿತ್ತು.

ಬಂಗಾಳಿಗಳಿಗೆ ತಮ್ಮ ಪುರಾತನ ಸಂಸ್ಕೃತಿ, ಇತಿಹಾಸಗಳೆಂದರೆ ಅತ್ಯಂತ ಹೆಮ್ಮೆ. ಮಾತೃ ಭಾಷೆಯಲ್ಲಿ ಅಪಾರ ಪ್ರೇಮ. ರಾಷ್ಟ್ರೀಯ ಸಂಪ್ರದಾಯವೆಂದರೆ ಅಪಾರ ಗೌರವ. ಇಂತಹ ಜನತೆ ತಮ್ಮ ಮಾತೃ ಭಾಷೆಯಾದ ಬಂಗಾಳಿಯಲ್ಲಿಯೇ ಪ್ರಾಥಮಿಕ ವಿದ್ಯಾಭ್ಯಾಸವನ್ನು ಪಡೆಯಲಿಚ್ಛಿಸಿದುದರಲ್ಲಿ ತಪ್ಪೇನು? ಬಂಗಾಳಿ ಯಲ್ಲಿಯೇ ಆಡಳಿತ ನಡೆಯಲಿ, ಬಂಗಾಳಿ ಭಾಷೆಯೇ ಆಡಳಿತ ಭಾಷೆಯಾಗಲಿ— ಎಂದು ಅವರು ಬಯಸಿದರು. ಆದರೆ ಪಾಕ್ ಸರ್ಕಾರ ಇದಕ್ಕೆ ಕಿವಿಗೊಡದೆ ಬಲಾತ್ಕಾರವಾಗಿ ಉರ್ದು ಭಾಷೆಯನ್ನು ಬಂಗಾಳಿಗಳ ಮೇಲೆ ಹೇರಲು ಪ್ರಯತ್ನಿಸಿತು. ಆದರೆ ಬಂಗಾಳಿಗಳಿಗೆ ಬಂಗಾಳಿಯೇ ಉಸಿರಾಗಿತ್ತು. ಪಶ್ಚಿಮ ಪಾಕ್ ಸರ್ಕಾರ ಉರ್ದು ಭಾಷೆಯನ್ನು ಏಕಮಾತ್ರ ಆಡಳಿತ ಭಾಷೆಯನ್ನಾಗಿ ಮಾಡಿದಾಗ ಬಂಗಾಳಿಗಳು ಸಿಟ್ಟಿಗೆದ್ದರು. ಪ್ರದರ್ಶನಗಳನ್ನು ನಡೆಸಿದರು. ಮುಷ್ಕರ ಹೂಡಿದರು. ಆದರೇನು ? ಏನೂ ಪ್ರಯೋಜನವಾಗಲಿಲ್ಲ. ಆಯೂಬ್‌ಖಾನರಂತೂ ಬಂಗಾಳಿ ಲಿಪಿಯ ಸ್ಥಾನಪಲ್ಲಟಮಾಡುವ ಸಾಹಸಕ್ಕೆ ಕೈಹಾಕಿದ್ದರು.

ಹೀಗೆ ಬಂಗಾಳಿ ಭಾಷೆಗೆ ಪಶ್ಚಿಮ ಪಾಕ್ ಸರ್ಕಾರ ತೋರಿದ ತಾತ್ಸಾರವು

ಬಂಗಾಳಿ ಜನತೆಯ ಮನಸ್ಸಿನಲ್ಲಿ ಅಚ್ಚಳಿಯದೆ ರೋಷದ್ವೇಷಗಳನ್ನೇ ಮೂಡಿಸಿತು. ಮೇಲಾಗಿ ಬಂಗಾಳಿ ಸಂಸ್ಕೃತಿ, ಸಾಹಿತ್ಯ, ಸಂಗೀತ ಎಲ್ಲವೂ ಪಶ್ಚಿಮ ಪಾಕಿಸ್ತಾನಕ್ಕಿಂತ ಬಹಳವೇ ವಿಭಿನ್ನವಾಗಿದ್ದುದು ನಿಜ. ಏನೇ ಆದರೂ ಬಂಗಾಳಿ ಜನತೆ ತಮ್ಮ ಸಂಸ್ಕೃತಿಯನ್ನು ತೊರೆಯಲು ಸಿದ್ಧರಿರಲಿಲ್ಲ. ಒಂದಲ್ಲ ಒಂದು ವಿಧದಲ್ಲಿ ಬಂಗಾಳಿಗಳಿಗೆ ಸಾಮಾಜಿಕ ಅನ್ಯಾಯಗಳು ನಡೆಯುತ್ತಲೇ ಇದ್ದುವು. ಅಲ್ಲಿ ಶಾಂತಿ ನೆಲೆಸಲು ಅವಕಾಶವೇ ಇರಲಿಲ್ಲ.

ಪಾಕಿಸ್ತಾನ ಜನ್ಮತಳೆದುದೇ ಮತೀಯ ಅಡಿಗಲ್ಲಿನ ಆಧಾರದ ಮೇಲೆ. ಮುಸ್ಲಿಮರಿಗೇ ಬೇರೆ ರಾಜ್ಯ ಬೇಕೆಂದು ಪ್ರಾರಂಭವಾದ ಕೂಗು ಪಾಕಿಸ್ತಾನದ ಉದಯಕ್ಕೇ ಎಡೆಮಾಡಿಕೊಟ್ಟಿತು. "Islamic Republic of Pakistan" ಎಂಬ ಹೆಸರಿನ ಸಂಯುಕ್ತ ಗಣರಾಜ್ಯವಾಗಿ ಪಾಕಿಸ್ತಾನವು ಪರಿಗಣಿಸಲ್ಪಡಬೇಕು" ಎಂಬುದಾಗಿ ೧೯೫೬ರಲ್ಲಿ ಪ್ರಕಟವಾದ ಪಾಕಿಸ್ತಾನದ ಸಂವಿಧಾನದ ಮೊದಲನೆಯ ವಿಭಾಗದ ಮೊದಲನೆಯ ಸೂತ್ರವೇ ಹೇಳಿತ್ತು.

ಧಾರ್ಮಿಕ ವಿಚಾರವಾಗಿ ನೋಡಿದರೆ ಪೂರ್ವ ಮತ್ತು ಪಶ್ಚಿಮ ಪಾಕಿಸ್ತಾನಿಗಳಿಗೆ ಭಿನ್ನಾಭಿಪ್ರಾಯಗಳೇ ಹೆಚ್ಚಾಗಿರುವುದು ಗೋಚರವಾಗುವುದು. ಹೀಗಿರುವಾಗ ಪಶ್ಚಿಮದವರು ಪೂರ್ವದವರನ್ನು ಇಸ್ಲಾಮೀಕರಣ ಮಾಡಬೇಕೆಂದಾಗಲೇ ವಿರಸ ವಿಕೋಪಕ್ಕೆ ಹೋಯಿತು. ಪೂರ್ವ—ಪಶ್ಚಿಮ ಪಾಕ್ ಜನಾಂಗಗಳ ಪ್ರಾರ್ಥನಾ ಪದ್ಧತಿಗಳಲ್ಲಿಯೂ ವ್ಯತ್ಯಾಸಗಳಿದ್ದುವು. ಸತ್ಯ, ದಯೆ, ಅಹಿಂಸೆ, ಕರುಣೆ ಮೊದಲಾದ ಗುಣಗಳನ್ನೇ ಎತ್ತಿ ಹಿಡಿದರೆ ಅಂತಹ ಮುಸ್ಲಿಮರು ಹಿಂದೂಗಳೆಂಬ ಹಾಸ್ಯಕ್ಕೆ ಗುರಿಯಾಗಬೇಕಾಗಿತ್ತು. ಅಂದರೆ ಹೊಡಿ, ಬಡಿ, ಕಡಿ-ಎನ್ನುವವರೇ ಮುಸ್ಲಿಮರೇನು ?

ಪೂರ್ವ ಬಂಗಾಳಿಗಳಿಗೆ ಪಶ್ಚಿಮದವರ ಮತಾಂಧತೆ ಹಿಡಿಸಲಿಲ್ಲ. ಸಹಬಾಳ್ವೆ, ಸಹಜೀವನ, ಪರಸ್ಪರ ಸಹಕಾರ ಇವು ಬಂಗಾಳಿಗಳಿಗೆ ಬೇಕು. ಪಶ್ಚಿಮದವರಿಗೆ ಬೇಡ. ಇದನ್ನೇ ಧಾರ್ಮಿಕ ಘರ್ಷಣೆಯೆಂದು ಇತಿಹಾಸಕಾರರು ಕರೆದಿದ್ದಾರೆ. ಆರಂಭದಲ್ಲಿ ಬಂಗಾಳಿಗಳು (ಹಿಂದೂಗಳು) ಇಸ್ಲಾಂ ಧರ್ಮಕ್ಕೆ ಸೇರದೆ ದೂರವಿದ್ದರು. ಅನಂತರ ಇಸ್ಲಾಂ ಧರ್ಮವನ್ನೇ ಬಲವಾಗಿ ಅಪ್ಪಿಕೊಂಡು ಉನ್ಮತ್ತರಂತೆ ವರ್ತಿಸಿ, ಹಿಂದೂಗಳನ್ನು ಹಿಂಸಿಸಿದರು. ಅನಂತರ ಮುಸ್ಲಿಮರ ದಿನಚರ್ಯೆ, ಅವರ ನಡೆನುಡಿ, ಇತಿಹಾಸಗಳನ್ನು ಕಂಡು ಬೇಸರಗೊಂಡರು. ಇಷ್ಟಾದ ಮೇಲೆ ತಾವು ಮುಸ್ಲಿಮರಾದರೂ ಇಸ್ಲಾಂಧರ್ಮವೇ ಸರ್ವಸ್ವವೆಂಬ ಮತಾಂಧತೆಗೆ ಎಡೆಗೊಡದೆ, ಲೋಕ ಮೆಚ್ಚುವಂತೆ ಪರಸ್ಪರ ಹೊಂದಾಣಿಕೆಯಿಂದ ಬಾಳಿ ಬದುಕಬೇಕೆಂಬ ಇತ್ಯರ್ಥಕ್ಕೆ ಬಂದರು. ಹೀಗೆ ಪೂರ್ವ-ಪಶ್ಚಿಮ ಪಾಕಿಸ್ತಾನಗಳಿಗೆ ಧಾರ್ಮಿಕ ಘರ್ಷಣೆ ನಡೆದು ಭಿನ್ನಾಭಿಪ್ರಾಯಗಳಿಗೆಡೆಯಾಗಿ, ಕಡೆಗೆ ಸಮರಕ್ಕೆ ಕಾರಣವಾಯಿತು.

* * * * *

ವಯಸ್ಕರ ಮತದಾನವನ್ನವಲಂಬಿಸಿದ ಮೊತ್ತಮೊದಲ ಚುನಾವಣೆಗಳು ಪಾಕಿಸ್ತಾನದಲ್ಲಿ ೧೯೭೦ರ ಡಿಸೆಂಬರ್ ೭ರಂದು ನಡೆದುವು. ಈ ಚುನಾವಣೆಗಳ ಮೂಲಕ ಪ್ರಜೆಗಳು ತಮ್ಮ ಸ್ಪಷ್ಟ ಅಭಿಪ್ರಾಯಗಳನ್ನು ಹೊರಗೆಡಹಿದರು. ಪಶ್ಚಿಮ ಪಾಕ್ ಮಿಲಿಟರಿ ಅಧಿಕಾರಿಗಳ ವಜ್ರಮುಷ್ಟಿಗೆ ಸಿಕ್ಕಿ ಸೊರಗಿ, ರೋಸಿಹೋಗಿದ್ದ ಪೂರ್ವಬಂಗಾಳದ ಜನತೆ ಪ್ರಜಾಸರ್ಕಾರದ ಆಗಮನವನ್ನು ಸಂತೋಷದಿಂದ ಸ್ವಾಗತಿಸಿತು. ರಾಷ್ಟ್ರೀಯ ಸಭೆಗೆ ನಡೆದ ಈ ಚುನಾವಣೆಯಲ್ಲಿ ಷೇಕ್ ಮುಜೀಬ್ ರವರ ಅವಾಮಿಪಕ್ಷ ಮುನ್ನೂರು ಸ್ಥಾನಗಳಿಗೆ ನೂರ ಅರವತ್ತು ಸ್ಥಾನಗಳನ್ನುಗಳಿಸಿಕೊಂಡು ಪ್ರಚಂಡ ಬಹುಮತ ದೊರಕಿಸಿಕೊಂಡಿತು. ಪೂರ್ವಬಂಗಾಳಕ್ಕೆಂದೇ ಮೀಸಲಾಗಿದ್ದುದು ೧೬೨ ಸ್ಥಾನಗಳು. ಅವುಗಳಲ್ಲಿ ೧೬೦ ಸ್ಥಾನಗಳನ್ನು ಅವಾಮಿ ಪಕ್ಷವೇ ಗಳಿಸಿಕೊಂಡಿತ್ತು. ನಾಮಕರಣವಾಗಬೇಕಾಗಿದ್ದ ಪೂರ್ವಬಂಗಾಳದ ಏಳು ಮಹಿಳಾಸ್ಥಾನಗಳಲ್ಲಿ ಎಲ್ಲವೂ ಅವಾಮಿ ಲೀಗ್ ಪಕ್ಷಕ್ಕೆ ದೊರಕಿತ್ತು. ಪಶ್ಚಿಮ ಪಾಕಿಸ್ತಾನದಲ್ಲಿ ಜಡ್. ಎ. ಭುಟ್ಟೊರವರ ಪ್ರಜಾಪಕ್ಷ ೧೩೮ ಸ್ಥಾನಗಳಲ್ಲಿ ೮೨ ಸ್ಥಾನಗಳನ್ನು ಗಳಿಸಿತ್ತು.

ಪಾಕ್ ಕೇಂದ್ರ ಸರ್ಕಾರದ ವಾಗ್ದಾನದಂತೆ ಷೇಕ್‌ಮುಜೀಬುರ್‌ರವರು ಪ್ರಧಾನ ಮಂತ್ರಿಯಾಗಿ, ಪ್ರಾತಿನಿಧಿಕ ಸರ್ಕಾರವನ್ನು ರಚಿಸುವರೆಂದು ಜನತೆ ನಿರೀಕ್ಷಿಸಿತು. ಜನರಲ್ ಯಾಹ್ಯಾಖಾನ್ ಕೂಡ ಬಹು ಸಂಖ್ಯಾತ ಪಕ್ಷದ ಷೇಖ್ ಮುಜೀಬುರ್‌ರವರೇ ಮುಂದಿನ ಪ್ರಧಾನಿಯೆಂಬುದು ನಿರ್ವಿವಾದ—ಎಂದು ಹೇಳಿಕೆ ನೀಡಿದರು.

ಆದರೆ ಆದದ್ದೇನು ? ಷೇಖ್‌ಮುಜೀಬುರ್‌ರವರ ಪ್ರತಿಸ್ಪರ್ಧಿಯಾದ ಭುಟ್ಟೋ ರವರ ವಾದನೇ ಬೇರೆ ರೀತಿಯಾಗಿತ್ತು. ಎಲ್ಲ ವಿಚಾರಗಳಲ್ಲಿಯೂ ಈ ಇಬ್ಬರು ನಾಯಕರ ಅಭಿಪ್ರಾಯಗಳು ಭಿನ್ನಭಿನ್ನವಾಗಿದ್ದು ಅವರು ಒಂದಾಗುವ ಸೂಚನೆಯೇ ಕಾಣಲಿಲ್ಲ. ಕೊನೆಗೆ ಭುಟ್ಟೋ ಅವರು ರಾಜ್ಯಾಂಗ ಸಭೆಯನ್ನೇ ಬಹಿಷ್ಕರಿಸುವುದಾಗಿ ಬೆದರಿಕೆ ಹಾಕಿದರು. ಈ ಬೆದರಿಕೆಯನ್ನೇ ನೆಪವಾಗಿಟ್ಟುಕೊಂಡು ಜನರಲ್ ಯಾಹ್ಯಾಖಾನರು ರಾಷ್ಟ್ರೀಯ ಸಭೆಯನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಿದರು.

ಪೂರ್ವ ಬಂಗಾಳದ ಜನತೆ ತಮ್ಮ ನಾಯಕ ಷೇಖ್ ಮುಜೀಬುರ್ ರೆಹ್ಮಾನ್ ಅವರ ನೇತೃತ್ವದಲ್ಲಿ ಈ ಮುಂದೂಡಿಕೆಯನ್ನು ಬಲವಾಗಿ ವಿರೋಧಿಸಿತು. ತಮ್ಮ ಹಕ್ಕು ಬಾಧ್ಯತೆಗಳ ರಕ್ಷಣೆಗೆ ಎಲ್ಲರೊಂದಾಗಿ ಬಂಡಾಯವೆದ್ದರು. ಪಾಕ್ ಅಧ್ಯಕ್ಷರ ವಿರುದ್ಧ ಭಾರೀ ಪ್ರದರ್ಶನಗಳನ್ನು ನಡೆಸಿದರು. ಢಾಕ್ಕಾ ಮತ್ತು ಇತರ ಕಡೆಗಳಲ್ಲಿ ೧೯೬೧ರ ಮಾರ್ಚ್ ಒಂದರಿಂದಲೇ ಗಲಭೆಗಳು ಆರಂಭವಾದುವು. ಈ ಗಲಭೆಗಳನ್ನು ಸೇನಾಬಲ ಪ್ರಯೋಗಿಸಿ ದಮನ ಮಾಡಲು ಯಾಹ್ಯಾಖಾನರು ನಿಶ್ಚಯಿ

ಸಿದರು. ಕೂಡಲೇ ಸೇನೆಯನ್ನು ಮುನ್ನುಗ್ಗಿಸಿದರು. ಈ ಸೇನೆಯ ಗುಂಡೇಟು ಗಳಿಗೆ ಸಿಕ್ಕಿ ಸಹಸ್ರಾರು ಮಂದಿ ಶಾಂತಿಯುತ ಪ್ರದರ್ಶನಕಾರರು ಪ್ರಾಣಾರ್ಪಣೆ ಮಾಡಿದರು. ಆದರೂ ಒಂದಿಷ್ಟೂ ಕುಗ್ಗದೆ ಚಳುವಳಿ ಮುಂದುವರೆಯಿತು.

ಇಡೀ ಬಂಗಾಳವೇ ಷೇಖ್ ಅವರನ್ನು ಹಿಂಬಾಲಿಸಿದುದು, ಚಳುವಳಿ ಯಶಸ್ವಿಯಾಗಿ ನಡೆದುದು, ಪರಿಸ್ಥಿತಿ ಕೈ ಮೀರಿ ಹೋಗುತ್ತಿದ್ದುದು–ಇವುಗಳನ್ನು ಗಮನಿಸಿದ ಯಾಹ್ಯಾಖಾನರು, ತಾವು ಹಿಡಿದ ಪಟ್ಟನ್ನು ಸ್ವಲ್ಪ ಸಡಿಲಿಸಿ, ೧೯೭೧ರ ಮಾರ್ಚ್ ೨೫ರಂದು ರಾಷ್ಟ್ರೀಯ ಸಭೆ ಸಮಾವೇಶಗೊಳ್ಳುವುದಾಗಿ ಪ್ರಕಟಿಸಿದರು. ಆದರೆ ರಾಜ್ಯಗಳಿಗೆ ಸ್ವಯಮಾಡಳಿತಾಧಿಕಾರ ಕೊಡುವುದಿಲ್ಲವೆಂದು ಸ್ಪಷ್ಟವಾಗಿ ತಿಳಿಸಿದ್ದರು. ಅವಾಮಿ ಪಕ್ಷವು ಇದನ್ನು ಸಮ್ಮತಿಸದೆ ತಾನೊಡ್ಡಿದ ಷರತ್ತುಗಳನ್ನು ಒಪ್ಪಿದಲ್ಲಿ ಮಾತ್ರ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸುವುದಾಗಿ ತಿಳಿಸಿತು. ಆ ಷರತ್ತುಗಳು ಯಾವುವೆಂದರೆ–ಲಷ್ಕರಿ ಶಾಸನವನ್ನು ರದ್ದುಗೊಳಿಸಬೇಕು, ಪಡೆ ಗಳನ್ನು ತಂತಮ್ಮ ನೆಲೆಗಳಿಗೆ ಹಿಂದಕ್ಕೆ ಕರೆಸಬೇಕು. ಜನತೆಯ ಪರವಾಗಿ ಕಾರ್ಯ ನಿರ್ವಹಿಸುವ ಅಧಿಕಾರ ಪಡೆದಿದ್ದ ಪ್ರಜಾಪ್ರತಿನಿಧಿಗಳನ್ನು ಮತ್ತು ಪ್ರದರ್ಶಕರನ್ನು ಸಾವಿಗೀಡು ಮಾಡಿದುದಕ್ಕಾಗಿ ವಿಚಾರಣೆ ನಡೆಸಬೇಕು.

ಈ ಷರತ್ತುಗಳನ್ನು ಗಮನಿಸಿ, ಷೇಖ್ ಅವರ ಮನವೊಲಿಸಲು ಜ|| ಯಾಹ್ಯಾ ಖಾನರೇ ಭುಟ್ಟೋರವರನ್ನೂ ಜೊತೆಮಾಡಿಕೊಂಡು ಢಾಕ್ಕಾಗೆ ಹೋದರು. ಅಲ್ಲಿ ಅವರು ಕಪಟ ವಿಶ್ವಾಸ ತೋರುತ್ತ, ಸಂಧಾನದ ಸೋಗು ಹಾಕಿ ದಿನಗಳನ್ನು ಕಳೆ ದರು. ಈ ರೀತಿಯ ಅವರ ವ್ಯರ್ಥ ಕಾಲಹರಣದ ಹಿಂದೆ ಅಡಗಿದ್ದ ಉದ್ದೇಶವೇ ಬೇರೆ. ಪಶ್ಚಿಮ ಪಾಕಿಸ್ತಾನದಿಂದ ಇನ್ನೂ ಹೆಚ್ಚಿನ ಸೇನಾಪಡೆಗಳನ್ನೂ ಶಸ್ತ್ರಾಸ್ತ್ರ ಗಳನ್ನೂ ಪೂರ್ವಬಂಗಾಳಕ್ಕೆ ರವಾನಿಸಲು ಯಾಹ್ಯಾಖಾನರಿಗೆ ಕಾಲಾವಧಿ ಅವಶ್ಯಕ ವಾಗಿತ್ತು. ಮಾತು ಕತೆಗಳ ನೆಪದಲ್ಲಿ ಇವರು ದಿನಗಳನ್ನು ತಳ್ಳುತ್ತಿದ್ದರೆ, ಅದೇ ವೇಳೆಯಲ್ಲಿ ವಾಯು, ಜಲಮಾರ್ಗಗಳ ಮೂಲಕ ಪಾಕ್ ಸೇನೆ ಪೂರ್ವ ಬಂಗಾಳಕ್ಕೆ ಬಂದು ಸೇರತೊಡಗಿತ್ತು. ಯಾಹ್ಯಾಖಾನರ ಈ ಹಂಚಿಕೆ ಕೈಗೂಡುತ್ತ ಬಂದಂತೆ ಸಂಧಾನದ ಮಾತುಕತೆಗಳು ಹಠಾತ್ತನೆ ನಿಂತೇ ಹೋದುವು. ಯಾಹ್ಯಾಖಾನರು ಭುಟ್ಟೋರವರೊಂದಿಗೆ ಕರಾಚಿಗೆ ಮರಳಿದರು.

ಕರಾಚಿಗೆ ಹಿಂದಿರುಗಿದೊಡನೆಯೇ ಯಾಹ್ಯಾಖಾನರ ಮಾತಿನ ಧಾಟಿ ಇದ್ದಕ್ಕಿದ್ದಂತೆ ಬದಲಾಯಿತು. ಅವರ ದೃಷ್ಟಿಯಲ್ಲೀಗ ಷೇಖ್ ಅವರು ದೇಶ ದ್ರೋಹಿಯಾದರು. ಈ ಆಪಾದನೆಯನ್ನೇ ಷೇಖ್ ಅವರ ಮೇಲೆ ಹೊರಿಸಿ, ೧೯೭೧ರ ಏಪ್ರಿಲ್ ಒಂದರಂದು “ಷೇಖ್ ರಚಿಸಿರುವ ಪೌರಾಡಳಿತವನ್ನು ಕಿತ್ತೊಗೆ ಯಿರಿ” ಎಂದು ಆಜ್ಞೆಯಿತ್ತರು. (ಷೇಖ್ ಮುಜೀಬುರ್‌ರವರು ೧೯೭೧ರ ಮಾರ್ಚ್ ೨೬ರಂದೇ ಬಂಗ್ಲಾದೇಶ ಸರ್ವಸ್ವತಂತ್ರ ಪ್ರಜಾಗಣರಾಜ್ಯವೆಂದು ಘೋಷಿಸಿದ್ದರು.)

ಯಾಹ್ಯಾರವರ ಆಜ್ಞೆ ಬಂದುದೇ ತಡ: ರೌದ್ರ ದಬ್ಬಾಳಿಕೆ ಪ್ರಾರಂಭ ವಾಯಿತು. ಈ ದಬ್ಬಾಳಿಕೆಯನ್ನು ಮುಕ್ತಿವಾಹಿನಿಯೆಂದು ಹೆಸರ್ಗೊಂಡಿದ್ದ ಬಾಂಗ್ಲಾ ಸ್ವಾತಂತ್ರ್ಯ ಚಳುವಳಿಗಾರರ ಸಂಸ್ಥೆ ಧೈರ್ಯದಿಂದ ಎದುರಿಸಿತು. ಪಾಕ್ ಸೇನಾ ಪಡೆಗಳಾದರೋ ಪೂರ್ವ ಬಂಗಾಳದ ನಿರಾಯುಧರಾದ ಅಸಹಾಯಕ ನಾಗರಿಕರ ಮೇಲೇ ಕೈಮಾಡಲು ತೊಡಗಿದುವು. ಈ ಸಂದರ್ಭದಲ್ಲಿ ಪಾಕ್ ಪಡೆಗಳು ನಡೆಸಿದ ಬಂಗಾಳೀ ನರಮೇಧ ಅತ್ಯಂತ ಘೋರವಾದುದು. ಇಂತಹ ಪೈಶಾಚಿಕ ಕೃತ್ಯ ಇಡೀ ಜಗತ್ತಿನಲ್ಲಿ ಇದೇ ಮೊದಲನೆಯದೆಂದು ಪ್ರತೀತಿಯಾಯಿತು. ಈ ಹತ್ಯಾಕಾಂಡಕ್ಕೆ ಲಕ್ಷಾಂತರ ಮಂದಿ ಹೆಂಗಸರು, ಮಕ್ಕಳೆನ್ನದೆ ಬಲಿಯಾದರು. ಪಾಕ್ ಸೈನಿಕರು ಕಂಡಕಂಡಲ್ಲಿ ಕೈಗೆ ಸಿಕ್ಕಿದವರನ್ನು ಕೊಚ್ಚಿಹಾಕಿದರು. ಎಷ್ಟೋ ಮಂದಿ ಯುವತಿಯರು ಪಾಕ್ ಸೈನಿಕರ ಕಾಮತೃಷೆಗೆ ಸಿಕ್ಕಿ ಈ ಸೈನಿಕರ ಅತ್ಯಾಚಾರಕ್ಕೊಳಗಾದರು. ಜನರಲ್ ಯಾಹ್ಯಾಖಾನರು ತಮ್ಮ ಸೇನೆಯ ಮೂಲಕ ಬಂಗಾಳಿಗಳ ನಿರ್ನಾಮವನ್ನೇ ಮಾಡಲು ಹೊರಟಿದ್ದರು. ಮುಸ್ಲಿಮರಿಂದ ಮುಸ್ಲಿಮರ ಕೊಲೆ! ಇದನ್ನೇನು ಸ್ವಜಾತಿ ಮತ್ಸರವೆಂದು ಕರೆಯೋಣವೇ?

ಹಿಂದೂಗಳ ಕಗ್ಗೊಲೆ, ಸಾಮೂಹಿಕ ವಿದ್ಯಾರ್ಥಿಗಳ ಕೊಲೆ, ಬುದ್ಧಿಜೀವಿಗಳ ಹತ್ಯೆ, ಸ್ತ್ರೀಯರ ಮಾನಭಂಗ, ಮಕ್ಕಳ ಬಲಿ-ಇವುಗಳೆಲ್ಲ ಪಾಕ್ ಸೈನಿಕರ ಪ್ರತಾಪದ ಹೆಗ್ಗುರುತುಗಳು. ಢಾಕ್ಕಾನಗರದಲ್ಲಿ ಎಲ್ಲಿ ನೋಡಿದರಲ್ಲಿ ಶವ: ಹಗೇವುಗಳಲ್ಲೆಲ್ಲ ಶವಗಳೇ: ಹೊಂಡಗಳೆಲ್ಲ ಶವಗಳಮಯ. ಈ ಭೀಭತ್ಸ ದೃಶ್ಯಗಳನ್ನು ಕಣ್ಣಾರೆ ಕಂಡವರು ಕಣ್ಣಿಗೆ ಕಟ್ಟುವ ರೀತಿಯಲ್ಲಿ ಬಣ್ಣಿಸಿದ್ದಾರೆ: ಪಾಕ್ ಸೈನಿಕರ ದೌರ್ಜನ್ಯವನ್ನು ಸ್ಪಷ್ಟವಾಗಿ ಹೊರಗೆಡಹಿದ್ದಾರೆ.

ಈ ನರಮೇಧದ ಅಗ್ನಿಕುಂಡದಿಂದ ತಪ್ಪಿಸಿಕೊಂಡು ಬದುಕಿ ಉಳಿದ ನಿರ್ಭಾಗ್ಯ ನಿರಾಶ್ರಿತರು ಗಡಿ ದಾಟಿ ಭಾರತದೊಳಕ್ಕೆ ನುಗ್ಗಿ ಬಂದರು. ಹೀಗೆ ನುಗ್ಗಿಬಂದ ಜನ ಒಂದೆರಡಲ್ಲ: ನೂರು-ಸಾವಿರವಲ್ಲ: ಒಂದು ಕೋಟಿ ಮಂದಿ. ಆಶ್ರಯ ಕೋರಿ ಬಂದ ಇವರ ರಕ್ಷಣೆಯ ಹೊಣೆಯನ್ನು ಭಾರತ ಹೊರಬೇಕಾಯಿತು. ಒಂದು ಕೋಟಿ ಜನರನ್ನು ಸಲಹುವುದು ಒಂದು ಅಗಾಧ ಹೊರೆಯೇ ಸರಿ. ಇಂತಹ ಹೊಣೆಯನ್ನು ಹೊರಲು ಎಂತಹ ಶ್ರೀಮಂತ ರಾಷ್ಟ್ರವಾದರೂ ಯೋಚಿಸುವಂತಿರುವಾಗ ಇನ್ನು ಬಡಭಾರತದ ಪಾಡೇನು?

* * * *

ಬಾಂಗ್ಲಾದೇಶದ ಪರಿಸ್ಥಿತಿಯನ್ನು ಕುರಿತು ಭಾರತದ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರು ೧೯೭೧ರ ಮೇ ೨೪ರಂದು ಲೋಕಸಭೆಯಲ್ಲಿ ಭಾಷಣ ಮಾಡಿದರು. ಅದರ ಮುಖ್ಯಾಂಶಗಳು ಈ ರೀತಿ ಇವೆ.

"ಪಾರ್ಲಿಮೆಂಟ್ ವಿರಾಮಗೊಂಡಿದ್ದ ಏಳು ವಾರಗಳಿಂದಲೂ ಬಾಂಗ್ಲಾ ದೇಶದಲ್ಲಿ ಮುಂದುವರೆಯುತ್ತಿರುವ ದಾರುಣಸ್ಥಿತಿಯು ಇಡೀ ಭಾರತ ಜನತೆಯ

ಗಮನವನ್ನು ಸೆಳೆದಿದೆ. ಇದೇ ಮೇ ತಿಂಗಳ ೧೫ ಮತ್ತು ೧೬ರಂದು ನಾನು ಅಸ್ಸಾಂ, ತ್ರಿಪುರ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳ ನಿರಾಶ್ರಿತರ ಶಿಬಿರಗಳಿಗೆ ಹೋಗಿ ಬಂದೆ. ಈಗಾಗಲೇ ನಿರ್ಮಿತವಾಗಿರುವ ೩೩೫ ಶಿಬಿರಗಳಲ್ಲಿ ಸಾವಿರಾರು ಡೇರೆಗಳು ನಿರ್ಮಾಣವಾಗಿವೆ. ತಾತ್ಕಾಲಿಕ ಛಾವಣಿಗಳನ್ನು ಕಟ್ಟಲಾಗುತ್ತಿದೆ. ಈ ವಿವಿಧ ಕ್ರಮಗಳನ್ನು ಕೈಗೊಳ್ಳಲಾಗಿದ್ದರೂ ಅನೇಕ ನಿರಾಶ್ರಿತರಿಗೆ ಪರಿಪೂರ್ಣವಾಗಿ ವಸತಿ ಸೌಕರ್ಯವನ್ನು ಒದಗಿಸಲು ಇನ್ನೂ ಸಾಧ್ಯವಾಗಿಲ್ಲ. ಪ್ರತಿದಿನ ಸುಮಾರು ೬೦,೦೦೦ ಕ್ಕೂ ಹೆಚ್ಚಿನ ನಿರಾಶ್ರಿತರು ಭಾರತಕ್ಕೆ ಬರುತ್ತಲೇ ಇದ್ದಾರೆ. ಅತ್ಯಲ್ಪ ಕಾಲದಲ್ಲಿ ಇಷ್ಟೊಂದು ಹೆಚ್ಚಿನ ನಿರಾಶ್ರಿತರು ವಲಸೆ ಬಂದಿರುವುದು ಇತಿಹಾಸದಲ್ಲಿಯೇ ಕಂಡುಬಂದಿಲ್ಲ. ಕಳೆದ ಎಂಟುವಾರಗಳಲ್ಲಿ ಸುಮಾರು ೩೦ ಲಕ್ಷ ನಿರಾಶ್ರಿತರ ಆಗಮನವಾಗಿದೆ. ಅವರೆಲ್ಲರೂ ಪಾಕ್ ಮಿಲಿಟರಿ ಭಯೋತ್ಪಾದಕ ಕೃತ್ಯಗಳಿಂದಾಗಿ ತಮ್ಮ ದೇಶವನ್ನು ತ್ಯಜಿಸಿ ಬಂದಿದ್ದಾರೆ.

ನಿರಾಶ್ರಿತರಲ್ಲಿ ಅನೇಕರು ಗಾಯಗೊಂಡಿರುವವರೂ ಇದ್ದಾರೆ. ಅವರಿಗೆ ಶೀಘ್ರ ವೈದ್ಯಕೀಯ ನೆರವಿನ ಅಗತ್ಯವಿದೆ. ಈಗ ನಮ್ಮ ಗಡಿ ರಾಜ್ಯಗಳಲ್ಲಿ ವೈದ್ಯಕೀಯ ಸೌಲಭ್ಯಗಳ ಮೇಲೆ ಹೊರಲಾರದಷ್ಟು ಭಾರಬಿದ್ದಿದೆ. ಈ ರಾಜ್ಯದ ವಿವಿಧ ಆಸ್ಪತ್ರೆಗಳಲ್ಲಿ ರೋಗಿಗಳಿಗಾಗಿ ೧೧೦೦ ಹೆಚ್ಚು ಹಾಸಿಗೆಗಳನ್ನು ಒದಗಿಸಲು ಬೇಕಾಗುವ ಸಲಕರಣೆಗಳನ್ನು ನೀಡಲಾಗಿದೆ. ಇಷ್ಟೇ ಅಲ್ಲದೆ ರಾಜಾಸ್ತಾನ ಸರ್ಕಾರದ ಕೊಡುಗೆಯಾದ ಸಂಚಾರಿ ಆಸ್ಪತ್ರೆಯಲ್ಲಿ ೪೦೦ ಹಾಸಿಗೆಗಳ ಅನುಕೂಲವಿದೆ. ಶಸ್ತ್ರಚಿಕಿತ್ಸಾ ನಿಪುಣರು, ವೈದ್ಯಕೀಯ ಅಧಿಕಾರಿಗಳು, ನರ್ಸ್‌ಗಳು ಮತ್ತಿತರ ಸಾರ್ವಜನಿಕ ಆರೋಗ್ಯ ತಜ್ಞರ ವಿಶೇಷತಂಡಗಳನ್ನು ಈ ಶಿಬಿರಗಳಿಗೆ ಕಳುಹಿಸಲಾಗಿದೆ. ನೀರಿನ ಪೂರೈಕೆಗೆ ವಿಶೇಷ ಆದ್ಯತೆ ನೀಡಲಾಗಿದ್ದು ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವ ಕ್ರಮವನ್ನು ಹೆಚ್ಚಿನ ಪ್ರಮಾಣದಲ್ಲಿ ಕೈಗೊಳ್ಳಲಾಗಿದೆ.

"ಪ್ರಸ್ತುತ ಅಂದಾಜಿನ ಪ್ರಕಾರ ನಿರಾಶ್ರಿತರ ಆಹಾರ ಮತ್ತು ವಸತಿ-ಇವುಗಳಿಗಾಗಿ ಮುಂದಿನ ಆರು ತಿಂಗಳಲ್ಲಿ ಕೇಂದ್ರದ ಖಜಾನೆಯೊಂದರಿಂದಲೇ ೧೮೦ ಕೋಟಿ ರೂ. ಗಳು ವೆಚ್ಚವಾಗುವ ನಿರೀಕ್ಷೆಯಿದೆ. ಇದು ನಮ್ಮ ಪಾಲಿಗೆ ಬಂದಿರುವ ಒಂದು ಅನಿರೀಕ್ಷಿತ ಭಾರ.

"ಕಳೆದ ಇಪ್ಪತ್ತಮೂರು ವರ್ಷಗಳಿಗಿಂತ ಹೆಚ್ಚಿನ ಕಾಲದಿಂದಲೂ ಪಾಕ್‌ನ ಆಂತರಿಕ ವ್ಯವಹಾರಗಳಲ್ಲಿ ನಾವು ತಲೆ ಹಾಕಲು ಪ್ರಯತ್ನಿಸಿಲ್ಲ. ಈಗಲೂ ಸಹ ನಾವು ಅಲ್ಲಿನ ಆಂತರಿಕ ವ್ಯವಹಾರಗಳಲ್ಲಿ ಕೈಹಾಕಲು ಪ್ರಯತ್ನಿಸುವುದಿಲ್ಲ. ಆದರೆ ನೈಜ ಸಂಗತಿಯೇನು? ಯಾವುದು ಪಾಕಿಸ್ತಾನದ ಆಂತರಿಕ ಸಮಸ್ಯೆಯೆನಿಸಿಕೊಂಡಿದೆಯೋ ಅದು ಭಾರತದ ಆಂತರಿಕ ಸಮಸ್ಯೆಯಾಗಿ ಪರಿಣಮಿಸಿದೆ. ಆದ್ದರಿಂದ ತನ್ನ ಆಂತರಿಕ ಆಡಳಿತದ ಹೆಸರಿನಲ್ಲಿ ಭಾರತದ ಲಕ್ಷಾಂತರ ಮಂದಿಯ ಶಾಂತಿ ಮತ್ತು ಹಿತಕ್ಕೆ ಭಂಗತರುವಂತಹ ಕೃತ್ಯಗಳನ್ನು ಒಡನೆಯೇ ನಿಲ್ಲಿಸಬೇಕೆಂದು

ಪಾಕಿಸ್ತಾನಕ್ಕೆ ಹೇಳುವ ಹಕ್ಕು ಭಾರತಕ್ಕಿದೆ. ಭಾರತಕ್ಕೆ ಇಂತಹ ಸಮಸ್ಯೆಗಳನ್ನೊಡ್ಡಿ ತನ್ನ ರಾಜಕೀಯ ಮತ್ತಿತರ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಪಾಕಿಸ್ತಾನಕ್ಕೆ ಬಿಡಲು ಭಾರತ ಸಿದ್ಧವಾಗಿಲ್ಲ.

"ಬಂದೂಕಿನ ಶಕ್ತಿಯಿಂದ ಲಕ್ಷಾಂತರ ಮಂದಿಯನ್ನು ತನ್ನ ದೇಶದಿಂದ ಹೊರದೂಡಲು ಪಾಕ್‌ಗೆ ಹಕ್ಕಿದೆಯೇ? ನಮಗೆ ಇದು ಅಸಹನೀಯ ಪರಿಸ್ಥಿತಿ. ನತದೃಷ್ಟರಾದ ನಿರಾಶ್ರಿತರಿಗೆ ಸೌಲಭ್ಯಗಳನ್ನು ನೀಡುತ್ತಿರುವೆವೆಂಬುದನ್ನೇ ನೆಪವಾಗಿಟ್ಟುಕೊಂಡು ಇನ್ನೂ ಹೆಚ್ಚು ಹೆಚ್ಚು ಜನರನ್ನು ಭಾರತಕ್ಕೆ ತಳ್ಳುವ ಅಧಿಕಾರ ಪಾಕಿಸ್ತಾನಕ್ಕೆ ಇಲ್ಲ.

"ಭಾರತೀಯರು ಸಹನಶೀಲರು. ಇದು ನಮಗೆ ಹೆಮ್ಮೆಯ ವಿಷಯ. ನಮ್ಮ ಜನರು ಶಾಂತಿಯ ಪಾಲನೆಗಾಗಿ ಪಣ ತೊಟ್ಟಿದ್ದಾರೆ. ಯುದ್ಧದ ಬೆದರಿಕೆ ತೋರಿಸುವುದು ನಮಗೆ ಸಲ್ಲದು. ಆದರೆ ಇನ್ನೂ ಹೆಚ್ಚಿನ ಭಾರವನ್ನು ಹೊರಬೇಕಾದ ಸಂದರ್ಭವು ಬರಬಹುದು. ನಿರಾಶ್ರಿತರ ಸಮಸ್ಯೆ ಕೇವಲ ಅಸ್ಸಾಂ, ಮೇಘಾಲಯ, ತ್ರಿಪುರ ಮತ್ತು ಪಶ್ಚಿಮ ಬಂಗಾಳಗಳ ಸಮಸ್ಯೆಯಲ್ಲ. ಇದು ರಾಷ್ಟ್ರೀಯ ಸಮಸ್ಯೆ: ಮತ್ತೂ ಹೇಳುವುದಾದರೆ ಇದೊಂದು ಅಂತರರಾಷ್ಟ್ರೀಯ ಸಮಸ್ಯೆಯೇ ಆಗಿದೆ.

"ಈ ಸಮಸ್ಯೆಯ ಬಗ್ಗೆ ಇಡೀ ಜಗತ್ತಿನ ವಿವಿಧ ರಾಷ್ಟ್ರಗಳಲ್ಲಿರುವ ನಮ್ಮ ಪ್ರತಿನಿಧಿಗಳು ಮತ್ತು ಭಾರತದಲ್ಲಿರುವ ವಿವಿಧ ರಾಷ್ಟ್ರಗಳ ರಾಯಭಾರಿಗಳ ಮೂಲಕ ಜಗತ್ತಿನ ಮನಸ್ಸಾಕ್ಷಿಯನ್ನು ಎಚ್ಚರಗೊಳಿಸಲು ಪ್ರಯತ್ನಿಸಿದ್ದೇವೆ. ವಿಶ್ವಸಂಸ್ಥೆಗೂ ಮನವಿಯನ್ನು ಸಲ್ಲಿಸಿದ್ದೇವೆ. ಈ ಸಮಸ್ಯೆಯ ನೈಜ ಚಿತ್ರವು ಈಗಾಗಲೇ ಹಲವು ರಾಷ್ಟ್ರಗಳಿಗೆ ಮನದಟ್ಟಾಗಿರುವಂತಿದೆ. ಆದರೂ ಇಂತಹ ಘೋರ ಕೃತ್ಯಗಳ ಬಗ್ಗೆ ಬಹಳಕಾಲ ಜಗತ್ತಿನ ದೇಶಗಳು ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸದಿರುವುದಕ್ಕಾಗಿ ನನಗೆ ಅತೃಪ್ತಿಯಾಗಿದೆ.

"ಪೂರ್ವ ಬಂಗಾಳದ ಸಮಸ್ಯೆಯನ್ನು ಮಿಲಿಟರಿ ಆಡಳಿತದಿಂದ ಪರಿಹರಿಸಲು ಸಾಧ್ಯವಿಲ್ಲ. ಅದಕ್ಕೆ ರಾಜಕೀಯ ಪರಿಹಾರವನ್ನು ಹುಡುಕಬೇಕು. ಈ ಬಗ್ಗೆ ಪ್ರತಿಭಾನ್ವಿತ ರಾಷ್ಟ್ರಗಳು ಮುಂದೆ ಬರಬೇಕು. ಜಗತ್ತಿನ ಬೃಹತ್ ರಾಷ್ಟ್ರಗಳಿಗೆ ಈ ವಿಷಯದಲ್ಲಿ ವಿಶೇಷ ಹೊಣೆಗಾರಿಕೆಯಿದೆ. ಆ ರಾಷ್ಟ್ರಗಳು ತಮ್ಮ ಜವಾಬ್ದಾರಿಯನ್ನರಿತು ಕಾರ್ಯನಿರ್ವಹಿಸಿದರೆ ಮಾತ್ರ ನಮ್ಮ ಉಪಖಂಡದಲ್ಲಿ ಶಾಶ್ವತಶಾಂತಿ ಸ್ಥಾಪನೆಯಾಗಬಹುದು. ಆದರೆ ಅವರು ಯಶಸ್ವಿಯಾಗದಿದ್ದರೆ ಈ ಅನ್ಯಾಯ, ಅತ್ಯಾಚಾರಗಳಿಂದ ಶಾಂತಿಭಂಗವಾಗುವುದು ಖಂಡಿತ. ಈ ಪರಿಸ್ಥಿತಿಯನ್ನು ಪಕ್ಷೀಯ ರಾಜಕೀಯದಿಂದ ಪರಿಹರಿಸಲು ಸಾಧ್ಯವಿಲ್ಲ. ಈ ಸಮಸ್ಯೆಯ ಪ್ರತಿಯೊಂದು ವಿಷಯವೂ ಪ್ರತಿಯೊಬ್ಬರಿಗೂ ಅನ್ವಯಿಸಿದ್ದಾಗಿದೆ.

"ಈ ಎಲ್ಲವೂ ನಮ್ಮ ಮೇಲೆ ಹೆಚ್ಚಿನ ಭಾರವನ್ನೇ ಹೊರಿಸಿವೆ. ನಾವು ಅನೇಕ

ತ್ಯಾಗಗಳನ್ನೂ ಸಹ ಮಾಡಬೇಕಾಗಬಹುದು, ನಮ್ಮ ಕಾರ್ಖಾನೆಗಳು ಮತ್ತು ಕೃಷಿರಂಗದಲ್ಲಿ ಉತ್ಪಾದನೆ ಹೆಚ್ಚಬೇಕು. ರೈಲ್ವೆಗಳು ಮತ್ತು ಸಾಧನ ಸಂಪರ್ಕಗಳು ಅನಿರ್ಬಂಧಿತವಾಗಿ ಕಾರ್ಯ ನಿರ್ವಹಿಸಬೇಕು. ಪ್ರಾದೇಶಿಕ ಹಿತಾಸಕ್ತಿಗಳಿಗಾಗಿ ಹೋರಾಡುವ ಕಾಲವಿದಲ್ಲ. ನಮ್ಮ ಆರ್ಥಿಕ ಮತ್ತು ರಾಜಕೀಯ ಬೆಳವಣಿಗೆಗಾಗಿ ಎಲ್ಲವನ್ನೂ ಹತೋಟಿಯಲ್ಲಿಟ್ಟುಕೊಂಡಿರಬೇಕು. ರಾಷ್ಟ್ರೀಯ ಐಕಮತ್ಯದಲ್ಲಿ ಮತ್ತೊಮ್ಮೆ ವಿಶ್ವಾಸವನ್ನು ತುಂಬಬೇಕು. ದೇಶದ ಪ್ರತಿಯೊಬ್ಬ ನಾಗರೀಕನೂ, ಪ್ರತಿಯೊಬ್ಬ ಮಹಿಳೆಯೂ, ಪ್ರತಿಯೊಬ್ಬ ಮಗುವೂ ತ್ಯಾಗ ಮನೋಭಾವವನ್ನು ಹೊಂದಬೇಕು. ಇದು ನಮ್ಮ ರಾಷ್ಟ್ರಕ್ಕೆ ಸಾಧ್ಯವೆಂದು ನಾನು ಭಾವಿಸಿದ್ದೇನೆ."

ಭಾರತಕ್ಕೆ ಈ ರೀತಿಯ ನಿರಾಶ್ರಿತರ ಆಗಮನವಾಗುತ್ತಿರುವುದು ಇದೇ ಮೊದಲಲ್ಲ. ಭಾರತದ ದ್ವೇಷವೆಂಬ ವಿಷವನ್ನು ಒಳಗಿರಿಸಿಕೊಂಡೇ ಉದಯವಾಗಿರುವ ರಾಷ್ಟ್ರ ಪಾಕಿಸ್ತಾನ. ಈ ರಾಷ್ಟ್ರವು ಅಸ್ತಿತ್ವಕ್ಕೆ ಬಂದೊಡನೆ ಸುಮಾರು ಒಂದು ಲಕ್ಷ ಮಂದಿ ಮುಸ್ಲಿಮರು ಗಂಟುಮೂಟೆಕಟ್ಟಿಕೊಂಡು ಪಾಕಿಸ್ತಾನಕ್ಕೆ ಹೋಗಿ ನೆಲೆಸಿದರು. ಆದರೆ ಅವರು ಭಾರತಕ್ಕೆ ಹಿಂದಿರುಗಿಬರಬೇಕಾಯಿತು. ಇದಂತಿರಲಿ: ಪಶ್ಚಿಮ ಪಾಕಿಸ್ತಾನದಲ್ಲಿದ್ದ ಹಿಂದೂಗಳನ್ನೆಲ್ಲ ಒಂದೆರಡು ವರ್ಷಗಳ ಅವಧಿಯಲ್ಲಿ ಹೊರಗಟ್ಟಲಾಯಿತು. ಪ್ರತಿವರ್ಷ ಪೂರ್ವಬಂಗಾಲದ ಹಿಂದೂಗಳೂ ಸಹ ಭಾರತಕ್ಕೆ ಬಂದು ನೆಲೆಸತೊಡಗಿದರು.

೧೯೪೬-೪೭ರ ದಂಗೆ ಮತ್ತು ವಿಭಜನೆಯ ಪರಿಣಾಮವಾಗಿ ಪೂರ್ವಬಂಗಾಲದಿಂದ ೩ ಲಕ್ಷ ೯೩ ಸಾವಿರ ಹಿಂದೂಗಳು ಭಾರತಕ್ಕೆ ಬಂದರು. ೧೯೪೮-೪೯ರಲ್ಲಿ ಭಾರತ ಸರ್ಕಾರವು ಹೈದರಾಬಾದಿನ ಮೇಲೆ ಸೈನಿಕ ಕ್ರಮವನ್ನು ತೆಗೆದುಕೊಂಡಿತೆಂದು ನೆಪಮಾಡಿ ಪೂರ್ವ ಬಂಗಾಲದಿಂದ ಹತ್ತು ಲಕ್ಷ ಜನರನ್ನು ಹೊರಗಟ್ಟಲಾಯಿತು. ೧೯೫೦ರಲ್ಲಿ ವಿನಾಕಾರಣ ಹಿಂದೂ ವಿರೋಧಿ ದಂಗೆಯನ್ನೆಬ್ಬಿಸಿ ೧೫ ಲಕ್ಷ ೭೫ ಸಾವಿರ ಜನರನ್ನು ಭಾರತಕ್ಕೆ ಕಳುಹಿಸಲಾಯಿತು. ೧೯೫೧ರಲ್ಲಿ ಕಾಶ್ಮೀರ ಸಮಸ್ಯೆಯ ನೆಪದಿಂದ ಪಾಕಿಸ್ತಾನದಲ್ಲಿ ಆಂದೋಲನ ನಡೆದಾಗ ಪೂರ್ವಬಂಗಾಲದಿಂದ ೧ಲಕ್ಷ ೮೭ಸಾವಿರ ಮಂದಿ ಹಿಂದೂಗಳು ಭಾರತಕ್ಕೆ ಬಂದರು. ೧೯೫೦ರಿಂದ ೧೯೫೪ ವರೆಗೆ ಪಾಕಿಸ್ತಾನದಲ್ಲಿ ವಿಶೇಷತಃ ಪೂರ್ವಬಂಗಾಲದಲ್ಲಿ ಬಡತನದ ಬೇಗೆ ಹಬ್ಬಿತ್ತು. ಆಗ ನಾಲ್ಕು ಲಕ್ಷ ಹಿಂದೂಗಳನ್ನು ಹೊರಗಟ್ಟಲಾಯಿತು. ೧೯೫೫ರಲ್ಲಿ ಭಾಷಾ ಆಂದೋಲನದ ನೆಪದಿಂದ ಎರಡೂವರೆ ಲಕ್ಷ ಜನರನ್ನೂ ೧೯೫೬ರಲ್ಲಿ ಪಾಕಿಸ್ತಾನವು ಇಸ್ಲಾಂ ಗಣರಾಜ್ಯವಾದುದರ ನೆಪದಿಂದ ಮೂರೂವರೆ ಲಕ್ಷ ಜನರನ್ನೂ ಭಾರತಕ್ಕೆ ರವಾನಿಸಲಾಯಿತು. ೧೯೬೪ರಲ್ಲಿ ಪೈಗಂಬರರ ಕೂದಲೊಂದು ಕಳುವಾದುದರ ನೆಪದಿಂದ ಹಿಂದೂ ವಿರೋಧಿದಂಗೆ ಎಬ್ಬಿಸಿ, ಬಂಗಾಲದಿಂದ ಎಂಟೂವರೆಲಕ್ಷ ಜನರನ್ನು ಹೊರಗೆ ಹಾಕಲಾಯಿತು. ೧೯೬೫ರಲ್ಲಿ ಭಾರತ-ಪಾಕ್ ಯುದ್ಧದ ಸಂದರ್ಭದಲ್ಲಿ ಮತ್ತೆ ೭೦ ಸಾವಿರ ನಿರಾಶ್ರಿತರು ಭಾರತಕ್ಕೆ ಬಂದರು.

ಹೀಗೆ ೧೯೪೬-೪೭ರಿಂದ ೧೯೬೫ರ ಕೊನೆಯವರೆಗೆ ಪೂರ್ವ ಬಂಗಾಲದಿಂದಲೇ ಐವತ್ತು ಲಕ್ಷಕ್ಕಿಂತ ಹೆಚ್ಚುಮಂದಿ ಭಾರತಕ್ಕೆ ಬಂದು ನೆಲೆಸಿದರು. (ಬಂಗಲಾ ದೇಶ-ಗ್ರಂಥ. ಪುಟ ೧೨೧)

ಆದರೆ ಎಂದೂ ಒಂದೇ ಬಾರಿಗೆ ಒಂದು ಕೋಟಿ ನಿರಾಶ್ರಿತರ ಆಗಮನವಾಗಿ ರಲಿಲ್ಲ. ೧೯೭೧ರಲ್ಲಿ ಒಂದು ಕೋಟಿ ಸಂಖ್ಯೆಯಷ್ಟು ನಿರಾಶ್ರಿತರ ಆಗಮನವಾಗಿ ಹಿಂದಿನ ದಾಖಲೆಗಳನ್ನು ಮುರಿಯಿತು. ಈ ನಿರಾಶ್ರಿತರ ಹೊಣೆಯಿಂದಾಗಿ ಭಾರತದ ಸಾಮಾಜಿಕಹಾಗೂ ಆರ್ಥಿಕ ಪರಿಸ್ಥಿತಿ ಅಲ್ಲೋಲಕಲ್ಲೋಲವಾಯಿತು. ನಿರಾಶ್ರಿತರನ್ನು ಸಹಸ್ರಾರು ಶಿಬಿರಗಳಲ್ಲಿ ನೆಲೆಗೊಳಿಸಿ ದಿನಂಪ್ರತಿ ಎರಡು ಸಾವಿರ ಟನ್ ಅಕ್ಕಿ ಸರ ಬರಾಜುಮಾಡಿ ಭಾರತವು ಅವರ ಹೊಟ್ಟೆ ತುಂಬಬೇಕಾಯಿತು. ಮಾನವೀಯ ತೆಯ ದೃಷ್ಟಿಯಿಂದ ಭಾರತವು ಈ ನಿರಾಶ್ರಿತರಿಗೆ ತಾತ್ಕಾಲಿಕವಾಗಿ ಆಹಾರ ವಸತಿ ಗಳ ನೆರವನ್ನು ನೀಡಿದುದು ನಿಜ. ಆದರೆ ಅದು ಎಷ್ಟುದಿನ ಸಾಧ್ಯ ?

ಪಾಕ್ ಸೇನೆಯ ಈ ರೀತಿಯ ರಾಕ್ಷಸೀ ಕೃತ್ಯಗಳನ್ನು ಜಗತ್ತಿನ ಯಾವ ರಾಷ್ಟ್ರಗಳೂ ಖಂಡಿಸುವ ಗೋಜಿಗೇ ಹೋಗಲಿಲ್ಲ. ಬದಲಾಗಿ ಅಮೆರಿಕ ಸರ್ಕಾ ರವು ಪಾಕಿಸ್ತಾನಕ್ಕೆ ಹೇರಳವಾದ ಶಸ್ತ್ರಾಸ್ತ್ರಗಳನ್ನೊದಗಿಸಿ, ಪಾಕಿಸ್ತಾನವು ಭಾರ ತದ ವಿರುದ್ಧ ಹೋರಾಟ ನಡೆಸಲು ಮತ್ತಷ್ಟು ಉತ್ತೇಜನವನ್ನು ನೀಡಿತು.

ಪೂರ್ವ ಬಂಗಾಳದ ನಿರಾಶ್ರಿತರಿಗೆ ಭಾರತವು ಆಶ್ರಯವಿತ್ತುದು ಪಾಕ್ ನಾಯಕರಿಗೆ ಸಹನೆಯಾಗಲಿಲ್ಲ. ಇದನ್ನೇ ನೆಪಮಾಡಿಕೊಂಡು ಪೂರ್ವ ಪಶ್ಚಿಮದ ಗಡಿಗಳಲ್ಲಿ ಭಾರತದ ಪ್ರದೇಶದೊಳಕ್ಕೆ ತಮ್ಮ ಸೇನೆಯನ್ನು ನುಗ್ಗಿಸತೊಡಗಿದರು ಈ ರೀತಿಯ ಅಪ್ರಚೋದಿತ ದಾಳಿಯನ್ನು ಎದುರಿಸಲು ಭಾರತ ಸಿದ್ಧವಾಗಿಯೇ ಇತ್ತು. ಗಡಿಯನ್ನು ದಾಟಿ ತಮ್ಮ ಪ್ರದೇಶದೊಳಕ್ಕೆ ನುಗ್ಗಿದ ಪಾಕ್‌ಸೈನಿಕರನ್ನು ಭಾರತ ಸೇನೆ ಸದೆಬಡೆಯಿತು. ವಾಯು ಸೀಮೆಯ ಗಡಿದಾಟಿ ಬಂದ ಮೂರು ಪಾಕ್ ಸೇಬರ್ ಜೆಟ್‌ಗಳನ್ನು ಭಾರತದ ವಾಯು ಪಡೆ ಹೊಡೆದುರುಳಿಸಿತು. ಹೀಗೆ ಭೂಸೇನೆ, ವಾಯು ಪಡೆಗಳಷ್ಟೇ ಅಲ್ಲದೆ ನೌಕಾಪಡೆಯೂ ಸಮರಕ್ಕಿಳಿಯ ಬೇಕಾಯಿತು. ಈಗ ಪಾಕ್ ಸೇನಾಬಲ ಬಾಂಗ್ಲಾದ ಮುಕ್ತಿವಾಹಿನಿಯನ್ನಷ್ಟೇ ಅಲ್ಲದೆ ಭಾರತದ ಸೇನಾ ಬಲವನ್ನೂ ಎದುರಿಸಬೇಕಾಯಿತು.

೧೯೭೧ರ ಡಿಸೆಂಬರ್ ಮೂರರಂದು ಭಾರತ-ಪಾಕ್ ಯುದ್ಧ ಆರಂಭವಾ ಯಿತು. ಈ ಯುದ್ಧವು ೧೪ ದಿನಗಳ ಕಾಲ ನಡೆಯಿತು.

ಹದಿನಾಲ್ಕು ದಿನಗಳ ಯುದ್ಧ

ಡಿಸೆಂಬರ್ ೩

ಅಮೃತಸರ, ಆವಂತಿಪುರ, ಅಂಬಾಲ, ಆಗ್ರಾ, ಜೋಧ್‌ಪುರ, ಪಠಾಣ್

ಕೋಟ್, ಶ್ರೀನಗರ ಮತ್ತು ಉತ್ತರಲಾಯ್ ಪಟ್ಟಣಗಳ ಮೇಲೆ ಪಾಕಿಸ್ತಾನಿ ಫೈಟರ್ ವಿಮಾನಗಳು ಅಪ್ರಚೋದಿತವಾಗಿ ದಾಳಿ ನಡೆಸಿದುವು. ಇದೇ ಸಮಯದಲ್ಲಿ ಪಶ್ಚಿಮದ ಗಡಿಯುದ್ದಕ್ಕೂ ಅನೇಕ ಕಡೆಗಳಲ್ಲಿ ಸುಲೇಮಾಂಕೆ, ಖೇಮ್ ಕರನ್, ಛಾಂಬ್ ಮತ್ತು ಪೂಂಚ್ ಮೊದಲಾದ ಕಡೆಗಳಲ್ಲಿ ಪಾಕ್ ಸೇನೆಯು ಭೂಸೇನಾನೆಲೆಗಳ ಮೇಲೆ ಭಾರಿ ಪ್ರಮಾಣದ ದಾಳಿ ನಡೆಸಿತು.

ರಾಜಧಾನಿಯಿಂದ ಹೊರಗೆ ಹೋಗಿದ್ದ ನಾಯಕರು, ಪ್ರಧಾನಿ ಶ್ರೀಮತಿ ಇಂದಿರಾಗಾಂಧಿ, ರಕ್ಷಣಾ ಸಚಿವ ಜಗಜೀವನರಾಂ, ಆರ್ಥಿಕ ಸಚಿವ ವೈ. ಬಿ. ಚವಾಣ್ ಇವರುಗಳು ಕೂಡಲೇ ದೆಹಲಿಗೆ ಧಾವಿಸಿದರು. ಕೇಂದ್ರ ಸಚಿವ ಸಂಪುಟದ ತುರ್ತು ಸಭೆ ಸಮಾವೇಶಗೊಂಡು, ನಮ್ಮ ದೇಶವು ಯುದ್ಧವನ್ನೆದುರಿಸಲೇಬೇಕೆಂದು ನಿರ್ಧರಿಸಿತು, ರಾಷ್ಟ್ರಪತಿಗಳು ದೇಶಾದ್ಯಂತ ತುರ್ತುಪರಿಸ್ಥಿತಿಯನ್ನು ಘೋಷಿಸಿದರು. ಕರಾಚಿಯ ಬಳಿ ರಾವಲ್ಪಿಂಡಿಯ ಬಳಿ, ಲಾಹೋರ್ ಬಳಿ ಭಾರತೀಯ ವೈಮಾನಿಕಪಡೆ ಪ್ರತಿದಾಳಿಯನ್ನು ಆರಂಭಿಸಿತು.

ಡಿಸೆಂಬರ್ ೪

ತಾನು ಭಾರತದೊಡನೆ ಸಮರದಲ್ಲಿ ಸಿಲುಕಿರುವುದಾಗಿ ಪಾಕಿಸ್ತಾನ ಹೇಳಿಕೊಂಡಿತು. ಭಾರತೀಯ ಪಡೆಗಳು ಬಾಂಗ್ಲಾದೇಶದ ಒಳಹೊಕ್ಕವು. ಭಾರತೀಯ ನೌಕಾಪಡೆಯ ಪೂರ್ವ ಮತ್ತು ಪಶ್ಚಿಮ ನೌಕಾಪಡೆಗಳು ಕಾರ್ಯಾಚರಣೆಗೆ ತೊಡಗಿದುವು.

ಮೊದಲನೆಯ ದಿನದ ಯುದ್ಧದಲ್ಲಿ ಪಾಕಿಸ್ತಾನದ ೩೩ ವಿಮಾನಗಳನ್ನು ಹೊಡೆದುರುಳಿಸಲಾಯಿತು. ಭಾರತೀಯಪಡೆಗಳು ೧೨ ಪಾಕ್ ಟ್ಯಾಂಕ್‌ಗಳನ್ನು ನಾಶಗೊಳಿಸಿದುವು. ಎರಡು ಪಾಕ್ ಗನ್‌ಬೋಟ್‌ಗಳ ಮುಳುಗಡೆ. ಒಂದು ಪಾಕ್ ವಾಣಿಜ್ಯ ನೌಕೆ ಭಾರತೀಯರ ಕೈವಶ. ಭಾರತವೂ ಬಾಂಗ್ಲಾದಲ್ಲಿ ಎರಡು, ಪಶ್ಚಿಮ ವಲಯದಲ್ಲಿ ೧೧ ಹೀಗೆ ಒಟ್ಟು ೧೩ ವಿಮಾನಗಳನ್ನು ಕಳೆದುಕೊಂಡಿತು.

ಭಾರತ ಮತ್ತು ಪಾಕ್ ನಡುವಣ ಪರಿಸ್ಥಿತಿ ಯುದ್ಧದಲ್ಲಿ ತೊಡಗುವಷ್ಟು ಬಿಗಡಾಯಿಸಿದುದನ್ನು ಕುರಿತು ಚರ್ಚಿಸಲು ವಿಶ್ವಸಂಸ್ಥೆಯ ಭದ್ರತಾ ಸಮಿತಿ ತುರ್ತು ಸಭೆಯೊಂದನ್ನು ಸಮಾವೇಶಗೊಳಿಸಿತು.

ಡಿಸೆಂಬರ್ ೫

ಮುಕ್ತಿವಾಹಿನಿಯ ಜೊತೆಗೂಡಿ ಭಾರತೀಯ ಪಡೆಗಳು ಬಾಂಗ್ಲಾದೇಶದಲ್ಲಿ ಕೆಲವು ಪ್ರದೇಶಗಳನ್ನು ವಿಮೋಚನೆಗೊಳಿಸಿದುವು. ಲೋಂಗೇವಾಲಾದಲ್ಲಿ ಮತ್ತು ಪೂಂಚ್ ಬಳಿ ಪಾಕ್ ದಾಳಿಯನ್ನು ಭಾರತೀಯ ಪಡೆಗಳು ಹಿಮ್ಮೆಟ್ಟಿಸಿದುವು.

ಭಾರತೀಯ ನೌಕಾಪಡೆ ಕರಾಚಿ ಬಂದರಿನ ಮೇಲೆ ಅವ್ಯಾಹತ ದಾಳಿ ನಡೆಸಿತು. ಖೈಬರ್ ಮತ್ತು ಷಹಜಹಾನ್ ಎಂಬ ಎರಡು ಪಾಕ್ ಡಿಸ್ಟ್ರಾಯರ್

ಗಳನ್ನು ಜಲಸಮಾಧಿ ಮಾಡಲಾಯಿತು. ಬಂದರಿನ ಸ್ಥಾವರಗಳು ಭಾರತೀಯ ದಾಳಿಗೆ ಸಿಕ್ಕಿ ನುಚ್ಚುನೂರಾದುವು.

ಬಂಗಾಳಾ ಕೊಲ್ಲಿಯಲ್ಲಿ ನಡೆಸಲಾದ ಇನ್ನೊಂದು ಕಾರ್ಯಾಚರಣೆಯಲ್ಲಿ ಭಾರತೀಯ ಪಡೆ ಪಾಕ್ ಸಬ್‌ಮೆರೀನ್ ಒಂದನ್ನು ಮುಳುಗಿಸಿತು. ಚಿತ್ತಗಾಂಗ್ ಮತ್ತು ಕಾಕ್ಸ್ ಬಜಾರ್ ಬಂದರುಗಳಲ್ಲಿ ನಿರಂತರವಾಗಿ ಭಾರತೀಯ ಪಡೆಗಳು ಗುಂಡಿನ ಮಳೆಗರೆದುವು. ಖುಲ್ನಾ, ಚಾಲ್ನಾ, ಮಂಗ್ಲಾ ಬಂದರುಗಳ ಧ್ವಂಸ. ಚಿತ್ತಗಾಂಗ್ ವಿಮಾನ ನೆಲೆ ಮತ್ತು ಮಿಲಿಟರಿ ನೆಲೆಗಳ ನಾಶ. ಛಾಂಬ್‌ವಲಯದಲ್ಲಿ ಸಶಸ್ತ್ರ ರೆಜಿಮೆಂಟ್‌ನ ನೆರವಿನೊಂದಿಗೆ ಪಾಕ್ ಪಡೆಯ ಎರಡು ಬ್ರಿಗೇಡ್‌ಗಳು ಭಾರತೀಯ ನೆಲೆಗಳ ಮೇಲೆ ದಾಳಿಮಾಡಿದುವು.

ಪರಸ್ಪರ ವೈರಗಳನ್ನು ಮರೆತು ಭಾರತ-ಪಾಕ್ ಎರಡೂ ರಾಷ್ಟ್ರಗಳು ತಂತಮ್ಮ ಪಡೆಗಳನ್ನು ಹಿಂದಕ್ಕೆ ಕರೆಸಿಕೊಳ್ಳಬೇಕೆಂದು ಭದ್ರತಾ ಸಮಿತಿಯಲ್ಲಿ ಅಮೆರಿಕವು ಮಂಡಿಸಿದ ನಿರ್ಣಯಕ್ಕೆ ಸೋವಿಯೆಟ್ ರಷ್ಯಾ ವೀಟೋ ಚಲಾಯಿಸಿತು.

ಡಿಸೆಂಬರ್ ೬

ಪೂರ್ವ ವಲಯದಲ್ಲಿ ಭಾರತೀಯ ಪಡೆಗಳು ಫೆನಿ ಮತ್ತು ಹಿಲ್ಲಿ ಇವುಗಳನ್ನು ವಶಪಡಿಸಿಕೊಂಡವು. ಸಿಲ್ಹೆಟ್ ಜಿಲ್ಲೆಯ ಈಶಾನ್ಯಮೂಲೆಯ ಜಯಂತಿಯಾಪುರ್ ಮತ್ತು ರಂಗಪುರಕ್ಕೆ ೩೨ ಕಿ. ಮೀ. ದಕ್ಷಿಣಕ್ಕಿರುವ ನವಾಬ್‌ಗಂಜ್ ಸಹ ಭಾರತೀಯ ಪಡೆಗಳ ವಶವಾಯಿತು. ಅಖೌರಾ-ಬ್ರಾಹ್ಮಣಬಾರಿಯಾದ ಮಾರ್ಗದಲ್ಲಿರುವ ಸುಲ್ತಾನಪುರ ವಿಮೋಚನೆಗೊಂಡಿತು.

ಶತ್ರುಗಳ ನಿರಂತರ ದಾಳಿಯಿಂದಾಗಿ ಪಶ್ಚಿಮದ ಛಾಂಬ್ ವಲಯದಿಂದ ಭಾರತ ಪಡೆಗಳು ಹಿನ್ನಡೆದುವು.

ಗಣಪ್ರಜಾತಂತ್ರ ಬಾಂಗ್ಲಾದೇಶಕ್ಕೆ ಭಾರತವು ಮನ್ನಣೆ ನೀಡಿರುವುದಾಗಿ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರು ಸಂಸತ್‌ನಲ್ಲಿ ಪ್ರಕಟಿಸಿದರು.

ಪಾಕಿಸ್ತಾನ ಭಾರತದೊಂದಿಗಿದ್ದ ರಾಯಭಾರ ಸಂಬಂಧವನ್ನು ಕಡಿದುಕೊಂಡಿತು.

ಡಿಸೆಂಬರ್ ೭

ಭಾರತೀಯ ಪಡೆಗಳು ಜೆಸ್ಸೂರು ನಗರವನ್ನು ವಿಮೋಚನೆಗೊಳಿಸಿದುವು. ಇದೇ ವಲಯದ ಪ್ರಮುಖ ಸಂಪರ್ಕ ಕೇಂದ್ರವಾದ ಜೆನಿಡಾ ಉರುಳಿತು. ಮೆಹರ್‌ಪುರವನ್ನು ಭಾರತೀಯಪಡೆಗಳು ವಶಪಡಿಸಿಕೊಂಡಿದ್ದರಿಂದಾಗಿ ಚೌದಾಂಗಾ ಮತ್ತು ಖುಷ್ಟಿಯಾಗಳನ್ನು ಗೆಲ್ಲುವ ಮಾರ್ಗ ಸುಗಮವಾಯಿತು. ಹೆಲಿಕ್ಯಾಪ್ಟರ್

ನಿಂದ ಇಳಿದ ಭಾರತೀಯ ಪಡೆಗಳು ಸಿಲ್ಹೆಟ್ ಮತ್ತು ಮೌಲ್ವಿಬಜಾರ್‌ಗಳನ್ನು ವಿಮೋಚನೆಗೊಳಿಸಿದುವು.

ಕಾಶ್ಮೀರದಲ್ಲಿ ಛಾಂಬ್‌ಗೆ ಪೂರ್ವಕ್ಕಿರುವ 'ಕೋಳಿಕತ್ತು' (Chicken's Neck) ಪ್ರದೇಶವು ಭಾರತ ಪಡೆಗಳ ವಶವಾಯಿತು. ಸಿಯಾಲ್‌ಕೋಟೆ ಕಡೆಗೆ ೧೯ ಕಿ. ಮೀ. ಗಳಷ್ಟು ಪಾಕ್ ಪ್ರದೇಶದೊಳಕ್ಕೆ ಭಾರತದ ಪಡೆಗಳು ಮುನ್ನುಗ್ಗಿದುವು.

ಸಿಂಧನ ಬಾರ್ಮರ್ ವಲಯದಲ್ಲಿ ಪಾಕ್ ಪ್ರದೇಶಗಳ ಮೇಲೆ ಆಕ್ರಮಣ. ಕಚ್‌ನಲ್ಲಿ ಜಲೀಲಿ, ಕಲೀಬೇಗ್ ಮತ್ತು ಭಾಡ್‌ಬೆಟ್ ಠಾಣ್ಯಗಳು ಭಾರತ ಪಡೆಗಳ ಕೈವಶ.

ಈ ಸಮರ ಸುದ್ದಿಗಳನ್ನು ಅಮೆರಿಕಾ ಮತ್ತು ಇತರ ದೇಶಗಳು ವಿಶ್ವಸಂಸ್ಥೆಯ ಸಕಲ ಸದಸ್ಯರ ಸಭೆಯ ಮುಂದಿಟ್ಟು, ಶಾಂತಿ ಒಪ್ಪಂದದ ನಿರ್ಣಯವನ್ನು ಮಂಡಿಸಿದುವು. ಸಕಲಸದಸ್ಯರ ಸಭೆಯು ಕದನವಿರಾಮಕ್ಕೆ ಮತ್ತು ಎರಡೂ ಪಡೆಗಳ ವಾಪಸಾತಿಗೆ ಕರೆಯಿತ್ತಿತು.

ಡಿಸೆಂಬರ್ ೮

ಪೂರ್ವವಲಯದಲ್ಲಿ ಭಾರತದ ಪಡೆಗಳು ಕೊಮಿಲ್ಲ, ಬ್ರಾಹ್ಮಣ್ ಬಾರಿಯಾ, ಇಲಿಯಟ್‌ಗಂಜ್ ಮತ್ತು ತ್ರಿಪುರದ ಎದುರಿನ ಇಡೀ ವಲಯವನ್ನು ವಶಪಡಿಸಿಕೊಂಡು, ನದೀಬಂದರುಗಳಾದ ಚಾಂದ್‌ಪುರ ಮತ್ತು ದೌಡ್‌ಡಂಡಿಯ ಕಡೆಗೆ ಮುಂದುವರೆದುವು.

ಪಶ್ಚಿಮ ವಲಯದ ಬಾರ್ಮರ್ ಕ್ಷೇತ್ರದಲ್ಲಿ ೨,೦೭೦ ಚ. ಕಿ. ಮೀ. ಗಳಷ್ಟು ಪ್ರದೇಶ ಭಾರತಪಡೆಗಳ ವಶವಾಯಿತು. ವಾಯುವ್ಯದಲ್ಲಿ ದೇರ್‌ಬಾಬಾನಾನಕ್‌ಗೆ ೧೬ ಕಿ. ಮೀ. ಗಳಷ್ಟು ಈಶಾನ್ಯಕ್ಕಿರುವ ತಖ್ತ್‌ಪುರವನ್ನೂ, ಕಾರ್ಗಿಲ್ ಬಳಿಯ ಎರಡು ಠಾಣ್ಯಗಳನ್ನೂ ಭಾರತೀಯ ಪಡೆಗಳು ಆಕ್ರಮಿಸಿಕೊಂಡುವು.

ಭೂತಾನ್ ಬಾಂಗ್ಲಾದೇಶಕ್ಕೆ ಮನ್ನಣೆ ನೀಡಿತು.

ಡಿಸೆಂಬರ್ ೯

ಭಾರತೀಯ ನೌಕಾಪಡೆ ಕರಾಚಿ ಬಂದರಿನಲ್ಲಿ ಪುನಃ ಕಾರ್ಯಾಚರಣೆಗೆ ತೊಡಗಿತು. ಪಾಕಿಸ್ತಾನದ ಮೂರು ಯುದ್ಧನೌಕೆಗಳ ನಾಶ. ಡಿಸೆಂಬರ್ ಏರಂದು ಪಾಕಿಸ್ತಾನದ 'ಘಾಜಿ' ನೌಕೆ ಮುಳುಗಿತೆಂಬ ಸುದ್ದಿ ಈ ದಿನ ಪ್ರಕಟವಾಯಿತು.

ಪೂರ್ವದಲ್ಲಿ ಚಾಂದ್‌ಪುರ, ದೌಡ್‌ಕಂಡಿ ಮತ್ತು ಆಶುಗಂಜ್ ಈ ನದೀ ಬಂದರುಗಳು ಭಾರತಪಡೆಗಳ ಕೈವಶವಾಯಿತು. ಸಿಲ್ಹೆಟ್ ಜಿಲ್ಲೆಯ ಜಮಾಲ್‌ಪುರವನ್ನು ಭಾರತದ ಸೇನೆಗಳು ನಾಲ್ಕೂ ದಿಕ್ಕಿನಿಂದಲೂ ಮುತ್ತಿದುವು.

ಪಶ್ಚಿಮದಲ್ಲಿ ಸಿಂಧ್‌ನಲ್ಲಿರುವ ನಗರಪಾರ್ಕರ್ ಮತ್ತು ಕಾಶ್ಮೀರದ ಕಾರ್ಗಿಲ್ ಕ್ಷೇತ್ರದ ಒಂಭತ್ತು ಪಾಕ್ ಠಾಣ್ಯಗಳು ಭಾರತ ಪಡೆಗಳ ವಶವಾದುವು.

ಬಾಂಗ್ಲಾದಲ್ಲಿದ್ದ ಪಾಕ್ ಮೇಜರ್ ಜನರಲ್ ಫರ್ಮಾನ್ ಅಲಿ ಶಾಂತಿಗಾಗಿ ಪ್ರಾರ್ಥಿಸಿ ವಿಶ್ವಸಂಸ್ಥೆಗೆ ಮನವಿ ಸಲ್ಲಿಸಿದುದರಿಂದ ಪಾಕಿಸ್ತಾನದ ಒಳಬಿರುಕಿನ ಸೂಚನೆಗಳು ಮೊದಲಬಾರಿಗೆ ಪ್ರಕಟವಾಯಿತು. ಈ ಮನವಿಗೆ ವಿರುದ್ಧವಾಗಿ ಇಸ್ಲಾಮಾಬಾದ್ ಅಜ್ಞೆಯನ್ನಿತ್ತಿತು.

ಡಿಸೆಂಬರ್ ೧೦

ಭಾರತೀಯ ಪಡೆಗಳು ಮೇಘ್ನಾನದಿಯನ್ನು ದಾಟಿ ಮುನ್ನಡೆದು ಢಾಕ್ಕಾ ನಗರಕ್ಕೆ ಮುತ್ತಿಗೆ ಹಾಕಲು ಸಾಮರ್ಥ್ಯಪಡೆದುವು. ಪಶ್ಚಿಮ ವಲಯದ ಕಚ್‌ನಲ್ಲಿ ವಿನ್‌ಗರ್ ಮತ್ತು ವಿರಾವಾ ಗಳನ್ನು ಭಾರತೀಯ ಪಡೆಗಳು ವಶಪಡಿಸಿಕೊಂಡುವು. ಆದರೆ ಛಾಂಬ್ ಕ್ಷೇತ್ರದಲ್ಲಿ ಭಾರತ ಪಡೆ ಶತ್ರುದಾಳಿ ತೀವ್ರವಾದುದರಿಂದ ಹಿನ್ನಡೆಯಬೇಕಾಯಿತು.

ಡಿಸೆಂಬರ್ ೧೧

ಬಾಂಗ್ಲಾ ದೇಶದಲ್ಲಿ ಜಮಾಲ್‌ಪುರ, ಮೈಮನ್‌ಸಿಂಗ್, ಚಾಂದ್‌ಪುರ, ಹಿಲ್ಲಿ–ಈ ಪ್ರಮುಖ ಪಟ್ಟಣಗಳು ಭಾರತಸೇನೆಯ ವಶ.

ಪಶ್ಚಿಮವಲಯದಲ್ಲಿ ಮುನಾವರ್ ತಾವಿ ನದಿಯನ್ನು ದಾಟಿ, ಅದರ ಪಶ್ಚಿಮ ದಡವನ್ನು ಆಕ್ರಮಿಸಿಕೊಂಡ ಭಾರತೀಯ ಪಡೆಗಳಿಂದ ಛಾಂಬ್ ಕ್ಷೇತ್ರದಲ್ಲಿ ಪ್ರತಿ ದಾಳಿ ಆರಂಭ.

ಈವರೆಗೆ ಪಾಕಿಸ್ತಾನವು ೭೭ ವಿಮಾನಗಳನ್ನೂ, ೧೪೧ ಟ್ಯಾಂಕ್‌ಗಳನ್ನು ಕಳೆದುಕೊಂಡಿತ್ತು.

ಡಿಸೆಂಬರ್ ೧೨

ಬಾಂಗ್ಲಾದೇಶದಲ್ಲಿ ವಿಮೋಚನಾ ಸಮರ ಪರಮಾವಧಿಯನ್ನು ತಲುಪಿತು. ಢಾಕ್ಕಾ ನಗರಕ್ಕಾಗಿ ಕದನ ಆರಂಭವಾಗುವ ಸೂಚನೆ ಕಂಡುಬಂದಿತು. ಢಾಕ್ಕಾ ಕ್ಷೇತ್ರಗಳಲ್ಲಿ ಭಾರತೀಯ ಪ್ಯಾರಾಟ್ರೂಪ್‌ಗಳು ಇಳಿಯತೊಡಗಿದುವು.

ಪಶ್ಚಿಮದಲ್ಲಿ ಕಾರ್ಗಿಲ್ ಕ್ಷೇತ್ರ ಸಂಪೂರ್ಣವಾಗಿ ಪಾಕ್ ಪಡೆಗಳ ಕೈಬಿಟ್ಟಿತು. ಛಾಂಬ್ ಕ್ಷೇತ್ರದಲ್ಲಿಯೂ ಶತ್ರುದಾಳಿಯು ಹಿಮ್ಮೆಟ್ಟುವಂತಾಯಿತು.

ಬಂಗಾಳ ಕೊಲ್ಲಿಯಲ್ಲಿ ಭಾರತೀಯ ನೌಕಾ ಪಡೆಗಳು ಶತ್ರುವಿನ ಗನ್‌ಬೋಟ್ ಒಂದನ್ನು ಮುಳುಗಿಸಿದುವು. ಇದೂ ಸೇರಿದಂತೆ ಪಾಕಿಸ್ತಾನವು ೧೬ ಗನ್‌ಬೋಟ್ ಗಳನ್ನೂ, ೩ ಸಮರ ನೌಕೆಗಳನ್ನೂ, ೨ ಸಬ್‌ಮೇರಿನ್‌ಗಳನ್ನೂ ಕಳೆದುಕೊಂಡಂತಾಯಿತು.

ಇಂದು ಭಾರತ ನೌಕಾಪಡೆಗೊಂದು ದುರ್ದಿನವೆಂದೇ ಹೇಳಬೇಕು. ಅರೇಬಿಯನ್ ಸಮುದ್ರದಲ್ಲಿ ಭಾರತದ ನೌಕಾಪಡೆಯ ಕಾವಲು ಹಡಗಾದ 'ಖುಕ್ರಿ' ಪಹರೆ ನಡೆಸುತ್ತಿತ್ತು. ಇದ್ದಕ್ಕಿದ್ದಂತೆ ಪಾಕ್ ಜಲಾಂತರ್ಗಾಮಿಯೊಂದರಿಂದ 'ಖುಕ್ರಿ'ಗೆ ಬಲವಾದ ಗುಂಡಿನೇಟು ಬಿದ್ದಿತು. ಒಂದೆರಡು ಕ್ಷಣಗಳಲ್ಲಿಯೇ ಮತ್ತೊಂದು ಪ್ರಬಲ ದಾಳಿಗೆ 'ಖುಕ್ರಿ' ಗುರಿಯಾಗಿ, ಜಲಸಮಾಧಿಯಾಯಿತು. 'ಖುಕ್ರಿ' ಜಲಸಮಾಧಿಯಾದಾಗ, ಅದರೊಂದಿಗೆ ೧೬೫ ಮಂದಿ ನಾವಿಕರು ಮತ್ತು ೧೨ ಮಂದಿ ಅಧಿಕಾರಿಗಳು ಜಲಸಮಾಧಿಯಾದರು. ಈಜುತ್ತ ದಡವನ್ನು ಸೇರಿಕೊಂಡು ಬದುಕಿ ಉಳಿದವರು ೬೧ ಮಂದಿ ನಾವಿಕರು ಮತ್ತು ೬ ಮಂದಿ ಅಧಿಕಾರಿಗಳು ಮಾತ್ರ. 'ಖುಕ್ರಿ'ಯ ಕ್ಯಾಪ್ಟನ್ ಮುಲ್ಲಾ ಎಳ್ಳಷ್ಟೂ ಧೃತಿಗೆಡದೆ ತಮ್ಮ ಕರ್ತವ್ಯಪಾಲನೆಯಲ್ಲಿ ನಿರತರಾಗಿ, ಅನೇಕರ ಪ್ರಾಣ ಉಳಿಸಲು ನೆರವಾದರು. ಆದರೆ ತಾವು ಮಾತ್ರ 'ಖುಕ್ರಿ' ಯೊಡನೆಯೇ ಮುಳುಗಿ ವೀರಮರಣವನ್ನಪ್ಪಿದರು.

ಡಿಸೆಂಬರ್ ೧೩

ಈಗ ಎಲ್ಲರ ದೃಷ್ಟಿಯೂ ಡಾಕ್ಕಾನಗರದ ಕಡೆಗೇ ಕೇಂದ್ರೀಕೃತವಾಗಿತ್ತು. ಇತರ ಕ್ಷೇತ್ರಗಳಲ್ಲಿ ವಾಯುಕದನಕ್ಕೆ ಸ್ವಲ್ಪಮಟ್ಟಿನ ವಿರಾಮ ದೊರಕಿದಂತಾಗಿತ್ತು. ಕೇವಲ ೨೪ ಘಂಟೆಗಳ ಅವಧಿಯಲ್ಲಿ ಶತ್ರುಪಡೆಯ ೧೪ ಟ್ಯಾಂಕ್‌ಗಳನ್ನು ಭಾರತೀಯ ಪಡೆಗಳು ನಾಶಗೊಳಿಸಿದುದು ವಿಜಯದ ವಿಕ್ರಮವಾಗಿತ್ತು. ಉತ್ತಮ ಸ್ಥಿತಿಯಲ್ಲಿದ್ದ ಶತ್ರುಗಳ ಒಂದು ಟ್ಯಾಂಕ್ ಸಹ ಭಾರತದ ಪಡೆಗಳಿಗೆ ದಕ್ಕಿತ್ತು.

ಇದೇ ವೇಳೆಯಲ್ಲಿ ಅಮೆರಿಕದ ಅಣ್ವಸ್ತ್ರಸಜ್ಜಿತ ವಿಮಾನವಾಹಕ 'ಎಂಟರ್‌ಪ್ರೈಸ್' ಮತ್ತು ಅನೇಕ ನೌಕೆಗಳನ್ನೂ, ಡಿಸ್ಟ್ರಾಯರ್‌ಗಳನ್ನೂ ಒಳಗೊಂಡಿದ್ದ ಏಳನೆಯ ನೌಕಾಪಡೆ ವಿಯೆಟ್ನಾಂ ಕಡೆಯಿಂದ ಬಂಗಾಳಕೊಲ್ಲಿಯ ಅಭಿಮುಖವಾಗಿ ಹೊರಟಿತು.

ಡಿಸೆಂಬರ್ ೧೪

ಭಾರತೀಯ ನೌಕಾದಳದ ದಾಳಿಗೆ ಸಿಕ್ಕಿ ಧ್ವಂಸವಾಗಿದ್ದ ಚಿತ್ತಗಾಂಗ್ ಬಂದರು ಅಗ್ನಿಜ್ವಾಲೆಗಳಿಂದಾವೃತವಾಗಿ ಉರಿಯತೊಡಗಿತ್ತು. ಭಾರತೀಯ ಪಡೆಗಳು ಢಾಕ್ಕಾವನ್ನು ಮುತ್ತುವ ಮುನ್ನ ತಾಂಗೇಲ್, ಜಯದೇವಪುರ ಮತ್ತು ತುಂಗಿ- ಇವುಗಳನ್ನು ವಶಪಡಿಸಿಕೊಂಡುವು. ನರ್‌ಸಿಂಗ್‌ದಿಯ ಕಡೆಯಿಂದ ಢಾಕ್ಕಾದ ೯ಕಿ.ಮೀ. ಸುತ್ತಮುತ್ತಲ ಪ್ರದೇಶಗಳಲ್ಲಿ ಭಾರತಸೇನೆ ಮುಂದುವರೆಯತೊಡಗಿತ್ತು.

ಇಷ್ಟರಲ್ಲಿ ಪಾಕ್ ಸಿವಿಲಿಯನ್ ಗೌರ್ನರ್ ಡಾ|| ಎ. ಎಂ. ಮಲ್ಲಿಕ್‌ರವರು ತಮ್ಮ ಅಧಿಕಾರವನ್ನು ತ್ಯಜಿಸಿದರು. ಇಂಟರ್‌ನ್ಯಾಷನಲ್ ರೆಡ್‌ಕ್ರಾಸ್ ಸಂಸ್ಥೆಯು ತಟಸ್ಥವಲಯವೆಂದು ಘೋಷಿಸಿರುವ ಢಾಕ್ಕಾದ ಇಂಟರ್-ಕಾಂಟಿನೆಂಟಲ್ ಹೋಟೆಲಿನಲ್ಲಿ ತಮ್ಮ ಕುಟುಂಬ ವರ್ಗದವರೊಂದಿಗೆ ಆಶ್ರಯ ಪಡೆದರು.

ಇದೇ ವೇಳೆಯಲ್ಲಿ ಬಾಂಗ್ಲಾ ದೇಶದಲ್ಲಿದ್ದ ಪಾಕ್ ಅಧಿಕಾರ ಶಾಹಿಯ ಹಿರಿಯ ಅಧಿಕಾರಿಗಳೂ ಒಟ್ಟಾಗಿ ರಾಜೀನಾಮೆ ಸಲ್ಲಿಸಿ, ಆಶ್ರಯವನ್ನು ಯಾಚಿಸಿದರು.

ಅತ್ತ ಪಶ್ಚಿಮದಲ್ಲಿ ಭಾರತೀಯ ಪಡೆಗಳು ಷಕರ್‌ಘರ್ ಕ್ಷೇತ್ರದಲ್ಲಿ ಆಕ್ರಮಣ ನಡೆಸಿ, ಪಾಕ್ ಪ್ರದೇಶದ ೯೦೦ ಚದರ ಕಿ.ಮೀ. ಗಳಷ್ಟು ಪ್ರದೇಶವನ್ನು ವಶಪಡಿಸಿ ಕೊಂಡುವು. ಸಿಂಧ್‌ನಲ್ಲಿ ನಯಾಚೋರ್‌ಗಾಗಿ ನಡೆದ ಕದನದಲ್ಲಿಯೂ ಭಾರತೀಯ ಪಡೆಗಳದ್ದೇ ಮೇಲುಗೈಯಾಗಿತ್ತು.

ತಕ್ಷಣದ ಕದನದ ನಿಲುಗಡೆಗೆ ಮತ್ತು ಪಾಕ್ ಪ್ರದೇಶಗಳಿಂದ ಪಡೆಗಳ ವಾಪ ಸಾತಿಗೆ ಭಾರತ ಒಪ್ಪಬೇಕೆಂದು ಭದ್ರತಾ ಸಮಿತಿ ಕರೆ ನೀಡಬೇಕೆಂದು ಅಮೆರಿಕವು ಮಂಡಿಸಿದ ನಿರ್ಣಯವನ್ನು ಪುನಃ ಸೋವಿಯೆಟ್ ರಷ್ಯಾ ವೀಟೋ ಚಲಾಯಿಸಿ ನಿಷ್ಕ್ರಿಯಗೊಳಿಸಿತು.

ಡಿಸೆಂಬರ್ ೧೫

ಭಾರತೀಯ ಭೂಸೇನೆ ಢಾಕ್ಕಾನಗರವನ್ನು ಪ್ರವೇಶಿಸಿತು. ಇದೇ ವೇಳೆಯಲ್ಲಿ ಅಮೆರಿಕದ ಏಳನೆಯ ನೌಕಾಪಡೆ ಬಾಂಗ್ಲಾದೇಶದ ತೀರದಭಿಮುಖವಾಗಿ ಚಲಿಸ ತೊಡಗಿತ್ತು. ಸೋವಿಯಟ್ ಸಶಸ್ತ್ರ ಜಲಾಂತರ್ಗಾಮಿ ಮತ್ತು ಸಮರ ನೌಕೆ ತ್ಸುಷಿಮಾಖಾರಿಯನ್ನು ಹಾದು ಪ್ರಾಯಶಃ ಹಿಂದೂ ಮಹಾಸಾಗರದ ಕಡೆಗೆ ಚಲಿ ಸುತ್ತಿದೆಯೆಂದು ಟೋಕಿಯೋದಿಂದ ಜಪಾನೀ ಮೂಲಗಳು ತಿಳಿಸಿದುವು. ಬಾಂಗ್ಲಾ ದೇಶದಲ್ಲಿ ಪಾಕ್ ಪಡೆಗಳ ಕಮ್ಯಾಂಡರ್ ಲೆ|| ಜ|| ಎ.ಎ.ಕೆ. ನಿಯಾಜಿ ಅವರು ಕದನ ವಿರಾಮಕ್ಕೆ ಸೂಚನೆಯಿತ್ತರು. ಆದರೆ ಭಾರತದ ಮಹಾದಂಡನಾಯಕರಾದ ಜ|| ಮಣೆಕ್‌ಷಾ ಅವರು ಕದನವಿರಾಮಕ್ಕೊಪ್ಪದೆ, ಶತ್ರುಗಳು ಮರುದಿನ ಬೆಳಗಿನ ಒಂಭತ್ತು ಘಂಟೆಯೊಳಗಾಗಿ ಸಂಪೂರ್ಣವಾಗಿ ಶರಣಾಗತರಾಗಬೇಕೆಂದು ಪ್ರತಿ ಹೇಳಿಕೆಯಿತ್ತರು.

ಡಿಸೆಂಬರ್ ೧೬

ಯಾವ ಷರತ್ತೂ ಇಲ್ಲದೆ ಪಾಕ್ ಲೆ|| ಜ|| ನಿಯಾಜಿಯವರು ತಮ್ಮ ಸೇನೆ ಯೊಂದಿಗೆ ಶರಣಾಗತರು. ಪಾಕ್ ಲೆ|| ಜ|| ಎ.ಎ.ಕೆ. ನಿಯಾಜಿಯವರು ಪಾಕ್ ಸೇನೆಯ ಶರಣಾಗತಿ ಪತ್ರಕ್ಕೆ ಮಧ್ಯಾಹ್ನ ೪-೩೧ರ ವೇಳೆಯಲ್ಲಿ ಸಹಿ ಹಾಕಿದರು. ಭಾರತದ ಪೂರ್ವವಲಯದ ಸೇನಾನಿ ಲೆ||ಜ|| ಜಗಜೀತ್‌ಸಿಂಗ್ ಅರೋರ ಅವರು ಈ ಶರಣಾಗತಿಯ ದಸ್ತಾವೇಜನ್ನು ಸ್ವೀಕರಿಸಿದರು.

ಭಾರತವು ಅತ್ತ ಪಶ್ಚಿಮವಲಯದಲ್ಲಿಯೂ ಕದನ ವಿರಾಮವನ್ನು ಘೋಷಿಸಿತು.*

---

* ಸೂಚನೆ : ಹೆಚ್ಚಿನ ವಿವರಗಳಿಗೆ 'ಭಾರತ-ಪಾಕ್ ಯುದ್ಧ' ಎಂಬ ಗ್ರಂಥವನ್ನು ನೋಡಿ.

ಡಿಸೆಂಬರ್ ೧೭

ಭಾರತವು ನೀಡಿದ ಕದನ ವಿರಾಮದ ಘೋಷಣೆಗೆ ಪಾಕಿಸ್ತಾನವೂ ಒಪ್ಪಿಗೆ ನೀಡಿತು. ತತ್ಫಲವಾಗಿ ಪಶ್ಚಿಮವಲಯದಲ್ಲಿಯೂ ಹೋರಾಟ ನಿಂತಿತು.

ಈ ಯುದ್ಧದಲ್ಲಿ ವಿಶ್ವಸಂಸ್ಥೆಯ ಪಾತ್ರ

ವಿಶ್ವಸಂಸ್ಥೆಯ ಪ್ರಣಾಳಿಕೆಯ ೨೪ನೆಯ ಆರ್ಟಿಕಲ್ ಪ್ರಕಾರ ಅಂತರ್ರಾಷ್ಟ್ರೀಯ ಶಾಂತಿ ಮತ್ತು ರಕ್ಷಣೆಗಳ (ಭದ್ರತೆ) ಸ್ಥಾಪನೆಯೇ ಭದ್ರತಾ ಸಮಿತಿಯ ಮುಖ್ಯ ಧ್ಯೇಯ. ಶಾಂತಿಭಂಗ, ದುರಾಕ್ರಮಣ ಇತ್ಯಾದಿಗಳನ್ನು ನಿರ್ಧರಿಸುವುದು ಮತ್ತು ನಿಷ್ಪಕ್ಷಪಾತದಿಂದ ವರ್ತಿಸಿ ಎರಡೂ ಬಣಗಳಿಗೆ ಅನ್ಯಾಯವಾಗದಂತೆ ನ್ಯಾಯ ಸಮ್ಮತ ತೀರ್ಪು ನೀಡುವುದು ಭದ್ರತಾ ಸಮಿತಿಯ ಕಾರ್ಯವೆಂದು ಪ್ರಣಾಳಿಕೆಯ ೩೯ನೆಯ ಆರ್ಟಿಕಲ್ ಹೇಳುತ್ತದೆ.

ಆದರೆ ಬೇರೆಯವರ ದಬ್ಬಾಳಿಕೆಗೆ ಒಳಗಾಗದಂತೆ ವೀಟೋ ಚಲಾಯಿಸುವ ಅಧಿಕಾರ ವಿಶ್ವದ ಪ್ರಮುಖ ರಾಷ್ಟ್ರಗಳಾದ ಅಮೆರಿಕ ಮತ್ತು ರಷ್ಯಗಳಿಗೆ ಮಾತ್ರ ಇರುವುದು. ಒಂದು ವೇಳೆ ಯಾವುದೇ ದಿಶೆಯಲ್ಲಿ ಭದ್ರತಾ ಸಮಿತಿ ಪರಾಭವ ಗೊಂಡರೆ ಸಕಲ ಸದಸ್ಯರ ಸಭೆ(General Assembly)ಯು ಆ ಕಾರ್ಯವನ್ನು ಕೈಗೊಳ್ಳಬಹುದು.

* * * *

ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಡಿಸೆಂಬರ್ ೫ರಂದು ಅಮೆರಿಕವು ಒಂದು ಮಹತ್ತರ ನಿರ್ಣಯವನ್ನು ಮಂಡಿಸಿತು–"ಭಾರತ-ಪಾಕಿಸ್ತಾನಗಳ ನಡುವೆ ಕದನ ನಿಲುಗಡೆಯಾಗಬೇಕು. ಸಮರ ಪ್ರದೇಶಗಳಿಂದ ಉಭಯ ರಾಷ್ಟ್ರಗಳೂ ತಂತಮ್ಮ ಪಡೆಗಳನ್ನು ಹಿಂದಕ್ಕೆ ಕರೆಸಿಕೊಳ್ಳಬೇಕು." ಎಂಬುದೇ ಆ ನಿರ್ಣಯ. ಈ ನಿರ್ಣಯಕ್ಕೆ ಪರವಾಗಿ ಹನ್ನೊಂದು ರಾಷ್ಟ್ರಗಳು ಮತ ನೀಡಿದವು. ರಷ್ಯ ಮತ್ತು ಪೋಲೆಂಡ್ ವಿರುದ್ಧವಾಗಿ ಮತ ನೀಡಿದವು. ಬ್ರಿಟನ್ ಮತ್ತು ಫ್ರಾನ್ಸ್ ತಟಸ್ಥ ವಾಗಿದ್ದವು. ಚೀಣ ಮತದಾನದಲ್ಲಿ ಭಾಗವಹಿಸಲಿಲ್ಲ. ನಿರ್ಣಯವನ್ನು ಖಂಡಿಸಿ ಮಾತನಾಡಿದ ರಷ್ಯದ ಉಪವಿದೇಶಾಂಗ ಸಚಿವ ಶ್ರೀ ಜಾಕಬ್ ಮಲ್ಲಿಕ್ ಅವರು ಆ ನಿರ್ಣಯವು ಏಕಪಕ್ಷೀಯವಾಗಿರುವುದಲ್ಲದೆ ಭಾರತ ಮತ್ತು ಪಾಕಿಸ್ತಾನಗಳನ್ನು ಒಂದೇ ಮಟ್ಟದಲ್ಲಿ ಪರಿಗಣಿಸುವುದು ಸರಿಯಲ್ಲವೆಂದು ಆಪಾದಿಸಿದರು. ಅಮೇರಿಕದ ನಿರ್ಣಯದ ಮೇಲಿನ ಮತದಾನವನ್ನು ಇಪ್ಪತ್ನಾಲ್ಕು ಘಂಟೆಗಳವರೆಗೆ ಮುಂದೂಡ ಬೇಕೆಂದು ಮಲ್ಲಿಕ್ ಅವರು ಮಂಡಿಸಿದ ಸಲಹೆಯನ್ನು ಭದ್ರತಾ ಮಂಡಳಿಯು ತಿರಸ್ಕರಿಸಿದುದರಿಂದಾಗಿ ಆ ಕ್ಷಣವೇ ರಷ್ಯಾ 'ವೀಟೊ' ಚಲಾಯಿಸಿತು. ಈ ವೀಟೊ ಚಲಾವಣೆಯಿಂದ ಕದನ ವಿರಾಮ ಮತ್ತು ಭಾರತ-ಪಾಕಿಸ್ತಾನಗಳ ಸೇನೆಗಳ ವಾಪಸಾತಿಗೆ ಭದ್ರತಾ ಮಂಡಳಿ ಕರೆ ನೀಡದಂತೆ ಪ್ರತಿಬಂಧಿಸಿದಂತಾಯಿತು.

"ಭಾರತ–ಪಾಕ್‌ಗಳ ನಡುವಣ ಬಿಕ್ಕಟ್ಟು ಉಂಟಾಗಿರುವುದು ಏಕೆ ? ಮತ್ತು ಹೇಗೆಂಬುದನ್ನು ವಿಮರ್ಶಿಸಬೇಕು. ಪೂರ್ವ ಬಂಗಾಳದಲ್ಲಿ ಪಾಕ್ ಮಿಲಿಟರಿ ನಡೆಸಿದ ಅಮಾನುಷ ನರಹತ್ಯೆ ಹಾಗೂ ದುಷ್ಕೃತ್ಯಗಳ ಫಲವಾಗಿ ಲಕ್ಷಾಂತರ ಬಂಗಾಳಿಗಳು ಭಾರತಕ್ಕೆ ವಲಸೆ ಬಂದರು. ಅವರು ಸುರಕ್ಷಿತವಾಗಿ ಹಿಂದಿರುಗಲು ಯೋಗ್ಯ ವಾತಾವರಣವನ್ನು ಕಲ್ಪಿಸಬೇಕು. ಈ ತೆರನಾದ ದುಃಸ್ಥಿತಿ ಉಂಟಾಗಲು ಪಾಕಿಸ್ತಾನವೇ ಕಾರಣ." ಎಂದು ಮಲ್ಲಿಕ್‌ರವರು ವಾದಿಸಿದರು.

ಇದಕ್ಕೆ ಪ್ರತಿಯಾಗಿ ನಿರ್ಣಯವನ್ನು ಕುರಿತಾದ ಚರ್ಚೆಯಲ್ಲಿ ಮೊದಲು ಮಾತನಾಡಿದ ಪಾಕ್ ರಾಯಭಾರಿ ಆಗಾಷಾಹಿ ಅವರು, ಭಾರತವೇ ಪಾಕಿಸ್ತಾನದ ಮೇಲೆ ದುರಾಕ್ರಮಣ ನಡೆಸಿದೆಯೆಂದು ದೂರಿದರು.

ನಿರ್ಣಯವನ್ನು ಮಂಡಿಸಿದ್ದ ಅಮೆರಿಕದ ರಾಯಭಾರಿ ಜಾರ್ಜ್ ಬುಷ್ ಅವರು "ಇಡೀ ವಿಶ್ವವೇ ಭದ್ರತಾ ಮಂಡಲಿಯ ಕ್ರಮದ ಬಗ್ಗೆ ಅರಿಯಲು ಕಾತುರವಾಗಿದೆ. ಪರಿಸ್ಥಿತಿ ಹೇಗೇ ಇರಲಿ: ಕದನ ವಿರಾಮ ಹಾಗೂ ಪಡೆಗಳ ವಾಪಸಾತಿಗೆ ಕರೆ ನೀಡಲೇಬೇಕು." ಎಂದು ವಾದಿಸಿದರು. ಒಂದುವೇಳೆ ಈ ದಿಶೆಯಲ್ಲಿ ಭದ್ರತಾ ಮಂಡಳಿ ವಿಫಲಗೊಂಡಿದ್ದೇ ಆದರೆ ಅಪಹಾಸ್ಯಕ್ಕೆ ಗುರಿಯಾಗುವುದೆಂದೂ ಅವರು ಹೇಳಿದರು.

ಪಾಕ್ ಆಪಾದನೆಗೆ ಪ್ರತ್ಯುತ್ತರವಿತ್ತ ವಿಶ್ವಸಂಸ್ಥೆಯ ಭಾರತದ ಖಾಯಂ ಪ್ರತಿನಿಧಿ ಶ್ರೀ ಸಮರಸೇನ್ ಅವರು—"೧೯೭೧ರ ನವೆಂಬರ್ ೨೧ರ ನಂತರದ ಘಟನೆಗಳನ್ನೇ ಪಾಕಿಸ್ತಾನವು ಹೇಳುತ್ತಿದೆ. ಅದಕ್ಕೆ ಮುಂಚಿನ ಕರಾಳ ಘಟನೆಗಳನ್ನು ಮರೆಮಾಚುತ್ತಿರುವುದೇಕೆ ?" ಎಂದು ಪ್ರಶ್ನಿಸಿ, "ಬಾಂಗ್ಲಾದೇಶದ ಚುನಾಯಿತ ಪ್ರತಿದಿನಿಧಿಗಳಿಗೆ ಸರ್ಕಾರವನ್ನು ರಚಿಸುವ ಅವಕಾಶ ನೀಡಿದ್ದರೆ ಈ ಪರಿಸ್ಥಿತಿಯೇ ಉದ್ಭವಿಸುತ್ತಿರಲಿಲ್ಲ. ಬಾಂಗ್ಲಾದೇಶದ ಪ್ರತಿನಿಧಿಯೊಬ್ಬರು ಭದ್ರತಾ ಸಮಿತಿಯ ಚರ್ಚೆಯುಲ್ಲಿ ಭಾಗವಹಿಸದೇ ಹೋದರೆ ಭದ್ರತಾ ಸಮಿತಿಗೆ ಬಾಂಗ್ಲಾದೇಶದ ಸಮಸ್ಯೆಯ ಸಮಗ್ರ ಅರಿವು ಉಂಟಾಗಲಾರದು. ಆದ್ದರಿಂದ ಬಾಂಗ್ಲಾ ಪ್ರತಿನಿಧಿ ಭದ್ರತಾ ಸಮಿತಿಯಲ್ಲಿ ಭಾಗವಹಿಸುವುದು ಅನಿವಾರ್ಯವೆಂದೇ ಭಾರತದ ಅಭಿಪ್ರಾಯ. ಮುಜೀಬ್‌ರವರ ಪಕ್ಷ ಕಳೆದ ಚುನಾವಣೆಯಲ್ಲಿ ೧೬೭ ಸ್ಥಾನಗಳನ್ನು ಪಡೆದುಕೊಂಡಿತು. ಆದರೇನು ? ಪಕ್ಷದ ಮುಖಂಡ ಮುಜೀಬ್‌ರವರು ಸೆರೆಮನೆಯಲ್ಲಿ ಕೊಳೆಯಬೇಕಾಗಿಬಂದಿದೆ. ಏಳೂವರೆ ಕೋಟಿ ಜನರನ್ನು ಕೇವಲ ಬಲ ಪ್ರಯೋಗದಿಂದ ಹತ್ತಿಕ್ಕುವುದು ಅಸಾಧ್ಯ.

"ಬಾಂಗ್ಲಾದೇಶದ ಪ್ರಜೆಗಳನ್ನು ಕೊಲ್ಲಲು ಮತ್ತು ಮಹಿಳೆಯರ ಹಾಗೂ ಯುವತಿಯರ ಮೇಲೆ ಅತ್ಯಾಚಾರ ನಡೆಸಲು ಪಾಕ್ ಸೈನಿಕರಿಗೆ ಇನ್ನೂ ಹೆಚ್ಚಿನ ಆಸ್ಪದ ನೀಡಲು ಭಾರತವು ಕದನ ವಿರಾಮವನ್ನು ಘೋಷಿಸಬೇಕೇ ? ಕದನ ವಿರಾಮದ ಅವಶ್ಯಕತೆ ಒದಗಿರುವುದು ಭಾರತ–ಪಾಕಿಸ್ತಾನಗಳಿಗಲ್ಲ. ಪೂರ್ವ ಬಂಗಾಲ ಮತ್ತು ಪಶ್ಚಿಮ ಪಾಕಿಸ್ತಾನಗಳ ನಡುವೆ. ಪೂರ್ವ ಬಂಗಾಳದ ಬಗ್ಗೆ ಹೊತ್ತಿರುವ

ಜವಾಬ್ದಾರಿಯಿಂದ ಭಾರತವು ಎಂದಿಗೂ ನುಣುಚಿಕೊಳ್ಳದು. ಪೂರ್ವ ಬಂಗಾಳದಲ್ಲಿ ನರಹತ್ಯೆ ಮುಂದುವರೆಯಲು ಆಸ್ಪದ ನೀಡುವ ಯಾವುದೇ ನಿರ್ಣಯಕ್ಕೆ ಭಾರತ ಬದ್ಧವಾಗುವುದಿಲ್ಲ" ಎಂದು ಭಾರತದ ನಿಲುವನ್ನು ಸ್ಪಷ್ಟಪಡಿಸಿದರು.

ಭಾರತ ಮತ್ತು ಪಾಕಿಸ್ತಾನದ ಕದನ ನಿಲುಗಡೆಯನ್ನು ಕುರಿತು ವಿಶ್ವರಾಷ್ಟ್ರ ಸಂಸ್ಥೆಯು ಡಿಸೆಂಬರ್ ಆರರಂದು ಮಂಡಿಸಿದ ಮನವಿಯನ್ನು ತಡೆಗಟ್ಟಲು ರಷ್ಯವು ಪುನಃ ವೀಟೋ ಚಲಾಯಿಸಿತು. 'ಪೂರ್ವ ಬಂಗಾಳದ ರಾಜಕೀಯ ಇತ್ಯರ್ಥವಾದರೆ ಅದರಿಂದ ಕದನ ನಿಲುಗಡೆ ತಾನಾಗಿಯೇ ಆದಂತೆ'—ಎಂದು ರಷ್ಯ ನೀಡಿದ ಸಲಹೆ ತಿರಸ್ಕೃತವಾಯಿತು. ರಷ್ಯದ ಪರವಾಗಿ ಪೋಲೆಂಡ್ ಮಾತ್ರ ಮತ ನೀಡಿತು. ಇತರ ಹನ್ನೆರಡು ರಾಷ್ಟ್ರಗಳು ತಟಸ್ಥವಾಗಿದ್ದವು. ಚೀಣವು ರಷ್ಯದ ಸಲಹೆಯ ವಿರುದ್ಧ ಮತ ಚಲಾಯಿಸಿತಲ್ಲದೆ, ಭಾರತ-ಪಾಕ್ ಉಪಖಂಡದಲ್ಲಿ ಕದನದ ಪರಿಸ್ಥಿತಿಗೆ ಭಾರತವೇ ಕಾರಣವೆಂದು ಖಂಡಿಸಿ ತಾನೂ ಒಂದು ನಿರ್ಣಯವನ್ನು ಮಂಡಿಸಿತು. ಆದರೆ ಪೀಕಿಂಗ್ ಪ್ರತಿನಿಧಿಯ ಕೋರಿಕೆಯ ಮೇರೆಗೆ ಆ ನಿರ್ಣಯವನ್ನು ಮತ ನಿರ್ಧಾರಕ್ಕೆ ಹಾಕಲಿಲ್ಲ.

ಎರಡು ಬಾರಿ ರಷ್ಯ ವೀಟೋ ಚಲಾಯಿಸಿದುದರ ಪರಿಣಾಮವಾಗಿ ಭದ್ರತಾ ಸಮಿತಿಯಲ್ಲಿ ಅಪಜಯ ಪಡೆದ ನಂತರ ಭಾರತ-ಪಾಕ್ ಸಮರ ಸಮಸ್ಯೆಯನ್ನು ಬಗೆಹರಿಸಲು ಸಕಲ ಸದಸ್ಯರ ಸಭೆ (General Assembly) ಸಿದ್ಧವಾಯಿತು. ಈ ಸಭೆಯು ಕೈಗೊಳ್ಳುವ ನಿರ್ಣಯವು ಕೇವಲ ಶಿಫಾರಸು ಮಾಡುವಂಥದ್ದಾಗಿರುವುದೇ ಹೊರತು ಆಜ್ಞೆ ಮಾಡುವಂಥದ್ದಾಗಿರುವುದಿಲ್ಲ. ಅಮೆರಿಕ, ಚೀಣ, ದಕ್ಷಿಣ ರೋಡಿಷಿಯ, ಇಸ್ರೇಲ್ ಮೊದಲಾದ ರಾಷ್ಟ್ರಗಳು ಬೆಂಬಲ ನೀಡಿದ್ದ ನಿರ್ಣಯವೊಂದನ್ನು ಈ ಸಭೆಯು ಏಳು ಘಂಟೆಗಳ ಅವಧಿಯೊಳಗಾಗಿ ಅತಿ ಶೀಘ್ರವಾಗಿ ಅಂಗೀಕರಿಸಿತು. ಈ ನಿರ್ಣಯದ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಭದ್ರತಾ ಸಮಿತಿಗೇ ಆದೇಶವಿತ್ತು ಈ ಸಭೆ ತನ್ನ ಕರ್ತವ್ಯವನ್ನು ಮುಗಿಸಿತು. ಇಷ್ಟಲ್ಲದೆ ಮತ್ತೇನನ್ನು ಮಾಡಲೂ ಅದು ಅಸಮರ್ಥವಾಗಿತ್ತು.

ಮೇಲ್ಕಂಡ ಸಕಲ ಸದಸ್ಯರ ಸಭೆಯಲ್ಲಿ ನಡೆದ ಏಳು ಘಂಟೆಗಳ ಚರ್ಚೆಯಲ್ಲಿ ರಷ್ಯ ಮೊದಲಿಗಿಂತ ಹೆಚ್ಚಾಗಿ ಭಾರತಕ್ಕೆ ಬೆಂಬಲ ನೀಡಿತು.

* * * *

ಭಾರತದಲ್ಲಿ ಕದನ ವಿರಾಮಕ್ಕೆ ವಿಶ್ವಸಂಸ್ಥೆಯು ಕರೆಕೊಡಬೇಕೆಂದು ಅಮೆರಿಕವು ವಿಶ್ವಸಂಸ್ಥೆಯಲ್ಲಿ ಡಿಸೆಂಬರ್ ೧೪ರಂದು ಪುನಃ ಒಂದು ನಿರ್ಣಯವನ್ನು ಮಂಡಿಸಿತು. ರಷ್ಯ ವೀಟೋ ಚಲಾಯಿಸಿ ಆ ನಿರ್ಣಯವನ್ನು ಮತ್ತೆ ವಿಫಲಗೊಳಿಸಿತು.

ಇದೇ ಸಮಯದಲ್ಲಿ ಯುದ್ಧವನ್ನು ಅಂತ್ಯಗೊಳಿಸುವ ಬಗ್ಗೆ ಇಟಲಿ ಮತ್ತು ಜಪಾನ್ ಸಂಯುಕ್ತವಾಗಿ ನಿರ್ಣಯವೊಂದನ್ನು ಮಂಡಿಸಿದುವು. ಈ ನಿರ್ಣಯ

ವನ್ನು ಕುರಿತು ಸಾಕಷ್ಟು ಚರ್ಚೆಗಳು ನಡೆದುವು. ರಷ್ಯದ ಪ್ರತಿನಿಧಿಯಾದ ಜಾಕಬ್ ಮಲ್ಲಿಕ್ ಅವರು "ಅಮೆರಿಕದ ನಿರ್ಣಯ ಏಕಪಕ್ಷೀಯವಾಗಿದೆ. ಪೂರ್ವಬಂಗಾಳದ ಜನತೆಯ ಆಶೋತ್ತರಗಳನ್ನು ಅದು ಗಣನೆಗೆ ತೆಗೆದುಕೊಂಡಿಲ್ಲವಾದ್ದರಿಂದ ಅದು ಮಂಡಿಸಿರುವ ನಿರ್ಣಯವನ್ನು ಮನ್ನಣೆ ಮಾಡುವಂತಿಲ್ಲ. ಅಮೆರಿಕ ಸರ್ಕಾರವು ಬೆಂಕಿಗೆ ತುಪ್ಪ ಸುರಿಯುತ್ತಿದೆ. ಚೀಣವಾದರೋ ಏಷ್ಯನ್ನರ ಮೇಲೆ ಏಷ್ಯನ್ನರನ್ನೇ ಎತ್ತಿ ಕಟ್ಟುತ್ತಿದೆ" ಎಂದು ವಾದಿಸಿ ಆಪಾದಿಸಿದರು.

ಚೀಣದ ಪ್ರತಿನಿಧಿ—"ಬಾಂಗ್ಲಾದೇಶವು ಭಾರತ ಮತ್ತು ರಷ್ಯಗಳ ಕೈಗೊಂಬೆಯಾಗಿದೆ" ಎಂದು ದೂರಿದರು. ಈ ರೀತಿ ವಾದ ವಿವಾದಗಳು ನಡೆದ ನಂತರ ಸಮಿತಿಯ ಅಧ್ಯಕ್ಷರು–"ಬಾಂಗ್ಲಾದೇಶವೆಂಬ ನೂತನ ರಾಷ್ಟ್ರ ಅಸ್ತಿತ್ವದಲ್ಲಿದೆಯೆಂಬ ಬಗ್ಗೆ ನಮಗೆ ಮನವರಿಕೆಯಾಗಿಲ್ಲ. ಅದರ ಪ್ರತಿನಿಧಿ ಸಮಿತಿಯ ಮುಂದೆ ಬರಲು ಅವಕಾಶ ನೀಡುವುದಿಲ್ಲ." ಎಂದು ಹೇಳಿಕೆಯಿತ್ತರು.

ಇಷ್ಟೆಲ್ಲ ಚರ್ಚೆಗಳು ನಡೆದ ನಂತರ ಭಾರತದ ವಿದೇಶಾಂಗ ಸಚಿವರಾದ ಶ್ರೀ ಸ್ವರಣ್‌ಸಿಂಗ್ ಅವರು ಪಾಕ್ ಪ್ರತಿನಿಧಿ ಶ್ರೀ ಭುಟ್ಟೋ ಅವರ ಭಾಷಣಕ್ಕೆ ಉತ್ತರವಿತ್ತರು.

"ಶಾಂತಿ ಅಥವಾ ವಿವೇಕದ ಮಾರ್ಗದತ್ತ ಪಾಕ್ ಅಧ್ಯಕ್ಷ ಯಾಹ್ಯಾಖಾನರ ಮನವೊಲಿಸುವ ದಿಶೆಯಲ್ಲಿ ವಿಫಲವಾಗಿರುವುದಕ್ಕೆ ಭಾರತವನ್ನು ದೂಷಿಸುವುದು ವಿಚಿತ್ರವಾಗಿದೆ. ಭಾರತದ ವಿರುದ್ಧ ಯುದ್ಧ ಘೋಷಣೆ ಮತ್ತು ಭಾರತ ಭೂ ಮತ್ತು ವಾಯು ಪ್ರದೇಶಗಳ ಮೇಲೆ ಆಕ್ರಮಣ ನಡೆಸಿರುವ ಪಾಕಿಸ್ತಾನದ ಉದ್ದೇಶ ವೇನು? ಇಂದಿನ ಪರಿಸ್ಥಿತಿಗೆ ಪಾಕಿಸ್ತಾನವೇ ಪೂರ್ಣ ಹೊಣೆಯಾಗಿರುವಾಗ ಭಾರತದ ಮೇಲೇ ಅಮೆರಿಕವು ದೋಷಾರೋಪಣೆ ಮಾಡುತ್ತಿರುವುದನ್ನು ಕಂಡು ನಮಗೆ ವಿಸ್ಮಯವುಂಟಾಗಿದೆ. ಬಾಂಗ್ಲಾದೇಶದ ಜನತೆಯ ಅಭಿಪ್ರಾಯ ವ್ಯಕ್ತಪಡಿಸುವ ಹಕ್ಕನ್ನು ಕಡೆಗಣಿಸುವ ಮುನ್ನ ಕದನ ವಿರಾಮ ಒಪ್ಪಂದಕ್ಕೆ ಬಾಂಗ್ಲಾದೇಶವನ್ನು ಒಂದು ಪಕ್ಷವನ್ನಾಗಿ ಮಾಡದಿದ್ದರೆ ಯಾವ ಪರಿಹಾರವೂ ಅಪೇಕ್ಷಿತ ಫಲವನ್ನು ನೀಡಲಾರದು" ಎಂದು ಸ್ವರಣ್‌ಸಿಂಗ್ ಹೇಳಿದರು.

ಆಗ ಪಾಕ್ ಪ್ರತಿನಿಧಿ ಶ್ರೀ ಭುಟ್ಟೋ ಅವರು ಮಾತನಾಡಿ "ನಿರಾಶ್ರಿತರ ಪುನರ್ವಸತಿಗಾಗಿ ಪಾಕಿಸ್ತಾನದ ಮೇಲೆ ಆಕ್ರಮಣ ನಡೆಸುವ ಭಾರತದ ಹಕ್ಕನ್ನು ಭಾರತದ ವಿದೇಶಾಂಗ ಸಚಿವರು ಪ್ರತಿಪಾದಿಸುತ್ತಾರೆ. ಇದು ಸರಿಯಲ್ಲ. 'ಮುಕ್ತಿ ವಾಹಿನಿ' ಎಂಬುದು ಭಾರತದ ಸೇನೆಯೇ ಆಗಿದೆ. ಈ ಮುಕ್ತಿವಾಹಿನಿಯ ಪಡೆಗಳಿಗೆ ಸೇರಲೇಬೇಕೆಂದು ಆ ನಿರಾಶ್ರಿತರಿಗೆ ಸೂಚನೆ ನೀಡಲಾಗಿದೆ. ಒಂದು ವೇಳೆ ಅವರು ಸೇರದಿದ್ದರೆ ಅವರಿಗೆ ಉಪವಾಸವೇ ಗತಿ. ಇದು ಭಾರತದ ನೀತಿ." ಎಂದು ಸುಳ್ಳಿನ ಸರಪಳಿಯನ್ನೇ ಪೋಣಿಸಿದರು. ಇಟಲಿ ಮತ್ತು ಜಪಾನ್‌ಗಳು ಭದ್ರತಾ ಸಮಿತಿಯಲ್ಲಿ ಮಂಡಿಸಿದ ನಿರ್ಣಯವನ್ನು ಭುಟ್ಟೋರವರು ತಿರಸ್ಕರಿಸಿದರು.

ಯುದ್ಧ ಮುಗಿದಮೇಲೆ

ಕೇವಲ ಹದಿನಾಲ್ಕು ದಿನಗಳ ಈ ಸಮರ ಕೊನೆಗೊಂಡು ಬಾಂಗ್ಲಾದೇಶ ಸ್ವತಂತ್ರವಾಯಿತು. ಇದು ಈ ಶತಮಾನದ ಒಂದು ರೋಮಾಂಚಕಾರಿ ಘಟನೆಯೆಂದೇ ಹೇಳಬಹುದು.

ಭಾರತಕ್ಕೆ ರಾಜ್ಯವಿಸ್ತರಣಾ ಆಕಾಂಕ್ಷೆ ಎಂದಿಗೂ ಇರಲಿಲ್ಲ. ಒಂದು ಉದ್ದೇಶ ಸಾಧನೆಗಾಗಿ ಮಾತ್ರ ಅದು ಹೋರಾಟ ನಡೆಸಬೇಕಾಯಿತು. ಆ ಉದ್ದೇಶ ಫಲಿಸಿತು. ಢಾಕ್ಕಾದ ಪತನದೊಂದಿಗೆ ಪಾಕ್‌ಸೇನೆಗಳ ಶರಣಾಗತಿಯೂ ಆಯಿತು. ಲಕ್ಷಾಂತರ ಜನರ ಹತ್ಯೆಯನ್ನು ತಡೆಗಟ್ಟುವ ದಿಶೆಯಲ್ಲಿ ಭಾರತವು ಯಶಸ್ವಿಯಾಯಿತು.

ಯುದ್ಧ ಮುಗಿದ ಮೇಲೆ ಭಾರತ, ಪಾಕಿಸ್ತಾನ ಮತ್ತು ಬಾಂಗ್ಲಾದೇಶಗಳಲ್ಲಿ ಕೆಲವು ಮಹತ್ವದ ಘಟನೆಗಳು ನಡೆದುವು. ಭಾರತದಲ್ಲಿ ನಡೆದ ಮುಖ್ಯ ಘಟನೆಗಳೆಂದರೆ-ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರಿಗೆ ಲಭಿಸಿದ ಸನ್ಮಾನ, ಪಶ್ಚಿಮದ ಆಕ್ರಮಿತ ಪ್ರದೇಶಗಳಲ್ಲಿ ಸೇನಾಡಳಿತ, ಉಭಯ ರಾಯಭಾರಿಗಳ ಆಗಮನ ಮತ್ತು ನಿರ್ಗಮನ ಇವೆ ಮೊದಲಾದವು.

ಇತಿಹಾಸವೊಂದೇ ಅಲ್ಲದೆ ಭೌಗೋಳಿಕ ಬದಲಾವಣೆಗೂ ಕಾರಣರಾಗಿ ವಿಶ್ವಖ್ಯಾತಿ ಪಡೆದ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರಿಗೆ ರಾಷ್ಟ್ರ ಸರ್ವೋತ್ತಮ ಗೌರವ ಪ್ರಶಸ್ತಿಯಾದ "ಭಾರತ ರತ್ನ" ಪ್ರಶಸ್ತಿಯನ್ನಿತ್ತು ಸನ್ಮಾನಿಸಲಾಯಿತು. ಈ ಪ್ರಶಸ್ತಿ ಪಡೆದವರಲ್ಲಿ ಶ್ರೀಮತಿ ಗಾಂಧಿಯವರು ಹದಿನೈದನೆಯವರು.

ವಿಶ್ವನಾಯಕಿ, ಪ್ರಬುದ್ಧ ರಾಜಕಾರಣಿ, ದೂರದರ್ಶಿ, ವೀರರಮಣಿ ಇತ್ಯಾದಿ ಬಿರುದುಗಳೂ ಪ್ರಧಾನಿಯವರಿಗೆ ಲಭಿಸಿದುವು. ಪ್ರಧಾನಿಯವರ ದಿಗ್ವಿಜಯದ ನೆನಪಿಗಾಗಿ ಮುಂಬಯಿಯ 'ಅಲೆಕ್ಸಾಂಡ್ರಾ' ಬಂದರು ಕಟ್ಟೆಯ ಹೆಸರನ್ನು 'ಇಂದಿರಾಡಾಕ್ಸ್' ಎಂದು ಬದಲಾಯಿಸಲಾಯಿತು.

ಭಾರತವು ಪಶ್ಚಿಮ ವಲಯದಲ್ಲಿ ಆಕ್ರಮಿಸಿಕೊಂಡ ಪ್ರದೇಶಗಳಲ್ಲಿ ರಾಜಸ್ಥಾನ್ ಸರ್ಕಾರವು ನಾಗರಿಕ ಆಡಳಿತವನ್ನು ಜಾರಿಗೆ ತಂದಿತು. ಸಿಂಧ್ ಪ್ರದೇಶದಲ್ಲಿ ಆಕ್ರಮಿಸಿಕೊಳ್ಳಲಾಗಿದ್ದ ೨೦೪೦ ಚ. ಕಿ. ಮೀ. ಪ್ರದೇಶದಲ್ಲಿ ಸೇನೆಯ ಮೂಲಕ ಆಡಳಿತ ಜಾರಿಗೆ ಬಂದಿತು.

ಭಾರತ-ಪಾಕ್ ಸಮರ ಆರಂಭವಾದಂದಿನಿಂದ ಉಭಯ ರಾಷ್ಟ್ರಗಳ ರಾಯಭಾರಿಗಳ ಆಗಮನ-ನಿರ್ಗಮನಗಳ ಪ್ರಶ್ನೆ ಇತ್ಯರ್ಥವಾಗದೆ ಹಾಗೆಯೇ ಉಳಿದಿತ್ತು. ಸಮರ ನಿಂತೊಡನೆ ಸ್ವಿಟ್ಜರ್ಲೆಂಡ್ ರಾಷ್ಟ್ರವು ಮಧ್ಯಸ್ತಿಕೆ ವಹಿಸಿ ಈ ಕಾರ್ಯವನ್ನು ಕೈಗೂಡಿಸಿತು. ಪಾಕಿಸ್ತಾನದಲ್ಲಿ ಭಾರತದ ರಾಯಭಾರಿಗಳಾಗಿದ್ದ ಶ್ರೀ ಜಿ. ಕೆ. ಅಟಲ್, ಉಪರಾಯಭಾರಿ ಶ್ರೀ ಎ. ಎಸ್. ಜೆಟ್ ಮತ್ತು ಇತರ

ಸಿಬ್ಬಂದಿ ವರ್ಗದವರನ್ನು ಸ್ವಿಸ್ ವಿಮಾನವೊಂದು ಇಸ್ಲಾಮಾಬಾದ್‌ನಿಂದ ದೆಹಲಿಗೆ ಕರೆತಂದಿತು. ಹಾಗೆಯೇ ದೆಹಲಿಯಲ್ಲಿ ಪಾಕ್ ರಾಯಭಾರಿಗಳಾಗಿದ್ದ ಶ್ರೀ ಸಜ್ಜದ್ ಹೈದರ್ ಮತ್ತು ಸುಮಾರು ೧೩೫ ಮಂದಿ ಸಿಬ್ಬಂದಿ ವರ್ಗದವರನ್ನು ಸ್ವಿಸ್ ವಿಮಾನವೊಂದು ಇಸ್ಲಾಮಾಬಾದಿಗೆ ಕರೆದೊಯ್ದಿತು.

ಕೇವಲ ಹದಿನಾಲ್ಕು ದಿನಗಳ ಅವಧಿಯಲ್ಲಿ ಪಾಕ್ ಸೇನೆಯನ್ನು ಪರಾಭವಗೊಳಿಸಿದುದು ಭಾರತೀಯ ಸೈನ್ಯದ ಸಂಖ್ಯಾಬಲವಲ್ಲ. ಸೇನಾಧಿಕಾರಿಗಳ ಚತುರತೆ. ಭಾರತದ ದಂಡನಾಯಕರು ಕೈಗೊಂಡ ಮಿಂಚಿನ ವೇಗದ ಕ್ರಮಗಳು ಮತ್ತು ಈ ಕ್ರಮಗಳಿಗೆ ಪೂರಕವಾಗಿ ಪ್ರಧಾನಿಯವರು ರಾಜಕೀಯವಾಗಿ ಕೈಗೊಂಡ ದೃಢ ನಿರ್ಧಾರಗಳೇ ಈ ಮಹತ್ಸಾಧನೆಯ ಪ್ರತೀಕವಾಗಿವೆ.

"ಭಾರತ ಮಾತೆಯೆ, ಭಾರತ ಮಾತೆಯೆ, ಎಂದಿಗೆ ನೀ ತಲೆಯೆತ್ತುವೆ?" ಎಂಬ 'ಶ್ರೀ'ಯವರ ಪ್ರಶ್ನೆಗೆ ಇಂದು ಸೂಕ್ತ ಉತ್ತರ ದೊರೆತಿದೆ. ಬಾಂಗ್ಲಾ ಯಕ್ಷಪ್ರಶ್ನೆಗೆ ಉತ್ತರ ನೀಡುವ ಮೂಲಕ, ಪಾಕಿಸ್ತಾನ ತಂದೊಡ್ಡಿದ ಸಮರದಲ್ಲಿ ಜಯಭೇರಿ ಹೊಡೆಯುವುದರ ಮೂಲಕ ಭಾರತ ಹೊಸದೊಂದು ಇತಿಹಾಸವನ್ನೇ ನಿರ್ಮಿಸಿ ಜಗತ್ತಿನ ರಾಷ್ಟ್ರಗಳ ಸಾಲಿನಲ್ಲಿ ಹೆಮ್ಮೆಯಿಂದ ತಲೆಯೆತ್ತಿ ನಿಂತಿದೆ. ಸ್ವಾತಂತ್ರ್ಯವನ್ನು ಬಯಸುತ್ತಿದ್ದ ಒಂದು ಜನಾಂಗಕ್ಕೆ ಅದರ ಮೇಲೆ ದಬ್ಬಾಳಿಕೆ ನಡೆಸುತ್ತಿದ್ದವರಿಂದ ವಿಮೋಚನೆಯನ್ನು ತಂದುಕೊಟ್ಟ ಸಾಹಸ; ದುಷ್ಟತನದ ನಿವಾರಣೆಯ ಮಾರ್ಗದಲ್ಲಿ ಪಾಕಿಸ್ತಾನದ ಮೇಲಿನ ದಿಗ್ವಿಜಯ; ಅನ್ಯರ ಒಂದಂಗುಲ ನೆಲ ನಮಗೆ ಬೇಡ; ನಮ್ಮದೊಂದಂಗುಲ ನೆಲವನ್ನೂ ಬಿಟ್ಟುಕೊಡೆವು-ಎನ್ನುವ ನ್ಯಾಯಸಮ್ಮತ ಛಲದ ಮಾತನ್ನು ಕಾರ್ಯರೂಪದಲ್ಲಿ ಪ್ರತ್ಯಕ್ಷಗೊಳಿಸಿರುವ ನಿದರ್ಶನ; ಈ ಘಟನೆಗಳಿಂದ ಭಾರತವು ಕೇವಲ ಮಾತಲ್ಲ, ಕೃತಿಯಲ್ಲೂ ತಾನು ಸಮರ್ಥವೆಂಬುದನ್ನು ರುಜುವಾತು ಪಡಿಸಿದೆ.

* * *

ಪಾಕಿಸ್ತಾನದಲ್ಲಿ ಯುದ್ಧಾನಂತರ ನಡೆದ ಮೂರು ಮುಖ್ಯ ಘಟನೆಗಳೆಂದರೆ ಯಾಹ್ಯಾ ನಿರ್ಗಮನ, ಭುಟ್ಟೋ ಅಧ್ಯಕ್ಷಗಿರಿ ಮತ್ತು ಮುಜೀಬ್ ಬಿಡುಗಡೆ.

ಯುದ್ಧ ಮುಗಿದರೂ ಪಾಕಿಸ್ತಾನದಲ್ಲಿ ಶಾಂತಿ ನೆಲಸಲಿಲ್ಲ. ಈ ಸಮರದಲ್ಲಿ ಅನುಭವಿಸಿದ ಸೋಲಿನ ಜೊತೆಗೆ ಪಾಕಿಸ್ತಾನವು ಒಂದು ಭಾಗವನ್ನೇ ಕಳೆದುಕೊಳ್ಳಬೇಕಾದ ಪರಿಸ್ಥಿತಿ ಒದಗಿತು. ತತ್ಪರಿಣಾಮವಾಗಿ ಪಾಕ್ ಜನತೆಗೆ ಯಾಹ್ಯಾಖಾನರಲ್ಲಿ ವಿಶ್ವಾಸವೆಂಬುದು ಲವಲೇಶವೂ ಉಳಿಯಲಿಲ್ಲ. ಯಾಹ್ಯಾಖಾನರ ಆಡಳಿತದ ವಿರುದ್ಧ ಎಲ್ಲೆಲ್ಲಿಯೂ ಚಳುವಳಿ ಮತ್ತು ಪ್ರದರ್ಶನಗಳು ಆರಂಭವಾದುವು.

ಪ್ರತಿನಿಧಿ ಸರ್ಕಾರವೊಂದಕ್ಕೆ ಅಧಿಕಾರವನ್ನು ವಹಿಸಿಕೊಟ್ಟನಂತರ ಅಧ್ಯಕ್ಷಪದವಿಯಿಂದ ಕೆಳಗಿಳಿಯುವುದಾಗಿ ಯಾಹ್ಯಾಖಾನರು ಹಿಂದೆಯೇ ಪ್ರಕಟಿಸಿದ್ದರು. ಅವರ ಆ ಮಾತು ನಿಜವಾಗುವ ಕಾಲ ಸನ್ನಿಹಿತವಾಯಿತು. ಪ್ರಜೆಗಳ ಇಚ್ಛೆಗೆ

ವಿರೋಧವಾಗಿ ಅಧಿಕಾರದಲ್ಲಿರಲು ಸಾಧ್ಯವೇ? ಕಡೆಗೆ ಯಾಹ್ಯಾಖಾನರ ಅಧಿಕಾರ ತ್ಯಾಗ ಅನಿವಾರ್ಯವಾಯಿತು. ಪಾಕಿಸ್ತಾನದ ಜನತಾ ಪಕ್ಷದ ನಾಯಕ ಜುಲ್ಫಿಕರ್ ಆಲಿ ಭುಟ್ಟೋ ಅವರಿಗೆ ೧೯೭೧ರ ಡಿಸೆಂಬರ್ ೨೦ರಂದು ಅಧಿಕಾರವನ್ನು ಬಿಟ್ಟುಕೊಟ್ಟು ಯಾಹ್ಯಾಖಾನ್ ನಿರ್ಗಮಿಸಿದರು.

ಭುಟ್ಟೋರವರು ಅಧ್ಯಕ್ಷರಾದೊಡನೆ ಮಾಡಿದ ಮೊದಲನೆಯ ಕೆಲಸವೆಂದರೆ ಜ|| ಯಾಹ್ಯಾಖಾನರನ್ನು ನಿವೃತ್ತಿಗೊಳಿಸಿದುದು. ಇವರ ಸ್ಥಾನದಲ್ಲಿ ಲೆ|| ಜ|| ಹಸನ್ ಖಾನ್‌ರವರನ್ನು ನೇಮಿಸಿದರು. ಪಾಕಿಸ್ತಾನದ ಡೆಮೊಕ್ರಾಟಿಕ್ ಪಕ್ಷದ ಅಧ್ಯಕ್ಷರಾದ ನೂರುಲ್ ಅಮಿನ್‌ರವರನ್ನು ಭುಟ್ಟೋರವರು ಪಾಕ್ ಹೊಸ ಸರ್ಕಾರದ ಉಪಾಧ್ಯಕ್ಷರನ್ನಾಗಿ ನೇಮಕಮಾಡಿದರು.

ಯಾಹ್ಯಾಖಾನರು ಷೇಖ್ ಮುಜೀಬುರ್ ರೆಹ್ಮಾನ್ ಅವರನ್ನು ಬಂಧನದಲ್ಲಿಟ್ಟಿದ್ದುದು ಸರಿಯಷ್ಟೆ. ಹೊಸ ಅಧ್ಯಕ್ಷರಾದ ಭುಟ್ಟೋ ಮಾತುಕತೆ ನಡೆಸುವ ಸಲುವಾಗಿ ರಾವಲ್ಪಿಂಡಿಗೆ ಕರೆಸಿದರು. ಷೇಖ್‌ರವರಿಗೆ ಸೆರೆಮನೆವಾಸ ತಪ್ಪಿದರೂ ಗೃಹಬಂಧನ ತಪ್ಪಲಿಲ್ಲ. ಇದೇ ವೇಳೆಯಲ್ಲಿ ಅಮೆರಿಕದ ಟೈಮ್ಸ್ ಪತ್ರಿಕೆಯು— "ಯಾಹ್ಯಾಖಾನರು ಈಗ ಗೃಹಬಂಧನದಲ್ಲಿದ್ದಾರೆ" ಎಂಬ ಕುತೂಹಲಕಾರಿ ಸುದ್ದಿಯನ್ನು ಪ್ರಕಟಿಸಿತು.

ಏನೇ ಆಗಲಿ, ಕೊನೆಗೊಮ್ಮೆ ಮುಜೀಬುರ್‌ರವರ ಬಿಡುಗಡೆ ೧೯೭೨ರ ಜನವರಿ ಎಂಟರಂದು ಆಯಿತು. ಈ ಬಿಡುಗಡೆಯ ಸುದ್ದಿಯನ್ನು ಮೊತ್ತಮೊದಲು ಹೊರಗೆಡಹಿದುದು ಲಂಡನ್ನಿನ ಬಿ. ಬಿ. ಸಿ.

ಬಿಡುಗಡೆಯಾದ ಮುಜೀಬುರ್ ರೆಹ್ಮಾನ್ ಇತ್ತ ಬಾಂಗ್ಲಾಕ್ಕೆ ಬರಲಿಲ್ಲ. ಪಾಕ್ ಅಂತರರಾಷ್ಟ್ರೀಯ ವಿಮಾನ ಸಂಸ್ಥೆಯ ವಿಶೇಷ ವಿಮಾನವೊಂದರಲ್ಲಿ ರಾವಲ್ಪಿಂಡಿಯಿಂದ ಹೊರಟ ಅವರು ಲಂಡನ್‌ಗೆ ಹೋಗಿ ತಲುಪಿದರು. ವಿಮಾನ ನಿಲ್ದಾಣದಲ್ಲಿ ಮುಜೀಬುರ್‌ರವರನ್ನು ಬ್ರಿಟಿಷ್ ವಿದೇಶಾಂಗ ಕಛೇರಿಯ ಇಯಾನ್ ಸದರ್‌ಲ್ಯಾಂಡ್‌ರವರು ಸ್ವಾಗತಿಸಿದರು. ಯಾವ ಮುನ್ಸೂಚನೆಯೂ ಇಲ್ಲದೆ ಆಗಿದ್ದ ಅವರ ಬಿಡುಗಡೆ ಎಲ್ಲರನ್ನೂ ಚಕಿತಗೊಳಿಸಿತ್ತು.

ಭಾರತದ ಪ್ರಧಾನಿಯವರು ಮುಜೀಬುರ್‌ರವರ ಬಿಡುಗಡೆ ಸಂದರ್ಭದಲ್ಲಿ ಒಂದು ಸಂದೇಶವನ್ನು ಲಂಡನ್ನಿಗೇ ಕಳುಹಿಸಿದ್ದರು. ಬ್ರಿಟನ್ನಿನಲ್ಲಿರುವ ಭಾರತದ ರಾಯಭಾರಿ ಶ್ರೀ ಅಪ್ಪಾಪಂತ್ ಅವರು ಆ ಸಂದೇಶವನ್ನು ಮುಜೀಬುರ್‌ರವರಿಗೆ ತಲುಪಿಸಿದಾಗ ಅವರು ಆನಂದಬಾಷ್ಪಗಳನ್ನು ಸುರಿಸಿ–"ಆಕೆ ಮಹಾತಾಯಿ, ಮಹಾಮಾತೆ." ಎಂದು ಉದ್ಗರಿಸಿ ಭಾರತದ ಜನತೆಗೆ ತಮ್ಮ ಕೃತಜ್ಞತೆಗಳನ್ನರ್ಪಿಸಿದರು.

ಈ ಸಮಯದಲ್ಲಿ ಲಖನೌದಲ್ಲಿದ್ದ ಭಾರತದ ಪ್ರಧಾನಿಯವರು ಅಲ್ಲಿಂದಲೇ ಲಂಡನ್ನಿಗೆ ಟ್ರಂಕ್‌ಕಾಲ್ ಮಾಡಿ, ಮುಜೀಬುರ್‌ರವರೊಡನೆ ಟೆಲಿಫೋನ್‌ನಲ್ಲಿಯೇ ಮಾತನಾಡಿದರು. ಪರಸ್ಪರ ಯೋಗಕ್ಷೇಮವನ್ನು ವಿಚಾರಿಸಿ, ದೆಹಲಿಗೆ ಬರ

ಬೇಕೆಂದು ವಿಶ್ವಾಸದಿಂದ ಆಮಂತ್ರಣವಿತ್ತರು. ಈ ಆಹ್ವಾನದಂತೆ ಮುಜೀಬುರ್‌ರವರು ತಮ್ಮ ಸ್ವದೇಶಕ್ಕೆ ತೆರಳುವ ಹಾದಿಯಲ್ಲಿ ದೆಹಲಿಗೂ ಬಂದರು. ಭಾರತದ ರಾಷ್ಟ್ರಪತಿ, ಪ್ರಧಾನಿ ಮೊದಲ್ಗೊಂಡು ಅನೇಕ ಹಿರಿಯ ರಾಜಕಾರಣಿಗಳು ವಿಮಾನ ನಿಲ್ದಾಣದಲ್ಲಿ ಹಾಜರಿದ್ದು ವಂಗಬಂಧುವನ್ನು ಸ್ವಾಗತಿಸಿದರು. ಅಧಿಕಾರ, ಪದವಿಗಳೊಂದೂ ಇಲ್ಲದ, ಕೇವಲ ಜನನಾಯಕನೆಂಬ ಒಂದೇ ಅರ್ಹತೆಯಿದ್ದ ವಂಗಬಂಧುವಿಗೆ ಸಂಪ್ರದಾಯವನ್ನು ಬದಿಗಿಟ್ಟು ಭಾರತದ ರಾಷ್ಟ್ರಪತಿ ಮತ್ತು ಪ್ರಧಾನಿಗಳು ನೀಡಿದ ಹೃತ್ಪೂರ್ವಕ ಸ್ವಾಗತ ಹೃದಯಂಗಮವಾಗಿತ್ತು. ಭಾರತದ ಜನತೆಗೆ, ಪ್ರಧಾನಿಗೆ ಯಾವರೀತಿ ಕೃತಜ್ಞತೆಯನ್ನರ್ಪಿಸಬೇಕೆಂಬುದೇ ಮುಜೀಬುರ್‌ರವರಿಗೆ ಹೊಳೆಯದಾಯಿತು. ಏನು ಹೇಳಲು ಹೋದರೂ ಸಂತೋಷಾತಿರೇಕಗಳಿಂದ ಕಂಠ ಬಿಗಿಯುತ್ತಿತ್ತು. ಭಾರತದ ಹೃದಯಾಂತರಾಳದ ವಿಶ್ವಾಸದ ಹೊರೆಯನ್ನು ಹೊತ್ತು ಅವರು ಢಾಕ್ಕಾಗೆ ಪಯಣ ಬೆಳೆಸಿದರು.

ಢಾಕ್ಕಾದ ಜನತೆಯ ಸಂಭ್ರಮವೋ ಸಂಭ್ರಮ. ತಮ್ಮ ನಾಯಕನನ್ನು ಕಾಣಲು ಅಲ್ಲಿಯ ಜನರು ತುದಿಗಾಲಿನಲ್ಲಿ ಕಾದು ನಿಂತಿದ್ದರು. ಮುಜೀಬುರ್‌ರವರು ಢಾಕ್ಕಾದ ರೇಸ್‌ಕೋರ್ಸ್ ಮೈದಾನಕ್ಕೆ ಆಗಮಿಸಿ ವೇದಿಕೆಯ ಮೇಲೆ ನಿಂತು ನೆರೆದಿದ್ದ ಜನಸ್ತೋಮವನ್ನು ಕಂಡ ಆ ಕ್ಷಣಗಳು ಎಂಥ ಅಮೃತಘಳಿಗೆಗಳು ! ಆ ಜನರನ್ನು ಕಂಡೊಡನೆ ಭಾವಪರವಶರಾದ ಮುಜೀಬುರ್‌ರವರ ಗಂಟಲು ಕಟ್ಟಿತು. ಎಷ್ಟು ತಡೆದರೂ ಸಾಧ್ಯವಿಲ್ಲದೆ ಎಳೆಯಮಗುವಿನಂತೆ ಅತ್ತು ತಮ್ಮ ಹೃದಯವನ್ನು ಹಗುರ ಮಾಡಿಕೊಂಡರು.

ಮುಜೀಬುರ್‌ರವರು ತಮ್ಮ ಭಾಷಣದಲ್ಲಿ ಕವಿ ರವೀಂದ್ರರ ಗೀತೆಗಳನ್ನು ಹಾಡಿದರು. ಅವರು ಭಾವೋದ್ವೇಗದಿಂದ ಬಾಂಗ್ಲಾ ರಾಷ್ಟ್ರಗೀತೆಯಾದ ಅಮರ್ ಸೋನಾರ್ ಬಾಂಗ್ಲಾ ಗೀತೆಯನ್ನು ಹಾಡತೊಡಗಿದಾಗ ನೆರೆದಿದ್ದ ಜನರ ಮೈಮನಗಳು ಪುಲಕಿತಗೊಂಡುವು. ಭಾಷಣಕ್ಕೆ ಮುನ್ನ ಶಾಂತಿ ಮತ್ತು ಮೈತ್ರಿಗಳ ಸಂಕೇತವಾಗಿ ಪಾರಿವಾಳಗಳನ್ನು ಮುಗಿಲಿಗೆ ಹಾರಿಬಿಡಲಾಯಿತು. ಅಲಂಕೃತ ಟ್ರಕ್ ಒಂದರ ಮುಂಭಾಗದಲ್ಲಿ ಭಾರತದ ಪ್ರಧಾನಿ ಇಂದಿರಾಗಾಂಧಿಯವರ ಭಾವಚಿತ್ರವನ್ನಿಟ್ಟು ಢಾಕ್ಕಾ ನಗರದಲ್ಲೆಲ್ಲ ಮೆರವಣಿಗೆ ಮಾಡಲಾಯಿತು. "ಇಂದಿರಾಗಾಂಧಿ ಜಿಂದಾಬಾದ್" ಎಂಬ ಘೋಷಣೆ ಮುಗಿಲಿನಲ್ಲಿ ಪ್ರತಿಧ್ವನಿಸುತ್ತಿತ್ತು.

* * * *

ಎರಡು ವಾರಗಳ ಕಾಲ ಇಡೀ ವಿಶ್ವವನ್ನು ಕುತೂಹಲಾತಂಕಗಳಿಗೆ ಈಡು ಮಾಡಿದ್ದ ಭಾರತ–ಪಾಕ್ ಯುದ್ಧ ಡಿಸೆಂಬರ್ ೧೭ರಂದು ಮುಕ್ತಾಯವಾಯಿತಷ್ಟೆ. ಪಾಕ್ ಸೇನೆಗಳ ಶರಣಾಗತಿಯ ಸುದ್ದಿ ಬಾಂಗ್ಲಾದೇಶದಲ್ಲಿ ಕಾಳ್ಗಿಚ್ಚಿನಂತೆ ಹರಡಿ ಇಡೀ ರಾಷ್ಟ್ರ ಸಂತೋಷ ಸಂಭ್ರಮಗಳಲ್ಲಿ ತೇಲಾಡಿತು. ಇದ್ದಕ್ಕಿದ್ದಂತೆ ಪಾಕ್ ಧ್ವಜಗಳು ಕಣ್ಮರೆಯಾದವು. ಎಲ್ಲೆಡೆಯಲ್ಲಿಯೂ ಬಾಂಗ್ಲಾದೇಶ್ ಧ್ವಜಗಳೇ

ಕಂಗೊಳಿಸಿದುವು.

ಯುದ್ಧಾನಂತರ ಬಾಂಗ್ಲಾದೇಶದಲ್ಲಿ ಮೊತ್ತಮೊದಲು ನಡೆದ ಮಹತ್ವದ ಸಂಗತಿಯೆಂದರೆ ಬೇಗಂ ಮುಜೀಬುರ್‌ರವರ ಬಿಡುಗಡೆ. ಬಿಡುಗಡೆಯಾದೊಡನೆಯೇ ಬೇಗಂರವರು ತಮ್ಮ ನಿವಾಸದಿಂದ ಹೊರಬಂದರು. ಸ್ವತಂತ್ರ ಬಾಂಗ್ಲಾ ದೇಶದ ಬೆಳಕನ್ನು ಕಂಡು ಹಿಗ್ಗಿದರು. "ನಮಗೆ ಇದೊಂದು ಹೊಸ ಜೀವನ. ನಾವು ಇಷ್ಟು ಬೇಗ ಹೀಗೆ ಸ್ವತಂತ್ರರಾಗುವೆವೆಂಬ ಕಲ್ಪನೆಯೇ ನಮಗಿರಲಿಲ್ಲ. ಒಂಭತ್ತು ತಿಂಗಳ ನರಕಯಾತನೆಯ ನಂತರ ನಮಗೆ ವಿಮುಕ್ತಿ ದೊರಕಿತು. ನಮ್ಮನ್ನು ವಿಮುಕ್ತಿಗೊಳಿಸಿದ ಭಾರತದ ಪ್ರಧಾನಿ ಮತ್ತು ಜನತೆಗೆ ಕೃತಜ್ಞತೆಗಳನ್ನರ್ಪಿಸಲು ನನ್ನಲ್ಲಿ ಮಾತುಗಳೇ ಇಲ್ಲ." ಎಂದು ನುಡಿದರು.

ಬಿಡುಗಡೆ ಹೊಂದಿದ ಬೇಗಂರವರ ಪಾದಸ್ಪರ್ಶ ಮಾಡಲು ಹಲವು ಮಂದಿ ವಿಮೋಚನಾಯೋಧರು ಧನಮಂಡಿ ನಿವಾಸಕ್ಕೆ ಬಂದರು. ಪುನರ್ಮಿಲನದ ಆನಂದಾಶ್ರು ಚಿಮ್ಮಿದ ದೃಶ್ಯವಾಯಿತು ಧನಮಂಡಿ ನಿವಾಸ.

ಮುಜೀಬುರ್‌ರವರು ಒಂಭತ್ತು ತಿಂಗಳ ನಂತರ ಮಡದಿ, ಮಕ್ಕಳು, ವೃದ್ಧ ತಂದೆತಾಯಿಗಳನ್ನು ಭೇಟಿಯಾದ ಆ ಸಂದರ್ಭ, ಅದೊಂದು ಹೃದಯಸ್ಪರ್ಶಿ ಅನುಭವ: ವರ್ಣನೆಗೆ ನಿಲುಕದ ಸನ್ನಿವೇಶ.

* * * *

ಬಾಂಗ್ಲಾದಲ್ಲಿ ಯುದ್ಧಾನಂತರ ನಡೆದ ಮತ್ತೊಂದು ಘಟನೆ ಪಾಕ್ ಸೈನಿಕರ ಶಸ್ತ್ರತ್ಯಾಗ. ಪಾಕ್‌ಸೇನೆಯ ಸುಮಾರು ಒಂದು ಲಕ್ಷಮಂದಿ ಸೈನಿಕರು ಭಾರತೀಯ ಸೇನಾಧಿಕಾರಿ ಲೆ|| ಜ|| ಜಗತ್‌ಸಿಂಗ್ ಅರೋರಾ ಅವರ ಸಮ್ಮುಖದಲ್ಲಿ ತಮ್ಮ ಶಸ್ತ್ರಗಳನ್ನು ಕೆಳಗಿಟ್ಟು ಶರಣಾಗತರಾದರು. ಒಂದು ಕಡೆ ಪಾಕ್ ಭೂಸೇನೆ, ಇನ್ನೊಂದು ಕಡೆ ವಾಯುಸೇನೆ, ಮತ್ತೊಂದು ಕಡೆ ನೌಕಾಸೇನೆ- ಈ ಸೇನಾಸಮೂಹದ ಜೊತೆಯಲ್ಲಿ ಪಾಕ್‌ಸೇನೆಯ, ಮೇ|| ಜ|| ಷಂಷೇರ್ ಮತ್ತು ರಾವ್ ಫರ್ಮಾನ್ ಅಲಿ ಅವರೂ ಹಾಜರಾಗಿದ್ದರು.

ಶಸ್ತ್ರತ್ಯಾಗ ಮಾಡಿದ ಪಾಕ್‌ಸೇನಾ ಸಮೂಹದ ಭಾವಚಿತ್ರಗಳನ್ನು ತೆಗೆಯಲು ಪತ್ರಕರ್ತರು ಮುಂದಾದಾಗ ಪಾಕ್‌ಸೇನಾನಿಗಳು "ದಯವಿಟ್ಟು ನಮ್ಮ ಹಾಗೂ ನಮ್ಮ ಸಿಬ್ಬಂದಿಯವರ ಫೋಟೋಗಳನ್ನು ತೆಗೆಯಬೇಡಿ." ಎಂದು ಕಣ್ಣೀರಿಡುತ್ತ ಬೇಡಿಕೊಂಡರು.

* * * *

ಬಂಗಾಳಿಗಳ ಬಹಳ ವರ್ಷಗಳ ಬಯಕೆ ಈಡೇರಿ ಬಾಂಗ್ಲಾ ಸ್ವತಂತ್ರ ರಾಷ್ಟ್ರವಾಯಿತು. ಷೇಖ್ ಮುಜೀಬುರ್ ರೆಹಮಾನ್ ಅವರು ೧೯೭೨ರ ಜನವರಿ ೧೨ರಂದು ಮಧ್ಯಾಹ್ನ (ಭಾರತೀಯ ಕಾಲ ಮಾನ ೩. ೫೫ಕ್ಕೆ) ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಿದರು. ಅಬು ಸಯೀದ್ ಚೌಧುರಿಯವರು ಈ ಮುನ್ನವೇ

ಬಾಂಗ್ಲಾದೇಶದ ಅಧ್ಯಕ್ಷರಾಗಿ ಪ್ರಮಾಣವಚನ ಸ್ವೀಕರಿಸಿದ್ದರು.

ಮುಜೀಬುರ್ ಅವರ ಸಚಿವ ಸಂಪುಟ ಹನ್ನೆರಡು ಮಂದಿ ಸಚಿವರನ್ನೊಳಗೊಂಡಿತ್ತು. ಸಂಪುಟವು ಸಮಾವೇಶಗೊಂಡ ಕೆಲವು ಸಭೆಗಳ ನಂತರ ಸಂಸದೀಯ ಪ್ರಜಾಪ್ರಭುತ್ವವನ್ನು ಜಾರಿಗೆ ತರಲು ನಿರ್ಧರಿಸಲಾಯಿತು. ಈ ನಿರ್ಧಾರದ ಪ್ರಕಾರ ಮುಜೀಬುರ್ ಅವರು ತಾತ್ಕಾಲಿಕ ಸಂವಿಧಾನವನ್ನು ಘೋಷಿಸಿ ತಮ್ಮ ಅಧ್ಯಕ್ಷಪದವಿಗೆ ರಾಜೀನಾಮೆ ನೀಡಿದರು.

ಪ್ರಮಾಣ ವಚನ ಸ್ವೀಕಾರ ಸಮಾರಂಭದ ಕಾರ್ಯ ಕಲಾಪಗಳೆಲ್ಲ ಬಂಗಾಳಿ ಭಾಷೆಯಲ್ಲಿಯೇ ನಡೆದುದು ಒಂದು ವೈಶಿಷ್ಟ್ಯವಾಗಿತ್ತು.

† † † † †

ತಮ್ಮ ತಾಯ್ನಾಡಿನಲ್ಲಿ ಸುಭದ್ರ ಸರ್ಕಾರದ ರಚನೆಯಾಯಿತೆಂಬ ಸುದ್ದಿ ತಿಳಿದೊಡನೆ, ಭಾರತಕ್ಕೆ ಓಡಿಬಂದಿದ್ದ ನಿರಾಶ್ರಿತರು ತಮ್ಮ ಸ್ವದೇಶಕ್ಕೆ ಮರಳಲು ಇಚ್ಛಿಸಿದರು. ಭಾರತದ ಋಣವೆಂಬುದು ಅವರಿಗೆ ಚಿರಸ್ಮರಣೀಯವಾಗಿತ್ತು. ತಮ್ಮ ದೇಶಕ್ಕೆ ಹಿಂದಿರುಗುವಾಗ ಬಾಂಗ್ಲಾ ನಿರಾಶ್ರಿತರು, ತಾವು ತಮ್ಮ ಕಷ್ಟಕಾಲದಲ್ಲಿ ಭಾರತದಲ್ಲಿ ಬಂದು ತಂಗಿದ್ದುದರ ನೆನಪಿಗಾಗಿ ಭಾರತದ ಪವಿತ್ರ ಮಣ್ಣನ್ನು ಸಣ್ಣ ಸಣ್ಣ ಕುಡಿಕೆಗಳಲ್ಲಿ ಹಾಕಿ ತಮ್ಮೊಡನೆ ಕೊಂಡೊಯ್ದರು. ತಮ್ಮ ಜೀವಮಾನ ಪೂರ್ತಿ ಆ ಮಣ್ಣನ್ನು ರಕ್ಷಿಸಿಟ್ಟುಕೊಂಡಿರಬೇಕೆಂಬುದು ಅವರ ನಿರ್ಧಾರವಾಗಿತ್ತು.

ಸಿಮ್ಲಾದಲ್ಲಿ ಶೃಂಗಸಭೆ

ಭಾರತ ಪಾಕ್ ಶೃಂಗಸಭೆ ದಿನಾಂಕ ೨೮-೬-೧೯೭೨ರಂದು ಸಂಜೆ ಸಿಮ್ಲಾದಲ್ಲಿ ಆರಂಭವಾಯಿತು. ಚರ್ಚೆಗಳನ್ನು ನಡೆಸಿದಮೇಲೆ ಕಡೆಯದಿನವಾದ ಜುಲೈ ಎರಡರಂದು ರಾತ್ರಿ ೧೨-೪೦ಕ್ಕೆ ಭಾರತದ ಪರವಾಗಿ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಮತ್ತು ಪಾಕಿಸ್ತಾನದ ಪರವಾಗಿ ಅಧ್ಯಕ್ಷ ಭುಟ್ಟೋ ಚರಿತ್ರಾರ್ಹವಾದ ಒಪ್ಪಂದಕ್ಕೆ ಸಹಿ ಹಾಕಿದರು. ಇಪ್ಪತ್ತೈದು ವರುಷಗಳ ಪರಸ್ಪರ ಭಿನ್ನಾಭಿಪ್ರಾಯಗಳು, ಮನಸ್ತಾಪಗಳು, ಕೋಪತಾಪಗಳು ಪರಿಹಾರವಾಗುವುದಕ್ಕೆ ಈ ಒಪ್ಪಂದ ದಾರಿಮಾಡಿಕೊಟ್ಟಿತು. ಬೆಳಗಿನಿಂದ ರಾತ್ರಿಯವರೆಗೂ ಅವಿಶ್ರಾಂತರಾಗಿ ಈರ್ವರೂ ಚರ್ಚೆನಡೆಸಿ, ಪರಿಸ್ಥಿತಿಗಳನ್ನು ಅರ್ಥಮಾಡಿಕೊಂಡು, ಈ ಕರಾರಿಗೆ ಸಮ್ಮತಿ ಸೂಚಿಸಿದರು.

ಒಪ್ಪಂದದ ಫಲಶೃತಿ

ಕಳೆದ ಡಿಸೆಂಬರ್ ಸಮರದಲ್ಲಿ ಪಂಜಾಬ್, ಕಛ್ ಮತ್ತು ಸಿಂಧ್ ವಿಭಾಗಗಳಲ್ಲಿ ವಶಪಡಿಸಿಕೊಂಡಿರುವ ೮೨೫೪ ಚದರ ಕಿಲೋ ಮೀಟರ್ ಪ್ರದೇಶವನ್ನು

ಭಾರತವು ಪಾಕೀಸ್ತಾನಕ್ಕೆ ಹಿಂವಕ್ಕೆ ಕೊಡಲಿದೆ.

ಈ ಪ್ರದೇಶಗಳ ಪೈಕಿ ೭೫೬೧ ಚದರ ಕಿಲೋ ಮೀಟರ್ ಪ್ರದೇಶವನ್ನು ಕಛ್ ಮತ್ತು ಸಿಂಧ್ ವಿಭಾಗಗಳಲ್ಲೇ ವಶಪಡಿಸಿಕೊಳ್ಳಲಾಗಿತ್ತು.

ಇದಕ್ಕೆ ಪ್ರತಿಯಾಗಿ ಪಂಜಾಬ್ ಮತ್ತು ಸಿಂಧ್ ವಿಭಾಗದಲ್ಲಿ ತಾನು ಕಳೆದು ಕೊಂಡ ಸುಮಾರು ೧೧೧ ಚದರ ಕಿಲೋಮೀಟರ್ ಪ್ರದೇಶವನ್ನು ಭಾರತ ಮರಳಿ ಪಡೆದುಕೊಳ್ಳಲಿದೆ.

ಪಂಜಾಬ್ ವಿಭಾಗದ ಹುಸೇನಿವಾಲಾ ಮತ್ತು ಫಜಿಲ್ಕಾ ಪ್ರದೇಶಗಳಲ್ಲಿ ಪಾಕಿಸ್ತಾನ ಸ್ವಲ್ಪ ಪ್ರದೇಶವನ್ನು ವಶಪಡಿಸಿಕೊಂಡಿದ್ದಿತು. ಕಛ್ ಮತ್ತು ಸಿಂಧ್ ವಿಭಾಗದಲ್ಲಿ ಬಾರ್ಮರ್, ಜೈಸಲ್ಮೇರ್, ಗಾದ್ರಾ, ಖೋಕ್ರಾಪುರ, ನಯಾಚೋರ್, ಗುಜರಾತ್ ಗಡಿ ಮತ್ತು ಛಾಡ್‌ಬೆಟ್ ಪ್ರದೇಶದಲ್ಲಿ ಭಾರತದ ಪಾಲಿಗೆ ಹೆಚ್ಚು ಪ್ರದೇಶ ದಕ್ಕಿತ್ತು. ಈ ವಿಭಾಗದಲ್ಲಿ ಗಂಗಾನಗರ ಜಿಲ್ಲೆಯಲ್ಲಿ ಸ್ವಲ್ಪಭಾಗ ಮಾತ್ರ ಪಾಕಿಸ್ತಾನದ ಕೈವಶವಾಗಿದ್ದಿತು.

ಈ ಶೃಂಗಸಭೆಯ ಫಲವಾಗಿ ಪರಸ್ಪರ ಸ್ನೇಹ-ಸೌಹಾರ್ದಗಳು ಬೆಳೆದು, ಇಡೀ ಉಪಖಂಡದಲ್ಲಿ ಶಾಂತಿ ನೆಲೆಸಲೆಂದು ಹಾರೈಸುತ್ತೇವೆ. .

ಭಾರತ ಪಾಕಿಸ್ತಾನ ಒಪ್ಪಂದದ ಪೂರ್ಣ ಪಾಠ

ದ್ವಿಪಕ್ಷೀಯ ಸಂಬಂಧಗಳ ಸುಧಾರಣೆಗಾಗಿ ಭಾರತ ಮತ್ತು ಪಾಕಿಸ್ತಾನ ಸರ್ಕಾರಗಳು ಇದೇ ಜುಲೈ ೩ರಂದು ಸಿಮ್ಲಾದಲ್ಲಿ ಒಪ್ಪಂದವೊಂದಕ್ಕೆ ಸಹಿ ಹಾಕಿದವು. ಈ ಒಪ್ಪಂದದ ಪೂರ್ಣಪಾಠವನ್ನು ಇಲ್ಲಿ ಕೊಡಲಾಗಿದೆ.

ಪರಸ್ಪರ ಸಂಬಂಧಗಳ ಸುಧಾರಣೆಗೆ ಈವರೆಗೂ ಮಾರಕವಾಗಿದ್ದ ಕ್ಲಿಷ್ಟ ವಿವಾದ ಹಾಗೂ ಘರ್ಷಣೆಯ ಮಾರ್ಗವನ್ನು ಕೈಬಿಟ್ಟು ಮೈತ್ರಿಯುತ ಹಾಗೂ ಸಾಮಾಸ್ಯರ ಪೂರ್ಣ ಸಂಬಂಧಗಳ ಸಂವರ್ಧನೆಗಾಗಿ ಶ್ರಮಿಸಬೇಕೆಂದು ಭಾರತ ಸರ್ಕಾರ ಹಾಗೂ ಪಾಕಿಸ್ತಾನ ಸರ್ಕಾರಗಳು ದೃಢ ನಿರ್ಧಾರ ಮಾಡಿವೆ. ಇದರಿಂದ ತಮ್ಮ ಜನತೆಯ ಕಲ್ಯಾಣದಂತಹ ಅತ್ಯಗತ್ಯವಾದ ಕಾರ್ಯದ ಸಾಧನೆಗಾಗಿ ಸಂಪನ್ಮೂಲಗಳನ್ನೂ —ಶಕ್ತಿಸಾಮರ್ಥ್ಯವನ್ನೂ ವಿನಿಯೋಗಿಸಲು ಸಾಧ್ಯವಾಗುವುದು. ಈ ಉದ್ದೇಶದ ಸಾಧನೆಗಾಗಿ ಭಾರತ ಸರ್ಕಾರ ಮತ್ತು ಪಾಕಿಸ್ತಾನ ಸರ್ಕಾರಗಳು ಈ ಕೆಳಗೆ ವಿವರಿಸಿದ ನಿಯಮಗಳನ್ನು ಪಾಲಿಸಲು ಒಪ್ಪಿಕೊಂಡಿವೆ.

೧. ವಿಶ್ವಸಂಸ್ಥೆಯ ತತ್ವಗಳು ಹಾಗೂ ಸನ್ನದಿನ ಉದ್ದೇಶಗಳು, ಉಭಯ ರಾಷ್ಟ್ರಗಳ ಸಂಬಂಧಗಳನ್ನು ನಿಯಂತ್ರಿಸುವುವು.

೨. ದ್ವಿಪಕ್ಷೀಯ ಮಾತುಕತೆಗಳ ಮೂಲಕ ಶಾಂತಿಯುತ ರೀತಿಯಲ್ಲಿ ಅಥವಾ ಪರಸ್ಪರರಿಗೆ ಸಮ್ಮತವಾಗುವ ಇತರ ಯಾವುದೇ ಶಾಂತಿ ಮಾರ್ಗದಿಂದ ವಿವಾದ

ಗಳನ್ನು ಬಗೆಹರಿಸಿಕೊಳ್ಳಬೇಕೆಂದು ಉಭಯ ರಾಷ್ಟ್ರಗಳೂ ನಿರ್ಧರಿಸಿವೆ. ಎರಡೂ ದೇಶಗಳ ನಡುವಣ ಸಮಸ್ಯೆಗಳು ಇತ್ಯರ್ಥವಾಗಿ ಬಗೆಹರಿಯುವವರೆಗೆ ಉಭಯ ಪಕ್ಷಗಳಲ್ಲಿ ಯಾರೊಬ್ಬರು ಏಕಪಕ್ಷೀಯವಾಗಿ ಪರಿಸ್ಥಿತಿಯ ಬದಲಾವಣೆ ಮಾಡಬಾರದು. ಪರಸ್ಪರ ಸೌಹಾರ್ದಯುತ ಸಂಬಂಧಗಳ ಸುಧಾರಣೆಗೆ ಧಕ್ಕೆ ತರುವಂತಹ ಕಾರ್ಯಗಳ ಸಂಘಟನೆಗೆ ನೆರವು ಅಥವಾ ಪ್ರಚೋದನೆ ನೀಡಕೂಡದು.

೩. ಉಪಖಂಡದಲ್ಲಿ ದೃಢ ಶಾಂತಿ ನೆಲೆಸಲು ಉತ್ತಮ ನೆರೆಹೊರೆ ಹಾಗೂ ಉತ್ತಮ ಮೈತ್ರಿಯುತ ಸಂಬಂಧಗಳ ಸ್ಥಾಪನೆಗಾಗಿ ಉಭಯ ರಾಷ್ಟ್ರಗಳು, ಮೊದಲು ಸಹಜೀವನ, ಪರಸ್ಪರ ಪ್ರಾದೇಶಿಕ ಸಮಗ್ರತೆಯ ಹಾಗೂ ಪರಮಾಧಿಕಾರದ ತತ್ವಗಳನ್ನು ಗೌರವಿಸಬೇಕು. ಸಮಾನತೆ ಮತ್ತು ಪರಸ್ಪರ ಪ್ರಯೋಜನಗಳ ಆಧಾರದ ಮೇಲೆ ಇತರ ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡಕೂಡದು.

೪. ಕಳೆದ ೨೫ ವರ್ಷಗಳಿಂದಲೂ ಎರಡು ರಾಷ್ಟ್ರಗಳ ಸಂಬಂಧಗಳಲ್ಲಿ ವಿರಸಕ್ಕೆ ಕಾರಣವಾದ ಮೂಲಭೂತ ಸಮಸ್ಯೆಗಳನ್ನು ಹಾಗೂ ಸಮಸ್ಯೆಗಳ ಕಾರಣಗಳನ್ನು ಶಾಂತಿಯುತ ರೀತಿಯಲ್ಲಿ ಬಗೆಹರಿಸಿಕೊಳ್ಳಬೇಕು.

ಉಭಯ ರಾಷ್ಟ್ರಗಳೂ ಪರಸ್ಪರ ರಾಷ್ಟ್ರೀಯ ಐಕಮತ್ಯ, ಪ್ರಾದೇಶಿಕ ಸಮಗ್ರತೆ, ರಾಜಕೀಯ ಸ್ವಾತಂತ್ರ್ಯ ಮತ್ತು ಪರಮಾಧಿಕಾರ ಸಮಾನತೆಯನ್ನು ಗೌರವಿಸಬೇಕು.

ಬಲಪ್ರಯೋಗ ತ್ಯಾಜ್ಯ

ವಿಶ್ವಸಂಸ್ಥೆಯ ಸನ್ನದಿನ ಮೇರೆಗೆ ಉಭಯ ರಾಷ್ಟ್ರಗಳು ಪರಸ್ಪರ ಪ್ರಾದೇಶಿಕ ಸಮಗ್ರತೆ ಅಥವಾ ರಾಜಕೀಯ ಸ್ವಾತಂತ್ರ್ಯಕ್ಕೆ ಬೆದರಿಕೆ ಹಾಕುವುದನ್ನು ಅಥವಾ ಬಲಪ್ರಯೋಗ ಮಾಡುವುದನ್ನು ತ್ಯಜಿಸಬೇಕು.

ಉಭಯ ಸರ್ಕಾರಗಳು ಆಗಾಗ್ಗೆ ನಡೆಸುತ್ತಿದ್ದ ಹಗೆತನದ ಪ್ರಚಾರವನ್ನು ನಿಲ್ಲಿಸಲು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಎಲ್ಲಾ ಕ್ರಮಗಳನ್ನು ಕೈಗೊಳ್ಳಬೇಕು. ಈ ಎರಡು ದೇಶಗಳ ನಡುವಣ ಸ್ನೇಹ ಸಂಬಂಧವನ್ನು ಹೆಚ್ಚಿಸುವಂತಹ ವಿಷಯಗಳಿಗೆ ಉತ್ತೇಜನ ನೀಡಬೇಕು.

ಹಂತಹಂತವಾಗಿ ಮಾಮೂಲು ಸ್ಥಿತಿ

ಉಭಯ ರಾಷ್ಟ್ರಗಳ ಸಂಬಂಧವನ್ನು ಹಂತಹಂತವಾಗಿ ಪ್ರಗತಿಪರ ರೀತಿಯಲ್ಲಿ ಸಹಜಸ್ಥಿತಿಗೆ ತರಲು :—

೧. ಅಂಚೆ, ತಂತಿ, ಸಾಗರೋತ್ತರ ಸಂಪರ್ಕ, ಗಡಿಠಾಣೆಗಳೂ ಸೇರಿದಂತೆ ಭೂಸಂಪರ್ಕ, ಉಭಯ ರಾಷ್ಟ್ರಗಳ ಮೇಲಿನ ವಿಮಾನಯಾನವೂ ಸೇರಿದಂತೆ ವಾಯುಸಂಪರ್ಕಗಳನ್ನು ಪುನರಾರಂಭಿಸುವುದು.

೨. ಉಭಯ ರಾಷ್ಟ್ರಗಳ ಪ್ರಜೆಗಳಿಗೆ ಪ್ರಯಾಣ ಸೌಲಭ್ಯಗಳನ್ನು ವೃದ್ಧಿಪಡಿಸಲು ಸೂಕ್ತವಾದ ಕ್ರಮಗಳನ್ನು ಕೈಗೊಳ್ಳುವುದು.

೩. ಆರ್ಥಿಕ ಮತ್ತು ಒಪ್ಪಂದಕ್ಕೆ ಒಳಗಾದ ಇತರ ಕ್ಷೇತ್ರಗಳಲ್ಲಿ ವಾಣಿಜ್ಯ ಮತ್ತು ಸಹಕಾರವನ್ನು ಪುನರಾರಂಭಿಸುವುದು.

೪. ವಿಜ್ಞಾನ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಪರಸ್ಪರ ವಿನಿಮಯ ಹಾಗೂ ಸಂವರ್ಧನೆ. ಇದಕ್ಕೆ ಸಂಬಂಧಿಸಿದ ವಿವರಗಳನ್ನು ಚರ್ಚಿಸಲು ಉಭಯ ದೇಶಗಳ ನಿಯೋಗಗಳು ಆಗಾಗ್ಗೆ ಭೇಟಿಯಾಗುತ್ತಿರುತ್ತವೆ.

ಸೇನಾ ಪಡೆಗಳ ವಾಪಸಾತಿ

ದೃಢ ಶಾಂತಿ ಸ್ಥಾಪನೆಯ ಕಾರ್ಯಕ್ರಮವನ್ನು ಆರಂಭಿಸಲು ಉಭಯ ಸರ್ಕಾರಗಳು ಮಾಡಿಕೊಂಡಿರುವ ಒಪ್ಪಂದ ಹೀಗಿದೆ:

೧. ಭಾರತ ಮತ್ತು ಪಾಕಿಸ್ತಾನದ ಸೇನಾಪಡೆಗಳನ್ನು ಉಭಯ ದೇಶಗಳ ನಡುವಣ ಅಂತರರಾಷ್ಟ್ರೀಯ ಗಡಿಯಾಚೆಗೆ ವಾಪಸು ಕರೆಸಿಕೊಳ್ಳಲಾಗುತ್ತದೆ.

೨. ಉಭಯ ಪಕ್ಷಗಳು ಮಾನ್ಯಮಾಡಿರುವ ಹತೋಟಿ ಪ್ರದೇಶಕ್ಕೆ ಧಕ್ಕೆಯಾಗದಂತೆ, ಜಮ್ಮು-ಕಾಶ್ಮೀರದಲ್ಲಿ ೧೯೭೧ರ ಡಿಸೆಂಬರ್ ೧೭ರಂದು ಘೋಷಿಸಿದ ಕದನಸ್ತಂಭನದ ಫಲವಾಗಿ ಸಂಭವಿಸಿದ ಹತೋಟಿ ರೇಖೆಯನ್ನು ಭಾರತ-ಪಾಕಿಸ್ತಾನಗಳು ಗೌರವಿಸುತ್ತವೆ. ಪರಸ್ಪರ ಭಿನ್ನಾಭಿಪ್ರಾಯ ಹಾಗೂ ಕಾನೂನಿನ ಭಿನ್ನಾಭಿಪ್ರಾಯಗಳಿದ್ದರೂ ಉಭಯ ದೇಶಗಳು ಏಕಪಕ್ಷೀಯವಾಗಿ ಉಲ್ಲಂಘನೆ ಮಾಡಲು ಯತ್ನಿಸುವುದಿಲ್ಲ. ಈ ರೇಖೆಯ ಉಲ್ಲಂಘನೆಗಾಗಿ ಉಭಯ ಪಕ್ಷಗಳೂ ಬೆದರಿಕೆ ಅಥವಾ ಶಸ್ತ್ರಬಳಕೆ ಮಾಡುವುದಿಲ್ಲ.

೩. ಈ ಒಪ್ಪಂದ ಜಾರಿಗೆ ಬಂದ ನಂತರ ಸೇನಾಪಡೆಗಳ ವಾಪಸಾತಿ ಕಾರ್ಯ ಆರಂಭವಾಗಿ ೩೦ ದಿನಗಳೊಳಗೆ ಪೂರ್ಣಗೊಳ್ಳುತ್ತದೆ.

ಈ ಒಪ್ಪಂದವು ಉಭಯ ದೇಶಗಳ ಸಂವಿಧಾನ ಪದ್ಧತಿಗೆ ಅನುಸಾರವಾಗಿ ಸ್ಥಿರೀಕರಣವಾಗಬೇಕು. ಅನಂತರ ಈ ಸ್ಥಿರೀಕರಣ ಪತ್ರ ವಿನಿಮಯವಾದ ದಿನದಿಂದ ಈ ಒಪ್ಪಂದ ಜಾರಿಗೆ ಬರುತ್ತದೆ.

ಉಭಯ ದೇಶಗಳ ವರಿಷ್ಠರು ಪರಸ್ಪರ ಅನುಕೂಲವಾದ ಸಮಯದಲ್ಲಿ ಭೇಟಿಯಾಗಲು ಒಪ್ಪಿದ್ದಾರೆ. ಇದಕ್ಕೆ ಮುಂಚೆ ಉಭಯ ದೇಶಗಳ ಪ್ರತಿನಿಧಿಗಳು ಭೇಟಿಯಾಗಿ ದೃಢ ಶಾಂತಿಸ್ಥಾಪನೆ ಮತ್ತು ಉತ್ತಮ ಬಾಂಧವ್ಯದ ಸಂವರ್ಧನೆಗಾಗಿ ಅನುಸರಿಸಬೇಕಾದ ಕ್ರಮಗಳನ್ನು ಕುರಿತು ಚರ್ಚಿಸುತ್ತಾರೆ. ಇದರಲ್ಲಿ ಯುದ್ಧ ಕೈದಿಗಳು ಹಾಗೂ ನಾಗರಿಕ ಬಂದಿಗಳ ವಾಪಸಾತಿ, ಜಮ್ಮು-ಕಾಶ್ಮೀರ ವಿವಾದದ ಅಂತಿಮ ಇತ್ಯರ್ಥ ಹಾಗೂ ರಾಜತಾಂತ್ರಿಕ ಸಂಬಂಧಗಳ ಪುನರಾರಂಭದ ಪ್ರಶ್ನೆಗಳೂ ಸೇರಿವೆ.

ಈ ಯುದ್ಧದಲ್ಲಿ ನಮ್ಮ ಯೋಧರ ಪಾತ್ರ

ಪಾಕಿಸ್ತಾನ ನಡೆದು ಬಂದ ದಾರಿಯನ್ನು ಸ್ಥೂಲವಾಗಿ ಸೂಚಿಸಿದ್ದಾಯಿತು. ಆ ದೇಶದ ಆಡಳಿತ ಅವ್ಯವಸ್ಥೆ ಹೇಗೇ ಇದ್ದರೂ ನಮಗೆ ಸಂಬಂಧಿಸಿದ್ದಲ್ಲ. ಆದರೆ ಸ್ವತಂತ್ರವಾಗಿ ಬಾಳುವ ನಮ್ಮ ನಾಡಿನ ಶಾಂತಿಯನ್ನು ಕಲಕುವ ಅವರ ಮನೋಭಾವ ನಮ್ಮ ಮೇಲೆ ಪರಿಣಾಮ ಬೀರುವುದು ಮಾತ್ರವಲ್ಲ: ನಾವು ಶಾಂತಿಯಿಂದ ಬಾಳಲು ಬಿಡುವಂತೆಯೂ ಇಲ್ಲ.

ಭಾರತದಿಂದ ಸಿಡಿದ ಒಂದು ಭಾಗ ಪಾಕಿಸ್ತಾನವಾಗಿ ಪಾಲುಪಡೆದ ಸೋದರನಂತೆ ತನ್ನಷ್ಟಕ್ಕೆ ತಾನಿದ್ದು ನಮ್ಮಷ್ಟಕ್ಕೆ ನಮ್ಮನ್ನು ಬಿಟ್ಟಿದ್ದರೆ ಚೆನ್ನಾಗಿತ್ತು. ಭಾರತ ಸ್ವತಂತ್ರ ಪಡೆದ ದಿನದಿಂದ ಈ ನೆರೆಯ ರಾಜ್ಯದ ಕಿರುಕುಳವೇ ನಮ್ಮ ಶಾಂತಿಯುತ ಬಾಳ್ವೆಗೆ ಅಡಚಣೆಯಾಗಿದೆ. ಆ ದೇಶದಿಂದ ಆಡಳಿತಕ್ಕೆ ಹೆದರಿಕೊಂಡೋ ಸ್ವತಂತ್ರ ಜೀವನಕ್ಕೆ ಭಂಗಬಂದುದರಿಂದಲೋ ಓಡಿ ಬಂದ ನಿರ್ವಾಸಿತರ ಯೋಗಕ್ಷೇಮವೇ ಕುಗ್ಗಿದ ಆರ್ಥಿಕ ಸ್ಥಿತಿಯುಳ್ಳ ನಮಗೆ ಭಾರವಾಯಿತು. ಬಾಂಗ್ಲಾದೇಶದ ಯುದ್ಧದಿಂದ ಅದು ಘೋರವಾಗಿ ಪರಿಣಮಿಸಿತು. ಆದರೆ ಸಮಸ್ಯೆಯ ಸ್ವರೂಪ ಇಷ್ಟರಿಂದಲೇ ಮುಗಿಯದೆ, ನಿಷ್ಕರುಣೆಯಿಂದ ಕೂಡಿದ ಹತ್ಯಾಕಾಂಡ ಮಾನವ ಹಿತೈಷಿಯೆನಿಸಿಕೊಂಡ ಯಾರಿಗೂ ಸೈರಿಸದಂಥ ಘಟನೆಯಾಯಿತು. ಇದನ್ನು ನೋಡಿಕೊಂಡಿರಲು ಭಾರತದ ಸಹನೆಯೂ ಮೀರಿತು. ಅಲ್ಲದೆ ಬಾಂಗ್ಲಾ ದೇಶದ ಜನದ ಆರ್ತನಾದ ಭಾರತವನ್ನು ಸುಮ್ಮನೆ ಕೂಡುವಂತೆ ಬಿಡಲಿಲ್ಲ. ಅಪರೋಕ್ಷವಾಗಿ ಹಿರಿಯ ರಾಷ್ಟ್ರಗಳಿಂದ ನೆರವು ಪಡೆದ ಪಾಕಿಸ್ತಾನ ಭಾರತದೊಡನೆ ಯುದ್ಧವನ್ನೇ ಹೂಡಿತು.

ಯುದ್ಧ ಸಾಮಾನ್ಯ ರೀತಿಯದೆಂದು ಅಲ್ಲಗಳೆಯುವಂತಿರಲಿಲ್ಲ. ಆಧುನಿಕ ಯಂತ್ರ ತಂತ್ರಗಳಿಂದ ಕೂಡಿದ ಯುದ್ಧ ಅದು. ನೆಲ, ಜಲ, ಅಂತರಿಕ್ಷಗಳ ಮೇಲೆ ನಡೆಯುವ ಯುದ್ಧ. ಭಾರತಕ್ಕೆ ಸ್ವಾತಂತ್ರ್ಯ ಬಂದು ೨೫ ವರ್ಷಗಳಾಗುತ್ತ ಬಂದರೂ ಯುದ್ಧದ ಸಿದ್ಧತೆ ಪ್ರಬಲ ರಾಷ್ಟ್ರಗಳಂತೆ ಆ ಪ್ರಮಾಣದಲ್ಲಿ ನಡೆದಿರಲಿಲ್ಲ. ಆದರೆ, ಈ ಯುಗದ ಯುದ್ಧಲಕ್ಷಣಗಳನ್ನೆಲ್ಲ ನಮ್ಮ ಸೈನಿಕದಳದವರು ಅರಿತಿದ್ದುದು ಮಾತ್ರವಲ್ಲ ಅದರಲ್ಲಿ ತರಬೇತಿಯನ್ನೂ ಪಡೆದಿದ್ದರು. ಭಾರತೀಯರು ತಮ್ಮ ಶೌರ್ಯ, ಸಾಹಸಗಳಿಂದ, ಜಾಣ್ಮೆ ಚಾತುರ್ಯಗಳಿಂದ ಧೈರ್ಯಾನುಕಂಪಗಳಿಂದ ತಮ್ಮ ಮೇಲೆ ಎರಗಿ ಬಂದ ಯುದ್ಧದಲ್ಲಿ ಯಶಸ್ವಿಯಾಗಿ ಭಾಗವಹಿಸಿ ಜಯವನ್ನು ಸಂಪಾದಿಸಿದರು.

ಭಾರತದ ಒಂದು ಅಂಗವಾದ ಕರ್ನಾಟಕವೂ ಈ ಯಶಸ್ಸಿನಲ್ಲಿ ತನ್ನ ಸಾಹಸ, ಚಾತುರ್ಯ, ಧೈರ್ಯಗಳನ್ನು ಪ್ರದರ್ಶಿಸಿದೆ. ಕನ್ನಡದ ಜನ ವೀರರೂ ಶೂರರೂ ಹೌದು, ದೇಶಕ್ಕಾಗಿ ಪ್ರಾಣ ಪಣತೊಟ್ಟು ಸಾಹಸಮಾಡಿದ್ದಾರೆ — ಎಂದು ಈ ಯುದ್ಧ ತೋರಿಸಿಕೊಟ್ಟಿದೆ.

ಕನ್ನಡದ ಜನ ತಮ್ಮ ದೇಶಬಿಟ್ಟು ಹೊರಗಡೆ ಹೋಗುವುದಕ್ಕೆ ಹಿಂಜರಿಯುತ್ತಾರೆ ಎಂಬ ಒಂದು ಪ್ರತೀತಿಯಿತ್ತು. ಆದರೆ ಆ ಪ್ರತೀತಿ ನಿಜವಲ್ಲ ಎಂದು ತೋರಿಸಿಕೊಡುತ್ತದೆ, ಕನ್ನಡಿಗರು ಈಚಿನ ಸಂಗ್ರಾಮದಲ್ಲಿ ತೋರಿಸಿದ ಸಾಹಸಗಳಿಂದ,—ಪಡೆದ ಪ್ರಶಸ್ತಿಗಳಿಂದ. ಈ ಶೂರರ ಪರಿಚಯು ಕನ್ನಡಿಗರಿಗೆ ಉತ್ಸಾಹವನ್ನೂ ಪ್ರಚೋದನೆಯನ್ನೂ ಹೆಮ್ಮೆಯನ್ನೂ ಉಂಟು ಮಾಡುವುದರಲ್ಲಿ ಸಂಶಯವಿಲ್ಲ.

ನಮ್ಮ ಹಿಂದಿನ ಕವಿಪುಂಗವರು ಸವ್ಯಸಾಚಿಗಳಾಗಿ ಲೆಕ್ಕಣಿಯನ್ನೂ, ಕತ್ತಿಯನ್ನೂ ಹಿಡಿದು ದೇಶದ ಅಭ್ಯುದಯಕ್ಕಾಗಿ ಜೀವನವನ್ನು ಮುಡಿಪಿಟ್ಟರು. ಪ್ರಾಣದ ಮೇಲೆ ಆಸೆಯಿಲ್ಲದೆ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುವ ರಾಷ್ಟ್ರಪ್ರೇಮ ಕನ್ನಡಿಗರಲ್ಲಿ ಇಲ್ಲದೆ ಇಲ್ಲ. ನಮ್ಮ ಇತಿಹಾಸ ಇಂಥ ಶೂರರ ಚರಿತ್ರೆಯನ್ನು ವಿವರಿಸುತ್ತದೆ. ಅದೇ ಪರಂಪರೆ ಇಂದಿಗೂ ಉಳಿದು ಬಂದಿದೆ. ಇಂಥವರಿಂದ ಭಾರತದ ಭದ್ರತೆ ಸುರಕ್ಷಿತವಾಗಿರುವ ಭರವಸೆ ನಮಗೆಲ್ಲರಿಗೂ ಉಂಟು.

ಇಂಥ ವೀರಯೋಧರ ಪರಿಚಯುಗಳನ್ನು ಮುಂದಿನ ಅಧ್ಯಾಯುಗಳಲ್ಲಿ ಮಾಡಿಕೊಡಲಾಗಿದೆ. ಕನ್ನಡಿಗರ ವೀರಪರಂಪರೆ ಹೇಗೆ ನಡೆದು ಬಂದಿದೆ ಎಂಬುದನ್ನು ಅಲ್ಲಿ ಮನಗಾಣಬಹುದು ಕನ್ನಡ ನಾಡಿನ ಯೋಧರು ಸಾಧಿಸಿದ ಶೌರ್ಯ-ಪ್ರತಾಪಗಳನ್ನು ಅವರು ಎಸಗಿದ ಕೃತ್ಯಗಳಲ್ಲಿ ಕಾಣಬಹುದು. ಅವರು ಕಡುಗಲಿಗಳಾಗಿ ಬಾಳಿ ಕೀರ್ತಿ ತಂದಿದ್ದಾರೆ.

ಹಿರಿಯ ಯೋಧರಿಗೆ ನಮನ

ಜನರಲ್ ಕೆ. ಎಂ. ಕರಿಯಪ್ಪನವರು

ಭಾರತಕ್ಕೆ ಸ್ವಾತಂತ್ರ್ಯ ಬಂದ ದಿನಗಳಲ್ಲಿ ಒಂದು ಕೂಗೆದ್ದಿತ್ತು. "ಭಾರತದ ಸೈನ್ಯದ ಯಜಮಾನಿಕೆಯನ್ನು ಬ್ರಿಟಿಷರ ಕೈ ತಪ್ಪಿಸಿದರೆ ಸೈನ್ಯದಲ್ಲಿ ಅಶಿಸ್ತು ಮೂಡುತ್ತದೆ, ಕ್ರಾಂತಿಯಾಗುತ್ತದೆ ಹಾಗೂ ದಂಗೆಗಳೇಳುತ್ತವೆ. ಆಗ ಸೈನಿಕರನ್ನು ಹತೋಟಿಗೆ ತರುವವರೇ ಇಲ್ಲವಾಗುತ್ತದೆ"—ಎಂದು. ಬ್ರಿಟಿಷ್ ಸೇನಾನಿಗಳ ಈ ಭಾವನೆಯನ್ನು ಒಂದೇ ಪಟ್ಟಿಗೆ ಸುಳ್ಳಾಗಿಸಿದವರೆಂದರೆ ನಮ್ಮ ಕನ್ನಡ ಕಣ್ಮಣಿ, ಮಹಾದಂಡನಾಯಕ, ವೀರ ಸೇನಾನಿ ಜನರಲ್ ಕರಿಯಪ್ಪ. ಇಡೀ ಭಾರತದ ಸಮಗ್ರ ಸೈನ್ಯದ ದಂಡನಾಯಕತ್ವವನ್ನು ಇದೇನು ಸಾಮಾನ್ಯ ವಿಷಯ ಎಂಬಂತೆ ವಹಿಸಿಕೊಂಡ ಅವರು, ತಾವು ಹುಟ್ಟು ಸೇನಾಧಿಪತಿಗಳು ಎಂಬುದನ್ನು ಖಚಿತ ಗೊಳಿಸಿದರು.

ಬ್ರಿಟಿಷರ ಜೊತೆಗಿದ್ದ ಪರಿಣಾಮವಾಗಿ ಇಂಗ್ಲಿಷನ್ನು ಅವರಂತೆಯೇ ಉಚ್ಚರಿಸುವರು. ಮಾತೃಭಾಷೆಯಲ್ಲೂ ಅಷ್ಟೇ ಸ್ಪಷ್ಟ. ಕೊಡಗು ಕರ್ನಾಟಕದ ಒಂದು ಭಾಗವಲ್ಲವೆ? ಆದ್ದರಿಂದ ಕನ್ನಡವನ್ನೂ ಅಷ್ಟೇ ಚೆನ್ನಾಗಿ ಮಾತನಾಡಬೇಕೆಂಬ ಸಂಕಲ್ಪ. ಅವಕಾಶ ಸಿಕ್ಕಿದಾಗಲೆಲ್ಲ ಕನ್ನಡದಲ್ಲಿಯೇ ಮಾತನಾಡುವರು. ಒಮ್ಮೆ ಕನ್ನಡ ಸಾಹಿತ್ಯ ಪರಿಷತ್ತಿಗೆ ಬಂದಾಗ ತುಂಬಿದ್ದ ದೊಡ್ಡ ಸಭೆಯಲ್ಲಿ ಕನ್ನಡದಲ್ಲಿಯೇ ಮಾತನಾಡಿದರು. ಕನ್ನಡವೆಂದರೆ ಅವರಿಗೆ ಅಷ್ಟು ಅಭಿಮಾನ. ತಮ್ಮ ಭವ್ಯವಾದ ಕಾರಿನಲ್ಲಿ ಒಂದು ರೇಡಿಯೋ ಸೆಟ್ ಇಟ್ಟುಕೊಂಡಿರುತ್ತಾರೆ. ಹೊರಗೆ ಹೊರಟಾಗ ಬೆಂಗಳೂರು, ಧಾರವಾಡ ಆಕಾಶವಾಣಿ ಕೇಂದ್ರಗಳಿಂದ ಬಿತ್ತರಗೊಳ್ಳುವ ಭಾಷಣಗಳನ್ನು, ಸುದ್ದಿಗಳನ್ನು ಶ್ರದ್ಧೆಯಿಂದ ಕೇಳುತ್ತಾರೆ; ತಮ್ಮ ಭಾಷಾಜ್ಞಾನವನ್ನು ಹೆಚ್ಚಿಸಿಕೊಳ್ಳುತ್ತಾರೆ.

ಭಾರತದಲ್ಲಿ ಮಹಾದಂಡನಾಯಕ ಪದವಿಯಿಂದ ವಿಶ್ರಾಂತಿ ಪಡೆದ ಮೇಲೆ, ಇವರು ಆಸ್ಟ್ರೇಲಿಯಾದಲ್ಲಿ ಭಾರತದ ಹೈಕಮಿಷನರ್ ಆಗಿ ನೇಮಕಗೊಂಡಿದ್ದು, ಅಲ್ಲಿ ಭಾರತದ ಪರವಾಗಿ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ನಮ್ಮ ಸಂಸ್ಕೃತಿ-ಹಿರಿಮೆಗಳನ್ನು ಎತ್ತಿಹಿಡಿದು, ಭಾರತಕ್ಕೆ ಕೀರ್ತಿ ತಂದರು. ಅವರ ಸಚ್ಚಾರಿತ್ರ್ಯವೇ ಒಂದು ಆದರ್ಶವಾಗಿತ್ತು.

ಮಹಾತ್ಮಾ ಗಾಂಧಿಯವರ ಬಗ್ಗೆ ಮತ್ತು ಅವರ ಅಹಿಂಸಾವಾದದ ಬಗ್ಗೆ ಜ|| ಕರಿಯಪ್ಪನವರಿಗೆ ತುಂಬಾ ಗೌರವ ಮತ್ತು ಅಪಾರ ನಂಬಿಕೆ. ಒಮ್ಮೆ ಬಾಪೂಜೀಯವರು ತಮ್ಮ 'ಹರಿಜನ' ಪತ್ರಿಕೆಯಲ್ಲಿ ಸೈನ್ಯವನ್ನು ಮತ್ತು ಸೈನಿಕರನ್ನು ಕುರಿತು

‘ ಅವನೊಬ್ಬ ಹಿಂಸಾ ಮೂರ್ತಿ ’ ಎಂದು ಬರೆದಿದ್ದರು. ಅದು ಜ|| ಕರಿಯಪ್ಪನವರಿಗೆ ತಿಳಿಯಿತು. ಪತ್ರಿಕೆಯನ್ನು ತರಿಸಿ ಓದಿದರು. ಕೂಡಲೇ ಗಾಂಧೀಜಿಯವರಿಗೊಂದು ಪತ್ರ ಬರೆದು– ‘ ಭಾರತೀಯ ಸೈನಿಕನಿಗೆ ಅಹಿಂಸೆಯಲ್ಲಿಯೂ ನಂಬಿಕೆಯುಂಟು. ಅಲ್ಲದಿದ್ದರೆ ಅವನು ಭಾರತೀಯನೇ ಅಲ್ಲ. ಅಪ್ಪಣೆಯಾದರೆ ನಾನು ತಮ್ಮನ್ನು ಭೇಟಿಯಾಗಿ, ಈ ವಿಷಯದಲ್ಲಿ ನಿಮಗೆ ಮನವರಿಕೆ ಮಾಡಿಕೊಡುತ್ತೇನೆ’–ಎಂದು ತಿಳಿಸಿದರು. ಭೇಟಿಗೆ ಅವಕಾಶವೂ ಸಿಕ್ಕಿತು. ಜ|| ಕರಿಯಪ್ಪನವರೂ, ಮಹಾತ್ಮಾ, ಗಾಂಧೀಜಿಯವರೂ ಈ ವಿಷಯವಾಗಿ ಬಹಳ ಹೊತ್ತು ಚರ್ಚೆ ನಡೆಸಿದರು. ಆಗ ಜನರಲ್‌ರವರು ಒಂದೇ ಒಂದು ಪ್ರಶ್ನೆ ಹಾಕಿದರು–“ಮಗು ತಂದೆಯನ್ನು ಕೇಳಿದಂತೆ ಕೇಳಿಕೊಳ್ಳುತ್ತಿದ್ದೇನೆ. ಅಹಿಂಸಾಮೂರ್ತಿಗಳಾದ ನೀವು ತಿಳಿಸಬೇಕು. ಭಾರತೀಯ ಸೈನಿಕನು ಅಹಿಂಸಾಮಾರ್ಗದಿಂದ ಯುದ್ಧದಲ್ಲಿ ಗೆಲ್ಲುವುದು ಹೇಗೆ? ” ಅದಕ್ಕುತ್ತರ ವಾಗಿ ಗಾಂಧೀಜೀ ಹೇಳಿದರು.— “ ನೀವು ಸಣ್ಣ ಮಗುವಾದರೆ, ನಾನು ದೊಡ್ಡ ಮಗು. ನಿಮ್ಮ ಪ್ರಶ್ನೆಯ ಬಗ್ಗೆ ನಾನೂ ಆಲೋಚನೆ ಮಾಡುತ್ತಿದ್ದೇನೆ. ಅಹಿಂಸಾ ತತ್ವವನ್ನು ಸೈನಿಕನೊಬ್ಬ ಹೇಗೆ ಕಾರ್ಯಗತ ಮಾಡಿ ಜಯಿಸಬಲ್ಲನೆಂಬ ಬಗ್ಗೆ ನಾನೂ ಚಿಂತಿಸುತ್ತಿದ್ದೇನೆ. ನೀವೂ ಹೀಗೆಯೇ ಆಗಾಗ ಬರುತ್ತಿದ್ದರೆ, ಪರಸ್ಪರ ಚರ್ಚೆ ಯಿಂದ ಇದು ಪರಿಹಾರವಾಗಬಹುದು.”

ಹೀಗೆ ಜ|| ಕರಿಯಪ್ಪನವರು ಗಾಂಧೀಜಿಯವರು ಒಬ್ಬರೇ ಅಲ್ಲದೆ, ನೆಹರೂ, ಪಟೇಲ್, ರಾಜೇಂದ್ರಪ್ರಸಾದ್ ಮೊದಲಾದ ಮಹಾನಾಯಕರೊಡನೆಯೂ ಬಿಚ್ಚು ಮನಸ್ಸಿನಿಂದ ಚರ್ಚಿಸಿ, ಇದ್ದ ಸಂಗತಿಯನ್ನು ಇದ್ದ ಹಾಗೆ ಹೇಳಿ ವಾದಿಸುತ್ತಿದ್ದರು. ಸರ್ದಾರ್ ಪಟೇಲ್‌ರವರಿಗಂತೂ ಜ|| ಕರಿಯಪ್ಪನವರನ್ನು ಕಂಡರೆ ಹೆಚ್ಚಿನ ಪ್ರೀತ್ಯಾ ದರ ಮತ್ತು ಗೌರವ.

ಏಷ್ಯಾ, ಆಫ್ರಿಕ ಸೌಹಾರ್ದ ಸಂಘಟನೆ ಮೊದಲು ಇವರ ಕಾರ್ಯಕ್ರಮ ವಾಗಿತ್ತು. ಜಗತ್ತಿನ ಶಾಂತಿಗಾಗಿ ಇವರು ಬಹಳ ಹೋರಾಡಿದ್ದಾರೆ. ಜಗತ್ತಿನ ಅನೇಕ ದಂಡ ನಾಯಕರನ್ನು ಕಂಡು ಶಾಂತಿ ಸ್ಥಾಪನೆ ಬಗ್ಗೆ ಚರ್ಚೆ ನಡೆಸಿದ್ದಾರೆ.

ಇವರಿಗೆ ಚಿಕ್ಕಮಕ್ಕಳೆಂದರೆ ಬಹುಪ್ರೀತಿ. ಅವರಿಗಾಗಿ ನರ್ಸರಿ ಶಾಲೆಗಳು, ಮಕ್ಕಳಕೂಟಗಳು ಮೊದಲಾದುವುಗಳನ್ನು ತಮ್ಮ ಸ್ವಂತ ಊರಾದ ಮಡಿಕೇರಿ ಯಲ್ಲಿ ಅಣಿಮಾಡಿಕೊಟ್ಟಿದ್ದಾರೆ. ಅನಾಥ ಮಕ್ಕಳನ್ನು ಕಾಪಾಡಿದ್ದಾರೆ. ದುಷ್ಟ ಬಾಲಕರನ್ನು ಸರಿಯಾದ ದಾರಿಗೆ ತಂದ ಉದಾಹರಣೆಗಳೆಷ್ಟೋ ಇವೆ. ಇಂಥವ ರಿಂದಲೇ ಭಾರತಕ್ಕೆ ಕೀರ್ತಿ.

ಎತ್ತರದ ಆಳು-ಕತ್ತೆತ್ತಿ ನೋಡಬೇಕು ಅವರನ್ನು ವಯಸ್ಸಾಗಿದ್ದರೂ ಯುವಕ ರಂತೆ ಕಾಣುತ್ತಾರೆ ಮತ್ತು ಹಾಗೆಯೇ ನಡೆದುಕೊಳ್ಳುತ್ತಾರೆ. ಪಾದರಸದಂತೆ ಚಟುವಟಿಕೆ, ತಮಗಿಂತ ಹಿರಿಯರನ್ನು ಕಂಡಾಗ ಕಾಲುಮುಟ್ಟಿ ನಮಸ್ಕಾರ

ಮಾಡುವ ಹಳೆಯ ಸಂಪ್ರದಾಯ.

ಇಂತಹ ಶಾಂತಿಪ್ರಿಯರೂ, ಮೇಧಾವಿಗಳೂ, ಸಮರ ನಾಯಕರೂ, ಹಿರಿಯ ಯೋಧರೂ ಆದ ಜನರಲ್ ಕರಿಯಪ್ಪನವರಿಗೆ ನಮ್ಮ ನಮನ.

ಅವರ ಒಲವೇ ನಮ್ಮ ಗೆಲುವು. ಅವರ ಹರಕೆಯೇ ನಮಗೆ ದಾರಿದೀಪ.

ದಿವಂಗತ ಜನರಲ್ ಕೆ. ಎಸ್. ತಿಮ್ಮಯ್ಯನವರು

ಕೊಡಗಿನಲ್ಲಿ ಗಂಡು ಮಗು ಹುಟ್ಟಿದರೆ ಗುಂಡು ಹಾರಿಸುವುದು ಹಳೆಯ ಕಾಲದಿಂದಲೂ ಬಂದ ಒಂದು ಸಂಪ್ರದಾಯ. ಅದರಂತೆ ಈಗ್ಗೆ ೬೬ ವರ್ಷಗಳ ಹಿಂದೆ ಕೊಡಗಿನ ಕೊಡಂದೇರ ಮನೆತನದ ಗೃಹವೊಂದರಲ್ಲಿ ಒಂದು ತೋಫಿನ ಶಬ್ದ ಕೇಳಿಬಂತು; ಮತ್ತೊಬ್ಬ ವೀರ ಜನಿಸಿದ ಸಂಗತಿ ಜನಜನಿತವಾಯಿತು.

ಆ ಕಾಲದಲ್ಲಿ ಬ್ರಿಟಿಷರು ಸಾರ್ವಭೌಮರಾಗಿದ್ದರು. ಭಾರತೀಯರಿಗೆ ಒಂದು ಬ್ರಿಗೇಡಿಯರ್ ಪದವಿಯನ್ನಾಗಲಿ, ಹೈಕೋರ್ಟ್ ನ್ಯಾಯಾಧೀಶ ಪದವಿಯನ್ನಾಗಲಿ ಕೊಡುತ್ತಿರಲಿಲ್ಲ. ಹೀಗಾಗಿ ಯಾರೂ ' ಈ ಮಗು ಮುಂದೆ ಮಹಾ ಸೇನಾನಿಯಾಗುತ್ತಾನೆ, ಮಹಾದಂಡನಾಯಕನಾಗುತ್ತಾನೆ ' ಎಂದು ಭಾವಿಸಿರಲಿಲ್ಲ.

ಜನರಲ್ ತಿಮ್ಮಯ್ಯನವರು ಕರಿಯಪ್ಪನವರಂತೆಯೇ ಹುಟ್ಟು ಸೇನಾನಿಗಳು. ಇವರು ಜಗತ್ಪ್ರಸಿದ್ಧ ಯೋಧರು. ಶತ್ರುವಿಗೆ ಪರಮಾವಧಿ ಸಾವುನೋವುಗಳನ್ನುಂಟು ಮಾಡಲು ಇವರಿಗೆ ತರಬೇತಿಯಾಗಿತ್ತು. ಇಂತಹ ವೀರರಿಗೆ ಕೊರಿಯಾದಲ್ಲಿ ಶಾಂತಿದೂತರಾಗಿ ಸೇವೆ ಸಲ್ಲಿಸುವ ಸದವಕಾಶ ದೊರೆತಾಗ ಅವರ ಕೀರ್ತಿ ಜಗತ್ತಿಗೆಲ್ಲಾ ಹಬ್ಬಿತು. ಅಮೆರಿಕನ್ನರು ಒಂದು ಆಕ್ಷೇಪಣೆ ಎತ್ತಿದ್ದರು. "ತಿಮ್ಮಯ್ಯನವರು ಹೇಗಾದರೂ ನೆಹರೂ ಕಿಂಕರರು. ಇವರು ದಕ್ಷಿಣ ಕೊರಿಯನ್ನರನ್ನು ಉತ್ತರದ ಕಮ್ಯೂನಿಷ್ಟರಿಗೆ ಮಾರಲು ಬಂದವರಲ್ಲವೆ ?"—ಎಂದು ಅಮೆರಿಕನ್ನರು ಅಪಹಾಸ್ಯ ಮಾಡುತ್ತಿದ್ದರು. ಆದರೆ ತಿಮ್ಮಯ್ಯನವರ ಹಿರಿಮೆ ಅವರಿಗೆ ಅರಿವಾದಾಗ ಅವರ ಮಾತೇ ಬದಲಾಯಿಸಿತು. ಕಡೆಕಡೆಗೆ ತಿಮ್ಮಯ್ಯನವರನ್ನು ಮಮತೆಯಿಂದ 'ಟಿಮ್ಮಿ' ಎಂದು ಕರೆಯಲಾರಂಭಿಸಿದರು.

ಜನರಲ್ ಕೆ. ಎಸ್. ತಿಮ್ಮಯ್ಯನವರು ಹುಟ್ಟಿದ್ದು ದಿನಾಂಕ ೩೧ನೇ ಮಾರ್ಚ್ ೧೯೦೬ರಂದು. ಬೆಂಗಳೂರಿನ ಬಿಷಪ್ ಕಾಟನ್ ಸ್ಕೂಲಿನಲ್ಲಿ ಇವರ ಶಿಕ್ಷಣ ನಡೆಯಿತು. ಕೇವಲ ೧೬ನೆಯ ವಯಸ್ಸಿನಲ್ಲಿಯೇ ಸೈನಿಕ ಜೀವನಕ್ಕೆ ಅಡಿಯಿಟ್ಟರು. ಮುಂದೆ ಡೆಹರಾಡೂನಿನಲ್ಲಿ ರಾಷ್ಟ್ರೀಯ ಇಂಡಿಯನ್ ಮಿಲಿಟರಿ ಸ್ಕೂಲಿನಲ್ಲಿ ಶಿಕ್ಷಣ ನಡೆಯಿತು. ಅನಂತರ ಇಂಗ್ಲೆಂಡಿನ ಸ್ಯಾಂಡ್‌ಹರ್ಸ್ಟ್ ಮಿಲಿಟರಿ ಕಾಲೇಜಿನಲ್ಲಿ ಶಿಕ್ಷಣ ಪಡೆದರು. ಇವರ ಸಮರ ಸಾಮರ್ಥ್ಯ ಮತ್ತು ಕೌಶಲ ಮೊದಲು ಬೆಳಕಿಗೆ ಬಂದದ್ದು ೧೯೪೪ರಲ್ಲಿ : ಬರ್ಮಾ-ಭಾರತ ಗಡಿಯಲ್ಲಿ ಜಪಾನ್ ವಿರುದ್ಧ ಹೋರಾಟ ನಡೆದಾಗ. ಅಲ್ಲಿ ಇವರು ತಮ್ಮ ಅಪ್ರತಿಮ ಕರ್ತವ್ಯ ಶ್ರದ್ಧೆಯನ್ನೂ ಸಾಹಸವನ್ನೂ ಎತ್ತಿ ತೋರಿಸಿದರು. ಆಗ ಅವರು ಹೈದರಾಬಾದ್ ರೆಜಿಮೆಂಟಿನ ಬೆಟಾಲಿಯನ್ ಕಮಾಂಡರ್

ಲೆಫ್ಟಿನೆಂಟ್ ಕರ್ನಲ್ ಆಗಿದ್ದರು. ಅನಂತರ ಬ್ರಿಗೇಡಿಯರ್ ಪದವಿಗೂ ಏರಿದರು.

ಇವರು ಕಾಶ್ಮೀರಕ್ಕೆ ಹೋಗಿ ಅಲ್ಲೊಂದು ಹೊಸ ಅಧ್ಯಾಯವನ್ನೇ ತೆರೆದರು. ೧೧,೦೦೦ ಅಡಿ ಎತ್ತರದ ಜೋಜಿಲಾ ಕಣಿವೆಯಲ್ಲಿ ಗುಡ್ಡಗಾಡಿನ ಯುದ್ಧದಲ್ಲಿ ಟ್ಯಾಂಕ್‌ಗಳನ್ನು ಉಪಯೋಗಿಸಿದ ಚಮತ್ಕಾರಗಳನ್ನು ಮೊತ್ತಮೊದಲು ಇವರು ಆಚರಣೆಗೆ ತಂದು ಯಶಸ್ವಿಯಾದರು. ೧೯೪೮ರಲ್ಲಿ ಶತ್ರುವ್ಯೂಹವನ್ನು ಮುರಿದು ಮುನ್ನುಗ್ಗಿದರೆಂದು ಹೇಳಿದಾಗ ಬಹುಮಂದಿ ನಂಬಲಿಲ್ಲ. ಇಂತಹ ಅಸಾಧ್ಯ ಕಾರ್ಯವನ್ನು ಇವರು ನಡೆಸಿದ್ದರು.

ಕೊರಿಯಾದಲ್ಲೂ ಇವರು ಒಂದು ವಿಜಯವನ್ನೇ ಸ್ಥಾಪಿಸಿದರು. ಕೊರಿಯಾ ಯುದ್ಧ ಕೈದಿಗಳ ಸಮಸ್ಯೆಯನ್ನು ಮಾನವೀಯತೆಯ ದೃಷ್ಟಿಯಿಂದ ಪರಿಹರಿಸುವ ಯತ್ನ ನಡೆಸಿದವರು ಇವರೇ. ಇವರ ಈ ಸಾಹಸಕ್ಕಾಗಿ ಭಾರತ ಸರ್ಕಾರ 'ಪದ್ಮ ಭೂಷಣ' ಪ್ರಶಸ್ತಿಯನ್ನಿತ್ತು ಗೌರವಿಸಿತು.

ಕೊರಿಯಾದಿಂದ ಬಂದ ಮೇಲೆ ದಕ್ಷಿಣ ಭಾಗದ ಸೇನಾಧಿಪತಿಯನ್ನಾಗಿ ಇವರನ್ನು ನೇಮಿಸಲಾಯಿತು. ನಾಗಾ ದಂಗೆಕೋರರನ್ನು ಶಿಕ್ಷಿಸುವ ಕಾರ್ಯ ಇವರ ಹೊಣೆಯೇ ಆಗಿತ್ತು. ಅಲ್ಲಿ ಕೊಲೆ ಸುಲಿಗೆಗಳನ್ನು ತಗ್ಗಿಸಿ, ನಾಗರಿಕರ ವಿತ್ತ ಜೀವಿತಗಳಿಗೆ ಭದ್ರತೆ ನೀಡುವುದರಲ್ಲಿ ಉಳಿದೆಲ್ಲ ಸೇನಾನಿಗಳಿಗಿಂತ ಯಶಸ್ವಿಯಾದರು ತಿಮ್ಮಯ್ಯನವರು.

ಭಾರತಕ್ಕೆ ಸ್ವಾತಂತ್ರ್ಯ ಬಂದಮೇಲೆ ನಮ್ಮ ಭೂಸೇನೆಯ ಮುಖ್ಯ ಸೇನಾಧಿಪತಿ ಪಟ್ಟಕ್ಕೆ ಏರಿದವರಲ್ಲಿ ತಿಮ್ಮಯ್ಯನವರು ಎರಡನೇ ಕೊಡಗರು. ಹುಲಿ ಬೇಟೆಯಲ್ಲಿ ನಿಷ್ಣಾತರಾಗಿದ್ದ ಇವರು ಒಮ್ಮೆ ಒಂದು ನರಭಕ್ಷಕ ಹುಲಿಯನ್ನು ಕೊಂದು ಅನೇಕ ಜೀವಗಳನ್ನುಳಿಸಿದರು.

ಇಂದಿಗೂ ಮಿಲಿಟರಿ ವಲಯಗಳಲ್ಲಿ 'ಟಿಮ್ಮಿ' ಎಂದರೆ ಸಾಕು, ಅದೆಷ್ಟು ವಾತ್ಸಲ್ಯ! ಅದೆಷ್ಟು ಗೌರವ! ಲಕ್ನೊ ಬಳಿ ೧೯೫೨ರಲ್ಲಿ ಇವರು ಒಂದು ವಿಮಾನ ಅಪಘಾತದಲ್ಲಿ ಪಾರಾದಾಗ ಸಹಸ್ರಗಟ್ಟಲೆ ಜನರು ಅವರನ್ನು ಅಭಿನಂದಿಸಲು ಬಂದಿದ್ದರು. ಆದರೆ ಆ ಅಭಿನಂದನೆಗಳೆಲ್ಲ, ಆ ಅಪಾಯದಲ್ಲಿ ಪ್ರಸಂಗಾವಧಾನ ತೋರಿಸಿ ತಮ್ಮನ್ನು ಕಾಪಾಡಿದ ತರುಣ ವೈಮಾನಿಕನಿಗೆ ಸಲ್ಲಬೇಕೆಂದು ತಿಮ್ಮಯ್ಯನವರು ಹೇಳಿದರು. 'ಟಿಮ್ಮಿ' ಎಂಬ ಮಮತೆಯ ಹೆಸರಿನಿಂದ ತಿಮ್ಮಯ್ಯನವರು ಎಲ್ಲರ ಪ್ರೀತ್ಯಾದರಗಳನ್ನು ಸೂರೆಗೊಂಡಿರುವುದಕ್ಕೆ ಅವರು ತೋರಿದ ಇಂತಹ ಘನತೆವೆತ್ತ ನಡವಳಿಕೆಯೇ ಕಾರಣ.

ಇವರ ಪತ್ನಿ ನೀನಾರವರು ಭರತನಾಟ್ಯದಲ್ಲಿ ಮಹಾ ಪ್ರವೀಣೆ. ತಿಮ್ಮಯ್ಯನವರೊಡನೆ ಇವರ ವಿವಾಹ ನಡೆದುದು ೧೯೩೫ರಲ್ಲಿ. ಈ ದಂಪತಿಗಳಿಗೆ ಒಬ್ಬಳೇ ಮಗಳು. ಆಕೆಯ ಹೆಸರು ಮೆರಿಯಲ್.

ಜ|| ತಿಮ್ಮಯ್ಯನವರ ಇಬ್ಬರು ಸಹೋದರರ ಅಕಾಲ ಮರಣಗಳು ಇವರ

ಸಾಂಸಾರಿಕ ಜೀವನದಲ್ಲಿ ಅತ್ಯಂತ ವಿಷಾದಕರ ಘಟನೆಗಳಾಗಿದ್ದುವು. ಇವರ ತಮ್ಮ ಮೇಜರ್ ಸೋಮಯ್ಯ ಕಾಶ್ಮೀರದ ಕದನದಲ್ಲಿ ವೀರ ಸ್ವರ್ಗ ಪಡೆದರು. ಸೇನಾಧಿಕಾರಿಯಾಗಿದ್ದ ಒಬ್ಬ ಅಣ್ಣ ಮೋಟಾರು ಅಪಘಾತದಲ್ಲಿ ಮಡಿದರು.

ಸಮರ ತಂತ್ರದಲ್ಲಿ ಅತ್ಯಂತ ನಿಪುಣರಾಗಿದ್ದ ತಿಮ್ಮಯ್ಯನವರು "ಯುದ್ಧ ಸಾಹಿತ್ಯ, ರಣರಂಗತಂತ್ರಗಳ ಬಗ್ಗೆ ಭಾರತದಲ್ಲಿ ಸಾಕಷ್ಟು ಗ್ರಂಥಗಳಿಲ್ಲದಿರುವುದು ಒಂದು ದೊಡ್ಡ ಕೊರತೆಯಾಗಿದೆ." ಎಂದು ಆಗಾಗ ಹೇಳುತ್ತಿದ್ದರು.

ಇವರು ಸೈಪ್ರಸ್‌ನಲ್ಲಿ ವಿಶ್ವಸಂಸ್ಥೆ ಶಾಂತಿದಳದ ಕಮಿಷನ್ನಿನ ಅಧ್ಯಕ್ಷರಾಗಿದ್ದರು. ಈ ಅವಧಿಯಲ್ಲಿ ಇವರು ಯಶಸ್ವಿಯಾಗಿ ಕಾರ್ಯವನ್ನು ನಿರ್ವಹಿಸಿದರು. ಇವರ ಮರಣವಂತೂ ಅನಿರೀಕ್ಷಿತ ಹಾಗೂ ಆಕಸ್ಮಿಕವಾಗಿತ್ತು.

ತಿಮ್ಮಯ್ಯನವರ ಮಗಳ ವಿವಾಹಕ್ಕೆ ಎಲ್ಲ ಸಿದ್ಧತೆಗಳೂ ನಡೆದು, ಆ ಸಮಾರಂಭ ಬೆಂಗಳೂರಿನಲ್ಲಿ ನಡೆಯಬೇಕಾಗಿತ್ತು. ವಿವಾಹ ನಡೆಯಬೇಕೆಂದು ಗೊತ್ತಾಗಿದ್ದ ದಿನದ ಹಿಂದಿನ ದಿನವೇ ತಿಮ್ಮಯ್ಯನವರು ನಿಕೋಸಿಯಾದಲ್ಲಿ ಹೃದಯಾಘಾತದಿಂದ ನಿಧನರಾದರು. ಏಕಮಾತ್ರ ಪುತ್ರಿಯ ವಿವಾಹದಲ್ಲಿ ಭಾಗವಹಿಸುವ ಯೋಗ ಇವರಿಗಿಲ್ಲವಾಗಿತ್ತು.

ಜ|| ಕೆ. ಎಸ್. ತಿಮ್ಮಯ್ಯನವರ ಅಕಾಲ ಮರಣದಿಂದ ಇಡೀ ಭಾರತಕ್ಕೇ ಭರಿಸಲಾಗದ ನಷ್ಟವುಂಟಾಯಿತು. ಅಂಥ ವೀರಾಗ್ರಣಿಯನ್ನು ಈ ಸಂದರ್ಭದಲ್ಲಿ ಸ್ಮರಿಸಿ, ನಮನಗಳನರ್ಪಿಸುವುದು ನಮ್ಮ ಕರ್ತವ್ಯವಾಗಿದೆ.

ಭಾರತದ ಸಮರಶಿಲ್ಪಿಗಳು

ಭಾರತದ ಮಹಾ ದಂಡನಾಯಕರಾದ
ಜ|| ಮಾಣೆಕ್ ಷಾ ರವರು

ಜನರಲ್ ಮಣಿಕ್ ಷಾ

ಪಾಕ್ ವಿರುದ್ಧದ ೧೪ ದಿನಗಳ ಯುದ್ಧದಲ್ಲಿ ಭಾರತಕ್ಕೆ ಐತಿಹಾಸಿಕ ವಿಜಯವನ್ನು ತಂದಿತ್ತ ಹಾಗೂ ಸ್ವತಂತ್ರ ಬಂಗ್ಲಾದೇಶ ರೂಪುಗೊಳ್ಳಲು ಕಾರಣವಾದ ರಕ್ಷಣಾ ಪಡೆಯ ಮೂರು ವಿಭಾಗಗಳ ಅಧಿಪತಿಗಳಿಗೆ ರಾಷ್ಟ್ರಪತಿಯವರು "ಪದ್ಮ ವಿಭೂಷಣ" ಪ್ರಶಸ್ತಿಯನ್ನು ನೀಡಿ ಗೌರವಿಸಿದರು.

ಅನ್ಯರಾಷ್ಟ್ರಗಳ ಆಕ್ರಮಣದಿಂದ ರಾಷ್ಟ್ರವನ್ನು ರಕ್ಷಿಸಲು ಭಾರತೀಯ ಸೈನ್ಯವನ್ನು ಸಿದ್ಧಗೊಳಿಸಿದ ಜ|| ಮಣಿಕ್ ಷಾ ಅವರು ಇತ್ತೀಚಿನ ಸಮರದಲ್ಲಿ ವಾಯು ಹಾಗೂ ನೌಕಾ ಪಡೆಗಳೊಡನೆ ಗಮನಾರ್ಹ ಸಮನ್ವಯತೆ ಸಹಕಾರಗಳನ್ನು ಸಾಧಿಸಿದ್ದಾರೆ.

೧೯೧೪ರ ಏಪ್ರಿಲ್ ಮೂರರಂದು ಅಮೃತಸರದಲ್ಲಿ ಜನಿಸಿದ ಜನರಲ್ ಮಣಿಕ್ ಷಾ ಅವರು ೧೯೬೯ರ ಜೂನ್ ಎಂಟರಂದು ಭಾರತ ಭೂಸೇನೆಯ ದಂಡನಾಯಕರಾಗಿ ಅಧಿಕಾರ ಸ್ವೀಕರಿಸಿದರು.

ನೈನಿಟಾಲ್ ಮತ್ತು ಅಮೃತಸರಗಳಲ್ಲಿ ವಿದ್ಯಾಭ್ಯಾಸ ಮಾಡಿದ ಮಣಿಕ್ ಷಾ ಅವರು ೧೯೩೪ರಲ್ಲಿ ಸೈನ್ಯಕ್ಕೆ ಸೇರಿದರು. ಅಂದಿನಿಂದ ಸೇನೆಯ ನಾನಾ ಸ್ಥಾನಗಳಲ್ಲಿದ್ದು ತಮ್ಮ ಪ್ರತಿಭೆಯನ್ನು ತೋರಿದ್ದಾರೆ.

ಬರ್ಮಾದಲ್ಲಿ ಮಣಿಕ್ ಷಾ ಅವರು ತೋರಿದ ಸಾಹಸ ಹಾಗೂ ಸ್ಥೈರ್ಯಕ್ಕಾಗಿ ಅವರಿಗೆ ಮಿಲಿಟರಿ ಕ್ರಾಸ್ ಪ್ರಶಸ್ತಿ ನೀಡಲಾಯಿತು.

ಸುಮಾರು ಹತ್ತುಸಾವಿರ ಮಂದಿ ಯುದ್ಧಖೈದಿಗಳ ಪುನರ್ವಸತಿ ಕಾರ್ಯದಲ್ಲಿ ಬಹುವಾಗಿ ನೆರವಾದ ಮಣಿಕ್ ಷಾ ಅವರು ೧೯೪೭ರಲ್ಲಿ ಆರು ತಿಂಗಳಕಾಲ ಬೋಧನಾ ಪ್ರವಾಸ ಕೈಗೊಂಡಿದ್ದರು.

ಶ್ರೀ ಬಿ. ಎನ್. ರಾವ್ ಅವರಿಗೆ ಕಾಶ್ಮೀರದ ಬಗ್ಗೆ ಸೇನಾ ಸಲಹೆಗಾರರಾಗಿದ್ದ ಜನರಲ್ ತಿಮ್ಮಯ್ಯನವರೊಂದಿಗೆ ವಿಶ್ವಸಂಸ್ಥೆಗೆ ಹೋಗಿದ್ದ ಮಣಿಕ್ ಷಾ ಅವರು ಜಮ್ಮು ಮತ್ತು ಕಾಶ್ಮೀರ ವಿಭಾಗದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಪ್ರಮುಖ ಪಾತ್ರವಹಿಸಿದ್ದರು.

೧೯೬೨ರಲ್ಲಿ ಲೆಫ್ಟಿನೆಂಟ್ ಜನರಲ್ ಪದವಿಗೇರಿದ ಮಣಿಕ್ ಷಾ ಅವರು ಭಾರತದ ಮೇಲೆ ಚೀಣಾ ಆಕ್ರಮಣ ನಡೆಸಿದ ನಂತರ ನೀಫಾ ಕಮ್ಯಾಂಡರ್ ಆಗಿ ಸೇವೆ ಸಲ್ಲಿಸಿದರು. ೧೯೬೮ರಲ್ಲಿ ಪದ್ಮಭೂಷಣ ಪ್ರಶಸ್ತಿಯನ್ನಿತ್ತು ಇವರನ್ನು ಗೌರವಿಸಲಾಗಿತ್ತು.

ಇತ್ತೀಚಿನ ಭಾರತ-ಪಾಕ್ ಸಮರದಲ್ಲಿ ಇವರು ತೋರಿರುವ ಸಾ
ಅಸಾಮಾನ್ಯವಾದುದು. ಈ ಕಾರಣದಿಂದಾಗಿ 'ಪದ್ಮವಿಭೂಷಣ' ಪ್ರಶಸ್ತಿ
ಇವರಿಗೆ ದೊರೆತಿರುವುದು ಅತ್ಯಂತ ಶ್ಲಾಘನೀಯವಾಗಿದೆ.

ಭಾರತದ ಅಡ್ಮಿರಲ್ ಎಸ್. ಎಂ. ನಂದ ಅವರು

ಅಡ್ಮಿರಲ್ ಎಸ್. ಎಂ. ನಂದಾ

ಅಡ್ಮಿರಲ್ ಎಸ್. ಎಂ. ನಂದಾ ಅವರು ೧೯೧೫ರಲ್ಲಿ ಜನಿಸಿದರು. ಇವರು ೧೯೪೧ರಲ್ಲಿ ರಾಯಲ್ ಇಂಡಿಯನ್ ನೇವೆಲ್ ವಾಲಂಟಿಯರ್ ರಿಜರ್ವ್‌ಗೆ ಸೇರಿದರು. ಅದಕ್ಕೆ ಮುಂಚೆ ಅವರು ಕರಾಚಿ ಪೋರ್ಟ್ ಟ್ರಸ್ಟ್‌ನಲ್ಲಿ ಸೇವೆ ಸಲ್ಲಿಸುತ್ತಿದ್ದರು.

ಸ್ವಾತಂತ್ರ್ಯಾನಂತರ ಅಡ್ಮಿರಲ್ ನಂದಾ ಅವರು ಅನೇಕ ಪ್ರಮುಖ ಹುದ್ದೆಗಳಲ್ಲಿದ್ದು ಅಪಾರ ಅನುಭವ ಗಳಿಸಿದರು. ೧೯೬೧ರಲ್ಲಿ ಅತಿ ವಿಶಿಷ್ಟ ಸೇವಾ ಪದಕವೂ, ೧೯೬೬ರಲ್ಲಿ ಪರಮವಿಶಿಷ್ಟ ಸೇವಾ ಪದಕವೂ ಇವರಿಗೆ ಲಭಿಸಿತು.

ಲಂಡನ್ನಿನ ಇಂಪೀರಿಯಲ್ ರಕ್ಷಣಾ ಕಾಲೇಜಿನಲ್ಲಿ ತರಬೇತಿ ಪಡೆದಿರುವ ಶ್ರೀ ನಂದಾ ಅವರು ನೌಕಾದಳದ ಮೊದಲ ಕ್ರೂಸಿಯರ್ ಐ. ಎನ್. ಎಸ್. ದೆಹಲಿಯ ಮೊದಲ ಲೆಫ್ಟಿನೆಂಟ್ ಆಗಿ ಸೇವೆಸಲ್ಲಿಸಿದರು. ಲಂಡನ್ನಿನಿಂದ ಭಾರತಕ್ಕೆ ಮರಳಿದ ನಂತರ ನೌಕಾಕೇಂದ್ರ ಕಚೇರಿಯಲ್ಲಿ ಸುಮಾರು ಎರಡು ವರ್ಷಗಳ ಕಾಲ (೧೯೪೯-೫೧) ವಿಭಾಗಾಧಿಕಾರಿಯಾಗಿದ್ದರು.

ಐ. ಎನ್. ಎಸ್. ರಣಜಿತ್‌ನ ದಳಪತಿಯಾಗಿದ್ದ ನಂದಾ ಅವರು ೧೯೬೨ರಲ್ಲಿ ರಿಯರ್ ಅಡ್ಮಿರಲ್ ದರ್ಜೆಗೇರಿದರು. ಮುಂಬಯಿಯ ಮಜಗಾಂವ್ ಬಂದರು ಕಟ್ಟೆಯ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ನೇಮಕಗೊಂಡ ಅವರು ಅಲ್ಲಿನ ತಮ್ಮ ಸೇವಾವಧಿಯಲ್ಲಿ ಭಾರೀ ಸುಧಾರಣೆ ಮಾಡಿದರು.

೧೯೭೦ರ ಫೆಬ್ರವರಿ ೨೮ರಂದು ಇವರು ಭಾರತೀಯ ನೌಕಾಪಡೆಯ ದಂಡನಾಯಕರಾಗಿ ಅಧಿಕಾರ ಸ್ವೀಕರಿಸಿದರು.

ಇತ್ತೀಚಿನ ಭಾರತ-ಪಾಕ್ ಯುದ್ಧದಲ್ಲಿ ಭಾರತೀಯ ವಿಮಾನ ಪಡೆಯಂತೆ ನೌಕಾಪಡೆಯೂ ಸಹಕರಿಸಿ ಸಾಹಸದಿಂದ ಹೋರಾಡಿ, ಭಾರತವು ಜಯಗಳಿಸುವುದರಲ್ಲಿ ಭಾಗಿಯಾಗಿತ್ತು. ಈ ಕಾರಣದಿಂದಾಗಿ ನೌಕಾಪಡೆಯ ದಂಡನಾಯಕರಾದ ಅಡ್ಮಿರಲ್ ಎಸ್. ಎಂ. ನಂದಾ ಅವರಿಗೆ ಕೇಂದ್ರ ಸರ್ಕಾರವು "ಪದ್ಮವಿಭೂಷಣ" ಪ್ರಶಸ್ತಿಯನ್ನಿತ್ತು ಗೌರವಿಸಿತು.

ಏರ್. ಚೀಫ್‌ಮಾರ್ಷಲ್ ಪಿ. ಸಿ. ಲಾಲ್

ಏರ್ ಚೀಫ್ ಮಾರ್ಷಲ್ ಪಿ.ಸಿ. ಲಾಲ್ ಅವರು ೧೯೧೩ರ ಡಿಸೆಂಬ ೧೬ರಂದು ಲೂಧಿಯಾನಾದಲ್ಲಿ ಜನಿಸಿದರು. ದೆಹಲಿ ಮತ್ತು ಲಂಡನ್‌ಗಳಲ್ಲಿ ತಮ ವಿದ್ಯಾಭ್ಯಾಸವನ್ನು ನಡೆಸಿ, ಇವರು ಕಿಂಗ್ಸ್ ಕಾಲೇಜಿನಲ್ಲಿ ಪದವಿಯನ್ನು ಪಡೆದರ ಅನಂತರ ವಕೀಲಿ ವೃತ್ತಿಗೆ ತರಬೇತಿ ನಡೆಯುತ್ತಿದ್ದಂತೆಯೇ ಎರಡನೆಯ ಮಹ ಯುದ್ಧ ಇವರ ವ್ಯಾಸಂಗಕ್ಕೆ ಅಡ್ಡಿಯಾಯಿತು.

೧೯೩೨ರಲ್ಲಿ ವಿಮಾನ ಚಾಲನೆಯನ್ನು ಕಲಿತ ಲಾಲ್ ಅವರು ಎರಡನೆಯ ಮಹಾಯುದ್ಧದ ಅವಧಿಯಲ್ಲಿ ವೈಮಾನಿಕ ಪಡೆಯಲ್ಲಿ ಸೇವೆ ಸಲ್ಲಿಸಲು ಮುಂದಾ ದರು. ೧೯೩೯ರಲ್ಲಿ ವೈಮಾನಿಕ ಪಡೆಯನ್ನು ಸೇರಿದ ಲಾಲ್ ಅವರು ಅಂದಿನಿಂ ಅನೇಕ ಸಂದರ್ಭಗಳಲ್ಲಿ ತಮ್ಮ ಪ್ರತಿಭೆಯನ್ನು ತೋರಿದ್ದಾರೆ. ಅಲ್ಲದೆ ಹಲ ಪ್ರಮುಖ ಸ್ಥಾನಗಳಲ್ಲಿಯೂ ಇವರು ಸೇವೆ ಸಲ್ಲಿಸಿದ್ದಾರೆ.

ಇಂಡಿಯನ್ ಏರ್‌ಲೈನ್ಸ್ ಕಾರ್ಪೊರೇಷನ್ನಿನ ಜನರಲ್ ಮ್ಯಾನೇಜರ್ ಆ ಶ್ರೀ ಲಾಲ್ ಅವರು ಐದು ವರ್ಷಗಳ ಕಾಲ ಸೇವೆ ಸಲ್ಲಿಸಿರುವರು. ಈ ಅವ ಯಲ್ಲಿ ಸಂಸ್ಥೆಯು ಮೊತ್ತ ಮೊದಲ ಬಾರಿಗೆ ಲಾಭ ಗಳಿಸಿತು.

ಬೆಂಗಳೂರಿನಲ್ಲಿರುವ ಹಿಂದೂಸ್ಥಾನ್ ವಿಮಾನ ಕಾರ್ಖಾನೆಯ ಮ್ಯಾ ಜಿಂಗ್ ಡೈರೆಕ್ಟರ್ ಆಗಿಯೂ ಇವರು ಕೆಲವುಕಾಲ ಸೇವೆ ಸಲ್ಲಿಸಿದರು.

೧೯೬೯ರ ಜುಲೈ ೧೬ರಂದು ಶ್ರೀ ಲಾಲ್ ಅವರು ಭಾರತೀಯ ವೈಮಾನಿ ಪಡೆಯ ದಂಡನಾಯಕರಾಗಿ ಅಧಿಕಾರ ಸ್ವೀಕರಿಸಿದರು.

೧೯೬೫ರಲ್ಲಿ ನಡೆದ ಭಾರತ-ಪಾಕಿಸ್ತಾನ ಯುದ್ಧದಲ್ಲಿ ಶ್ರೀ ಲಾಲ್ ಅವ ಸಲ್ಲಿಸಿದ ಅಪ್ರತಿಮ ಸೇವೆಗೆ ಇವರಿಗೆ "ಪದ್ಮಭೂಷಣ" ಪ್ರಶಸ್ತಿಯನ್ನು ನೀ ಲಾಗಿತ್ತು.

ಇತ್ತೀಚಿನ ಭಾರತ-ಪಾಕ್ ಸಮರದಲ್ಲಿ ಭೂಸೇನೆಯೊಡನೆ ಸಹಕರಿ ಭಾರತ ವಿಜಯ ಗಳಿಸಿದ ಮಹತ್ಕಾರ್ಯದಲ್ಲಿ ಇವರೂ ಭಾಗಿಗಳಾದರು. ತತ್ಫ ವಾಗಿ ಕೇಂದ್ರ ಸರ್ಕಾರವು ಇವರಿಗೆ "ಪದ್ಮವಿಭೂಷಣ" ಪ್ರಶಸ್ತಿಯನ್ನಿತ್ತ ಗೌರವಿಸಿತು.

424

VIJAYA EVENING COLLEGE LIBRARY

ಭಾರತದ ಏರ್ ಚೀಫ್ ಮಾರ್ಷಲ್ ಪಿ. ಸಿ. ಲಾಲ್‌ರವರು

ನಿವೃತ್ತ ಕರ್ನಲ್ ಎ. ಎಂ. ಕಡಕೋಳ್ ಅವರು

ಧೀರಸೇನಾನಿ—ಕರ್ನಲ್ ಕಡಕೋಳ್

ಮೈಸೂರು ರಾಜ್ಯದ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದ ಒಂದು ಮನೆಯಲ್ಲಿ ಮುಂದೆ ಸಂಗ್ರಾಮದಲ್ಲಿ ವಿಸ್ಮಿತ ಕಾರ್ಯಗಳನ್ನು ತೋರಿ ಸಾಹಸಿಯೆನಿಸುವ ಶಿಶುವೊಂದರ ಜನನವಾಗಬೇಕೆಂದು ವಿಧಿ ಸಂಕಲ್ಪವಾಗಿತ್ತು. ಮೊದಲನೆಯ ಜಾಗತಿಕ ಮಹಾಯುದ್ಧದ ಕಾರ್ಮೋಡಗಳು ಆಗಸವನ್ನು ವ್ಯಾಪಿಸಿದ ಕಾಲವದು. ೧೯೧೭ರ ಸೆಪ್ಟೆಂಬರ್ ೨೯ : ಅಂದು ಅನಂತ ಚತುರ್ದಶಿ. ಈ ದಿನದಂದು ಶ್ರೀ ಮಹದೇವ ಕಡಕೋಳ್‌ರವರ ಧರ್ಮಪತ್ನಿ ರುಕ್ಮಿಣಿ ಬಾಯಿಯವರು ಗಂಡು ಮಗು ವಿಗೆ ಜನ್ಮವಿತ್ತರು. ಅನಂತ ಚತುರ್ದಶಿಯಂದು ಜನಿಸಿದ ಮಗುವಿನ ನಾಮ ಕರಣಕ್ಕೆ ತೊಂದರೆಯೇ ಆಗಲಿಲ್ಲ. 'ಅನಂತ', 'ಅಂತ್ಯ'ವಿಲ್ಲದುದು : ಅನಂತನೆಂದೇ ನಾಮಕರಣವಾಯಿತು. ಹೀಗೆ ಮಲೆನಾಡಿನ ಪರಿಸರದಲ್ಲಿ ಅನಂತ ಮಹದೇವ ಕಡಕೋಳ್ ಅವರ ಜನನವಾಯಿತು. ಸ್ವಭಾವತಃ ಸುಂದರ ಹಾಗೂ ಸದೃಢ ಶಿಶು.

ಇವರ ತಂದೆ ಮಹದೇವ ಕಡಕೋಳ್‌ರವರು ಧಾರವಾಡದಲ್ಲಿ ಸರಾಫರಾಗಿ ದ್ದರು. ಸುಸಂಸ್ಕೃತ ಮನೆತನ. ಹೃದಯದ ಶ್ರೀಮಂತಿಕೆ ಮನೆತನದ ಸಿರಿವಂತಿಕೆ ಯನ್ನು ವಿಸ್ತರಿಸುತ್ತಿತ್ತು.

ತಾಯಿಯ ತವರೂರು ಶಿಕಾರಿಪುರ ಅನಂತನ ಹುಟ್ಟೂರು : ಮೈಸೂರಿನ ಮಲೆನಾಡಿನ ಸೀಮೆ : ಬೆಳೆದುದು ಉತ್ತರ ಕರ್ನಾಟಕದ ಅಚ್ಚ ಬಯಲು ಸೀಮೆ, ಧಾರವಾಡದ ಸವಣೂರು. ಮುಂದೆ ಇಡೀ ಭಾರತ ಯೂರೋಪು ಕಾರ್ಯಕ್ಷೇತ್ರ ವಾಯಿತು. ಹೀಗಾಗಿ ಅವರಲ್ಲಿ ನಿರ್ದಿಷ್ಟ ಸೀಮೆಯ ತರ-ತಮ ಭಾವನೆಗಳಿಲ್ಲ. ಭಾರತೀಯ ಭಾವನೆಗಳನ್ನೇ ಮೈಗೂಡಿಸಿಕೊಂಡು ಬಂದ ಅಚ್ಚಕನ್ನಡಿಗರಾದ ಶ್ರೀ ಅನಂತ ಕಡಕೋಳ್ ಅವರಲ್ಲಿ ದುರಭಿಮಾನವಿಲ್ಲ ; ಸ್ಪರ್ಧಾ ಚಾಪಲ್ಯವಿಲ್ಲ. ಸಹಕಾರದ ಮನೋಭಾವವಿದೆ. ಆಸೆ ಆಕಾಂಕ್ಷೆಗಳಿವೆ.

ಶ್ರೀ ಅನಂತ ಕಡಕೋಳ್‌ರವರ ಬಾಲ್ಯ ಸುಗಮವಾಗಿರಲಿಲ್ಲ. ಕೇವಲ ಹನ್ನೊಂದು ತಿಂಗಳ ಮಗುವಾಗಿದ್ದಾಗಲೇ ತಾಯಿಯ ಸುಖದಿಂದ ವಂಚಿತರಾದರು. ಮೊತ್ತಮೊದಲು ಭಾರತದಲ್ಲಿ ಇಣುಕಿದ ಇನ್‌ಫ್ಲೂಯೆನ್‌ಜಾ ವ್ಯಾಧಿಗೆ ರುಕ್ಮಿಣಿ ಬಾಯಿ ಬಲಿಯಾದರು. ಮುಂದೆ ಶ್ರೀ ಅನಂತ ಅವರು ತಮ್ಮ ೧೫ನೆಯ ವರ್ಷದಲ್ಲಿ ತಂದೆಯನ್ನು ಕಳೆದುಕೊಂಡರು. ತಂದೆ ಹಾಕಿಕೊಟ್ಟ ಮೇಲ್ಪಂಕ್ತಿ ಯನ್ನನುಸರಿಸಿದ ಫಲವಾಗಿ ಶ್ರೀ ಅನಂತ ಅವರು ಪ್ರತಿಯೊಂದು ತರಗತಿಯಲ್ಲಿಯೂ

ಮೊದಲನೆಯ ಶ್ರೇಣಿಯಲ್ಲಿಯೇ ಉತ್ತೀರ್ಣರಾಗುತ್ತ ಬಂದರು.

ಶ್ರೀ ಅನಂತ ಅವರ ಹೈಸ್ಕೂಲು ಶಿಕ್ಷಣ ಸವಣೂರಿನಲ್ಲಿ ನಡೆಯಿತು. (ಪ್ರೊ|| ವಿ. ಕೆ. ಗೋಕಾಕ್ ಅವರೂ ಇದೇ ಹೈಸ್ಕೂಲಿನ ವಿದ್ಯಾರ್ಥಿ) ೧೯೩೬ರಲ್ಲಿ ಮೆಟ್ರಿಕ್ ಮುಗಿಯಿತು.

ಅನಂತರ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಇಂಟರ್ ಮೀಡಿಯೆಟ್ ಪರೀಕ್ಷೆ ಮುಗಿಸಿಕೊಂಡು ಸಾಂಗ್ಲಿಯ ವಿಲ್ಲಿಂಗ್‌ಡನ್ ಕಾಲೇಜಿನಲ್ಲಿ ವ್ಯಾಸಂಗವನ್ನು ಮುಂದುವರಿಸಿದರು. ಅನಂತರ ಬೊಂಬಾಯಿ ವಿಶ್ವವಿದ್ಯಾನಿಲಯದಲ್ಲಿ ಅರ್ಥ ಶಾಸ್ತ್ರ ಪದವಿಯನ್ನು ಗಳಿಸಿದರು. ಸಾಂಗ್ಲಿಯಲ್ಲಿ ಡಾ||ರಂ. ಶ್ರೀ. ಮುಗಳಿಯವರು ಶ್ರೀ ಕಡಕೋಳ್ ಅವರಿಗೆ ಅಧ್ಯಾಪಕರಾಗಿದ್ದರು.

ಶಿಕ್ಷಣ ಪಡೆಯುತ್ತಿರುವಾಗ ಹಿರಿಯ ಸಾಹಿತಿಗಳ ಒಡನಾಟ ಲಭಿಸಿದುದ ರಿಂದಾಗಿ ಇವರಲ್ಲಿ ಸಹಜವಾಗಿಯೇ ಸಾಹಿತ್ಯದ ಬೀಜ ಮೊಳಕೆಯೊಡೆಯಿತು ಆಂಗ್ಲರ ಭಾಷೆಯ ಮೇಲೆ ಇವರಿಗೆ ಪ್ರಭುತ್ವ ಲಭಿಸಿತು. ಇವರ ಒಂದು ಇಂಗ್ಲಿಷ್ ಪ್ರಬಂಧವನ್ನು ಓದಿದ ಇವರ ಪ್ರೊಫೆಸರ್ ಶ್ರೀ ಧ್ರುವರವರು —"You have surpassed A.G. Gardiner in style" ಎಂದು ಶ್ಲಾಘಿಸಿದ್ದರು.

ಎಂ. ಎ. ಶಿಕ್ಷಣ ಮುಗಿಯುವ ಮುನ್ನ ಜೀವನ ಪ್ರಾರಂಭಿಸುವ ಸಮಯ ಬಂದಾಗ ತಾನೇನಾಗಬೇಕೆಂಬ ನಿರ್ಧಾರಕ್ಕೆ ಶ್ರೀ ಕಡಕೋಳ್ ಅವರು ಬರಬೇಕಾ ಯಿತು. ಮನೆತನದಿಂದ ಬಳುವಳಿಯಾಗಿ ಬಂದಿದ್ದ ಶಿಸ್ತು-ಸಂಯಮ ಸಂಘಟನಾ ಶಕ್ತಿಗಳ ಆಧಾರದ ಮೇಲೆ ತಾವು ಸೈನಿಕರಾಗಬೇಕೆಂದೇ ಇವರು ನಿರ್ಧರಿಸಿದರು. ಎಂ. ಎ. ಪರೀಕ್ಷೆಗೆ ವ್ಯಾಸಂಗ ಮಾಡುತ್ತಿದ್ದಾಗ ಬೆಂಗಳೂರಿನ ಸೈನಿಕ್ ಕ್ಯಾಡೆಟ್ ಕಾಲೇಜನ್ನು ಸೇರಿ ಸೈನಿಕ ಶಿಕ್ಷಣದಲ್ಲಿಯೂ ತರಬೇತಿಯನ್ನು ಪಡೆದರು.

ಅದು ಎರಡನೆಯ ಮಹಾಯುದ್ಧ ನಡೆಯುತ್ತಿದ್ದ ಕಾಲ. ಶ್ರೀ ಅನಂತ ಕಡಕೋಳ್ ಮರಾಠಾ ರೆಜಿಮೆಂಟಿನಲ್ಲಿ ದಾಖಲಾಗಿ ಬಲೂಚಿಸ್ತಾನ, ಲಿಬಿಯಾ ಈಜಿಪ್ಟ್‌ಗಳ ಯುದ್ಧ ರಂಗಗಳಲ್ಲಿ ಭಾಗವಹಿಸಿದ್ದರು. ಇಟಲಿಯ ರಣರಂಗದಲ್ಲಿ 'ಎಂಟನೆಯ ಆರ್ಮಿ'ಯ ಕಾರ್ಯಾಚರಣೆಯಲ್ಲಿ ಇವರು ಎದುರಿಸಿದ ಪರಿಸ್ಥಿತಿ ಅಸಾಧಾರಣವಾದುದು. ಅಲ್ಲಿ ಸ್ಯಾಂಗ್ರೊ ನದಿಯನ್ನು ದಾಟುತ್ತಿದ್ದಾಗ ಎದುರು ಗಡೆಯಿಂದ ನಡೆಯುತ್ತಿದ್ದ ಶತ್ರುಗಳ 'ಫ್ಲೇಮ್ ಥ್ರೋಯರ್' ದಾಳಿಗೆ ಸಿಕ್ಕಿ ರಣ ರಂಗದಲ್ಲಿಯೇ ಎಚ್ಚರ ತಪ್ಪಿ ಬಿದ್ದುಬಿಟ್ಟರು. ಮೈಕೈಗಳೆಲ್ಲ ಸುಟ್ಟು ಹೋಗಿದ್ದುವು.

ದಾಳಿ ನಿಂತ ನಂತರ ಕ್ಯಾಷ್ಯುಯಾಲ್ಟಿ ಕ್ಲಿಯರಿಂಗ್ ಸೆಕ್ಷನ್‌ನವರು ಹೆಣಗಳನ್ನು ಹೊತ್ತು ತರುವ ಕಾರ್ಯದಲ್ಲಿ ನಿರತರಾದರು. ಹಾಗೆಯೇ ಕಡಕೋಳರ ದೇಹ ವನ್ನೂ ಮೇಲಕ್ಕೆತ್ತಿದರು; ನರಳಾಟ ಕೇಳಿಬಂತು. ಕೂಡಲೇ ಅವರನ್ನು ಆಸ್ಪತ್ರೆಗೆ ಸಾಗಿಸಿದರು. ಆರು ತಿಂಗಳ ಕಾಲ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ನಂತರ ಗುಣ ಮುಖರಾದ ಇವರು ಪುನಃ ಸಮರದಲ್ಲಿ ಕಾರ್ಯಾಚರಣೆ ನಡೆಸಲು ಅಣಿಯಾದರು.

ಕ್ಯಾಪ್ಟನ್ನರಾಗಿದ್ದ ಶ್ರೀ ಕಡಕೋಳ್‌ರವರಿಗೆ ೧೯೪೬ರಲ್ಲಿ ಮೇಜರ್ ಪದವಿಗೆ ಬಡ್ತಿ ದೊರಕಿತು. ೧೯೪೮ರಲ್ಲಿ ಪಾಕಿಸ್ತಾನ ದಾಳಿ ನಡೆಸಿದಾಗ ಮೇಜರ್ ಕಡಕೋಳ್ ತಮ್ಮ ಮೂರನೇ ಪಾರಾರೆಜಿಮೆಂಟ್‌ನೊಂದಿಗೆ ಹೊರಟು ಧೀರೊದಾತ್ತರಾಗಿ ಕಾದಾಡಿದರು. 'ಜಾಂಘರ್' ಕಾರ್ಯಾಚರಣೆಯ ರೂಪರೇಖೆಗಳನ್ನು ಸಿದ್ಧಪಡಿಸಿದವರು ಇವರೇ. ಇವರ ಸಮರ್ಥ ನಿರ್ದೇಶನದಲ್ಲಿ 'ಜಾಂಘರ್' ಸಂರಕ್ಷಣಾಕಾರ್ಯ ಯಶಸ್ವಿಯಾಯಿತು. ಅವರ ಈ ಅಪ್ರತಿಮ ಸಾಹಸವನ್ನು ಕಂಡು ಸಮರ ತಜ್ಞರೂ ಬೆರಗಾದರು. ಈ ಯಶಸ್ಸಿನಿಂದಾಗಿ ಶ್ರೀ ಕಡಕೋಳ್ ರವರು ಲೆಫ್ಟಿನೆಂಟ್ ಕರ್ನಲ್ ಪದವಿಗೇರಿದರು. ಜಾಂಘರ್ ಕಾರ್ಯಾಚರಣೆಯಲ್ಲಿ ಇವರು ಮೃತ್ಯುಮುಖದಿಂದ ಪಾರಾದುದೇನೋ ನಿಜ. ಆದರೆ ಒಂದು ಪಠಾಣರ ಗುಂಡು ಬಂದು ಇವರ ಕಾಲಿಗೆ ಬಡಿಯಿತು.

೧೯೪೯ರ ಮೇ ತಿಂಗಳಿನಲ್ಲಿ ಗ್ರೆನೇಡಿಯರ್ ರೆಜಿಮೆಂಟಿನಲ್ಲಿ ಬಿ. ಎನ್. ಕಮ್ಯಾಂಡರ್ ಆದರು. ಪುನಃ ಕಛ್ ಗಡಿಯಲ್ಲಿ ಕದನ-ಹೋರಾಟ, ಜಯದ ಅಂಚಿನಲ್ಲಿದ್ದಾಗ ಒಪ್ಪಂದ. ೧೯೬೨ರಲ್ಲಿ ಇವರಿಗೆ 'ಕರ್ನಲ್' ಹುದ್ದೆಗೆ ಬಡ್ತಿ ದೊರೆಯಿತು. ೧೯೬೨ ರಿಂದ ೧೯೬೭ ರವರೆಗೆ ಗ್ರೆನೇಡಿಯರ್ ರೆಜಿಮೆಂಟಿನ ಸೆಂಟರ್ ಕಮ್ಯಾಂಡೆಂಟರಾಗಿ ಅದ್ಭುತ ಸೇವೆ ಸಲ್ಲಿಸಿದರು.

೧೯೬೫ರಲ್ಲಿ ನಡೆದ ಭಾರತ-ಪಾಕ್ ಯುದ್ಧದಲ್ಲಿ ಜಯಸಲ್ಮೇರ್‌ನಿಂದ ಗಂಗಾ ನಗರದವರೆಗೆ ರಾಜಾಸ್ತಾನದ ಗಡಿಯುದ್ದಕ್ಕೂ ಇವರು ಧೀರೋದಾತ್ತರಾಗಿ ಹೋರಾಡಿದರು. ಅಷ್ಟೇ ಅಲ್ಲದೆ ४०४ ಮೈಲಿಯುದ್ದವಿರುವ ಆ ಪ್ರದೇಶದ ಅಳಿವು-ಉಳಿವಿನ ಸಂಪೂರ್ಣ ಹೊಣೆ ಇವರದೇ ಆಗಿತ್ತು. 'ಅಬ್ದುಲ್ ಹಮೀದ್' ಎಂಬ ಯೋಧ ಇವರ ಪಡೆಯಲ್ಲಿಯೇ ಇದ್ದು ಪಾಕ್ ಸೈನಿಕರಿಗೆ ಸಿಂಹಸ್ವಪ್ನರಾಗಿದ್ದು ಕಡೆಗೆ ವೀರಸ್ವರ್ಗವನ್ನೇರಿದ. ತಮ್ಮ ರೆಜಿಮೆಂಟಿನ ಸೈನಿಕರಿಗೆ ಅಚ್ಚುಮೆಚ್ಚಿನ ವರಿಷ್ಠ ಅಧಿಕಾರಿಗಳಾಗಿದ್ದರು ಶ್ರೀ ಕಡಕೋಳ್. ಯುದ್ಧ ರಂಗದಲ್ಲಿ ಸೈನಿಕರ ಕೊರತೆಯುಂಟಾದಾಗ ರಾಜಾಸ್ತಾನ ಸರ್ಕಾರವು ತನ್ನ ಸಶಸ್ತ್ರ ಪೋಲೀಸ್ ಬಲ (Armed)ವನ್ನು ಕರ್ನಲ್ ಕಡಕೋಳ್‌ರವರ ನೇತೃತ್ವದಲ್ಲಿ ಹೋರಾಡಲು ಕಳಿಸಿತು. ಒಟ್ಟು ಐದು ಮಂದಿ ಪೋಲೀಸ್ ಸೂಪರಿಂಟೆಂಡೆಂಟ್‌ಗಳು ತಮ್ಮ ಪಡೆಗಳೊಂದಿಗೆ ಕಡಕೋಳ್‌ರ ಅವರ ನೇತೃತ್ವದಲ್ಲಿ ದುಡಿದರು. ಸೈನಿಕರಿಗೆ ಇತ್ತಿರುವ ಯುದ್ಧ ತರಬೇತಿ ಈ ಪೋಲೀಸ್ ಪಡೆಗಳಿಗೆ ಇಲ್ಲವಾಗಿತ್ತು. ಆದರೂ ಕಡಕೋಳ್ ರವರು ಈ ದಳವನ್ನು ಸೂಕ್ತ ರೀತಿಯಲ್ಲಿ ಬಳಸಿಕೊಂಡರು. ಇವರು ಶಹಗಡ, ಸಾದೇವಾಲಾ, ಮುರಾರ್ ಪೋಸ್ಟ್‌ಗಳನ್ನು ವಶಪಡಿಸಿಕೊಂಡ ಕತೆ ಬಹಳ ರೋಮಾಂಚಕ.

ಶ್ರೀ ಕಡಕೋಳ್ ಅವರ ಸಮರ್ಥ ನಿರ್ದೇಶನದಲ್ಲಿ ಸೇವೆ ಸಲ್ಲಿಸಿದ ಪೋಲೀಸ್ ಸೂಪರಿಂಟೆಂಡೆಂಟ್ ಶ್ರೀ ನಾರಾಯಣಸಿಂಗ್ ಅವರಿಗೆ 'ಪದ್ಮಶ್ರೀ'

ಪ್ರಶಸ್ತಿ ಲಭಿಸಿತು. ಅಲ್ಲದೆ ಪೋಲೀಸ್ ಇಲಾಖೆಯ ಅತ್ಯಂತ ಉನ್ನತ ಫೈರ್ ಸರ್ವಿಸ್‌ನ ವಿಶೇಷ ಪೋಲೀಸ್ ಮೆಡಲ್ ದೊರೆತುವು.

ತಮ್ಮ ಅಮೋಘ ಸೇವೆಯ ಮೂಲಕ ಕರ್ನಲ್ ಕಡಕೋಳ್ ಅವರು ತಮ್ಮ ನೇತೃತ್ವದಲ್ಲಿದ್ದ ರೆಜಿಮೆಂಟಿಗೆ 'ಹನ್ನೆರಡು ಕಲರ್ಸ್' ಬಹುಮಾನಗಳನ್ನು ಗಳಿಸಿ ಕೊಟ್ಟಿರುವರು. ಈ ಬಹುಮಾನಗಳ ಜೊತೆಗೆ ರಾಷ್ಟ್ರಾಧ್ಯಕ್ಷ ಶ್ರೀ ರಾಧಾಕೃಷ್ಣನ್ ರವರು ಇವರಿಗೆ ಅತಿವಿಶಿಷ್ಟ ಸೇವಾ ಪದಕವನ್ನೂ ಇತ್ತು ಗೌರವಿಸಿದರು.

ಈಗ ಶ್ರೀ ಕಡಕೋಳ್ ಅವರು ಸೈನಿಕ ಖಾತೆಯಿಂದ ನಿವೃತ್ತರಾಗಿದ್ದರೂ ಮೈಸೂರು ರಾಜ್ಯದ ಸೈನಿಕ, ನಾವಿಕ ಮತ್ತು ವಾಯುಪಡೆಗಳ ಯೋಗಕ್ಷೇಮ ಸಮಿತಿಯ ಕಾರ್ಯದರ್ಶಿಗಳಾಗಿ ಕೆಲಸ ಮಾಡುತ್ತಿದ್ದಾರೆ. ಸೈನಿಕರಿಗೆ ಸರ್ಕಾರ ದಿಂದ ಅತ್ಯುತ್ತಮ ಸೌಲತ್ತುಗಳನ್ನು ದೊರಕಿಸಿಕೊಡುತ್ತಿದ್ದಾರೆ.

ಅಚ್ಚ ಸೈನಿಕರಾದ ಶ್ರೀ ಕಡಕೋಳ್ ಅವರ ನರನಾಡಿಗಳಲ್ಲಿ ಭಾರತೀಯತ್ವವು ಹರಿದಾಡುತ್ತಿದೆ. ಇಂದಿನ ನವನಾಗರಿಕತೆಯ ದೃಷ್ಟಿಯಲ್ಲಿ ಇವರು ವಿಕ್ಷಿಪ್ತ ವ್ಯಕ್ತಿ. ಸೈನಿಕರಾಗಿದ್ದರೂ ಮದ್ಯಮಾಂಸಗಳ ಸೇವನೆಯಿಲ್ಲ. ಹೋಗಲಿ ಒಂದು ಸಿಗರೇಟ ನ್ನಾದರೂ ಸೇದುವರೇ? ಅದೂ ಇಲ್ಲ. ನಶ್ಯದ ಚಟಕ್ಕೂ ಇವರು ದೂರ. ಎಂತಲೇ ಇವರನ್ನು ವಿಕ್ಷಿಪ್ತ ವ್ಯಕ್ತಿಯೆಂದು ಕರೆಯಲಾಗಿದೆ.

ಗದಗಿನಲ್ಲಿ ನಡೆದ ೪೩ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಪ್ರೊ|| ಕುಂದಣಗಾರರ ಪುತ್ರಿಯೇ ಶ್ರೀ ಕಡಕೋಳ್ ಅವರ ಧರ್ಮಪತ್ನಿ. ಈ ದಂಪತಿ ಗಳಿಗೆ ಮೂರು ಹೆಣ್ಣು ಮತ್ತು ಮೂರು ಗಂಡು ಮಕ್ಕಳು ಇದ್ದಾರೆ. ಇವರ ಇಬ್ಬರು ಗಂಡು ಮಕ್ಕಳು ಸೈನ್ಯದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಹಿರಿಯ ಮಗ ಮೇಜರ್ ವಿಜಯ್ ಬಾಂಗ್ಲಾದೇಶದ ರಾಂಗಪುರದಲ್ಲಿ ಹೋರಾಡಿದ್ದಾರೆ. ಕಿರಿಯ ಮಗ ಶ್ರೀ ಅರುಣ್ ನೌಕಾಸೇನೆಯಲ್ಲಿ ಅಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಇವರ ಅವಿರತ ಅಭ್ಯಾಸದ ಪ್ರವೃತ್ತಿ, ಅಪಾರ ಅನುಭವ, ರಣರಂಗದಲ್ಲಿಯ ಅದರಲ್ಲಿಯೂ ಮರಳುಗಾಡಿನ ಯುದ್ಧಗಳಲ್ಲಿ ಬಳಸುವ ತಂತ್ರ ನಾವೀನ್ಯತೆ ಮತ್ತು ಚಾಕಚಕ್ಯತೆಗಳಿಂದಾಗಿ ದೆಹಲಿಯಲ್ಲಿರುವ ಇನ್‌ಸ್ಟಿಟ್ಯೂಟ್ ಫಾರ್ ಡಿಫೆನ್ಸ್ ಸ್ಟಡೀಸ್ ಅಂಡ್ ಅನ್ಯಾಲಿಸಿಸ್ ಸಂಸ್ಥೆಯ ಸದಸ್ಯತ್ವವು ಇವರಿಗೆ ದೊರೆತಿದೆ. ಅವರ ಸೈನಿಕ ಮಾಹಿತಿಯನ್ನು ಸಿದ್ಧಗೊಳಿಸುವ ಸಾಕ್ಷಿ ಇದೊಂದೇ ಸಾಕು.

ಕರ್ನಲ್ ಕಡಕೋಳರ ಜೀತನ ಕನ್ನಡ ತರುಣರಲ್ಲಿ ವೀರಾವೇಶದ ಸ್ಫೂರ್ತಿ ಯನ್ನು ನೀಡುವುದೆಂಬುದರಲ್ಲಿ ಸಂದೇಹವಿಲ್ಲ.

ಕರ್ನಾಟಕದ ವೀರಯೋಧರು

ರಿಯರ್ ಅಡ್ಮಿರಲ್ ಇ. ಸಿ. ಕುರುವಿಲ್ಲ

ಕರಾಚಿ ಪಾಕಿಸ್ತಾನದ ಅತ್ಯಂತ ಪ್ರಮುಖ ಬಂದರು. ನೌಕಾಪಡೆಯ ದೃಷ್ಟಿಯಿಂದ ಕರಾಚಿ ಪಾಕಿಸ್ತಾನದ ಕಣ್ಣೆಂದೇ ಹೇಳಬಹುದು. ಪಾಕಿಸ್ತಾನದ ಎಲ್ಲ ವ್ಯವಹಾರಗಳೂ ನಡೆಯುವುದು ಈ ಬಂದರಿನಿಂದಲೇ. ಇತ್ತೀಚಿನ ಯುದ್ಧದಲ್ಲಿ ಭಾರತದ ನೌಕಾಸೇನೆ ಕರಾಚಿ ಬಂದರಿಗೆ ಸಾಕಷ್ಟು ಘಾಸಿಯನ್ನುಂಟುಮಾಡಿತು. ಈ ಕಾರ್ಯವನ್ನು ಸಾಧಿಸಿದ ಸಾಹಸಿಯೆಂದರೆ ರಿಯರ್ ಅಡ್ಮಿರಲ್ ಇ. ಸಿ. ಕುರುವಿಲ್ಲರವರು. ಪಾಕಿಸ್ತಾನದ ಬೃಹತ್ ಹಡಗುಗಳನ್ನು ಮುಳುಗಿಸುವ ಕಾರ್ಯದಲ್ಲಿ ಇವರು ಸ್ವತಃ ಭಾಗಿಯಾಗಿದ್ದರು. ಕರಾಚಿ ರೇವಿನ ಒಳಗಿದ್ದ ಮುಖ್ಯ ಠಾಣ್ಯಗಳನ್ನು

ಬಾಂಬುಗಳ ಮೂಲಕ ನಾಶಪಡಿಸಿ ಶತ್ರುಗಳನ್ನು ಹಿಮ್ಮೆಟ್ಟಿಸಿದರು. ಕರಾಚಿ ಬಂದರಿಗೆ ಬಲವಾದ ರಕ್ಷಣಾವ್ಯೂಹವಿದ್ದುದು ನಿಜ. ಆದರೇನು ? ಶ್ರೀ ಕುರುವಿಲ್ಲರವರಂತಹ ದಕ್ಷ ಅಧಿಕಾರಿಗಳ ನಿಲುವಿನಿಂದಾಗಿ ಹಾಗೂ ಭಾರತದ ನೌಕಾಪಡೆಯ ದಿಟ್ಟತನದಿಂದಾಗಿ ಶತ್ರುಗಳ ರಕ್ಷಣಾ ವ್ಯವಸ್ಥೆಯೆಲ್ಲ ನುಚ್ಚುನೂರಾಯಿತು.

ಶ್ರೀ ಇಲಂಜಿಕಲ್ ಚಾಂಡಿ ಕುರುವಿಲ್ಲರವರು ಬಾಲ್ಯದಿಂದಲೂ ಬುದ್ಧಿವಂತರೆಂದು ಹೆಸರ್ಗೊಂಡಿದ್ದರು. ಆಟಪಾಟಗಳಲ್ಲಿಯೂ ಇವರಿಗೆ ಅತ್ಯಾಸಕ್ತಿ, ಸಮುದ್ರಯಾನವೆಂದರಂತೂ ಇವರಿಗೆ ಅಚ್ಚುಮೆಚ್ಚು. ಮನೆಯಲ್ಲಿ ಇವರಿಗೆ ಉತ್ತಮ ಶಿಕ್ಷಣವೇ ದೊರಕಿತ್ತು. ಕಷ್ಟಪಟ್ಟು ಕೆಲಸ ಮಾಡುವುದು, ಶಿಸ್ತು ಪಾಲಿಸುವುದು ಮೊದಲಾದುವು ಇವರ ಮನೆಯಲ್ಲಿ ಮೊದಲಿನಿಂದಲೂ ಬಂದ ಸಂಪ್ರದಾಯ. ಯಾವುದೇ ಕಾರ್ಯವನ್ನಾಗಲೀ ನಿರ್ಭಯವಾಗಿ ನಿರ್ವಹಿಸುವುದು ಇವರ ಹುಟ್ಟು ಗುಣವಾಗಿತ್ತು. ಇಂತಹ ಸದ್ಗುಣಗಳೇ ಇವರನ್ನು ಉನ್ನತ ಪದವಿಗೇರುವಂತೆ ಮಾಡಿದುವು.

ಭಾರತದ ನೌಕಾದಳದಲ್ಲಿ ಇವರು ೧೯೪೬ರಲ್ಲಿ ಸಬ್ ಲೆಫ್ಟಿನೆಂಟ್ ಆಗಿ ನೇಮಕಗೊಂಡರು. ಎರಡನೆಯ ಮಹಾ ಯುದ್ಧದಲ್ಲಿಯೂ ನಾನಾ ಕ್ಷೇತ್ರಗಳಲ್ಲಿ ಇವರು ಸೇವೆ ಸಲ್ಲಿಸಿದರು. ಇವರ ಬುದ್ಧಿಚಾತುರ್ಯವನ್ನು ಗಮನಿಸಿ ಇವರನ್ನು 'ನೇವಲ್ ಗನ್ನರಿ' ಶಿಕ್ಷಣಕ್ಕಾಗಿ ಇಂಗ್ಲೆಂಡಿನಲ್ಲಿದ್ದ ಎಚ್. ಎಮ್. ಎಸ್. ಎಕ್ಸಲೆಂಟ್‌ನಲ್ಲಿ ನೇಮಿಸಲಾಯಿತು. ಎರಡನೆಯ ಮಹಾ ಯುದ್ಧ ನಡೆದಾಗ ಇವರು 'ಗನ್ನರಿ'ಅಧಿಕಾರಿಗಳಾಗಿ 'ಎಚ್. ಎಮ್.ಐ.ಎಸ್. ಸಟ್ಲೆಜ್' ಹಡಗಿನಲ್ಲಿ ಸೇವೆ ಸಲ್ಲಿಸಿದರು. ಸಮರ ನಿಮಿತ್ತವಾಗಿ ಆಗ ಜಪಾನಿಗೆ ಹೊರಟ ಹಡಗುಗಳಲ್ಲಿ ಇದೇ ಮೊದಲನೆಯದು. ಜಪಾನ್‌ಗೆ ಹೋದ ಇವರು ತಮ್ಮ ಶಕ್ತಿ ಸಾಮರ್ಥ್ಯಗಳಿಂದಾಗಿ ಮೇಲಣ ಅಧಿಕಾರಿಗಳ ಮೆಚ್ಚುಗೆಗೆ ಪಾತ್ರರಾದುದಷ್ಟೇ ಅಲ್ಲದೆ, ಸುಪ್ರೀಂ ಕಮ್ಯಾಂಡರ್ ಆಗಿದ್ದ ಲಾರ್ಡ್ ಮೌಂಟ್‌ಬ್ಯಾಟನ್‌ರವರ ಗಮನವನ್ನೂ ತಮ್ಮ ಕಡೆಗೆ ಆಕರ್ಷಿಸಿದರು. (ಆಗ ಲಾರ್ಡ್ ಮೌಂಟ್‌ಬ್ಯಾಟನ್‌ರವರು ಸೌತ್ ಈಸ್ಟ್ ಏಷ್ಯನ್ ಪಡೆಗಳ ಸುಪ್ರೀಂ ಅಲೈಡ್ ಕಮ್ಯಾಂಡರ್ ಆಗಿದ್ದರು.)

ಭಾರತವು ಇಬ್ಭಾಗವಾಗುವ ಮುನ್ನ ಅಂದರೆ ಸ್ವರಾಜ್ಯ ಲಭಿಸುವ ಮುಂಚೆ ಇವರು ಕರಾಚಿಯಲ್ಲಿದ್ದ ಎಚ್. ಎಮ್. ಎಸ್. ಹಿಮಾಲಯ ಎಂಬ ಹಡಗಿನಲ್ಲಿ ಶಿಕ್ಷಕರಾಗಿದ್ದರು.

೧೯೪೯-೬೦ರಲ್ಲಿ 'ಕ್ರೂಯಿಸರ್ ಡೆಲ್ಲಿ'ಯಲ್ಲಿ ಇವರು ಕಾರ್ಯನಿರ್ವಾಹಕರಾಗಿದ್ದರು. ಅನಂತರ 'ಕೃಷ್ಣ' ಎಂಬ ಹಡಗಿನಲ್ಲಿ ನಾವಿಕ ಶಿಕ್ಷಕರಾಗಿದ್ದರು. ಬಳಿಕ 'ಗರುಡ' ಎಂಬ ನೌಕಾ ಕ್ಷೇತ್ರದಲ್ಲಿರುವ ಶಿಕ್ಷಣ ಕೇಂದ್ರದಲ್ಲಿ ಸೇವೆ ಸಲ್ಲಿಸಿದರು. ಜೂನ್ ೧೯೬೪ರಲ್ಲಿ ಇವರಿಗೆ ಕ್ಯಾಪ್ಟನ್ ಪದವಿಗೆ ಬಡ್ತಿ ದೊರಕಿತು. ೧೯೬೩-೬೫ರಲ್ಲಿ ೧೫ನೆಯ 'ಫ್ರಿಗೇಟ್ ಸ್ಕ್ವಾಡ್ರನ್'ನ ಕ್ಯಾಪ್ಟನ್ ಆದರು. ೧೯೬೫-೬೬ರಲ್ಲಿ ವಿಶಾಖಪಟ್ಟಣದಲ್ಲಿ ಯುವಕರ ದಳದ ನಾಯಕರಾಗಿ ನೇಮಕಗೊಂಡರು.

ನವದೆಹಲಿಯ ನ್ಯಾಷನಲ್ ಡಿಫೆನ್ಸ್ ಕಾಲೇಜಿನ ಪದವೀಧರರಾದ ಇವರು ೧೯೬೭-೬೯ರಲ್ಲಿ ವಿಮಾನ ನಿರೋಧಕ 'ವಿಕ್ರಾಂತ'ದ ಪ್ರಧಾನ ನಾಯಕರಾಗಿದ್ದರು. ೧೯೭೦ರಲ್ಲಿ ನೌಕಾ ಕೇಂದ್ರ ಕಛೇರಿಯಲ್ಲಿ ಮುಖ್ಯಾಧಿಕಾರಿಗಳಾದರು. ೧೯೭೦ರ ನವೆಂಬರ್ ಮೂರರಂದು ಭಾರತದ ನೌಕಾದಳದ ಪಶ್ಚಿಮ ಪಡೆಗಳ ನಾಯಕರಾಗಿ ನೇಮಕವಾದುದು ಇವರ ಜೀವನದಲ್ಲಿ ಅತಿ ಮುಖ್ಯ ಘಟನೆಯೆನ್ನಬಹುದು.

ಕರಾಚಿಯ ಮುತ್ತಿಗೆಯಲ್ಲಿ ಇವರದೇ ಮುಖ್ಯ ಪಾತ್ರವಾಗಿತ್ತು. ಅಂದಿನ ಮಿಲಿಟರಿ ಕಾರ್ಯಾಚರಣೆಗೆ ಇವರೇ ನಿರ್ದೇಶಕರಾಗಿದ್ದು, ಆ ಕಾರ್ಯವನ್ನು ಬಹಳ ಯಶಸ್ವಿಕರವಾಗಿ ನಡೆಸಿದುದರಿಂದ ಆ ಸುದ್ದಿ ಇಂದಿಗೂ ಜಗತ್ಪ್ರಸಿದ್ಧವಾಗಿದೆ. ಕರಾಚಿಯ ಬಂದರಿನಲ್ಲಿ ಶತ್ರುಗಳನ್ನು ನಡುಗಿಸಿ ಜಯಭೇರಿ ಹೊಡೆಯುವುದೆಂದರೆ ಅದು ಹುಡುಗಾಟದ ಮಾತಲ್ಲ. ಇದನ್ನು ಗಮನಿಸಿದ ಉನ್ನತ ಸೇನಾಧಿಕಾರಿಗಳು

ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಅರಬ್ಬೀ ಸಮುದ್ರದಲ್ಲಿ ಇವರು ಶತ್ರುಗಳಿಗೆ ಸಿಂಹಸ್ವರೂಪವಾಗಿದ್ದರು. ಇವರ ಪಡೆಯೆಂದರೆ ಪಾಕಿಸ್ತಾನೀಯರಿಗೆ ಸಿಂಹಸ್ವಪ್ನ. ಭಾರತದ ನೌಕಾದಳದ ಇತಿಹಾಸದಲ್ಲಿ ಅರಬ್ಬೀ ಸಮುದ್ರದಲ್ಲಿ ನಡೆದ ಕಾರ್ಯಾಚರಣೆಗಳು ಅಗ್ರಸ್ಥಾನ ಪಡೆದಿದೆ. ನೌಕಾಬಲದ ತಜ್ಞರು ರಿಯರ್ ಅಡ್ಮಿರಲ್ ಇ. ಸಿ. ಕುರುವಿಲ್ಲಾರವರ ನವೀನ ಮಾರ್ಗಗಳಿಗೆ ಮಾರುಹೋಗಿ, ಇತರರೂ ಈ ನೂತನ ಸಂವಿಧಾನವನ್ನು ಅನುಸರಿಸಬೇಕೆಂದು ತಿಳಿಸಿದ್ದಾರೆ. ಅರಬ್ಬೀ ಸಮುದ್ರದಲ್ಲಿ ಇವರು ಹೊಸಬಗೆಯ ರಚನಾತ್ಮಕ ಕಾರ್ಯಗಳನ್ನು ನಡೆಸಿ, ಹೆಸರಾಂತ ಅಡ್ಮಿರಲ್ ಆಗಿದ್ದಾರೆ. ಕರಾಚಿ ಮುತ್ತಿಗೆಯ ವಿಚಾರವಾಗಿ ಬರೆಯುವುದಾದರೆ ಅದೇ ಒಂದು ಇತಿಹಾಸ ವಾದೀತು. ಈ ಮುತ್ತಿಗೆ ಜಗತ್ತಿನ ಎಲ್ಲಾ ನೌಕಾ ಪಡೆಗಳಿಗೂ ಕಣ್ತೆರೆಸಿದೆ.

೧೯೭೧ರಲ್ಲಿ ಇವರಿಗೆ ಅತಿವಿಶಿಷ್ಟ ಸೇವಾಪದಕವೂ ದೊರಕಿತು. ಅನಂತರದ ಇವರ ಸಾಹಸ ಕಾರ್ಯಕ್ಕಾಗಿ ಪರಮವಿಶಿಷ್ಟ ಸೇವಾಪದಕವೂ ದೊರಕಿದೆ. ರಾಷ್ಟ್ರಪತಿ ನಿವಾಸದಲ್ಲಿ ನಡೆದ ಸನ್ಮಾನ ಸಮಾರಂಭದಲ್ಲಿ ಓದಿದ ಇವರ ಪ್ರಶಸ್ತಿ ಪತ್ರ ಈ ರೀತಿಯಿದೆ—

“ಪಶ್ಚಿಮ ಪಡೆಗಳ ನಾಯಕರಾದ ಫ್ಲಾಗ್ ಆಫೀಸರ್ ರಿಯರ್ ಅಡ್ಮಿರಲ್ ಎಲೆಂಜಿಕಲ್ ಚಾಂಡಿ ಕುರುವಿಲ್ಲರವರು ಪಶ್ಚಿಮ ವಿಭಾಗದ ಭಾರತೀಯ ನೌಕಾ ಪಡೆಯ ಕಾರ್ಯಾಚರಣೆಗಳ ಪ್ರಧಾನ ನಿರ್ದೇಶಕರಾಗಿದ್ದು, ಪಶ್ಚಿಮ ಕರಾವಳಿಯ ಭದ್ರತೆಯನ್ನು ಕಾಪಾಡುವುದಕ್ಕೂ, ಪಾಕಿಸ್ತಾನದ ನೌಕಾ ದಾಳಿಯ ವಿರುದ್ಧ ಸೂಕ್ತ ಕ್ರಮಗಳನ್ನು ಕೈಗೊಳ್ಳುವುದಕ್ಕೂ ಸಂಪೂರ್ಣ ಜವಾಬ್ದಾರಿ ಹೊಂದಿದ್ದರು. ಅನುಕರಣೀಯವಾದ ಹಾಗೂ ಆದರ್ಶಪ್ರಾಯವಾಗಿರುವ ರೀತಿಯಲ್ಲಿ ಈ ನೌಕಾ ಪಡೆಗಳ ಅಧಿಕಾರಿಯು ತಮ್ಮ ದಳಗಳನ್ನು ಸೂಕ್ತ ಸಮಯಗಳಲ್ಲಿ ಮುನ್ನಡೆಯು ವಂತೆ ಮಾಡಿದರು. ಹಾಗೂ ನೌಕಾ ದಳಗಳ ಕಾರ್ಯಾಚರಣೆಗಳನ್ನು ಸುವ್ಯವ ಸ್ಥಿತವಾಗಿ ಮತ್ತು ಉನ್ನತಮಟ್ಟದಲ್ಲಿ ನಡೆಸಿಕೊಂಡು ಬಂದಿರುವುದಲ್ಲದೆ ಸಮಯ ಸ್ಫೂರ್ತಿಯನ್ನೂ ವ್ಯಕ್ತಪಡಿಸಿದ್ದಾರೆ.

“ಇದುವರೆಗೂ ಯಾರೂ ಮಾಡದೇ ಇದ್ದ ಅಭೇದ್ಯವಾದ ಕರಾಚಿ ಬಂದರಿನ ಮೇಲೆ ದಾಳಿ ನಡೆಸಿ ಶತ್ರುಪಡೆಯೊಂದಿಗೆ ನಡೆದ ಸಮರದಲ್ಲಿ ಜಯಶಾಲಿಗಳಾಗಿ, ಶತ್ರುಗಳ ಬಂದರುಗಳಿಗೆ ಅಪಾರ ನಷ್ಟವನ್ನುಂಟುಮಾಡಿದರು. ಕರಾಚಿಯ ಒಳ ಭಾಗದ ಬಂದರಿನಲ್ಲಿಯೇ ಪಾಕ್ ಹಡಗುಗಳನ್ನು ದಿಗ್ಬಂಧನ ಮಾಡಿದುದರ ಪರಿ ಣಾಮವಾಗಿ ನಮ್ಮ ನೌಕಾಪಡೆಯವರು ನಿರ್ಬಾಧಕವಾಗಿ ಪಾಕ್ ಸಮುದ್ರ ಪ್ರದೇಶ ಗಳಲ್ಲಿ ಚಲಿಸುವಂತಾಯಿತು. ಇಷ್ಟೇ ಅಲ್ಲದೆ ಈ ರೀತಿಯ ದಿಟ್ಟತನದ ಕಾರ್ಯಾ ಚರಣೆಯು ಇಡೀ ದೇಶಕ್ಕೆ ಕೀರ್ತಿ ತಂದಿದೆ. ಪರಿಸ್ಥಿತಿ ಹೀಗಾದುದರಿಂದ ಪಾಕ್ ನೌಕಾಪಡೆಗಳು ಯುದ್ಧ ಮಾಡಲಾರದೆ ಸ್ತಬ್ಧವಾದುವು. ಹೀಗೆ ಅಡ್ಮಿರಲ್ ಶ್ರೀ

ಚಾಂಡಿ ಕುರುವಿಲ್ಲರವರು ವಿಶೇಷ ರೀತಿಯ ಮಹೋನ್ನತ ಸೇವೆಯನ್ನು ಸಲ್ಲಿಸಿ ಗೌರವಕ್ಕೆ ಪಾತ್ರರಾಗಿದ್ದಾರೆ."

* * *

ಇಷ್ಟನ್ನು ಓದಿದ ಬಳಿಕ ರಾಷ್ಟ್ರಾಧ್ಯಕ್ಷರು ಇವರಿಗೆ ಪದಕಗಳನ್ನು ನೀಡಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಶ್ರೀ ಕುರುವಿಲ್ಲರವರು ತಮ್ಮ ವಿರಾಮ ಕಾಲವನ್ನು ತಮ್ಮ ಕೈಕೆಳಗಿನ ಸೈನಿಕರ ಯೋಗಕ್ಷೇಮವನ್ನು ವಿಚಾರಿಸಿ ನೆರವು ನೀಡುವುದರಲ್ಲಿ ಕಳೆಯುತ್ತಾರೆ. ಕುದುರೆ ಸವಾರಿಯೆಂದರೆ ಇವರಿಗೆ ಬಹಳ ಇಷ್ಟ.

ಶ್ರೀ ಕುರುವಿಲ್ಲರವರಿಗೆ ಇಬ್ಬರು ಸಹೋದರರೂ ಒಬ್ಬ ಸಹೋದರಿಯೂ ಇದ್ದಾರೆ. ಅಣ್ಣಂದಿರಾದ ಶ್ರೀ ಎ. ಜೆ. ಕುರುವಿಲ್ಲರವರು ಕಾಫಿ ಪ್ಲಾಂಟರ್ ಮತ್ತು ಕೈಗಾರಿಕೋದ್ಯಮಿಗಳೂ ಆಗಿದ್ದಾರೆ. ಇವರ ತಮ್ಮ ನೌಕಾ ಪಡೆಯಲ್ಲಿಯೇ ಕ್ಯಾಪ್ಟನ್ ಆಗಿದ್ದಾರೆ. ಸೋದರಿ ಶ್ರೀಮತಿ ಎಲ್. ಎಸ್. ದಾಸ್‌ರವರು ತಮ್ಮ ಪತಿಯೊಡನೆ ಕಲ್ಕತ್ತೆಯಲ್ಲಿ ವಾಸವಾಗಿದ್ದಾರೆ.

ಶ್ರೀ ಕುರುವಿಲ್ಲರವರ ತಾತಂದಿರು (ತಾಯಿಯ ತಂದೆ) ಹಿಂದೆ ಮೈಸೂರು ಸರ್ಕಾರದಲ್ಲಿ ಅತ್ಯಂತ ಹಿರಿಯ ಅಧಿಕಾರಿಗಳಾಗಿದ್ದರು. ಅವರೇ ರಾಜಸಭಾಭೂಷಣ ಕೆ. ಚಾಂಡಿಯವರು. ಇವರು ಮೈಸೂರು ಮಹಾರಾಜರ ಮಂತ್ರಾಲೋಚನಾ ಸಭೆಯಲ್ಲಿ ಪ್ರಥಮ ಸದಸ್ಯರಾಗಿದ್ದರು. ಅಲ್ಲದೆ ಹಂಗಾಮಿ ದಿವಾನರಾಗಿಯೂ ನಮ್ಮ ನಾಡಿಗೆ ತಮ್ಮ ಸೇವೆ ಸಲ್ಲಿಸಿದ್ದಾರೆ. ಶ್ರೀ ಇ. ಸಿ. ಕುರುವಿಲ್ಲರವರ ತಾಯಿಯ ಇಬ್ಬರು ಸಹೋದರರೂ ನಮ್ಮ ಮೈಸೂರು ಸರ್ಕಾರದಲ್ಲಿ ಉನ್ನತಾಧಿಕಾರಿಗಳಾಗಿದ್ದರು. ಒಬ್ಬರು ವಿದ್ಯುತ್ ಇಲಾಖೆಯ ಮುಖ್ಯ ಇಂಜನಿಯರ್ ಆಗಿದ್ದ ಶ್ರೀ ಜಾರ್ಜ್ ಚಾಂಡಿಯವರು. ಇನ್ನೊಬ್ಬರು ರಾಜ್ಯದ ಪೋಲೀಸ್ ಕಮಿಷನರ್ ಆಗಿದ್ದ ಶ್ರೀ ಸಿ. ಚಾಂಡಿಯವರು.

ಶ್ರೀ ಇ. ಸಿ. ಕುರುವಿಲ್ಲಾರವರ ತಂದೆಯ ತಂದೆ ಶ್ರೀ ಇ. ಜೆ. ಜಾನ್‌ರವರು ತಿರುವಾಂಕೂರಿನಲ್ಲಿ ಪ್ರಖ್ಯಾತ ವಕೀಲರಾಗಿದ್ದರು. ಹಾಗೂ ತಿರುವಾಂಕೂರಿನ ಲಾ ಕಾಲೇಜಿನಲ್ಲಿ ಪಿನ್ಸಿಪಾಲರೂ ಆಗಿದ್ದರು. ಶ್ರೀ ಕುರುವಿಲ್ಲರವರ ತಾಯಿತಂದೆಗಳು ತಿರುವಾಂಕೂರು ಕಾಂಗ್ರೆಸ್ ಸಂಸ್ಥೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಇದರಿಂದಾಗಿ ಅವರು ಅಂದಿನ ತಿರುವಾಂಕೂರು ದಿವಾನರಾಗಿದ್ದ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್‌ರವರ ಆಗ್ರಹಕ್ಕೆ ಪಾತ್ರರಾಗಬೇಕಾಯಿತು. ಪರಿಣಾಮವಾಗಿ ಸೆರೆಮನೆಯ ವಾಸವನ್ನೂ ಅನುಭವಿಸಬೇಕಾಯಿತು. ಇವರ ಚಿಕ್ಕಪ್ಪನವರಾದ ಶ್ರೀ ಇ. ಜಾರ್ಜ್ ಫಿಲ್ಲಿಪೋಸ್‌ರವರೂ ಸಹ ಕಾಂಗ್ರೆಸ್ ಮುಖಂಡರಾಗಿದ್ದರು. ಸ್ವರಾಜ್ಯ ಬಂದ ಬಳಿಕ ರೈಲ್ವೆ ಸಚಿವರಾದರು. ಸ್ವತಂತ್ರ ಭಾರತದ ಪ್ರಥಮ ಅರ್ಥ ಸಚಿವರಾಗಿದ್ದ ಶ್ರೀ ಜಾನ್ ಮಥಾಯ್‌ರವರ ಪತ್ನಿ ಶ್ರೀ ಕುರುವಿಲ್ಲರವರ ತಂದೆಯ ಸೋದರಿ.

ಹೀಗೆ ಸುಪ್ರಸಿದ್ಧ ಮನೆತನಕ್ಕೆ ಸೇರಿದ ಶ್ರೀ ಕುರುವಿಲ್ಲರವರು ಸಮರದಲ್ಲಿ ಭಾಗವಹಿಸಿ, ಅತ್ಯುನ್ನತ ಪದವಿಗೇರಿ, ಪ್ರಶಸ್ತಿಗಳನ್ನು ಪಡೆದು ತಮ್ಮ ಮನೆತನಕ್ಕೆ ಗೌರವವನ್ನು ತಂದಿರುವರು.

ಇವರದು ಮಾದರಿಯ ಕುಟುಂಬ, ಅನುಕೂಲೆಯಾದ ಪತ್ನಿ ಮತ್ತು ಇಬ್ಬರು ಹೆಣ್ಣು ಮಕ್ಕಳು ಇರುವರು.

ಶ್ರೀ ಕುರುವಿಲ್ಲಾರವರಿಂದ ನಮ್ಮ ನಾಡಿಗೆ ಇನ್ನೂ ಹೆಚ್ಚಿನ ಸೇವೆ ದೊರಕುವಂತಾಗಿ, ಅವರು ಮತ್ತಷ್ಟು ಉನ್ನತ ಪದವಿಗೇರಲೆಂದೇ ನಮ್ಮ ಹಾರೈಕೆ.

ಏರ್ ಕಮೋಡರ್ ಸಿ. ಆರ್. ಕುರ್‌ಪಾಡ್

ಶ್ರೀ ಚಂದ್ರಶೇಖರರಾವ್ ಕುರ್‌ಪಾಡ್ ಅವರು ೧೯೧೭ರ ಜುಲೈ ೨೯ರಂದು ಬೆಂಗಳೂರಿನಲ್ಲಿ ಜನಿಸಿದರು. ಇವರು ಮುಂಬಯಿ ವಿಶ್ವವಿದ್ಯಾನಿಲಯದಲ್ಲಿ ಪ್ರಥಮ

ದರ್ಜೆಯಲ್ಲಿ ಬಿ.ಎಸ್‌ಸಿ. ಪದವಿಯನ್ನು ಪಡೆದರು. ಅನಂತರ ಬೆಂಗಳೂರಿನ ಭಾರತೀಯ ವಿಜ್ಞಾನ ಮಂದಿರದಲ್ಲಿ ೧೯೪೨ರಲ್ಲಿ ಡಿ.ಐ.ಐ.ಎಸ್‌ಸಿ. (ಎಲೆಕ್ಟ್ರಿಕಲ್ ಟೆಕ್ನಾಲಜಿ) ಯನ್ನು ಮುಗಿಸಿದರು. ೧೯೫೧ ರಲ್ಲಿ ಇನ್‌ಸ್ಟಿಟ್ಯೂಟ್ ಆಫ್ ಇಂಜನಿಯರ್ಸ್‌ನ ಎ.ಎಂ.ಐ.ಇ. ಪದವಿಯನ್ನು ಪಡೆದರು.

ಹಿಂದೂಸ್ತಾನ್ ಏರ್‌ಕ್ರಾಫ್ಟ್ ಲಿಮಿಟೆಡ್‌ನಲ್ಲಿ ೧೯೪೨ರಿಂದ ೧೯೪೩ರ ವರೆಗೆ ಒಂದು ವರ್ಷ ಇಂಜನಿಯರ್ ಅಪ್ರೆಂಟಿಸ್ ಆಗಿ ತರಬೇತಿ ಪಡೆದರು. ಅನಂತರ ಬೆಂಗಳೂರಿನ ರಾಡಾರ್ ಸ್ಕೂಲಿಗೆ ಸೇರಿ ೧೯೪೩ರಿಂದ ೧೯೪೬ರ ವರೆಗೆ ಸಿಗ್ನಲ್ ರಾಡಾರ್‌ನಲ್ಲಿ ಮೂರು ವರ್ಷದ ಸಂಕ್ಷಿಪ್ತ-ಇನಿಷಿಯೋ ಕೋರ್ಸ್ ಮುಗಿಸಿದರು. ೧೯೫೫ರಲ್ಲಿ ಬ್ರಿಟನ್ನಿನ ಮಾರ್ಕೋನಿಯಲ್ಲಿ ಆರು ತಿಂಗಳ ಮ್ಯಾನುಫ್ಯಾಕ್ಚರರ್ಸ್ ಕೋರ್ಸ್ ಮುಗಿಸಿದರು. ೧೯೬೭ರಲ್ಲಿ ಶ್ರೀನಗರದಲ್ಲಿ ನಡೆದ ಅಡ್ವಾನ್ಸ್‌ಡ್ ಮ್ಯಾನೇಜ್‌ಮೆಂಟ್ (ಪ್ರೋಗ್ರಾಂ) ಕಾರ್ಯ

ಕ್ರಮದಲ್ಲಿ ಭಾಗವಹಿಸಿದ್ದರು.

೧೯೪೩ರ ಮೇ ೧೪ರಂದು ಇವರು ಭಾರತೀಯ ವಾಯು ದಳಕ್ಕೆ ಸೇರಿದರು. ೧೯೬೧ರಿಂದೀಚೆಗೆ ಇವರು ಔದ್ಯೋಗಿಕ ಕ್ಷೇತ್ರದಲ್ಲಿಯೇ ಸೇವೆ ಸಲ್ಲಿಸುತ್ತ ಬಂದರು. ಮೊದಲು ೧೯೬೧ರಿಂದ ೬೩ರ ವರೆಗೆ ಇವರು ಬೆಂಗಳೂರಿನ ಎಲೆಕ್ಟ್ರಾನಿಕ್ಸ್‌ನ ಏರ್‌ಫೋರ್ಸ್ ಎಕ್ವಿಪ್‌ಮೆಂಟ್ಸ್ ವಿಭಾಗದಲ್ಲಿ ಪ್ರಾಜೆಕ್ಟ್ ಮ್ಯಾನೇಜರ್ ಆಗಿದ್ದರು. ೧೯೬೩ರಿಂದ ಎಚ್.ಎ.ಎಲ್.ನಲ್ಲಿಯೇ ಕೆಲಸ ಮಾಡುತ್ತಿದ್ದ ಅವರು ೧೯೬೪ರಿಂದ ೧೯೬೯ರ ವರೆಗೆ ಎಚ್.ಎ.ಎಲ್.ನ ಹೈದರಾಬಾದ್ ಡಿವಿಜನ್ನಿನಲ್ಲಿ ಜನರಲ್ ಮ್ಯಾನೇಜರ್ ಆಗಿ ಕಾರ್ಯ ನಿರ್ವಹಿಸಿದರು. ೧೯೬೯ರಿಂದೀಚೆಗೆ ಕೋರಾಪುಟ್, ನಾಸಿಕ್, ಹೈದರಾಬಾದ್‌ಗಳಲ್ಲಿರುವ ಎಚ್.ಎ.ಎಲ್. ಕಾರ್ಖಾನೆಗಳ ಮಿಗ್ ಕಾಂಪ್ಲೆಕ್ಸ್‌ನ ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದರು. ಅನಂತರ ಏರ್ ಕಮೋಡರ್ ಪದವಿಗೇರಿ ೧೯೬೯ರ ಜುಲೈ ತಿಂಗಳಲ್ಲಿ ನಿವೃತ್ತರಾದರು.

ಈಗ ಇವರು ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್‌ನಲ್ಲಿ 'ಮಿಗ್ ಕಾಂಪ್ಲೆಂಕ್ಸ್'ನಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್ ಆಗಿರುವರು. ಈ ರೀತಿಯಾಗಿ ಇವರು ಸಲ್ಲಿಸಿರುವ ಬಹುಮುಖ ಸೇವೆಗಳನ್ನು ಗುರ್ತಿಸಿ ರಾಷ್ಟ್ರಪತಿಯವರು ಇವರಿಗೆ 'ಪರಮವಿಶಿಷ್ಟ ಸೇವಾಪದಕ' ಪ್ರಶಸ್ತಿಯನ್ನಿತ್ತು ಗೌರವಿಸಿದ್ದಾರೆ.

ಲೆಫ್ಟಿನೆಂಟ್ ಕಮ್ಯಾಂಡರ್ ಜೆ. ಪಿ. ಎ. ನರೋನ್ಹಾ

ಮಹಾವೀರಚಕ್ರ ಪ್ರಶಸ್ತಿ ವಿಜೇತ ಜೋಸೆಫ್ ಪಯಸ್ ಆಲ್‌ಫ್ರೆಡ್ ನರೋನ್ಹಾರವರ ಪರಿಚಯ ಮಾಡಿಕೊಡುವುದೆಂದರೆ ತುಂಬಾ ಸಂತಸದ ಸಂಗತಿ. ಇವರ ತಂದೆ ದಿವಂಗತ ಜೆ. ಸಿ. ನರೋನ್ಹಾರವರು ಮೈಸೂರಿನಲ್ಲಿ ಹೆಡ್ ಪೋಸ್ಟ್ ಮಾಸ್ಟರ್ ಆಗಿದ್ದರು.

೧೯೩೭ರ ಮಾರ್ಚ್ ಮೊದಲನೆಯ ದಿನಾಂಕದಂದು ಜನಿಸಿದ ಶ್ರೀ ಜೆ. ಪಿ. ಎ. ನರೋನ್ಹಾರವರ ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢಶಾಲೆಗಳ ಶಿಕ್ಷಣ ಮೈಸೂರಿನಲ್ಲಿಯೇ ಆಯಿತು. ಸೆಂಟ್ ಫಿಲೋಮಿನಾ ಹೈಸ್ಕೂಲ್‌ನಲ್ಲಿ ಪ್ರೌಢ ಶಿಕ್ಷಣ ಮುಗಿದ ಬಳಿಕ ಸೆಂಟ್ ಫಿಲೋಮಿನಾ ಕಾಲೇಜಿಗೆ ಸೇರಿ, ಅಲ್ಲಿ ಬಿ.ಎಸ್‌ಸಿ. ಪದವಿಯನ್ನು ಪಡೆದರು.

೧೯೫೫ರಲ್ಲಿ ಇವರು ಭಾರತ ನೌಕಾದಳವನ್ನು ಸೇರಿದರು. ಇವರಿಗೆ ಪ್ರಪ್ರಥಮವಾಗಿ ಸೈನಿಕ ಶಿಕ್ಷಣ ದೊರೆತದ್ದು ಕೊಚ್ಚಿಯಲ್ಲಿರುವ 'ಐ. ಎನ್. ಎಸ್, ವೆಂಡುರುತಿ'

ಎಂಬ ಹಡಗಿನಲ್ಲಿ. ಇವರ ಸೈನಿಕ ಜೀವನದ ಆರಂಭದಲ್ಲಿ ನಡೆದುವುಗಳಲ್ಲಿ ಗೋವಾದಲ್ಲಿ ನಡೆದ ಘರ್ಷಣೆಗಳೇ ಮುಖ್ಯವಾದುದೆನ್ನಬಹುದು. ಗೋವಾದಲ್ಲಿ ಭಾರತ

ಸೈನ್ಯಕ್ಕೂ ಪೋರ್ಚುಗೀಸ್ ಸೈನ್ಯಕ್ಕೂ ಸಮರ ನಡೆದಾಗ ಶ್ರೀ ನರೋನ್ಹಾರವರು ಆ ಸಮರದ ಪ್ರತ್ಯಕ್ಷದರ್ಶಿಗಳಾಗಿ ಅನೇಕ ವಿಚಾರಗಳನ್ನು ಗ್ರಹಿಸಿದರು. ಇವರು ಐ. ಎನ್. ಎಸ್. ಕಾಕಿನಾಡ ಎಂಬ ಹಡಗಿನಲ್ಲಿದ್ದು ಕಾರ್ಯಾಚರಣೆ ನಡೆಸುತ್ತ ಭಾರತದ ನೌಕಾಸೇನೆ ಸಮುದ್ರದಲ್ಲಿ ಮುನ್ನುಗ್ಗಿ ಪಣಜಿಯನ್ನು ತಲುಪಲು ಬಹಳ ಮಟ್ಟಿಗೆ ನೆರವಾದರು. ಶತ್ರು ನೌಕೆಗಳನ್ನು ಸದೆಬಡಿದು ಚದುರಿಸಿ ಭಾರತ ನೌಕೆಗಳು ಸುಲಭವಾಗಿ ಚಲಿಸಲು ಸೌಕರ್ಯಮಾಡಿಕೊಟ್ಟರು. ಗೋವಾ ಯುದ್ಧ ನಡೆದಾಗ ಇವರು ತಮ್ಮ ಸಾಹಸದಿಂದ ಹಾರುತ್ತಿದ್ದ ಒಂದು ಪೋರ್ಚುಗೀಸ್ ಧ್ವಜವನ್ನು ಕೆಳಗಿಳಿಸಿ, ತಮ್ಮ ವಶಪಡಿಸಿಕೊಂಡರು. ಇದು ಇವರ ಅಂದಿನ ವಿಜಯದ ಸಂಕೇತವಾಗಿದೆ.

೧೯೬೫ರಲ್ಲಿ ನಡೆದ ಭಾರತ-ಪಾಕ್ ಯುದ್ಧದಲ್ಲಿ ಇವರು ತಮ್ಮ ಹಡಗು ಐ. ಎನ್. ಎಸ್. ನಗರ ಹಡಗಿನಲ್ಲಿದ್ದ ತುಪಾಕಿಗಳನ್ನು ಶತ್ರು ನೌಕೆಗಳ ಮೇಲೆ ಹಾರಿಸುವ ಒಂದು ಸದವಕಾಶವನ್ನು ಪಡೆದಿದ್ದರು. ಅಲ್ಲದೆ ಈ ದಿಶೆಯಲ್ಲಿ ಉಳಿದ ಯೋಧರಿಗೂ ಶಿಕ್ಷಣ ಕೊಡುವ ಸುಯೋಗವನ್ನು ಪಡೆದಿದ್ದರು.

ಇವರ ಚಿಕ್ಕಪ್ಪನವರಾದ ಮೇಜರ್ ಎಫ್. ನರೋನ್ಹಾರವರನ್ನು ಬೆಂಗಳೂರು ಸಿಟಿ ಕಾರ್ಪೊರೇಷನ್ನಿನವರು ಗೌರವಿಸಿರುವರಲ್ಲದೆ, ರಸೆಲ್ ಮಾರ್ಕೆಟ್ಟಿನ ಮುಂಭಾಗದ ರಸ್ತೆಗೆ ಇವರ ಹೆಸರನ್ನಿಟ್ಟಿರುವರು. ಇದೊಂದು ಹೆಮ್ಮೆಯ ವಿಷಯ. ಶ್ರೀ ನರೋನ್ಹಾರವರ ಹಿರಿಯ ಅಣ್ಣ ಲೆಫ್ಟಿನೆಂಟ್ ಕರ್ನಲ್ ಜೆ. ಪಿ. ಎಂ. ನರೋನ್ಹಾರವರು ನಾಗಾಲ್ಯಾಂಡ್‌ನ ವಿಮಾಪುರ ಮಿಲಿಟರಿ ಆಸ್ಪತ್ರೆಯ ಕಮ್ಯಾಂಡಿಂಗ್ ಆಫೀಸರ್ ಆಗಿದ್ದಾರೆ. ಇನ್ನೊಬ್ಬ ಸಹೋದರ ಮೇಜರ್ ರಾನೀ ವಾಜ್‌ರವರು ಗಡಿರಕ್ಷಣಾದಳದಲ್ಲಿ ಕ್ಯಾಪ್ಟನ್ ಆಗಿದ್ದಾರೆ. ಇವರ ಭಾವಮೈದುನ ಫ್ಲೈಟ್‌ಲೆಫ್ಟಿನೆಂಟ್ ಕರ್ನಲ್ ಎಫ್. ಸಿ. ಡಿಸೌಜರವರು ಭೂಸೇನೆಯಲ್ಲಿ ಲೆಫ್ಟಿನೆಂಟ್ ಕರ್ನಲ್ ಆಗಿದ್ದಾರೆ.

ಲೆ|| ಕಮಾಂಡರ್ ನರೋನ್ಹಾರವರು ನೌಕಾ ಶಿಕ್ಷಣ ಪಡೆದ ಮೊದಲನೆಯ

ಹಡಗೆಂದರೆ ಐ. ಎನ್. ಎಸ್. ಖುಕ್ರಿ. ಅನಂತರ ಇವರು ಐ. ಎನ್. ಎಸ್ ಮೈಸೂರು, ಐ. ಎನ್. ಎಸ್. ದೆಹಲಿ, ಮೊದಲಾಡ ಹಡಗುಗಳಲ್ಲಿ ಸೇವೆಸಲ್ಲಿ ಅಪಾರ ಅನುಭವವನ್ನು ಗಳಿಸಿದ್ದಾರೆ. ಅಲ್ಲದೆ 'ಸೆಂಟ್ರಲ್ ಬೋರ್ಡ್ ಆಫ ರೆವಿನ್ಯೂ, ಎಂಬ ಸಂಸ್ಥೆಯಲ್ಲಿ ಹಲವು ಕಾಲ ಸೀನಿಯರ್ ಆಫೀಸರ್ ಆಗಿ ಕೆಲ ಮಾಡಿ ಚಿನ್ನ-ಬೆಳ್ಳಿ ಕಳ್ಳಸಾಗಾಣಿಕೆಗಳನ್ನು ಪತ್ತೆಮಾಡಿದ್ದಾರೆ. ಒಮ್ಮೆ ಇಪ ತ್ತೈದು ಲಕ್ಷ ರೂ. ಬೆಲೆ ಬಾಳುವ ಬೆಳ್ಳಿಗಟ್ಟಿಯೊಂದನ್ನು ಪತ್ತೆಹಚ್ಚಿ (೧೯೬ ಮಾರ್ಚ್ ೫ರಂದು) ಸರ್ಕಾರಕ್ಕೆ ಒಪ್ಪಿಸಿದರು. ಈ ಸಾಹಸಕಾರ್ಯ ಇವರ ದಕ್ಷತೆ ಒಂದು ಸಾಕ್ಷಿಯಾಗಿದೆ.

ತಮ್ಮ ಸೈನಿಕ ಜೀವನದಲ್ಲಿ ಇವರು ಎರಡು ದೊಡ್ಡಗಂಡಾಂತರಗಳನ ಎದುರಿಸಬೇಕಾದ ಸಂದರ್ಭ ಒದಗಿತು. ೧೯೭೧ರ ಅಕ್ಟೋಬರ್ ೩೦ರಂದು ಸಂಭ ಸಿದ ಪ್ರಚಂಡ ಚಂಡಮಾರುತಕ್ಕೆ ಸಿಕ್ಕಿ ಪಾರಾಗಿ ಬಂದದು ಮೊದಲನೆಯದು ಖುಲ್ನದಲ್ಲಿ ಶತ್ರುಗಳೊಡನೆ ನಡೆದ ಘರ್ಷಣೆಯಲ್ಲಿ ಶತ್ರುಗಳ ಕೈಗೆ ಸಿಕ್ಕದೆ ತಪ್ಪಿ ಕೊಳ್ಳುವ ಪ್ರಯತ್ನದಲ್ಲಿ ಒಂದು ಘೋರ ಅರಣ್ಯಕ್ಕೆ ನುಗ್ಗಿ ಪ್ರಯಾಸದಿಂದ ಬದು ಬಂದುದು ಎರಡನೆಯದು.

ಇತ್ತೀಚಿಗೆ ನಡೆದ ಐ. ಎನ್. ಎಸ್. ಪನವೇಲ್ (Gun boat) ನಲ್ಲಿ ಅತ್ಯಂತ ಸಾಹಸವನ್ನು ತೋರಿಸಿದ್ದಾರೆ. ಅದೆಂದರೆ ಶತ್ರುಗಳಿಗೆ ಸೇರಿದ ಐದ ಹಡಗುಗಳನ್ನು ಮುಳುಗಿಸಿದ ಕೀರ್ತಿ ಇವರದು. ಬಾಂಗ್ಲಾದೇಶದ ಪಾಸ್ಸಾರ ನದಿಯ ದಂಡೆಯಲ್ಲಿರುವ ಮೊಂಗ್ಲಾ, ಚೌಲ್ನಾ ಮತ್ತು ಖುಲ್ನ ಪ್ರದೇಶಗಳಲ್ಲಿ ಶತ್ರುಗಳನ್ನು ಹಿಮ್ಮೆಟ್ಟಿಸುವ ಕಾರ್ಯಕ್ಕೆ ಇವರನ್ನು ನೇಮಿಸಲಾಗಿತ್ತು. ಈ ಕಾರ್ಯಾಚರಣೆಯಲ್ಲಿ ಇವರು ಯಶಸ್ವಿಯಾದರು. ಶತ್ರುಗಳನ್ನು ಸದೆಬಡಿದ ಹಿಮ್ಮೆಟ್ಟಿಸಿದ ಕೀರ್ತಿ ಇವರದಾಯಿತು.

೧೯೭೧ರ ಡಿಸೆಂಬರ್ ಹತ್ತರಂದು ಸುಮಾರು ಎರಡು ಗಂಟೆಗಳ ಕಾಲ ಯಾವ ಆಶ್ರಯವೂ ಇಲ್ಲದೆ ಮುಳುಗುತ್ತಿದ್ದ ಹಡಗಿನಲ್ಲಿ ಬಹಳ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಇವರು ಸಿಕ್ಕಿಬಿದ್ದರು. ಹೊರಗಿನ ಯಾವ ನೆರವೂ ಇಲ್ಲದೆ ಕೇವಲ ತಮ್ಮ ಸ್ಥೈರ್ಯವೊಂದರಿಂದಲೇ ಲೈಫ್‌ಬೋಟ್‌ನಲ್ಲಿ ಹೊರಬಂದು ಬದುಕಿಕೊಂಡರು ಹೀಗೆ ತಮ್ಮ ನೆಲೆಯನ್ನು ಬಿಟ್ಟುಕೊಡದೆ ಹೋರಾಡಿದುದಕ್ಕಾಗಿ ಮೇಲ್ಪಟ್ಟ ಅಧಿ ಕಾರಿಗಳು ಇವರನ್ನು ಮುಕ್ತಕಂಠದಿಂದ ಹೊಗಳಿ ತಮ್ಮ ಮೆಚ್ಚುಗೆಯನ್ನು ವ್ಯಕ್ತ ಪಡಿಸಿದ್ದಾರೆ.

ಗಾಯಗೊಂಡ ನಾವಿಕರನ್ನು ರಕ್ಷಿಸಿ, ಅವರನ್ನು ಭಾರತದ ಗಡಿಗೆ ತಂದ ಬಿಡುತ್ತಿರುವ ಕಾರ್ಯ ನಡೆಯುತ್ತಿದ್ದ ಸಮಯದಲ್ಲಿ ಗಗನದಲ್ಲಿ ಶತ್ರುಗಳ ವಿಮಾನ ಧಾಳಿಯೂ ನಿರಂತರವಾಗಿ ನಡೆದೇ ಇತ್ತು. ಇದನ್ನು ಸ್ವಲ್ಪವೂ ಲೆಕ್ಕಿಸದೆ ಇವರು ತಮ್ಮ ಕಾರ್ಯಸಾಧನೆ ಮಾಡಿದರು, ಇಂತಹ ಅಪಾಯದ ವೇಳೆಯಲ್ಲಿ ಇವರ

ಅನೇಕ ಗಾಯಗೊಂಡ ನಾವಿಕ ಯೋಧರನ್ನು ಬ್ಯಾರಕ್ ಪುರದ ಮಿಲಿಟರಿ ಆಸ್ಪತ್ರೆಗೆ ಸೇರಿಸಿ ಅತ್ಯುತ್ತಮ ಸೇವೆ ಸಲ್ಲಿಸಿದರು. ಇಷ್ಟೆಲ್ಲ ಮಹತ್ಕಾರ್ಯಗಳನ್ನು ಸಾಧಿಸಿದ ಶ್ರೀ ನರೋನ್ಹಾರವರಿಗೆ ರಾಷ್ಟ್ರಪತಿಯವರು ಮಹಾವೀರಚಕ್ರ ಪ್ರಶಸ್ತಿಯನ್ನಿತ್ತು ಗೌರವಿಸಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಇವರದು ಆದರ್ಶಕುಟುಂಬ. ಕೋಲಾರ ಚಿನ್ನದ ಗಣಿಗಳ ಪ್ರದೇಶದಲ್ಲಿ ದಂತವೈದ್ಯರಾಗಿ ಪ್ರಸಿದ್ಧಿಪಡೆದಿರುವ ಡಾ|| ಎಫ್. ಎಲ್. ಸಲ್ಡಾನಾರವರ ಸುಪುತ್ರಿ ಶ್ರೀಮತಿ ಟೆರೆಸಾರವರು ನರೋನ್ಹಾರವರ ಧರ್ಮಪತ್ನಿ. ೧೯೭೦ರ ಮೇ ಐದರಂದು ಇವರ ವಿವಾಹ ನಡೆಯಿತು. ಈ ದಂಪತಿಗಳಿಗೆ ಈಗ ಒಂದು ಗಂಡು ಮಗುವಿದೆ. 'ವಿವೇಕ್' ಎಂದು ಆ ಮಗುವಿನ ಹೆಸರು. ಬಹು ಮುದ್ದಾದ ಹೆಸರು. ಮುಂದೆ ಈ ಮಗು ವಿವೇಕಶಾಲಿಯೇ ಆಗುವುದೆಂಬುದರ ಕುರುಹು ಹೆಸರಿನಲ್ಲಿಯೇ ಅಡಗಿದೆ.

೩೪ವರ್ಷ ವಯಸ್ಸಿನ ಶ್ರೀ ನರೋನ್ಹಾರವರು ನೌಕಾಪಡೆಯಲ್ಲಿ ಇನ್ನೂ ಹೆಚ್ಚು ಹೆಚ್ಚಾಗಿ ಉನ್ನತ ಪದವಿಗಳನ್ನು ಪಡೆದು ಭಾರತಕ್ಕೆ ಕೀರ್ತಿತರಲೆಂದೇ ನಮ್ಮ ಹಾರೈಕೆ. ಭಾರತದ ಸೇನೆಗೆ ಇಂದು ಇಂತಹ ವೀರರ ಅಗತ್ಯ ಬಹಳವಾಗಿದೆ.

ಲೆ|| ಕಮಾಂಡರ್ ನರೋನ್ಹಾರವರನ್ನು ಕುರಿತು ೧೯೭೨ರ ಜನವರಿ ೩೦ರ 'ಸೈನಿಕ ಸಮಾಚಾರ್' ಪತ್ರಿಕೆಯಲ್ಲಿ ಹೀಗೆ ಬರೆಯಲಾಗಿದೆ.

"A close quarter battle fought by Naval ships during the operations featured I. N. S. PANVEL commanded by Lt. Commander J. P. A. Naronha. The ship was part of a task force which attacked Mongla and Khulna. Though it was subjected to incessant air attacks and shelled by shore defences, Lt. Col. Naronha fought the enemy in close quarters for a prolonged period silencing the enemy shore defences and causing very extensive damage to shore installations. The task force was commanded by Commander M. N. R. Samanth."

ಅಂತೋಣಿ ಹೆರಾಲ್ಡ್ ಎಡ್ವರ್ಡ್ ಮಿಚಿಗನ್

ಶ್ರೀ ಮಿಚಿಗನ್‌ರವರು ಕರ್ನಾಟಕದ ಬಿಜಾಪುರ ಜಿಲ್ಲೆಯವರು. ಈ ಜಿಲ್ಲೆಯ ಮುದ್ದೆಬಿಹಾಳಿನಲ್ಲಿ ೧೯೩೪ರ ಅಕ್ಟೋಬರ್ ೧೩ರಂದು ಇವರು ಜನಿಸಿದರು. ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣಗಳು ಅಲ್ಲಿಯೇ ಮುಗಿದ ಬಳಿಕ ಧಾರವಾಡದ ಮಿಷನ್ ಹೈಸ್ಕೂಲಿನಲ್ಲಿ ಇವರು ೧೯೪೧ರಲ್ಲಿ ತಮ್ಮ ಮೆಟ್ರಿಕ್ ಪರೀಕ್ಷೆಯನ್ನು

ಮುಗಿಸಿಕೊಂಡರು. ಮುಂದೆ ಕರ್ನಾಟಕ ಕಾಲೇಜಿಗೆ ಸೇರಿ ಇಂಗ್ಲಿಷ್ ಆನರ್ಸ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ೧೯೪೬ರಲ್ಲಿ ಪದವೀಧರರಾದರು. ಪ್ರಥಮ ದರ್ಜೆಯಲ್ಲಿ

ಉತ್ತೀರ್ಣರಾದುದಕ್ಕಾಗಿ ದೊಡ್ಡ ಸುವರ್ಣ ಪದಕವೂ ಇವರಿಗೆ ದೊರಕಿತು.

ಅನಂತರ ಇವರು ಮುಂಬಯಿಗೆ ಹೋಗಿ ಸೆಂಟ್ ಕ್ಸೇವಿಯರ್ ಕಾಲೇಜಿಗೆ ಸೇರಿ ಎಂ. ಎ. ಪರೀಕ್ಷೆ ಮಾಡಿಕೊಂಡು ಅನಂತರ ಸರ್ಕಾರೀ ಲಾ ಕಾಲೇಜಿಗೆ ಸೇರಿ ಕೊಂಡರು. (೧೯೪೭-೪೮ರಲ್ಲಿ)

ಇಲ್ಲಿಂದ ಮುಂದೆ ಇವರ ಸೈನಿಕ ಜೀವನ ಆರಂಭವಾಯಿತು. ಡೆಹ್ರಾಡೂನ್ ನಲ್ಲಿರುವ ಸುಪ್ರಸಿದ್ಧ 'ಗ್ರೆನೇಡಿಯರ್ಸ್' ರೆಜಿಮೆಂಟಿಗೆ ಸೇರಿ ೧೯೪೮ರ ಡಿಸೆಂಬರ್ ೧೧ರಂದು ಇವರು ಕಮಿಷನ್ ಪಡೆದರು. ಅನಂತರ ಹೈದಾರಾಬಾದಿನ ಪೋಲೀಸ್ ಕಾರ್ಯಾಚರಣೆಯಲ್ಲಿಯೂ, ಜಮ್ಮು ಕಾಶ್ಮೀರ ಕಾಳಗಗಳಲ್ಲಿಯೂ ಭಾಗವಹಿಸಿದರು. ಬಳಿಕ ವಿಶ್ವಸಂಸ್ಥೆಯ ತುರ್ತು ದಳದಲ್ಲಿ ಸೇರಿ ಎರಡನೆಯ ಬೆಟಾಲಿಯನ್‌ನಲ್ಲಿದ್ದು, ಭಾರತದ ಪರವಾಗಿ ಈಜಿಪ್ಟ್ ನಲ್ಲಿ ಸೇವೆ ಸಲ್ಲಿಸಿದರು. ಮುಂದೆ ಮೇಜರ್ ಪದವಿಗೆ ಬಡ್ತಿಹೊಂದಿ 'ಮ್ಹೋ' ಎಂಬಲ್ಲಿರುವ ಇನ್‌ಫೆಂಟ್ರಿ ಸ್ಕೂಲ್‌ನಲ್ಲಿ ಒಬ್ಬ ಶಿಕ್ಷಕರಾದರು. ೧೯೬೦ರಿಂದ ೧೯೬೪ರ ವರೆಗೆ ಈ ಹುದ್ದೆಯಲ್ಲಿದ್ದರು. ೧೯೬೪-೬೫ರಲ್ಲಿ ಗ್ರೆನೇಡಿಯರ್ಸ್ ೪ನೆಯ ಬೆಟಾಲಿಯನ್‌ನಲ್ಲಿ ಸೇರಿ ನೇಫಾದಲ್ಲಿ ಸೇವೆ ಸಲ್ಲಿಸಿದರು.

ಇವರ ಕಾರ್ಯದಕ್ಷತೆಯನ್ನು ಗಮನಿಸಿ ೧೯೬೫ರಲ್ಲಿ ಇವರನ್ನು ಲೆಫ್ಟಿನೆಂಟ್ ಕರ್ನಲ್ ಪದವಿಗೇರಿಸಲಾಯಿತು. ಒಡನೆಯೇ ಗ್ರೆನೇಡಿಯರ್ ೧೨ನೆಯ ಬೆಟಾಲಿಯನ್‌ನ ನಾಯಕತ್ವ ದೊರೆಯಿತು. ಇದೇ ಪದವಿಯಲ್ಲಿದ್ದುಕೊಂಡು ೧೯೬೫ರಲ್ಲಿ ನಡೆದ ಭಾರತ-ಪಾಕ್ ಯುದ್ಧದಲ್ಲಿ ಇವರು ಕೆಲಸಮಾಡಿದರು.

೧೯೭೦ರಲ್ಲಿ ಇವರನ್ನು ನೇರವಾಗಿ ಬ್ರಿಗೇಡಿಯರ್ ಪದವಿಗೆ ಆಯ್ಕೆಮಾಡಿ ಬಡ್ತಿಕೊಡಲಾಯಿತು. ಈ ಪದವಿಯಲ್ಲಿದ್ದುಕೊಂಡೇ ಇತ್ತೀಚಿನ ಬಂಗ್ಲಾದೇಶ್ ಯುದ್ಧದಲ್ಲಿ ಭಾಗವಹಿಸಿ ಧೈರ್ಯ ಸ್ಥೈರ್ಯಗಳಿಂದ ಹೋರಾಡಿದರು. ಪಾಕ್ ಸೈನಿಕರಿಗೆ ಮಣ್ಣು ಮುಕ್ಕಿಸಿ ಪ್ರಮುಖವೆನಿಸಿದ್ದ ಹಲವಾರು ಶತ್ರುಠಾಣ್ಯಗಳನ್ನು ಇವರು ವಶಪಡಿಸಿಕೊಂಡು ಕೀರ್ತಿಗಳಿಸಿದರು.

ಮೌಂಟನ್ ಬ್ರಿಗೇಡ್ ನಾಯಕರಾಗಿ ಕಾರ್ಯಾಚರಣೆ ನಡೆಸುತ್ತಿದ್ದ ಇವರಿಗೆ

೧೯೭೧ರ ಡಿಸೆಂಬರ್ ೩ರಂದು 'ಉತ್ತಲಿ' ಮತ್ತು 'ದರ್ಶನ' ಎಂಬ ಎರಡು ಶತ್ರು ಠಾಣ್ಯಗಳಿಗೆ ಮುತ್ತಿಗೆ ಹಾಕುವಂತೆ ಆದೇಶ ನೀಡಲಾಯಿತು. ಶತ್ರುಪಡೆಗಳಿಂದಲೂ ಸಶಸ್ತ್ರಸೈನಿಕರಿಂದಲೂ ಸದಾ ರಕ್ಷಿಸಲ್ಪಡುತ್ತಿದ್ದ ಈ ಎರಡು ಠಾಣ್ಯಗಳು ಬಲವಾದ ಕೇಂದ್ರಗಳಾಗಿದ್ದುವು. ಈ ಮುತ್ತಿಗೆಯಲ್ಲಿ ಇವರ ಪಡೆಗಳು ಶತ್ರುಗಳ ಟ್ಯಾಂಕ್ ಗುಂಡುಗಳ ಸಿಡಿತದಿಂದ ಆವರಿಸಲ್ಪಟ್ಟು ಬಹಳ ಇಕ್ಕಟ್ಟಿನ ಪರಿಸ್ಥಿತಿಗೊಳಗಾದುವು. ಆಗ ಶ್ರೀ ಮಿಚಿಗನ್‌ರವರು ತಾವೇ ಮುಂದೆ ಬಂದು ಸೈನಿಕರನ್ನು ಹುರಿದುಂಬಿಸಿ, ಸೂಕ್ತ ಮಾರ್ಗದರ್ಶನನೀಡಿ, ಶತ್ರುಸೈನ್ಯವನ್ನೆದುರಿಸುವಂತೆ ವ್ಯವಸ್ಥೆಗೊಳಿಸಿದರು. ಈ ಸಂದರ್ಭದಲ್ಲಿ ಇವರು ಅತ್ಯಂತ ಧೈರ್ಯದಿಂದಲೂ. ತಾಳ್ಮೆಯಿಂದಲೂ ವರ್ತಿಸಿದರೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಅದೇ ದಿನವೇ 'ದರ್ಶನ' ಠಾಣ್ಯಕ್ಕೆ ಮುತ್ತಿಗೆ ಹಾಕಲು ತಕ್ಕ ಸಿದ್ಧತೆಗಳನ್ನು ಮಾಡಿಕೊಂಡರು. ಮುತ್ತಿಗೆಯ ಮುನ್ನ ಆಯಕಟ್ಟಿನ ಪ್ರದೇಶಗಳನ್ನು ಗುರ್ತಿಸಿ, ಶತ್ರುಗಳ ರಕ್ಷಣಾವ್ಯೂಹಗಳನ್ನು ಭೇದಿಸಿ, ಒಮ್ಮೆ ಆ ಪ್ರಾಂತಗಳ ಸಿಂಹಾವಲೋಕನ ಮಾಡಿಕೊಳ್ಳಬೇಕಾಯಿತು. ಇಷ್ಟಾದ ಮೇಲೆ ಮರುದಿನವೇ ಮುತ್ತಿಗೆಯ ಆರಂಭ. ಮಿಚಿಗನ್‌ರವರು ತಮ್ಮ ಪಡೆಗಳಿಗೆ ನವಸ್ಫೂರ್ತಿ ನೀಡುತ್ತಾ, ಬಲವಾದ ಆ ಶತ್ರು ಠಾಣ್ಯಗಳನ್ನು ಮುತ್ತಿದರು.

ರಣರಂಗದ ಮಧ್ಯೆ ನುಗ್ಗಿ ಶತ್ರುಗಳ ಸಂಗಡ ಕದನ ಮಾಡುತ್ತ ಮೆಷಿನ್‌ಗನ್ ಮೊದಲಾದ ಯಂತ್ರಗಳ ಸಾಧನೆಯಿಂದ ಗುಂಡಿನ ಮಳೆಗರೆದು ಶತ್ರುಗಳನ್ನು ಸದೆ ಬಡಿದು ಜಯಶಾಲಿಗಳಾದರು.

'ದರ್ಶನ'ದ ಪತನವಾದ ನಂತರ 'ಜೈಹಿಂದ್' ಎಂಬ ಠಾಣ್ಯದ ಮುತ್ತಿಗೆ ಆರಂಭವಾಯಿತು. 'ದರ್ಶನ' ಠಾಣ್ಯದಿಂದ ಐವತ್ತು ಕಿ. ಮಿ. ದೂರದಲ್ಲಿದ್ದ 'ಜೈಹಿಂದ್' ಠಾಣ್ಯವನ್ನು ಕೇವಲ ನಲವತ್ತೆಂಟು ಘಂಟೆಗಳೊಳಗಾಗಿ ವಶಪಡಿಸಿಕೊಳ್ಳಲಾಯಿತು. ಅತಿಕ್ಷಿಪ್ರದಲ್ಲಿಯೇ ಹೀಗೆ ಸೈನಿಕಠಾಣ್ಯವನ್ನು ವಶಪಡಿಸಿಕೊಂಡುದರಿಂದ ಶತ್ರುಗಳಿಗೆ ಸೇತುವೆಗಳನ್ನು ಒಡೆದುಹಾಕಲು ಅವಕಾಶ ದೊರೆಯಲಿಲ್ಲ. ಇದರಿಂದಾಗಿ ಎಷ್ಟೋ ವಿನಾಶಕಾರಿಕೃತ್ಯಗಳು ನಡೆಯುವಂತಿದ್ದುದು ತಪ್ಪಿತು.

ಹೀಗೆ ಮಿಲಿಟರಿ ಕಾರ್ಯಚರಣೆಗಳಲ್ಲಿ ಬ್ರಿಗೇಡಿಯರ್ ಮಿಚಿಗನ್‌ರವರು ಎದೆಗಾರಿಕೆ, ಕಾರ್ಯತತ್ಪರತೆ, ವ್ಯಕ್ತಿಕೌಶಲ್ಯ ಹಾಗೂ ಉನ್ನತ ಮಟ್ಟದ ಕಾರ್ಯದಕ್ಷತೆಗಳನ್ನು ವ್ಯಕ್ತಪಡಿಸುತ್ತ ಭಾರತ ಸೇನೆಯ ಮಹೋನ್ನತ ಸತ್ಸಂಪ್ರದಾಯಗಳನ್ನು ಕಾಪಾಡಿಕೊಂಡು ಬಂದಿದ್ದಾರೆ.

ಈ ವೀರೋಚಿತ ಸಾಹಸಕಾರ್ಯಗಳನ್ನು ಗಮನಿಸಿ ರಾಷ್ಟ್ರಾಧ್ಯಕ್ಷರು ಇವರಿಗೆ ೧೯೭೨ರ ಜನವರಿ ೨೬ರಂದು "ಮಹಾವೀರಚಕ್ರ" ಪ್ರಶಸ್ತಿಯನ್ನಿತ್ತು ಗೌರವಿಸಿದ್ದಾರೆ. ವೀರಾಗ್ರಣಿಗೆ ಉಚಿತವಾದ ಗೌರವವಿದು. ಮುಂದೆ ಇನ್ನೂ ಹೆಚ್ಚಿನ ಪ್ರಶಸ್ತಿ, ಪದವಿಗಳನ್ನು ಇವರು ಗಳಿಸಿ ಕೀರ್ತಿಪಡೆಯಲೆಂದೇ ನಮ್ಮ ಹಾರೈಕೆ.

ಕ್ಯಾಪ್ಟನ್ ಓ. ಎಸ್. ಡಾಸನ್

ಕ್ಯಾಪ್ಟನ್ ಆಸ್ಕರ್ ಸ್ಟಾನ್ಲಿ ಡಾಸನ್‌ರವರು ೧೯೪೪ರಲ್ಲಿ 'ರಾಯಲ್ ಇಂಡಿಯನ್ ನೇವಿ'ಗೆ ಸೇರಿದರು. ಎರಡನೆಯ ಮಹಾ ಯುದ್ಧದಲ್ಲಿಯೂ ಇವರು ಸಕ್ರಿಯವಾಗಿ ಭಾಗ ವಹಿಸಿ, ತಮ್ಮ ಸಾಹಸವನ್ನು ತೋರಿ ಮೇಲಣ ಅಧಿಕಾರಿಗಳ ಮೆಚ್ಚುಗೆಯನ್ನು ಪಡೆದರು.

ಬ್ರಿಟಿಷ್ ದ್ವೀಪಗಳಲ್ಲಿರುವ ನಾವಿಕ ಕೇಂದ್ರಗಳಲ್ಲಿ ಇವರಿಗೆ ವಿಶೇಷ ಶಿಕ್ಷಣವಾಯಿತು. ಅಲ್ಲದೆ ಸಮುದ್ರಯಾನ, ಹಡಗುಗಳ ನಿರ್ಮಾಣ ಈ ವಿಷಯಗಳನ್ನು ಕುರಿತು ಇಂಗ್ಲೆಂಡಿನಲ್ಲಿ ವ್ಯಾಸಂಗ ಮಾಡಿ ಪದವಿಗಳನ್ನೂ ಗಳಿಸಿರುವರು. ಇಂದಿನ ನೌಕಾಬಲದಲ್ಲಿ ಕ್ಯಾಪ್ಟನ್ ಡಾಸನ್‌ರವರ ಸೇವೆ ಅತ್ಯಮೂಲ್ಯವಾಗಿದೆ. ಇವರು ತಮಗೆ ದೊರೆತ ನಾನಾ ಹಂತಗಳಲ್ಲಿ ಹಾಗೂ ಪದವಿಗಳಲ್ಲಿ ತಮ್ಮ ಬುದ್ಧಿವಂತಿಕೆಯನ್ನು ವ್ಯಕ್ತಪಡಿಸಿರುವರು. ಕೆಲವು ಕಾಲ ಇವರು ಐ.ಎನ್.ಎಸ್. ಸರ್ಕಾರ್ ಮತ್ತು ಬಾಲಕರ ಶಿಕ್ಷಣ ಮಂಡಲಿಯ ನಿರ್ದೇಶಕರಾಗಿಯೂ (ಡೈರೆಕ್ಟರ್) ಸೇವೆ ಸಲ್ಲಿಸಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ಇವರು ದಿ|| ರಾಷ್ಟ್ರಪತಿ ರಾಜೇಂದ್ರ ಪ್ರಸಾದ್‌ರವರ ಎ.ಡಿ.ಸಿ. (A.D.C.) ಆಗಿ ನೇಮಕಗೊಂಡಿದ್ದುದು—ಇವರ ಕಾರ್ಯದಕ್ಷತೆಗೆ ತಕ್ಕ ಸಾಕ್ಷಿಯಾಗಿದೆ.

೧೯೭೧ರ ಜನವರಿಯಿಂದ ಇವರು ನೌಕಾಬಲದ ಕಾರ್ಯಕಲಾಪಗಳ ನಿರ್ದೇಶಕ (ಡೈರೆಕ್ಟರ್) ರಾಗಿ ಸೇವೆ ಸಲ್ಲಿಸುತ್ತಿರುವರು. ಇವರ ತಾಯಿ ಶ್ರೀಮತಿ ಇ. ಎಸ್. ಡಾಸನ್‌ರವರು ಬೆಂಗಳೂರಿನ ರಿಚ್ಚರ್ಡ್ಸ್ ಟೌನ್‌ನಲ್ಲಿ ವಾಸವಾಗಿರುವರು. ಇವರ ಸಹೋದರರೊಬ್ಬರು ಭಾರತದ ಭೂಸೇನೆಯಲ್ಲಿ ಸೇವೆ ಸಲ್ಲಿಸುತ್ತಿರುವರೆಂಬುದು ಗಮನಾರ್ಹ ಹಾಗೂ ಅಭಿನಂದನೀಯವಾಗಿದೆ.

ಕ್ಯಾಪ್ಟನ್ ಓ. ಎಸ್. ಡಾಸನ್‌ರವರ ಪ್ರಮುಖ ಸೇವೆಯನ್ನು ಗಮನಿಸಿ ಸರ್ಕಾರವು ಇವರಿಗೆ ಅತಿವಿಶಿಷ್ಟ ಸೇವಾಪದಕವನ್ನಿತ್ತು ಗೌರವಿಸಿರುವುದು ಹೆಮ್ಮೆಯ ಸಂಗತಿ.

ಕ್ಯಾಪ್ಟನ್ ಕೆ. ಪಿ. ಗೋಪಾಲರಾವ್

ಭಾಷಾವಾರು ಪ್ರಾಂತಗಳು ರೂಪುಗೊಳ್ಳುವ ಮುನ್ನ ಕಾಸರಗೋಡು ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದ್ದ ಒಂದು ತಾಲ್ಲೂಕಾಗಿತ್ತು. ದುರದೃಷ್ಟವಶಾತ್ ಇಂದು ಅದು ಕೇರಳ ರಾಜ್ಯಕ್ಕೆ ಸೇರಿಹೋಗಿದೆ. ಈ ಕಾಸರಗೋಡಿನವರೇ ಆಗ ಶ್ರೀ ಕೆ. ಪಿ. ಗೋಪಾಲರಾಯರು ಅಚ್ಚ ಕನ್ನಡಿಗರು. ಇಂಥ ಅನೇಕ ಕನ್ನಡಿಗರನ್ನೊಳಗೊಂಡಿರುವ ಕಾಸರಗೋಡು ಕರ್ನಾಟಕ ಭಾಗವೇ—ಎನ್ನುವುದಕ್ಕೆ ಶ್ರೀ ಗೋಪಾಲರಾಯರಂಥ ಕನ್ನಡಿಗರೇ ಸಾಕ್ಷಿ. ಶ್ರೀ ಮಾಸ್ತಿ ವೆಂಕಟೇಶ ಐಯ್ಯಂಗಾರ್ಯರ ದೆಶೆಯಿಂದ 'ಮಾಸ್ತಿ' ಎಂಬ ಊರು ಪ್ರಸಿದ್ಧಿಗೆ ಬಂದಿರುವಂತೆ ಶ್ರೀ ಗೋಪಾಲರಾಯರ ದೆಶೆಯಿಂದ ಕಾಸರಗೋಡು ಪ್ರಸಿದ್ಧಿಗೆ ಬರುವಂತಾಗಿದೆ.

ಡಿಸೆಂಬರ್ ನಾಲ್ಕರ ರಾತ್ರೆ ಕರಾಚಿಯ ಕರಾವಳಿಯಲ್ಲಿ ಶತ್ರುಗಳ ನೆಲೆಗಳ ಮೇಲೆ ಭಾರತೀಯ ನೌಕಾಪಡೆ ಬಿರುಸಾದ ದಾಳಿ ನಡೆಸಿತು. ಪಾಕ್ ಪಡೆಗಳು ತಲೆಯೆತ್ತದಂತೆ ತೀವ್ರವಾದ ಘರ್ಷಣೆಯೊಂದು ಮಿಂಚಿನಂತೆ ನಡೆದುಹೋಯಿತು. ಈ ದಾಳಿಯನ್ನು ನಡೆಸಿದ ತಂಡದ ನಾಯಕರೇ ಕ್ಯಾಪ್ಟನ್ ಕಾಸರಗೋಡು, ಪಟ್ಟಣ ಶೆಟ್ಟಿ ಗೋಪಾಲರಾವ್. ಶತ್ರುಗಳ ವೈಮಾನಿಕ ದಾಳಿಯನ್ನಾಗಲೀ, ಭೂಸೇನೆಯ ಪ್ರತಿದಾಳಿಯನ್ನಾಗಲೀ, ನೌಕಾದಳದ ಹೊಡೆತವನ್ನಾಗಲೀ ಇವರು ಲೆಕ್ಕಿಸದೆ ತಮ್ಮ ತಂಡವನ್ನು ಕರಾಚಿಯ ಕರಾವಳಿ ಪ್ರದೇಶದೊಳಕೆ ನುಗ್ಗಿಸಿಯೇ ಬಿಟ್ಟರು. ಅಲ್ಲದೆ ಎರಡು ಬಾರಿ ಯುದ್ಧದ ಹಡಗುಗಳ ನೆಲೆಯನ್ನು ಕಂಡುಹಿಡಿಯುವುದರಲ್ಲಿಯೂ ಸಹ ಯಶಸ್ವಿಯಾದರು.

ಶತ್ರುಗಳ 'ಡೆಸ್ಟ್ರಾಯರ್'ಗಳ ಗುಂಡೇಟುಗಳು ಬಂದು ಅಪ್ಪಳಿಸುತ್ತಿದ್ದುವು: ತಮ್ಮ ಸೈನಿಕರ ಜೀವ ಸಾವಿನ ದವಡೆಯಲ್ಲಿ ಸಿಕ್ಕಿಹೋಗಿತ್ತು. ತಮ್ಮ ಹಡಗುಗಳಿಗೆ ಯಾವ ಕ್ಷಣದಲ್ಲಿ ಅಪಘಾತ ಸಂಭವಿಸುವುದೋ ಎಂಬ ಭೀತಿ ಬೇರೆ. ಇಷ್ಟಾದರೂ ಕ್ಯಾಪ್ಟನ್ ಗೋಪಾಲರಾಯರು ಜಗ್ಗಲಿಲ್ಲ. ಅವರ ಧೈರ್ಯವೇ ಧೈರ್ಯ.

ಅಳಿವು-ಉಳಿವುಗಳನ್ನು ಲೆಕ್ಕಿಸದೆ ದೃಢಮನಸ್ಸಿನಿಂದ ಶತ್ರುಗಳ ಮೇಲೆ ನುಗ್ಗಿ ಗುಂಡಿನಮಳೆಗರೆದರು. ಇದರ ಫಲವಾಗಿ ಶತ್ರುಗಳ ಎರಡು 'ಡೆಸ್ಟ್ರಾಯರ್'ಗಳು ಮುಳುಗಿದುವು. ಜೊತೆಗೆ ಒಂದು ಜಲಾಂತರ್ಗಾಮಿಯೂ ಮುಳುಗಿಹೋಯಿತು.

ಈ ನೌಕಾದಳದ ನೆರವಿಗೆ ಎಲ್ಲ ಪಡೆಗಳೂ ಸಜ್ಜಾಗಿ ಬಂದಿದ್ದುವು. ಭೂಮಿಯ ಮೇಲೆ ಘರ್ಷಣೆ, ನೀರಿನಲ್ಲಿ ಘರ್ಷಣೆ, ಆಕಾಶದಲ್ಲಿಯೂ ಹೋರಾಟ ಹೀಗಾಗಿ ಶತ್ರುಗಳು ತಲ್ಲಣಿಸಿ ತತ್ತರಿಸಿಹೋದರು. ಕಮ್ಯಾಂಡರ್ ಗೋಪಾಲರಾಯರು "ಮುನ್ನುಗ್ಗಿರಿ; ಶತ್ರು ವಲಯಗಳ ಮೇಲೆ ಬಾಂಬ್ ದಾಳಿ ನಡೆಸಿರಿ" ಎಂದು ಆಜ್ಞೆಯಿತ್ತುದೇ ತಡ ಬಾಂಬ್ ದಾಳಿ ಆರಂಭವಾಯಿತು. ಕರಾಚಿ ಬಂದರುಗಳಲ್ಲಿದ್ದ

ಪೆಟ್ರೋಲ್ ಟ್ಯಾಂಕ್‌ಗಳ ಮೇಲೆ, ಇತರ ಯಂತ್ರಸ್ಥಾಪನೆಗಳ ಮೇಲೆ ಬಾಂಬ್‌ಗ ಸುರಿಮಳೆಯಾಯಿತು. ಒಡನೆಯೇ ಪೆಟ್ರೋಲ್ ಟ್ಯಾಂಕ್‌ಗಳು ಹತ್ತಿಕೊಂಡ ಉರಿಯತೊಡಗಿದವು. ಅದರ ಜ್ವಾಲೆ ಗಗನವನ್ನೆಲ್ಲ ವ್ಯಾಪಿಸಿತು. ಕೊನೆಗ ಕರಾಚಿ ಬಂದರಿನ ಪೂರ್ಣ ಹತೋಟಿ ಕ್ಯಾಪ್ಟನ್‌ಗೋಪಾಲರಾಯರ ತಂಡದವರ ವಶಕ್ಕೆ ಬಂದಿತು.

ಈ ಮಿಲಿಟರಿ ಕಾರ್ಯಾಚರಣೆಯಲ್ಲಿ ಕಮ್ಯಾಂಡರ್ ಕಾಸರಗೋಡು ಪಟ್ಟಣ ಶೆಟ್ಟಿ ಗೋಪಾಲರಾಯರು ಅಪ್ರತಿಮ ಸಾಹಸವನ್ನೂ, ಯೋಗ್ಯ ನಾಯಕತ್ವವನ್ನೂ ಭಾರತೀಯ ನೌಕಾದಳದ ಹಿರಿಮೆಯನ್ನೂ ಎತ್ತಿ ತೋರಿಸಿದ್ದಾರೆ.

೧೯೨೬ರ ನವೆಂಬರ್ ೧೩ರಂದು ಮಧುರೆಯಲ್ಲಿ ಶ್ರೀ ಕೆ. ಪಿ. ಗೋಪಾಲ ರಾಯರ ಜನನವಾಯಿತು. ಇವರ ತಂದೆ ದಿವಂಗತ ಕೆ. ಸಿ. ಜನಾರ್ಧನರಾಯರು ದಕ್ಷಿಣ ಕನ್ನಡ ಜಿಲ್ಲೆಯವರು. ಮದ್ರಾಸ್ ಪ್ರಾಂತದ ಅಧಿಕಾರಿಗಳಾಗಿದ್ದು,೧೯೪೭ ರಲ್ಲಿ 'ಡೆಪ್ಯುಟಿ ಇನ್‌ಸ್ಪೆಕ್ಟರ್ ಜನರಲ್ ಆಫ್ ಪೋಲೀಸ್' ಆಗಿ ನಿವೃತ್ತರಾದರು.

ಶ್ರೀ ಗೋಪಾಲರಾಯರು ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ತಮ್ಮ ವಿದ್ಯಾ ಭ್ಯಾಸವನ್ನು ಮುಗಿಸಿಕೊಂಡು ೧೯೫೦ರಲ್ಲಿ ಭಾರತದ ನೌಕಾದಳದಲ್ಲಿ ಕಮಿಷನ್ ಅಧಿಕಾರಿಗಳಾಗಿ ಸೇರಿದರು. ೧೯೫೪-೫೫ರಲ್ಲಿ ಬ್ರಿಟಿಷ್ ದ್ವೀಪಗಳಿಗೆ ಹೋಗಿ 'ನೇವೆಲ್ ಗನ್ನರಿ'ಯಲ್ಲಿ ಹೆಚ್ಚಿನ ಶಿಕ್ಷಣ ಪಡೆದರು. ಅನಂತರ ಸ್ಟಾಫ್ ಗನ್ನರಿ ಆಫೀಸರ್ ಆಗಿ ಕೆಲವು ಕಾಲ ಸೇವೆ ಸಲ್ಲಿಸಿದರು. ಕೊಚ್ಚಿನ್ ನೌಕಾದಳದ ತರ ಬೇತಿ ಶಿಬಿರದಲ್ಲಿ ಹಿರಿಯ ಶಿಕ್ಷಕರಾಗಿಯೂ ಸ್ವಲ್ಪ ಕಾಲ ಕೆಲಸ ಮಾಡಿದರು.

ಇವರು ೧೯೫೮ರಲ್ಲಿ ಪುನಃ ಇಂಗ್ಲೆಂಡಿಗೆ ಐ. ಎನ್. ಎಸ್. ತ್ರಿಶೂಲ್ ಹಡ ಗಿನ ಮುಖಂಡರಾಗಿ ಹೋಗಿದ್ದರು. ಐ. ಎನ್. ಎಸ್. ತ್ರಿಶೂಲ್ ಎಂಬುದು ಜಲಾಂತರ್ಗಾಮಿ ಕಾವಲು ಹಡಗು. ಇದು ಇಂಗ್ಲೆಂಡಿನಲ್ಲಿಯೇ ತಯಾರಾದುದು.

೧೯೬೪ರಲ್ಲಿ ನೀಲಗಿರಿಯಲ್ಲಿರುವ ವೆಲ್ಲಿಂಗ್ಟನ್‌ನಲ್ಲಿನ ರಕ್ಷಣಾದಳದ ಸ್ಟಾಫ್ ಕಾಲೇಜಿನಲ್ಲಿ ಶ್ರೀ ಗೋಪಾಲರಾಯರು ಹೆಚ್ಚಿನ ಶಿಕ್ಷಣ ಪಡೆದರು. ೧೯೬೬ರಲ್ಲಿ ನೌಕಾನಿರೋಧಕ ಜಲಾಂತರ್ಗಾಮಿ ಕಾವಲು ಹಡಗಾದ ಐ. ಎನ್. ಎಸ್. ತಲ್ ವಾರ್‌ನ ಎರಡನೆಯ ಕಮ್ಯಾಂಡರ್ ಆಗಿ ನೇಮಕಗೊಂಡರು. ಬಳಿಕ ಬಡ್ತಿ ಪಡೆದು ದೆಹಲಿಗೆ ಹೋದರು.

೧೯೬೮ರಲ್ಲಿ ರಷ್ಯಕ್ಕೆ ಹೋಗಿ ಐ. ಎನ್. ಎಸ್. ಕಡ್‌ಮಟ್ ಎಂಬ ಡಿಸ್ಟ್ರಾ ಯರ್ ಹಡಗನ್ನು ವಶಕ್ಕೆ ಪಡೆದುಕೊಂಡು, ಅದರ ಬಗ್ಗೆ ಹೆಚ್ಚಿನ ಮಾಹಿತಿ ಪಡೆದು ಹಿಂದಿರುಗಿದರು. ಈ ಹಡಗು ರಷ್ಯದಲ್ಲಿಯೇ ನಿರ್ಮಾಣವಾದದ್ದು.

೧೯೬೯ರಲ್ಲಿ ವಿಶಾಖಪಟ್ಟಣದಲ್ಲಿ ಒಂದು ನೌಕಾದಳದ ಶಿಕ್ಷಣ ಶಾಲೆಯನ್ನು ತೆರೆಯಲು ಸಿದ್ಧತೆಗಳನ್ನು ಮಾಡುವುದಕ್ಕಾಗಿ ಇವರನ್ನು ನೇಮಿಸಲಾಯಿತು.

ಹೀಗೆ ಅನೇಕ ವಿಧವಾದ ರೀತಿಗಳಲ್ಲಿ ಅಗಾಧ ಸೇವೆಯನ್ನು ಸಲ್ಲಿಸಿರುವ

ಶ್ರೀ ಗೋಪಾಲರಾಯರಿಗೆ ೧೯೭೧ರ ಜನವರಿ ೨೬ರಂದು ಗಣರಾಜ್ಯೋತ್ಸವದಿನಾಚರಣೆಯ ಸಂದರ್ಭದಲ್ಲಿ ರಾಷ್ಟ್ರಪತಿಯವರು 'ವಿಶೇಷ ಸೇವಾಪದಕ'ವನ್ನಿತ್ತು ಗೌರವಿಸಿದರು.

೧೯೭೧ರ ಡಿಸೆಂಬರ್‌ನಲ್ಲಿ ಪುನಃ ಇವರನ್ನು ಒಂದು 'ಡೆಸ್ಟ್ರಾಯರ್' ಜೊತೆಯಲ್ಲಿ ಸಮುದ್ರ ಕಾರ್ಯಾಚರಣೆಗೆ ಕಳುಹಿಸಲಾಯಿತು. ಅನಂತರ ಯುದ್ಧ ಸಮಯದಲ್ಲಿ ಇವರನ್ನು ನೌಕಾಪಡೆಯ ಒಂದು ದಳದ ಮುಖ್ಯಸ್ಥರನ್ನಾಗಿ ನೇಮಿಸಿ ಕರಾಚಿ ಬಂದರಿನ ಮುತ್ತಿಗೆಗಾಗಿ ಕಳುಹಿಸಲಾಯಿತು. ಶತ್ರುಗಳ ಯುದ್ಧದ ಹಡಗುಗಳನ್ನು ನಾಶಪಡಿಸಿ, ಬಂದರಿನ ಮೇಲೆ ಬಾಂಬ್ ದಾಳಿ ನಡೆಸಿ ಯಶಸ್ಸನ್ನು ಗಳಿಸಿದರು.

ಇತ್ತೀಚಿನ ಸಮರದಲ್ಲಿ ರಾಷ್ಟ್ರ ರಕ್ಷಣೆಗಾಗಿ ಈ ವಿಧವಾದ ಸಾಹಸ ಕಾರ್ಯಗಳನ್ನು ಮಾಡಿದ ಪ್ರಯುಕ್ತ ರಾಷ್ಟ್ರಪತಿಯವರು ಇವರಿಗೆ "ಮಹಾವೀರಚಕ್ರ" ಪ್ರಶಸ್ತಿಯನ್ನಿತ್ತು ಗೌರವಿಸಿದರು. ಇವರೀಗ ಕ್ಯಾಪ್ಟನ್ ಪದವಿಗೇರಿ ಎಂದಿನಂತೆ ಅಮೂಲ್ಯ ಸೇವೆಯನ್ನು ಸಲ್ಲಿಸುತ್ತಿರುವರು.

ಎತ್ತರದ ನಿಲುವು, ಮುಖದಲ್ಲಿ ಗೆಲುವುಗಳಿಂದ ಕೂಡಿರುವ ಸಾಹಸಿ ಕ್ಯಾಪ್ಟನ್ ಗೋಪಾಲರಾಯರು ಸದ್ಗೃಹಸ್ಥರೂ ಹೌದು. ಮದ್ರಾಸಿನ ಕ್ವೀನ್ ಮೇರಿ ಕಾಲೇಜಿನ ಪದವೀಧರೆಯಾದ ಶ್ರೀಮತಿ ರಾಧಾರವರು ಇವರ ಧರ್ಮ ಪತ್ನಿ. ಮುತ್ತಿನಂತಹ ಮುದ್ದಾದ ಮೂರು ಮಕ್ಕಳು : ತಾರಾ, ಸವಿತಾ ಮತ್ತು ವಿನಾಯಕ.

ಶ್ರೀ ಗೋಪಾಲರಾಯರಿಗೆ ಉಜ್ವಲ ಭವಿಷ್ಯವಿದೆ. ಅವರಿಂದ ನಮ್ಮ ಭಾರತ ಭೂಮಿಗೆ ಇನ್ನೂ ಹೆಚ್ಚು ಹೆಚ್ಚಾಗಿ ಸೇವೆ ಸಲ್ಲಲೆಂದೂ, ಅವರಿಗೆ ಇನ್ನೂ ಹೆಚ್ಚಿನ ಯಶಸ್ಸು ದೊರೆಯಲೆಂದೂ ನಮ್ಮ ಹಾರೈಕೆ.

●

ಗ್ರೂಪ್‌ಕ್ಯಾಪ್ಟನ್ ಜೆ. ಎಂ. ರಾವ್

೧೯೭೨ರ ಜನವರಿ ೨೬ರಂದು ನಡೆದ ಗಣರಾಜ್ಯೋತ್ಸವ ದಿನಾಚರಣೆಯಲ್ಲಿ ರಾಷ್ಟ್ರಪತಿ ಶ್ರೀ ವಿ. ವಿ. ಗಿರಿಯವರು ಗ್ರೂಪ್‌ಕ್ಯಾಪ್ಟನ್ ಜೆ. ಎಂ.ರಾವ್‌ರವರಿಗೆ ಅತಿವಿಶಿಷ್ಟಸೇವಾ ಪದಕವನ್ನಿತ್ತು ಗೌರವಿಸಿದರು. ವಾಯು ದಳದಲ್ಲಿ ಇವರು ಸಲ್ಲಿಸಿರುವ ಅಮೂಲ್ಯ ಸೇವೆಗಾಗೀ ಈ ಪದಕ ದೊರೆಯಿತು. ಇವರೀಗ ದಂತ ಸಿಬ್ಬಂದಿಯ (Dental Staff) ಕಮ್ಯಾಂಡಿಂಗ್ ಆಫೀಸರ್ ಆಗಿಯೂ ಭಾರತ ವಾಯು ಪಡೆಗಳ ದಂತ ವೈದ್ಯ ಸಲಹೆಗಾರರಾಗಿಯೂ ಕೆಲಸ ಮಾಡುತ್ತಿದ್ದಾರೆ.

೧೯೨೦ರ ಏಪ್ರಿಲ್ ೨೧ ರಂದು ಶ್ರೀಕಾಕುಳಂ ಬಳಿಯಿರುವ ಐಜಾಪುರ ಎಂಬಲ್ಲಿ ಇವರು ಜನಿಸಿದರು. ಇವರ ತಂದೆ ಡಾ|| ಡಿ. ವಿ. ನಾಯಿಡುರವರು ತಮ್ಮ ಮಗನಿಗೆ ವಿದ್ಯಾಭ್ಯಾಸಕ್ಕೆ ಬೇಕಾದ ಎಲ್ಲ ಸೌಲಭ್ಯಗಳನ್ನೂ ಒದಗಿಸಿಕೊಟ್ಟರು. ಅಡಿಯಾರ್‌ನಲ್ಲಿರುವ ಥಿಯಸಾಫಿಕಲ್ ಹೈ ಸ್ಕೂಲ್ ನಲ್ಲಿ ವ್ಯಾಸಂಗ ಮಾಡಿ ೧೯೩೨ರಲ್ಲಿ ಮೆಟ್ರಿಕ್ ಮುಗಿಸಿದ ಇವರು ಮುಂದೆ ವಿಶಾಖ ಪಟ್ಟಣದಲ್ಲಿರುವ ಎ. ವಿ. ಎನ್. ಕಾಲೇಜಿನಲ್ಲಿ ವ್ಯಾಸಂಗ ಮಾಡಿದರು. ಅನಂತರ ಕಲ್ಕತ್ತೆಯಲ್ಲಿರುವ

ದಂತ ವೈದ್ಯ ಕಾಲೇಜಿಗೆ ಸೇರಿ ೧೯೪೧ರಲ್ಲಿ ದಂತ ವೈದ್ಯದಲ್ಲಿ ಪದವಿ ಪಡೆದರು. ಅನಂತರ ೧೯೪೨ರಲ್ಲಿ ಭಾರತ ವೈದ್ಯಕೀಯ ಇಲಾಖೆ (I. M. S.) ಯಲ್ಲಿ ಕಮಿಷನ್ ಪಡೆದು ಸೈನಿಕ ಸೇವಾವೃತ್ತಿಯನ್ನು ಕೈಗೊಂಡರು.

ಎರಡನೆಯ ಮಹಾಯುದ್ಧ ನಡೆದಾಗ ಬರ್ಮಾದಲ್ಲಿಯೂ ೧೯೪೬ರಲ್ಲಿ ಜಮ್ಮು ಕಾಶ್ಮೀರ್ ವಲಯದಲ್ಲಿಯೂ ೧೯೫೦-೫೨ರಲ್ಲಿ ಕೊರಿಯಾದಲ್ಲಿಯೂ ಇವರು ಸೇವೆ ಸಲ್ಲಿಸಿ ಅಪಾರ ಅನುಭವವನ್ನು ಗಳಿಸಿರುವರು. ವಿಶ್ವಸಂಸ್ಥೆಯ ದಳಗಳೊಡನೆ ಇವರು ಕೊರಿಯಾಕ್ಕೆ ಹೋಗಿ ಹೆಸರು ಗಳಿಸಿದರು. ಪಾರ್ಯಾಟ್ರೂಪ್‌ಗಳಲ್ಲಿ ಅನುಭವ ಪಡೆದ ಇವರು ಇಡೀ ಭಾರತದಲ್ಲಿ ಮೊತ್ತಮೊದಲನೆಯ ದಂತ ವೈದ್ಯರಾಗಿದ್ದಾರೆ.

೧೯೫೬ರಲ್ಲಿ ಇವರ ಸೇವೆಯನ್ನು ಭಾರತದ ವಾಯುಪಡೆಗಳಿಗೆ ವಿಶಾಸಲಾಗಿಟ್ಟು ನೇಮಿಸಲಾಯಿತು. ಇವರ ವೈದ್ಯಕೀಯ ಚಾತುರ್ಯವನ್ನೂ, ಆಡಳಿತ ಸಾಮರ್ಥ್ಯವನ್ನೂ, ಸಂಘಟನಾ ಶಕ್ತಿಯನ್ನೂ ಗಮನಿಸಿ ಮೇಲಣ ಅಧಿಕಾರಿಗಳು ೧೯೬೧ರಲ್ಲಿ ಇವರನ್ನು ಶ್ಲಾಘಿಸಿ ಗೌರವಿಸಿದರು.

ಇಂದು ಭಾರತ ವಾಯುಪಡೆಯ ದಂತ ಚಿಕಿತ್ಸಾ ವಿಭಾಗದಲ್ಲಿ ಏನಾದರೂ ಪ್ರಗತಿ ಸಾಧಿಸಿದ್ದೇ ಆದರೆ ಅದರ ಕೀರ್ತಿಯು ಶ್ರೀ ಜೆ. ಎಂ. ರಾವ್‌ರವರಿಗೇ ಸಲ್ಲಬೇಕು. ಏಕೆಂದರೆ ಅದರ ಏಳಿಗೆಗಾಗಿ ಡಾ|| ರಾವ್‌ರವರು ಹಗಲಿರುಳು ದುಡಿದಿದ್ದಾರೆ.

ಹೀಗೆ ನಾನಾ ವಿಧವಾಗಿ ನಾನಾ ದೇಶಗಳಲ್ಲಿ ಶ್ರಮಿಸುತ್ತಿರುವ ಗ್ರೂಪ್

ಕ್ಯಾಪ್ಟನ್ ಶ್ರೀ ಜೆ. ಎಂ. ರಾವ್‌ರವರ ದಕ್ಷತೆಯನ್ನು ಗುರುತಿಸಿ ಅಮೆರಿಕ ಸಂಯುಕ್ತ ಸಂಸ್ಥಾನದ ಅಂತರಾಷ್ಟ್ರೀಯ ದಂತ ವೈದ್ಯ ಕಾಲೇಜಿನ 'ಫೆಲೊ' ಆಗಿ ಆಯ್ಕೆ ಮಾಡಿಕೊಂಡಿರುವುದು ನಿಜವಾಗಿಯೂ ಹೆಮ್ಮೆಯ ವಿಚಾರ. ಅಲ್ಲದೆ ಭಾರತ ದಂತ ವೈದ್ಯ ಸಂಘದ (ಬೆಂಗಳೂರು ಶಾಖೆಯ) ಅಧ್ಯಕ್ಷರಾಗಿ ಆಯ್ಕೆಗೊಂಡಿರುವುದು ನಿಜಕ್ಕೂ ಸಂತೋಷದ ಸಂಗತಿ.

ಇವರು ಅನೇಕ ಸಂಘ ಸಂಸ್ಥೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ಇವರು ರೋಟರಿ ಕ್ಲಬ್ ಸದಸ್ಯರೂ ಹೌದು (ಬೆಂಗಳೂರು ಪೂರ್ವ) ಮೊದಲು ಕೆಲವು ಕಾಲ ಲಯನ್ಸ್ ಕ್ಲಬ್ಬಿನ ಸದಸ್ಯರೂ ಆಗಿದ್ದರು. ವೃತ್ತಿಯಲ್ಲಿ ವೈದ್ಯರು: ಸೇವೆಯಲ್ಲಿ ಸೈನಿಕರು : ಅಲ್ಲದೆ ಥಿಯಸಾಫಿಕಲ್ ಸೊಸೈಟಿಯ ಸದಸ್ಯರು. ಇದೇ ಆವರ ಜೀವನದ ವೈಶಿಷ್ಟ್ಯ. ಇಂಥವರಿಗೆ ಸರ್ಕಾರವು ಅತಿವಿಶಿಷ್ಟ ಸೇವಾಪದಕವನ್ನಿತ್ತು ಗೌರವಿಸಿರುವುದು ಆಶ್ಚರ್ಯವೇನಲ್ಲ. ಇವರು ಇನ್ನೂ ಹೆಚ್ಚು ಹೆಚ್ಚು ಅಭಿವೃದ್ಧಿಹೊಂದಿ ಕೀರ್ತಿಶಾಲಿಗಳಾಗಲೆಂದು ಹಾರೈಸೋಣ.

●

ವಿಂಗ್ ಕಮ್ಯಾಂಡರ್ ವಿ. ಕೆ. ಮೂರ್ತಿ

ವಿಂಗ್ ಕಮ್ಯಾಂಡರ್ ವಿ. ಕೆ. ಮೂರ್ತಿಯವರು ಮದ್ರಾಸ್‌ನಲ್ಲಿ ಜನಿಸಿದರಾದರೂ ಮುಂದೆ ಬೆಂಗಳೂರಿನಲ್ಲಿಯೇ ಬಂದು ನೆಲೆಸಿದರು. ೧೯೪೭ರಲ್ಲಿ ಯಲಹಂಕದಲ್ಲಿ ನಡೆದ ಭಾರತೀಯ ವೈಮಾನಿಕ ಶಿಕ್ಷಣ ಶಿಬಿರಗಳಲ್ಲಿ ಇವರು ಭಾಗವಹಿಸಿ ತೇರ್ಗಡೆಯಾದರು. ಅನಂತರ ಭಾರತದ ವಾಯು ದಳದಲ್ಲಿ ಇವರನ್ನು ಕಮಿಷನ್ಡ್ ಅಧಿಕಾರಿಗಳನ್ನಾಗಿ ನೇಮಕ ಮಾಡಲಾಯಿತು.

ಮುಂದೆ ಇವರು ವಾಯು ಬಲದ ಸಮಸ್ತ ವಿಚಾರಗಳನ್ನೂ ಗ್ರಹಿಸಿಕೊಂಡು ನಾನಾ ವಿಧವಾದ ಹುದ್ದೆಗಳಲ್ಲಿ ಮುಂದುವರೆದು ದಕ್ಷತೆಯಿಂದ ಕಾರ್ಯನಿರ್ವಹಣೆ ಮಾಡಿದರು. ೧೯೬೬ರಲ್ಲಿ ಕಛ್ ಪ್ರಾಂತದಲ್ಲಿ ಕ್ರಾಂತಿ ಸಂಭವಿಸಿದಾಗ ಇವರು ಮಿಲಿಟರಿ ಕಾರ್ಯಾಚರಣೆಯನ್ನು ಯಶಸ್ವಿಯಾಗಿ ನಡೆಸಿ, ತಮಗೆ ವಹಿಸಿದ್ದ ಕಾರ್ಯವನ್ನು ಕ್ಷಿಪ್ರದಲ್ಲಿಯೇ ನೆರವೇರಿಸಿದರು. ಇದಕ್ಕಾಗಿ ಕೇಂದ್ರ ಸರ್ಕಾರದವರು ಆಗ ಇವರಿಗೆ ವಾಯು ಸೇನಾಪದಕವನ್ನು ಕೊಟ್ಟಿದ್ದರು.

೧೯೭೧ರಲ್ಲಿ ವಿಮಾನ ಹಾರಾಟದ ಶಿಕ್ಷಕರಾಗಿ ಉತ್ತಮ ಸೇವೆಯನ್ನು ಸಲ್ಲಿಸಿದುದಕ್ಕಾಗಿ ಇವರಿಗೆ ಎ.ಒ.ಸಿ.ಎನ್.ಸಿ. ರವರಿಂದ ಮೆಚ್ಚುಗೆ ಪತ್ರವು ದೊರಕಿತು.

ಇತ್ತೀಚಿನ ಭಾರತ-ಪಾಕ್ ಯುದ್ಧದಲ್ಲಿ ಇವರು ತೋರಿದ ಶೌರ್ಯ ಸಾಹಸ ಗಳಿಗಾಗಿ ಇವರಿಗೆ ಅತಿವಿಶಿಷ್ಟ ಸೇವಾಪದಕವನ್ನು ನೀಡಲಾಯಿತು. ಸಮರದ ಸಮಯದಲ್ಲಿ ಇವರು ಮುಂಚೂಣಿ ಪ್ರದೇಶಗಳಲ್ಲಿ 'ಬೇಸ್ ಕಮ್ಯಾಂಡರ್' ಆಗಿದ್ದರು.

ಈಗ ಇವರು ಜೋಧ್‌ಪುರದಲ್ಲಿ ಭಾರತದ ವಾಯುದಳದ, ವಿಮಾನ ಹಾರಾಟ ವಿಭಾಗದಲ್ಲಿ 'ಕಮ್ಯಾಂಡಿಂಗ್ ಆಫೀಸರ್' ಆಗಿ ಕಾರ್ಯವನ್ನು ನಿರ್ವಹಿಸುತ್ತಿರುವರು.

ವಿಂಗ್ ಕಮ್ಯಾಂಡರ್ ಕೆ. ಆರ್. ರಾವ್

ಹಾಸನ ಜಿಲ್ಲೆಯ ಹೊಳೆನರಸಿಪುರ ತಾಲ್ಲೂಕಿನ ಹಳ್ಳಿಮೈಸೂರು ಗ್ರಾಮದಲ್ಲಿ ೧೯೨೬ರ ಫೆಬ್ರವರಿ ೨೫ ರಂದು ಶ್ರೀ ಕೆ. ಆರ್. ರಾವ್ (ಕೇಶವಮೂರ್ತಿ ರಾಮ ಚಂದ್ರರಾವ್) ಅವರು ಜನಿಸಿದರು. ಇವರ ತಂದೆ ಶ್ರೀ ಹೆಚ್. ಕೇಶವಮೂರ್ತಿಯ ವರು ಪ್ರೌಢ ಶಾಲೆಯ ವಿಶ್ರಾಂತ ಇಂಗ್ಲೀಷ್ ಉಪಾಧ್ಯಾಯರು.

ಶ್ರೀ ಕೆ. ಆರ್. ರಾವ್ ಅವರು ಮೈಸೂರಿನ ಶಾರದಾವಿಲಾಸ ಹೈಸ್ಕೂಲಿನಲ್ಲಿ ವ್ಯಾಸಂಗಮಾಡಿ ಎಸ್. ಎಸ್. ಎಲ್.ಸಿ. ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದರು. ಅನಂತರ ಮೈಸೂರಿನ ಇಂಟರ್‌ಮೀಡಿಯೆಟ್ ಕಾಲೇಜಿನಲ್ಲಿ ಶಿಕ್ಷಣವನ್ನು ಮುಂದುವರೆಸಿ ಆ ಪರೀಕ್ಷೆಯಲ್ಲಿ ವಿಶ್ವವಿದ್ಯಾನಿಲಯಕ್ಕೆ ಮೊದಲನೆಯವರಾಗಿ ಉತ್ತೀರ್ಣರಾದರು. ಮುಂದೆ ಬೆಂಗಳೂರು ಸೆಂಟ್ರಲ್ ಕಾಲೇಜಿಗೆ ಸೇರಿ ೧೯೪೫ರಲ್ಲಿ ಮೊದಲನೆಯ ರ‍್ಯಾಂಕ್ ಗಳಿಸಿ ಬಿ. ಎಸ್‌ಸಿ. ಪದವಿ ಯನ್ನು ಪಡೆದರು. ಆಗ ಇವರಿಗೆ ಮೂರು ಚಿನ್ನದ ಪದಕಗಳೂ, ಮೂರು ಬಹು ಮಾನಗಳೂ ಬಂದುವು. ಬಳಿಕ ಬೆಂಗಳೂರಿನ ತಾತಾ ವಿಜ್ಞಾನ ಮಂದಿರದಲ್ಲಿ ವ್ಯಾಸಂಗಮಾಡಿ ೧೯೪೮ರಲ್ಲಿ ಎಲೆಕ್ಟ್ರಿಕಲ್ ಕಮ್ಯುನಿಕೇಷನ್ ಇಂಜನಿಯರಿಂಗ್ ಪದವೀಧರರಾದರು.

ಇವರು ದೆಹಲಿಯ ಆಕಾಶವಾಣಿ ಕೇಂದ್ರದಲ್ಲಿ ಒಂದು ವರ್ಷದ ಸೇವೆ

ಸಲ್ಲಿಸಿದ ನಂತರ ೧೯೪೪ರಲ್ಲಿ ವಿಮಾನದಳದ ಟೆಕ್ನಿಕಲ್ ಸಿಗ್ನಲ್ ಬ್ರಾಂಚ್‌ನಲ್ಲಿ ಅಧಿಕಾರಿಯಾಗಿ ನೇಮಕಗೊಂಡರು. ವಿಮಾನ ದಳದಲ್ಲಿ ಬೇರೆ ಬೇರೆ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿದ ಇವರಿಗೆ ಅನುಭವ ಸಾಕಷ್ಟಾಯಿತು. ವಿಮಾನ ಪಡೆಯಲ್ಲಿ

ಇವರ ಸೇವೆ ನಾಲ್ಕು ವರ್ಷಗಳ ಕಾಲ ಸಾಗಿತು. ಈ ಅವಧಿಯಲ್ಲಿ ಅನೇಕ ಯೋಜನೆಗಳ ರಚನೆ ಮತ್ತು ಕಾರ್ಯಾಚರಣೆಗಳ ಹೊಣೆ ಇವರದೇ ಆಗಿತ್ತು. ಇಷ್ಟಲ್ಲದೆ ವೆಲ್ಲಿಂಗ್‌ಡನ್ ಡಿಫೆನ್ಸ್ ಸರ್ವಿಸ್ ಸ್ಟಾಫ್ ಕಾಲೇಜಿನಲ್ಲಿ ಇವರು ಒಂದು ವರ್ಷ ಅವಧಿಯ ತರಬೇತಿಯನ್ನೂ ಪಡೆದರು.

ಅನಂತರ ಇಂಗ್ಲೆಂಡಿನ ಕ್ರಾನ್ಸ್‌ಫೀಲ್ಡ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಸ್ನಾತಕೋತ್ತರ ಪದವಿ ಪಡೆಯಲು ಇವರನ್ನು ಕಳುಹಿಸಲಾಯಿತು. ೧೯೬೨ರಲ್ಲಿ ಇವರು ಎಲೆಕ್ಟ್ರಿಕಲ್ ಮತ್ತು ಕಂಟ್ರೋಲ್ ಇಂಜಿನಿಯರಿಂಗ್‌ನಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು. ಅಲ್ಲಿಯೂ ಸಹ ಮೊದಲನೆಯ ಸ್ಥಾನ ಇವರದೇ ಆಗಿತ್ತು. ಎಲೆಕ್ಟ್ರಿಕಲ್ ಇಂಜನಿಯರಿಂಗ್‌ನಲ್ಲಿ ವುಡ್ಸ್ ಆಫ್ ಕ್ಯಾಲೆಸ್ಟರ್ (Woods of Colchester) ಬಹುಮಾನವನ್ನೂ ಗಳಿಸಿದರು.

ಶ್ರೀ ಕೆ. ಆರ್. ರಾವ್ ಅವರು ೧೯೬೫ರಲ್ಲಿ ಅಣುಶಕ್ತಿ ವಿಭಾಗದಲ್ಲಿ ಅಹಮದಾಬಾದಿನ ಪ್ರಾಯೋಗಿಕ ಭೂ ಉಪಗ್ರಹ ಸಂಪರ್ಕ ಕೇಂದ್ರದ ನಿರ್ದೇಶಕರು ಮತ್ತು ಮೇಲ್ವಿಚಾರಕರಾಗಿ ನೇಮಕಗೊಂಡರು. ಈ ಕೇಂದ್ರದ ಅಸ್ತಿತ್ವ, ಯೋಜನೆ, ರಚನೆ, ಕಾರ್ಯಾಚರಣೆ ಇತ್ಯಾದಿಗಳಿಗೆ ಇವರೇ ಕಾರಣರಾಗಿದ್ದಾರೆ. ಇಂತಹ ಕೇಂದ್ರಗಳ ಪೈಕಿ ಭಾರತದಲ್ಲಿ ಇದೇ ಮೊದಲನೆಯದು. ಈ ಕೇಂದ್ರದ ಸ್ಥಾಪನೆಯಿಂದ ಉಪಗ್ರಹ ಸಂಪರ್ಕ ವ್ಯವಸ್ಥೆಯು ಭಾರತದಲ್ಲಿಯೂ ಪದಾರ್ಪಣ ಮಾಡಿದಂತಾಯಿತು. ಸುಮಾರು ಒಂದೂವರೆ ಕೋಟಿ ರೂ.ಗಳ ವೆಚ್ಚದಲ್ಲಿ ೧೯೬೭ರಲ್ಲಿ ಮುಕ್ತಾಯಗೊಂಡ ಈ ಯೋಜನೆ ಈ ದಿಶೆಯಲ್ಲಿ ಉನ್ನತ ಸಂಶೋಧನೆ, ಅಭಿವೃದ್ಧಿ ಮತ್ತು ತರಬೇತುಗಳಿಗೆ ಸಾಕಷ್ಟು ಅವಕಾಶ ಮಾಡಿಕೊಟ್ಟಿತು. ಇದೇ ಕೇಂದ್ರದ ಒಂದು ಭಾಗವಾಗಿ ಉಪಗ್ರಹ ಸಂಪರ್ಕ ವ್ಯವಸ್ಥೆಯ ಶಿಕ್ಷಣ ನೀಡುವ ಒಂದು ಕಾಲೇಜೂ ಆರಂಭವಾಯಿತು. ಸುಮಾರು ನೂರಕ್ಕೂ ಹೆಚ್ಚು ಮಂದಿ

ಭಾರತೀಯ ಮತ್ತು ವಿದೇಶೀಯ ಇಂಜನಿಯರುಗಳು ಇಲ್ಲಿ ವಿಶೇಷ ತರಬೇತಿಯನ್ನು ಪಡೆದರು.

ಅಹಮದಾಬಾದ್‌ನಲ್ಲಿ ಈ ಕೇಂದ್ರದ ಸ್ಥಾಪನೆಯಿಂದುಂಟಾದ ಈ ಹೊಸ ತಂತ್ರದ ಪ್ರಭಾವ ಮತ್ತು ಅರ್ಹತೆಗಳನ್ನು ಮೆಚ್ಚಿ ಕೇಂದ್ರ ಸರ್ಕಾರವು ಈ ತಂತ್ರವನ್ನು ವಾಣಿಜ್ಯೋದ್ದೇಶಗಳಿಗಾಗಿ ಬಳಸಲು ಯೋಚಿಸಿತು. ಉತ್ತಮ ಹಾಗೂ ರಚನಾತ್ಮಕ ವಿದೇಶೀ ಸಂಪರ್ಕವನ್ನು ಈ ಮೂಲಕ ಗಳಿಸಲು ಸರ್ಕಾರವು ಉದ್ದೇಶಿಸಿತು. ಇದಕ್ಕಾಗಿ ಮತ್ತೊಂದು ಭೂ ಉಪಗ್ರಹ ಸಂಪರ್ಕ ವ್ಯವಸ್ಥೆಯನ್ನು ಪುಣೆಯ ಬಳಿಯಲ್ಲಿಯ ಆರ್ವಿಯಲ್ಲಿ ಸ್ಥಾಪಿಸಲು ನಿರ್ಧರಿಸಿತು.

ಆರ್ವಿಯ ಭೂ ಉಪಗ್ರಹ ಸಂಪರ್ಕ ಕೇಂದ್ರದ ಆಡಳಿತಾಧಿಕಾರಿಗಳಾಗಿ ಹಾಗೂ ಅಧ್ಯಕ್ಷರಾಗಿ ವಿಂಗ್ ಕಮ್ಯಾಂಡರ್ ಕೆ. ಆರ್. ರಾವ್ ಅವರೇ ನೇಮಕಗೊಂಡರು. ಆರ್ವಿ ಯೋಜನೆಯನ್ನು ಎಲ್ಲ ವಿಧಗಳಲ್ಲಿಯೂ ಪೂರ್ಣಗೊಳಿಸುವ ಗುರುತರವಾದ ಹೊಣೆಯನ್ನು ಶ್ರೀ ಕೆ. ಆರ್. ರಾವ್ ಅವರು ಯಶಸ್ವಿಯಾಗಿ ನಿರ್ವಹಿಸಿದರು. ಭಾರತೀಯರ ಪ್ರೌಢಿಮೆಗೆ ಇದೊಂದು ಸವಾಲಲ್ಲವೇ ? ಅಲ್ಲದೆ ಈ ಕ್ಲಿಷ್ಟ ವಿಷಯದಲ್ಲಿ ಭಾರತದಲ್ಲಿ ತಯಾರಾದ ವಸ್ತುಗಳ ಪ್ರಮಾಣವನ್ನು ಹೆಚ್ಚಿಸುವುದೂ ಈ ಯೋಜನೆಯಲ್ಲಿ ಸೇರಿತ್ತು. ಈ ಅರ್ಹತೆಯನ್ನು ಪಡೆದಿರುವ ರಾಷ್ಟ್ರಗಳು ಜಗತ್ತಿನಲ್ಲಿ ಹತ್ತಕ್ಕಿಂತ ಹೆಚ್ಚು ಇರಲಾರವು. ಸುಮಾರು ಆರು ಕೋಟಿ ರೂ. ಗಳ ವೆಚ್ಚದಲ್ಲಿ ತಯಾರಾದ ಈ ಆರ್ವಿ ಯೋಜನೆ ೧೯೭೧ರಲ್ಲಿ ಮುಗಿಯಿತು. ಈಗ ಈ ಕೇಂದ್ರವು ಹೊರದೇಶಗಳೊಡನೆ ಉತ್ತಮ ರೀತಿಯ ಸಂಪರ್ಕವನ್ನೊದಗಿಸಿಕೊಡುತ್ತಿದೆ. ಹೊರದೇಶಗಳಿಗೆ ಸಂಪರ್ಕ ಕಲ್ಪಿಸುವ ಎಲ್ಲ ಟೆಲಿಫೋನ್ ಮತ್ತು ಟೆಲಿಗ್ರಾಂಗಳೂ ಈ ಕೇಂದ್ರದ ಮೂಲಕವೇ ಹೋಗುತ್ತಿವೆ. ಇದರಿಂದಾಗಿ ಒಂದು ಮಿಲಿಯನ್ ಡಾಲರ್‌ಗಳಷ್ಟು ವಿದೇಶೀವಿನಿಮಯ ಹಣ ಉಳಿತಾಯವಾದಂತಾಗಿದೆ. ಈ ದಿಶೆಯಲ್ಲಿ ಭಾರತವು ಸ್ವಾವಲಂಬನೆಯಾಗಿರುವುದು ಹೆಮ್ಮೆಯ ವಿಚಾರ. ೧೯೭೨ರ ಫೆಬ್ರವರಿಯಲ್ಲಿ ಈ ಉಪಗ್ರಹ ಸಂಪರ್ಕದ ಆಗಮನದ ನೆನಪಿಗಾಗಿ ಒಂದು ವಿಶೇಷ ಅಂಚೆ ಚೀಟಿಯನ್ನು ರಾಷ್ಟ್ರಾಧ್ಯಕ್ಷರು ಬಿಡುಗಡೆ ಮಾಡಿದರು.

ಈ ಹೊಸ ವಿಧಾನದ ಬಳಕೆಯಿಂದ ಭಾರತವು ಅಭಿವೃದ್ಧಿಗೊಳ್ಳಲು ಬೇಕಾದಷ್ಟು ಸಾಧ್ಯತೆಗಳಿವೆ. ಜನತೆಯೊಡನೆ ನೇರ ಸಂಪರ್ಕ ಬೆಳೆಸಲು ಇದು ಮುಖ್ಯ ಮಾಧ್ಯಮವಾಗಿದೆ. ಸಾಮಾಜಿಕ ಮತ್ತು ಸಮುದಾಯ ಸುಧಾರಣೆಗಳನ್ನು ಟೆಲಿವಿಷನ್ ಕಾರ್ಯಕ್ರಮಗಳ ಮೂಲಕ ಜನರಿಗೆ ತಿಳಿಯಪಡಿಸುವುದೇ ಇದರ ಗುರಿ.

ಮಿಲಿಟರಿ ಕಾರ್ಯಾಚರಣೆಗಳಲ್ಲಿ ಈ ಸಂಪರ್ಕ ಸಾಧನಗಳು ಮುಖ್ಯ ಪಾತ್ರ ವಹಿಸಿ ಯಶಸ್ವಿಯಾಗಬಲ್ಲುವು. ಸಣ್ಣ ಸಣ್ಣ ವಿಷಯಗಳನ್ನೂ ತುರ್ತು ಆಜ್ಞೆಗಳನ್ನೂ ಫೀಲ್ಡ್ ಕಮ್ಯಾಂಡರ್‌ಗಳಿಗೆ ಅತ್ಯಲ್ಪ ಕಾಲದಲ್ಲಿ ತಿಳಿಸಬಹುದು.

ಈ ದಿಶೆಯಲ್ಲಿ ವಿಂಗ್ ಕಮ್ಯಾಂಡರ್ ಕೆ. ಆರ್. ರಾವ್ ಅವರು ಅದ್ವಿತೀಯವಾದ ಸೇವೆಯನ್ನು ಸಲ್ಲಿಸಿದ್ದಾರೆ. ಭಾರತದಲ್ಲಿ ಭೂ ಉಪಗ್ರಹ ಸಂಪರ್ಕಗಳು ಅಸ್ತಿತ್ವಕ್ಕೆ ಬರಲು ಇವರೇ ಹೊಣೆಗಾರರಾಗಿದ್ದಾರೆ. ವಿದೇಶೀಯರ ನೆರವನ್ನು ಬಹಳ ಅಲ್ಪ ಪ್ರಮಾಣದಲ್ಲಿ ಮಾತ್ರ ಬಳಸಿಕೊಂಡು, ಭಾರತದ ಹಿರಿಮೆಯನ್ನೇ ಎತ್ತಿ ಹಿಡಿಯಲು ಇವರು ಮೊದಲ ಹೆಜ್ಜೆ ಇಟ್ಟಿರುವುದು ಸ್ತುತ್ಯರ್ಹವಾಗಿದೆ.

ಹೀಗೆ ಭಾರತೀಯ ವಿಮಾನ ಬಲದಲ್ಲಿ ವಿಶಿಷ್ಟವಾದ ಪಾತ್ರವನ್ನು ನಿರ್ವಹಿಸಿದ ಇವರು ೧೯೭೧ರ ಜುಲೈ ತಿಂಗಳಲ್ಲಿ ನಿವೃತ್ತರಾದರು. ಇವರ ಮಹತ್ಕಾರ್ಯಗಳನ್ನು ಗುರ್ತಿಸಿ ಸರ್ಕಾರವು ಇವರಿಗೆ ೧೯೭೨ರ ಜನವರಿಯಲ್ಲಿ "ಅತಿ ವಿಶಿಷ್ಟ ಸೇವಾಪದಕ" ವನ್ನಿತ್ತು ಗೌರವಿಸಿತು. ಈಗ ಇವರು ಅಹಮದಾಬಾದ್‌ನ ಭಾರತೀಯ ಬಾಹ್ಯಾಕಾಶ ಸಂಶೋಧನಾಲಯದಲ್ಲಿ ಉಪಗ್ರಹ ಸಂಪರ್ಕ ವ್ಯವಸ್ಥಾ ವಿಭಾಗದ ನಿರ್ದೇಶಕರಾಗಿದ್ದಾರೆ. ಇಷ್ಟೇ ಅಲ್ಲದೆ ಇವರು ಭಾರತದ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಂಸ್ಥೆಯ ಸದಸ್ಯರೂ ಹೌದು.

ಫೋಟೋಗ್ರಫಿ ಮತ್ತು ವಯೊಲಿನ್‌ನಲ್ಲಿ ಕರ್ನಾಟಕ ಸಂಗೀತವನ್ನು ನುಡಿಸುವುದು ಇವರ ಹವ್ಯಾಸಗಳು.

ಕರ್ನಲ್ ಗುರುರಾಜ ಕೃಷ್ಣರಾವ್ ಬುರ್ಲಿ

ಶ್ರೀ ಬುರ್ಲಿಯವರು ೧೯೨೩ರ ಜನವರಿ ೨೬ರಂದು ಬೆಳಗಾಂನಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಡಿಗ್ರಿ ಪದವಿಯವರೆಗೂ ಇವರ ಶಿಕ್ಷಣ ಬೆಳಗಾಂನಲ್ಲಿಯೇ ಆಯಿತು. ಚಿಕ್ಕಂದಿನಿಂದಲೂ ಪೋಲೀಸ್ ಅಥವಾ ಮಿಲಿಟರಿ ಇಲಾಖೆಗೆ ಸೇರಬೇಕೆಂಬುದೇ ಇವರ ಇಚ್ಛೆಯಾಗಿತ್ತು. ಕಾಲೇಜಿನಲ್ಲಿದ್ದಾಗ ವಿ. ಟಿ. ಸಿ. ಗೆ ಸೇರಿ ಎರಡೇ ವರ್ಷಗಳಲ್ಲಿ ಸಾರ್ಜೆಂಟ್ ಪದವಿಗೇರಿದರು. ಇವರ ಮನದಭಿಲಾಷೆಯನ್ನು ಪೂರೈಸಲು ಎರಡನೇ ಮಹಾಯುದ್ಧವೇ ಸುವರ್ಣಾವಕಾಶವಾಯಿತೆನ್ನಬಹುದು.

ಕಿಂಗ್ಸ್ ಎಮರ್ಜೆನ್ಸಿ ಕಮಿಷನ್‌ಗೆ ಇವರು ಆಯ್ಕೆಯಾದ ಮೇಲಷ್ಟೆ ಶ್ರೀ ಬುರ್ಲಿಯವರು ತಮ್ಮ ತಂದೆಗೆ, ತಾವು ಸೈನ್ಯಕ್ಕೆ ಸೇರಬೇಕೆಂದಿರುವ ವಿಚಾರವನ್ನು ತಿಳಿಸಿದುದು. ತಂದೆಯ ಕಡೆಯಿಂದ ಮೊದಲು ಆಶ್ಚರ್ಯ ವಿರೋಧಗಳೇ ಆದರೂ, ಅನಂತರ ಪ್ರೋತ್ಸಾಹವೂ ದೊರಕಿತು. ಆಯ್ಕೆಯಾದೊಡನೆ ಇವರು ಬೆಂಗಳೂರಿನಲ್ಲಿ ಪ್ರಿಕಮಿಷನ್ ತರಬೇತಿ ಪಡೆದು, ೧೯೪೨ರ ಆಗಸ್ಟ್ ತಿಂಗಳಿನಲ್ಲಿ ಸೆಕೆಂಡ್

ಲೆಫ್ಟಿನೆಂಟ್ ಆಗಿ ನೇಮಕಗೊಂಡರು. ಕ್ವಿಟ್ ಇಂಡಿಯಾ ಚಳುವಳಿ ಪ್ರಾರಂಭವಾದ ೧೯೪೨ರ ಆಗಸ್ಟ್ ೯ರಂದೇ ಇವರು ಸೇನೆಯಲ್ಲಿ ನೇಮಕಗೊಂಡುದು ಒಂದು ಗಮನಾರ್ಹ ವಿಷಯ.

ಕೇವಲ ಇಪ್ಪತ್ತು ವರ್ಷ ವಯಸ್ಸಿನ ಇವರು ಅತಿ ಹೆಚ್ಚಿನ ಹೊಣೆಯನ್ನು ಹೊರಬೇಕಾಗಿ ಬಂದಿತು. ವಾಯುವ್ಯ ಗಡಿ ಪ್ರಾಂತವಲ್ಲಿ ಪ್ರಚಂಡ ಪಠಾಣರನ್ನು ಸದೆಬಡಿಯಲೆಂದು ಕಳುಹಿಸಿದ್ದ ತುಕ್ಕಡಿಯಲ್ಲಿ ಇವರೂ ಇದ್ದರು. ಗುಡ್ಡಗಾಡಿನ ಆ ಕಟ್ಟುಮಸ್ತಾದ ಜನರು ಬ್ರಿಟಿಷರ ವಿರುದ್ಧ ಬಂಡಾಯವೆದ್ದಿದ್ದರು. ಈ ಸಂದರ್ಭದಲ್ಲಿ ಬೆಂಗಾವಲಿಗಿದ್ದವನ ಚಾಕಚಕ್ಯತೆಯಿಂದ ಇವರು ಎರಡು ಬಾರಿ ಗುಂಡಿನೇಟಿನಿಂದ ಪಾರಾದರು. ಯುದ್ಧದ ಮೊದಲ ದಿನಗಳಲ್ಲಿ ಕೆಲವೇ ಮಂದಿ ಭಾರತೀಯ ಅಧಿಕಾರಿಗಳಿದ್ದು ಬಡ್ತಿಯ ವಿಚಾರದಲ್ಲಿ ಅನೇಕ ಸಮಸ್ಯೆಗಳನ್ನೆದುರಿಸಬೇಕಾಯಿತು. ಆದರೂ ಶ್ರೀ ಬುರ್ಲಿಯವರು ಎದೆಗುಂದದೆ ಮಿಲಿಟರಿ ಕ್ಷೇತ್ರದಲ್ಲಿಯೇ ಮುಂದುವರೆದರು.

೧೯೪೨ರಿಂದ ೧೯೪೫ರ ವರೆಗಿನ ಅವಧಿಯು ಬಹಳ ಇಕ್ಕಟ್ಟಿನ ಪರಿಸ್ಥಿತಿಯಾಗಿದ್ದು ಬುರ್ಲಿಯವರ ತುಕ್ಕಡಿಯು ದೇಶಾದ್ಯಂತ ಸಂಚರಿಸುತ್ತಲೇ ಇರಬೇಕಾದ ಪ್ರಸಂಗ ಒದಗಿತು. ಎಲ್ಲಿಯೂ ಇವರು ಆರು ತಿಂಗಳ ಕಾಲವೂ ನಿಲ್ಲದೆ ಮುಂದುವರೆಯುತ್ತಿದ್ದರು. ಈ ಅವಧಿಯಲ್ಲಿ ಬುರ್ಲಿಯವರು ಅನೇಕ ಹೊಸ ಹೊಸ ಸ್ಥಳಗಳನ್ನು ಸಂದರ್ಶಿಸಿದರು.

೧೯೪೬ರ ವೇಳೆಗೆ ಪ್ಯಾರಾಟ್ರೂಪರ್ ಆಗಬೇಕೆಂಬ ಮಹದಾಸೆ ಶ್ರೀ ಬುರ್ಲಿಯವರಿಗುಂಟಾಯಿತು. ಕೂಡಲೇ ಇವರು ಕರಾಚಿಯ ಬಳಿಯಿರುವ ಮಲೀರ್‌ನಲ್ಲಿದ್ದ ಸೆಕೆಂಡ್ ಏರ್‌ಫೋರ್ಸ್ ಡಿವಿಜನ್ನಿಗೆ ಸೇರಿ ಶಿಕ್ಷಣ ಪಡೆದರು.

೧೯೪೭ನೆಯ ವರ್ಷವು ಶ್ರೀ ಬುರ್ಲಿಯವರಿಗೆ ಅತ್ಯಂತ ಮಹತ್ವದ ವರ್ಷವಾಗಿತ್ತು. ಆ ವರ್ಷದ ಆರಂಭದಲ್ಲಿ ಇವರ ನೌಕರಿಯು ಖಾಯಂ ಆಯಿತು. ಇದಾದ ನಂತರ ಕೆಲವೇ ತಿಂಗಳುಗಳಲ್ಲಿ ಭಾರತದ ವಿಭಜನೆಯಾಯಿತು.

ಆಗ ಬುರ್ಲಿಯವರಿದ್ದ ಯೂನಿಟ್ ಸಿಂಧ್‌ನ ಹೈದರಾಬಾದ್‌ನಲ್ಲಿತ್ತು. ಈ

ಸಂದರ್ಭದಲ್ಲಿ ತಮ್ಮ ಯೂನಿಟ್‌ನಲ್ಲಿ ನಡೆದ ಕೋಮುವಾರು ಗಲಭೆಯೊಂದನ್ನು ಇವರು ಯಶಸ್ವಿಯಾಗಿ ದಮನಮಾಡಿದರು. ಇದೇ ವರ್ಷದಲ್ಲಿಯೇ ಇವರು ತಾವಿದ್ದ ಪಾಕಿಸ್ತಾನ್ ಪ್ರದೇಶದಿಂದ ಭಾರತಕ್ಕೆ ಬಂದರು.

೧೯೪೭ರ ಕೊನೆಯ ವೇಳೆಗೆ ಹೆಚ್ಚಿನ ಸಂಖ್ಯೆಯಲ್ಲಿ ಬ್ರಿಟಿಷ್ ಅಧಿಕಾರಿಗಳು ಉದ್ಯೋಗವನ್ನು ಬಿಟ್ಟು ಸ್ವದೇಶಕ್ಕೆ ಮರಳಿದುದರಿಂದ ಅನೇಕ ಹುದ್ದೆಗಳು ಖಾಲಿಯಾಗಿ ಭಾರತೀಯ ಅಧಿಕಾರಿಗಳಿಗೆ ಬಡ್ತಿ ದೊರೆಯಿತು. ಹಾಗೆಯೇ ೧೯೪೭ರ ಡಿಸೆಂಬರ್‌ನಲ್ಲಿ ಶ್ರೀ ಬುರ್ಲಿ ಅವರಿಗೆ ಮೇಜರ್ ಪದವಿ ದೊರಕಿತು. ೧೯೪೮ರ ಜನವರಿ ೩೦ರಂದು ಮಹಾತ್ಮಗಾಂಧಿಯವರ ಹತ್ಯೆಯಾದ ನಂತರ ದೇಶದ ಎಲ್ಲೆಡೆಯಲ್ಲಿಯೂ ಕೋಮುವಾರು ಗಲಭೆ ಹರಡಿತು. ಆಗ ಬುರ್ಲಿಯವರ ಯೂನಿಟ್ ಅನ್ನು ಸತಾರಾ, ಕರಾಡ್ ಮೊದಲಾದ ಪ್ರದೇಶಗಳಿಗೆ ಶಾಂತಿಸ್ಥಾಪನೆ, ಹಾಗೂ ರಕ್ಷಣಾಕಾರ್ಯಗಳಿಗೆ ಕಳುಹಿಸಲಾಯಿತು. ಈ ಕಾರ್ಯಗಳನ್ನು ಯಶಸ್ವಿಯಾಗಿ ನೆರವೇರಿಸಿ ಹಿಂದಿರುಗಿದೊಡನೆ ಶ್ರೀ ಬುರ್ಲಿಯವರು ಹೈದರಾಬಾದ್ ಚಳುವಳಿಯಲ್ಲಿ ಭಾಗವಹಿಸಿ ಪರಿಸ್ಥಿತಿಯನ್ನು ಹತೋಟಿಗೆ ತಂದರು. ಅನಂತರ ಇವರ ಕಾರ್ಯಾಚರಣೆ ಕಾಶ್ಮೀರ ಕದನದಲ್ಲಿ ಮುಂದುವರೆಯಿತು.

೧೯೫೮ರಲ್ಲಿ ಬುರ್ಲಿ ಅವರಿಗೆ ಲೆಫ್ಟಿನೆಂಟ್ ಕರ್ನಲ್ ಪದವಿಗೆ ಬಡ್ತಿ ದೊರೆಯಿತು. ತತ್ಫಲವಾಗಿ ಒಂದು ಯೂನಿಟ್‌ನ ಸಂಪೂರ್ಣ ಹೊಣೆ ಇವರದೇ ಆಯಿತು. ೧೯೬೦ರ ಮಧ್ಯದವರೆಗೆ ಅವರು ಆ ಯೂನಿಟ್‌ನ ಕಮ್ಯಾಂಡರ್ ಆಗಿದ್ದರು. ಅನಂತರ ವಿಯೆಟ್‌ನಾಂನ ಇಂಟರ್ ನ್ಯಾಷನಲ್ ಕಂಟ್ರೋಲ್ ಕಮಿಷನ್ನಿನ ಚೇರ್‌ಮನ್ ಆದರು. ಈ ಸಂದರ್ಭದಲ್ಲಿ ವಿಯಟ್‌ನಾಂನಲ್ಲಿ ಇವರು ನಡೆಸಿದ ಸಂಚಾರ ಅತಿ ಮಹತ್ವವುಳ್ಳದ್ದಾಗಿತ್ತು.

ಇಂಡೋ ಚೈನಾದಲ್ಲಿದ್ದಾಗ ಬುರ್ಲಿ ಅವರು ಕಾಂಬೋಡಿಯ ಮತ್ತು ಲಾವೋಸ್‌ಗಳಿಗೆ ಭೇಟಿಯಿತ್ತರು. ೧೯೬೧ರಲ್ಲಿ ಭಾರತಕ್ಕೆ ಹಿಂದಿರುಗಿದ ಮೇಲೆ ಜಲಂಧರ್‌ನಲ್ಲಿ ಸ್ವಲ್ಪಕಾಲವಿದ್ದರು. ೧೯೬೨ರಲ್ಲಿ ನಡೆದ ಚೀಣೀ ದುರಾಕ್ರಮಣದ ಕಾಲದಲ್ಲಿ ಇವರ ಯೂನಿಟ್‌ನ್ನು ನೇಫಾ ಗಡಿಗೆ ವರ್ಗಾಯಿಸಲಾಯಿತು. ಅನಂತರ ಜನರಲ್ ಮಣಿಕ್‌ಷಾ ಅವರ ಹೆಡ್‌ಕ್ವಾರ್ಟರ್ಸ್‌ನಲ್ಲಿ ಬುರ್ಲಿ ಅವರನ್ನು ಮೊದಲನೆಯ ದರ್ಜೆ ಸ್ಟಾಫ್ ಆಫೀಸರ್ ಆಗಿ ನೇಮಿಸಲಾಯಿತು. ಅಲ್ಲಿ ಇವರು ಎರಡು ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಅನಂತರ ೧೯೬೫ರಲ್ಲಿ ಮೈಸೂರಿನಲ್ಲಿ ಎನ್. ಸಿ. ಸಿ. ಗ್ರೂಪ್ ಕಮ್ಯಾಂಡರ್ ಆಗಿ ನೇಮಕಗೊಂಡು ಮೂರುವರ್ಷಗಳ ಕಾಲ ಸೇವೆ ಸಲ್ಲಿಸಿದರು.

೧೯೬೮ರ ಜನವರಿಯಲ್ಲಿ ಇವರು ಕರ್ನಲ್ ಪದವಿಗೇರಿದರು. ದಕ್ಷಿಣ ಕಮ್ಯಾಂಡ್‌ನ ಟೆರಿಟೋರಿಯಲ್ ಆರ್ಮಿ ಯೂನಿಟ್‌ಗಳ ಕಮ್ಯಾಂಡರ್ ಆಗಿ ಇವರನ್ನು ಪುಣೆಯಲ್ಲಿ ನೇಮಿಸಲಾಯಿತು. ಎರಡು ವರ್ಷಗಳ ಬಳಿಕ ಇವರನ್ನು

ಜಬ್ಬಲ್‌ಪುರದ ಗನ್ ಕ್ಯಾರೇಜ್ ಫ್ಯಾಕ್ಟರಿಯಲ್ಲಿ ಡೆವೆಲಪ್‌ಮೆಂಟ್ ಟೀಂನ ಆಫೀಸರ್ ಆಗಿ ನೇಮಿಸಲಾಯಿತು.

ಅನಂತರ ೧೯೭೦ರ ನವೆಂಬರ್ ತಿಂಗಳಿನಲ್ಲಿ ಎಂಬಾರ್‌ಮೆಂಟ್ ಕಮ್ಯಾಂಡೆಂಟ್ ಆಗಿ ನೇಮಕಗೊಂಡು ಮುಂಬಯಿಗೆ ಬಂದರು. ಇತ್ತೀಚಿನ ಭಾರತ-ಪಾಕ್ ಸಮರದಲ್ಲಿ ಇವರು ತೋರಿದ ಸಾಹಸ ಕಾರ್ಯಗಳಿಗಾಗಿ ಕೇಂದ್ರ ಸರ್ಕಾರವು ಇವರಿಗೆ "ಅತಿ ವಿಶಿಷ್ಟ ಸೇವಾಪದಕ" ಪ್ರಶಸ್ತಿಯನ್ನಿತ್ತು ಗೌರವಿಸಿದೆ.

೧೯೭೨ರ ಮೇ ೩೧ರಂದು ರಾಷ್ಟ್ರಪತಿ ಭವನದಲ್ಲಿ ಜರುಗಿದ ವಿಶೇಷ ಸಮಾರಂಭದಲ್ಲಿ ರಾಷ್ಟ್ರಪತಿಯವರ ಸ್ವಹಸ್ತದಿಂದ ಶ್ರೀ ಬುರ್ಲಿಯವರು ಪದಕವನ್ನು ಸ್ವೀಕರಿಸಿದರು.

ಉಡುಪಿಯ ಖ್ಯಾತ ಬರೆಹಗಾರರೂ, ಪತ್ರಿಕೋದ್ಯಮಿಯೂ ಆಗಿದ್ದ ಶ್ರೀ ಎ.ಟಿ. ರಾಜಗೋಪಾಲಕೃಷ್ಣರಾವ್ ಅವರ ಪುತ್ರಿ ಲೀಲಾ ಅವರೊಡನೆ ಶ್ರೀ ಬುರ್ಲಿಯವರ ವಿವಾಹ ೧೯೪೪ರಲ್ಲಿ ಆಯಿತು. ಇವರದು ಮೂರು ಮಕ್ಕಳುಳ್ಳ (ಎರಡು ಹೆಣ್ಣು, ಒಂದು ಗಂಡು) ಅಚ್ಚುಕಟ್ಟಾದ ಸಂಸಾರ.

ಬ್ರಿಗೇಡಿಯರ್ ಎಚ್. ಆರ್. ಗೋಪಾಲ್

ಬಾಂಗ್ಲಾದೇಶದ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದ ಬ್ರಿಗೇಡಿಯರ್ ಹಿರೇಮಗಳೂರು ರಾಮಸ್ವಾಮಿ ಅಯ್ಯಂಗಾರ್ ಗೋಪಾಲ್ ಅವರಿಗೆ ಅತಿ ವಿಶಿಷ್ಟ ಸೇವಾ ಪದಕವು ದೊರಕಿದೆ. ೧೯೪೬ರಲ್ಲಿ ಬೆಂಗಳೂರು ಇಂಜನಿಯರಿಂಗ್ ಕಾಲೇಜಿನಲ್ಲಿ ಇವರು ಪದವಿ ಪಡೆದು ಅನಂತರ ಸೈನ್ಯಕ್ಕೆ ಸೇರಿದರು. ಇವರ ಸೇವಾವಧಿಯು ಬಹಳ ಕಾಲ ಕಾಶ್ಮೀರ ಮತ್ತು ನೇಫಾಗಳಲ್ಲಿ ಕಳೆಯಿತು. ಮುಂಬಯಿಯ ಬಲ್ಲಾರ್ಡ್ ಬಂದರು ಕಟ್ಟೆ ಹಾಗೂ ಹೈದರಾಬಾದ್‌ನಲ್ಲಿನ ವಿಮಾನ ಪಡೆ ಅಕಾಡೆಮಿ ನಿರ್ಮಾಣ ಕಾರ್ಯಗಳು ಇವರ ಕೀರ್ತಿಕಳಶ. ಪ್ರಸ್ತುತ ಇವರು ಗಡಿ ರಸ್ತೆ ನಿರ್ಮಾಣಕಾರ್ಯದಲ್ಲಿ ಚೀಫ್ ಇಂಜನಿಯರ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ.

ಫ್ಲೈಟ್ ಲೆಫ್ಟಿನೆಂಟ್ ಎಂ. ಎ. ಗಣಪತಿ

ಭಾರತಕ್ಕೂ ಪಾಕಿಸ್ತಾನಕ್ಕೂ ಇತ್ತೀಚೆಗೆ ಅಂದರೆ ೧೯೭೧ರಲ್ಲಿ ಆರಂಭವಾದ ಯುದ್ಧದಲ್ಲಿ ಮೂರು ಪಡೆಗಳೂ ಅಂದರೆ ಭೂಸೇನೆ, ನೌಕಾಸೇನೆ ಮತ್ತು ವಾಯುಸೇನೆಗಳು ಪ್ರಮುಖ ಪಾತ್ರವಹಿಸಿ, ಜಯಗಳಿಸಿ ಯಶಸ್ವಿಯಾದವು.



ಗಗನದಲ್ಲಿ ನಡೆದ ಹೋರಾಟವಂತೂ ಈ ಬಾರಿ ಅತಿ ಭಯಂಕರವಾಗಿತ್ತು. ಈ ದಿಶೆಯಲ್ಲಿ ಭಾರತ ವೀರರ ಸಾಮರ್ಥ್ಯ ಹಾಗೂ ಕೀರ್ತಿಗಳು ಗಗನದಾದ್ಯಂತ ವ್ಯಾಪಿಸಿತು. ಪಾಕಿಸ್ತಾನದವರೆಗೆ ಸಿಂಹಸ್ವಪ್ನವಾಗಿದ್ದ 'ನ್ಯಾಟ್' ವಿಮಾನ ಭಾರತ ಸೈನಿಕರಿಗೆ ವರವಾಗಿ ಪರಿಣಮಿಸಿತು. ಈ 'ನ್ಯಾಟ್' ವಿಮಾನ ನಡೆಸುವುದರಲ್ಲಿ ಹಾಗೂ ಗುರಿಯಿಟ್ಟು ಗುಂಡು ಹಾರಿಸುವುದರಲ್ಲಿ ಅಗ್ರಗಣ್ಯ ಪಂಕ್ತಿಗೆ ಸೇರಿದವರೆಂದರೆ ಶ್ರೀ ಮುಂಡೆ ಪಾಂಡ ಅಪ್ಪಚ್ಚು ಗಣಪತಿಯವರು.

"ಶತ್ರುಗಳ ಮೂರು 'ಸೇಬರ್‌ಜೆಟ್' ವಿಮಾನಗಳನ್ನು ಭಾರತದ ಯುವಕ ಯೋಧರು ಹೊಡೆದಪ್ಪಳಿಸಿದರು. ಪಾಕಿಸ್ತಾನ ಎಫ್. ೮೬ ಸೇಬರ್‌ಜೆಟ್‌ಗಳನ್ನು ಭಾರತದ ವಾಯುಪಡೆಗೆ ಸೇರಿದ 'ನ್ಯಾಟ್' ವಿಮಾನಗಳು ಕಲ್ಕತ್ತಕ್ಕೆ ಮೂವತ್ತು ಮೈಲಿ ದೂರದಲ್ಲಿರುವ 'ಬೊಯ್ರ' ಎಂಬಲ್ಲಿ ಹೊಡೆದುರುಳಿಸಿದವು........

ಎಂಬುದಾಗಿ ಲೋಕಸಭೆಯಲ್ಲಿ ರಕ್ಷಣಾ ಖಾತೆಯ ಉತ್ಪಾದನಾ ಸಚಿವರಾದ ಶ್ರೀ ವಿ. ಸಿ. ಶುಕ್ಲರವರು ೨೩ನೇ ನವೆಂಬರ್ ೧೯೭೧ರಂದು ಹೇಳಿಕೆಕೊಟ್ಟರು. ಈ ಸುದ್ದಿ ಸ್ಥಳೀಯ ಪತ್ರಿಕೆಗಳಲ್ಲೆಲ್ಲಾ ದಪ್ಪ ದಪ್ಪ ಅಕ್ಷರಗಳಲ್ಲಿ ಪ್ರಕಟವಾಯಿತು.

ಈ ಸುದ್ದಿ ತಿಳಿದೊಡನೆ ಜನರ ಕುತೂಹಲ ಕೆರಳಿತು: ಶತ್ರು ವಿಮಾನಗಳನ್ನು ಹೊಡೆದುರುಳಿಸಿದ ವೀರರು ಯಾರಿರಬಹುದು ? !—ಎಂಬ ಕಾತುರತೆ ಮೂಡಿತು. ಮಾರನೆಯ ದಿನವೇ ಪತ್ರಿಕೆಗಳಲ್ಲಿ ಆ ಮೂವರು ವೀರರ ಫೋಟೋಗಳು ಕಂಗೊಳಿಸಿದುವು. 'ಕನ್ನಡಪ್ರಭ' ಪತ್ರಿಕೆ ಆ ವೀರರನ್ನು "ಪೌರುಷದ ಪಂಜುಗಳು" ಎಂದು ಕರೆಯಿತು. ಆ ಮೂವರು ಯೋಧರೆಂದರೆ ಫ್ಲೈಟ್ ಲೆಫ್ಟಿನೆಂಟ್ ಎಂ.ಎ.ಗಣಪತಿ, ಫ್ಲೈಟ್ ಲೆಫ್ಟಿನೆಂಟ್ ರಾಯ್ ಆಂಡ್ರೂಸ್ ಮ್ಯಾಸೆ ಮತ್ತು ಫ್ಲೈಯಿಂಗ್

ಆಫೀಸರ್ ಡೊನಾಲ್ಡ್ ಲಜಾರಸ್ ಎಂಬುವವರು.

ನವೆಂಬರ್ ೨೨ರಂದು ಮಧ್ಯಾಹ್ನ ೨-೪೯ರ ಸಮಯದಲ್ಲಿ ಪಾಕಿಸ್ತಾನದ ನಾಲ್ಕು ಸೇಬರ್‌ಜೆಟ್ ವಿಮಾನಗಳು ಭಾರತದ ಗಡಿಯನ್ನು ದಾಟಿ ಹಾರಿ ಬಂದುವು. ಅವುಗಳನ್ನೆದುರಿಸುವಂತೆ ಭಾರತದ ವಾಯುಪಡೆಗೆ ಸೂಚನೆ ಕೊಡಲಾಯಿತು. ಕ್ಷಣಮಾತ್ರದಲ್ಲಿ ನಮ್ಮ ನ್ಯಾಟ್ ಪಡೆಗಳು ರಭಸದಿಂದ ಹಾರುತ್ತ ಹೊರಟವು. ಶತ್ರು ವಿಮಾನಗಳನ್ನು ಪತ್ತೆ ಹಚ್ಚಿ ಅವುಗಳನ್ನು ಹಿಂದಕ್ಕಟ್ಟಿದುವು. ಈ ಘರ್ಷಣೆಯಲ್ಲಿ ಮೂರು ಸೇಬರ್‌ಜೆಟ್‌ಗಳು ಅಪಘಾತಕ್ಕೀಡಾದುವು.

ಸೆರೆ ಹಿಡಿಯಲ್ಪಟ್ಟ ಇಬ್ಬರು ಪಾಕ್ ಪೈಲಟ್‌ಗಳ (ಪರ್ವೀಸ್‌ಮೇಧಿ ಮತ್ತು ಖಲೀಲ್ ಅಹ್ಮದ್) ಭಾವಚಿತ್ರಗಳನ್ನು ತೆಗೆಯಲಾಯಿತು. ಈ ಭಾವ ಚಿತ್ರಗಳನ್ನು ಕಲ್ಕತ್ತೆಯಲ್ಲಿರುವ ಸೈನಿಕ ಕೇಂದ್ರದಲ್ಲಿ ಉನ್ನತಾಧಿಕಾರಿಗಳು ಬಿಡುಗಡೆ ಮಾಡಿ ಪತ್ರಿಕೆಗಳಿಗೆ ಕಳುಹಿಸಿದರು. ಐ. ಎ. ಎಫ್. ನ್ಯಾಟ್‌ಗಳು ನುಗ್ಗುತ್ತಿದ್ದಂತೆ ಆಂಟಿ ಏರ್‌ಕ್ರಾಫ್ಟ್ ಗನ್ನುಗಳು ಚುರುಕಿನಿಂದ ಕಾರ್ಯವನ್ನಾರಂಭಿಸಿದುವು. ಕೆಳಕ್ಕೆ ಉರುಳಿದ ಮೂರು ಸೇಬರ್ ಜೆಟ್‌ಗಳಲ್ಲಿ ಎರಡು ಭಾರತದ ಸರಹದ್ದಿನಲ್ಲಿಯೇ ಬಿದ್ದುದನ್ನು ಕಣ್ಣಾರೆ ಕಂಡವರು ಪತ್ರಿಕಾವರದಿಗಾರರಿಗೆ ಹೇಳಿಕೆಗಳನ್ನು ಕೊಟ್ಟರು.

ರಕ್ಷಣಾ ಸಚಿವ ಶ್ರೀ ಜಗಜೀವನರಾಮ್‌ರವರು ನಮ್ಮ ಯೋಧರ ಸಾಹಸಗಳನ್ನು ಕೇಳಿ ನ್ಯಾಟ್ ವಿಮಾನಗಳಿದ್ದ ಸ್ಥಳಕ್ಕೆ ಭೇಟಿಕೊಟ್ಟರು. ಪಾಕಿಸ್ತಾನದ ವಿಮಾನಗಳನ್ನು ಗುಂಡಿಟ್ಟು ಕೆಡವಿ ಯಶಸ್ವಿಯಾದ ನ್ಯಾಟ್ ಪೈಲಟ್‌ಗಳನ್ನು ಹೃತ್ಪೂರ್ವಕವಾಗಿ ಅಭಿನಂದಿಸಿದರು. ವೀರಯೋಧರೆಂದು ಕೀರ್ತಿಗಳಿಸಿದ ಗಣಪತಿಯವರಿಗೂ, ಇತರ ಇಬ್ಬರು ವೀರ ತರುಣರಾದ ರಾಯ್ ಆಂಡ್ರೂಸ್ ಮ್ಯಾಸೆ ಮತ್ತು ಲಜಾರಸ್‌ರವರಿಗೂ ಪುಷ್ಪಹಾರಗಳನ್ನು ಹಾಕಿ ಗೌರವಿಸಿದರು. ಈ ಸಂದರ್ಭದಲ್ಲಿ ಸಚಿವರೊಡನೆ ಅವರ ಪತ್ನಿಯೂ ಇದ್ದು ಆ ನ್ಯಾಟ್ ವಿಮಾನಗಳನ್ನೂ, ಪೈಲಟ್‌ಗಳನ್ನೂ ಕಂಡು ಸಂತೋಷಪಟ್ಟರು. ಈ ವಿವರಗಳನ್ನೆಲ್ಲಾ ಕೇಳಿ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರಿಗೆ ಆದ ಆನಂದ ಹೇಳತೀರದು.

ಹೀಗೆ ಪಾಕಿಸ್ತಾನದ ಅಪಜಯದ ಗಣಪತಿಪೂಜೆ ಭಾರತದ ಗಣಪತಿಯಿಂದಲೇ ಆರಂಭವಾಯಿತು. ಮೂರು ಜೆಟ್ ವಿಮಾನಗಳನ್ನು ಕಳೆದುಕೊಂಡ ಸುದ್ದಿಯನ್ನು ಪಾಕಿಸ್ತಾನ ಒಪ್ಪಿಕೊಳ್ಳದೇ ವಿಧಿಯೇ ಇಲ್ಲವಾಯಿತು. ಆದರೂ ಪಾಕಿಸ್ತಾನ ಬಾಲಕಳೆದುಕೊಂಡ ನರಿಯಂತೆ, ಈ ಸುದ್ದಿಯನ್ನು ತನ್ನ "ರೇಡಿಯೋ ಪಾಕಿಸ್ತಾನ್" ಮೂಲಕ ಬಿತ್ತರಿಸುತ್ತಾ ಪಾಕ್ ವಿಮಾನಗಳು ಭಾರತದ ಎರಡು ನ್ಯಾಟ್‌ಗಳನ್ನು ಹೊಡೆದುರುಳಿಸಿವೆಯೆಂದು ಭಾರಿ ಸುಳ್ಳನ್ನೇ ನಿರ್ಭಯವಾಗಿ ಹೇಳಿತು.

ಪಾಕಿಸ್ತಾನದ ಮೂರು ಜೆಟ್‌ಗಳನ್ನು ಹೊಡೆದುರುಳಿಸಿದ ಮೂವರು ವೀರರಲ್ಲಿ ಡೊನಾಲ್ಡ್ ಲಜಾರಸ್ ಎಂಬ ವೀರ ಕೇವಲ ಇಪ್ಪತ್ತೈದು ವರ್ಷದವ, ಉಳಿ

ದಿಬ್ಬರು ಇಪ್ಪತ್ತೆಂಟು ವರ್ಷ ವಯಸ್ಸಿನವರು.

(೧೯೬೫ರಲ್ಲಿ ನಡೆದ ಭಾರತ-ಪಾಕ್ ಯುದ್ಧದಲ್ಲಿ ಭಾರತದ ವಾಯು ಪಡೆಗೆ ಸೇರಿದ ಈ ನ್ಯಾಟ್ ವಿಮಾನ ಪ್ರಮುಖಪಾತ್ರವಹಿಸಿ ಸಾಕಷ್ಟು ಕೀರ್ತಿಗಳಿಸಿತೆಂಬು ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಛಾಂಬ್ (Chamb) ವಲಯದಲ್ಲಿ ಪಾಕ್ ಪಡೆ ಆಕ್ರಮಣ ನಡೆಸಿದಾಗ ಲೆ|| ಕೀಲರ್ ಎಂಬಾತ ಸಾಹಸದಿಂದ ಎರಡು ಪಾಕ್ ಜೆಟ್‌ಗಳನ್ನು ಕ್ಷಣಮಾತ್ರದಲ್ಲಿ ಹೊಡೆದಪ್ಪಳಿಸಿ ಮಹಾವೀರನೆಂಬ ಕೀರ್ತಿ ಪಡೆದನು.)

ಮೇಲ್ಕಂಡ ಮೂವರು ವೀರರಲ್ಲಿ ಫ್ಲೈ|| ಲೆ|| ಎಂ. ಎ. ಗಣಪತಿಯವರು ಕರ್ಣಾಟಕಕ್ಕೆ ಸೇರಿದ ಯೋಧರೆಂದು ತಿಳಿದು ಪ್ರತಿಯೊಬ್ಬ ಕನ್ನಡಿಗನೂ ಹೆಮ್ಮೆ ಪಡಬೇಕು. ನಮ್ಮ ನಾಡಿನ ಕೊಡಗು ಜಿಲ್ಲೆ ಜನರಲ್ ಕರಿಯಪ್ಪ, ಜನರಲ್ ತಿಮ್ಮಯ್ಯನವರಂಥ ವೀರಯೋಧರ ಜನ್ಮಭೂಮಿ. ಇಂಥ ಹಲವಾರು ಯೋಧ ರನ್ನು ಈ ಕೊಡಗು ಜಿಲ್ಲೆ ಕೊಡುಗೆಯಾಗಿತ್ತಿದೆ. ಎಂ. ಎ. ಗಣಪತಿಯವರೂ ಸಹ ಈ ಜಿಲ್ಲೆಯವರೇ ಆಗಿದ್ದು ಅಂಥ ವೀರರ ಪರಂಪರೆಯಲ್ಲಿ ಶೋಭಿಸುತ್ತಿದ್ದಾರೆ.

ಗಣಪತಿಯವರು ಕೊಡಗು ಜಿಲ್ಲೆಯ ಸೋಮವಾರಪೇಟೆಯಲ್ಲಿ ತಮ್ಮ ಚಿಕ್ಕಪ್ಪನವರಾದ ಶ್ರೀ ಎಸ್. ಎಸ್ ಕುಜ್ಜಪ್ಪ (ವಿಶ್ರಾಂತ ತಹಶೀಲ್ದಾರ್) ನವರ ಮನೆಯಲ್ಲಿ ೧೯೪೩ರ ಜನವರಿ ಇಪ್ಪತ್ತಾರರಂದು ಜನಿಸಿದರು. ಈ ಸಮಯದಲ್ಲಿ ಗಣಪತಿಯವರ ತಂದೆ ಟೋಪೋಗ್ರಫಿ ಸರ್ವೆ ಕೆಲಸಕ್ಕಾಗಿ ಇರಾನಿಗೆ ಪ್ರಯಾಣ ಬೆಳೆಸಿದ್ದರು.

ಗಗನವಿಹಾರಿ ಗಣಪತಿಯವರ ತಂದೆ ಶ್ರೀ ಅಪ್ಪಚ್ಚು ಗಣಪತಿಯವರು ೧೯೪೦ ರಲ್ಲಿ ಎಮರ್ಜೆನ್ಸಿ ಕಮಿರ್ಷರವರಿಂದ ಸೈನಿಕ ತರಬೇತಿಗಾಗಿ ಆಯ್ಕೆಯಾದರು. ಮೊಹೊ (Mhow) ಎಂಬಲ್ಲಿ ಸುಮಾರು ಮೂರು ನಾಲ್ಕು ತಿಂಗಳ ಕಾಲವಿದ್ದು ಅಖಿಲ ಭಾರತ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮಶ್ರೇಣಿಯಲ್ಲಿ ತೇರ್ಗಡೆಯಾದರು. ಇದರ ಫಲ ವಾಗಿ ಇವರಿಗೆ ಎರಡನೆಯ ದರ್ಜೆಯ ಸರ್ವೆ ಅಧಿಕಾರಿಯ ಹುದ್ದೆ ಲಭಿಸಿತು. ಅನಂತರ ೧೯೪೩ರಲ್ಲಿ ಇಂಜನಿಯರಿಂಗ್ ಶ್ರೇಣಿಯಲ್ಲಿ ದೊಡ್ಡ ಹುದ್ದೆ ಲಭಿಸಿತು. ಅನಂತರ ಮಿಲಿಟರಿ ಇಲಾಖೆಯಲ್ಲಿ ಅವಶ್ಯಕವಾದ ಭೂಪಟಗಳ ತಯಾರಿಕೆಗಾಗಿ ಇವರನು ವಿಶೇಷಾಧಿಕಾರಿಗಳನ್ನಾಗಿ ನೇಮಿಸಲಾಯಿತು. ಕೆಲವು ವರ್ಷಗಳ ಬಳಿಕ ಸಿಂಹಳದಲ್ಲಿ ರುವ 'ಕ್ಯಾಂಡಿ' ಎಂಬಲ್ಲಿ Allied Land Forces South East Asia (ALFSEA) ಎಂಬ ಸಂಸ್ಥೆಯ ಸೈನಿಕ ಕೇಂದ್ರಗಳಲ್ಲಿ ಇವರು ಸೇವೆ ಸಲ್ಲಿಸಿ ಯಶಸ್ಸು ಗಳಿಸಿದರು. ಎರಡನೆಯ ಮಹಾ ಯುದ್ಧದಲ್ಲಿ ಅವರು ಸಲ್ಲಿಸಿರುವ ಸೇವೆ ಅಪಾರವಾದುದು. ಸುಮಾರು ಒಂದೂವರೆ ವರ್ಷಗಳ ಕಾಲ ವಾಯುದಳದ ಸಂಪರ್ಕಾಧಿಕಾರಿಯಾಗಿದ್ದರು. ಆಗ ಲೆಫ್ಟಿನೆಂಟ್ ಜನರಲ್ ಆಗಿದ್ದ ಮಾಣಿಕ್‌ಷಾ ರವರು (ಈಗಿನ ಜನರಲ್) ಇವರ ಮೇಲ್ಪಟ್ಟ ಅಧಿಕಾರಿಗಳಾಗಿದ್ದರು. ೧೯೬೮ರ

ಜೂನ್ ೧೩ರಂದು ಇವರು ಲೆ|| ಕ|| ಪದವಿಯಿಂದ ನಿವೃತ್ತರಾದರು. ತಾ ಟೋಪೋಗ್ರಫಿ ಸರ್ವೆ ಕಾರ್ಯದಲ್ಲಿ ನಿರತರಾಗಿದ್ದಾಗ ಹಿಮಾಲಯ ಪರ್ವತಗ ಮೇಲೆ ವಿಮಾನದಲ್ಲಿ ಹಾರಾಡಿದ ರೋಮಾಂಚಕಾರಿ ಸಂದರ್ಭಗಳನ್ನು ಈಗಲ ಸ್ಮರಿಸಿಕೊಳ್ಳುತ್ತಾರೆ. ಆ ಸವಿನೆನಪುಗಳನ್ನು ಕಣ್ಮುಂದೆ ಕಟ್ಟಿದಂತೆ ವರ್ಣಿಸುತ್ತಾರೆ

"ಸಿಂಹದ ಹೊಟ್ಟೆಯಲ್ಲಿ ಸಿಂಹವೇ ಹುಟ್ಟುತ್ತದೆ" ಎಂಬ ಗಾದೆಗೆ ಗಣಪ ಯವರು ತಕ್ಕ ಉದಾಹರಣೆಯಾಗಿದ್ದಾರೆ. ವೀರಯೋಧನ ಮಗನಾಗಿ ವೀರಯೊ ಧನೇ ಜನಿಸಿ ತಂದೆಗೆ ಕೀರ್ತಿ ತಂದಿದ್ದಾನೆ. ವೀರಯೋಧ ಗಗನವಿಹಾರಿ ಗಣಪ ಯವರು ದೆಹಲಿಯ ಪಬ್ಲಿಕ್ ಸ್ಕೂಲಿನಲ್ಲಿಯೂ, ಕಲ್ಕತ್ತೆಯ ಲಿಲುವಾ-ಡಾನ್ ಬಾಸ್ಕೊ ಹೈಸ್ಕೂಲ್‌ನಲ್ಲಿಯೂ, ಡೆಹ್ರಾಡೂನಿನ ಸೆಂಟ್ ಥಾಮಸ್ ಹೈಸ್ಕೂಲಿ ನಲ್ಲಿಯೂ ಶಿಕ್ಷಣ ಪಡೆದು, ಅನಂತರ ಡೆಹರಾಡೂನಿನ DAV ದಯಾನಂದ ಕಾಲೇಜಿನಲ್ಲಿ ತಮ್ಮ ವ್ಯಾಸಂಗವನ್ನು ಮುಂದುವರೆಸಿದರು.

ಯೂನಿಯನ್ ಪಬ್ಲಿಕ್ ಸರ್ವಿಸ್ ಕಮಿಷನ್‌ರವರು ೧೯೬೫ರಲ್ಲಿ ಏರ್ಪಡಿಸಿದ್ದ ಪರೀಕ್ಷೆಯಲ್ಲಿ ಗಣಪತಿಯವರು ತೇರ್ಗಡೆಯಾಗಿ ಭಾರತದ ವಾಯುಪಡೆಗೆ ಆಯ್ಕೆ ಯಾದರು. ೧೯೬೫-೬೭ರಲ್ಲಿ ವ್ಯಾಂಪೈರ್‌ನಲ್ಲಿಯೂ, ೧೯೬೬-೬೭ರಲ್ಲಿ ಹಂಟರ್ಸ್ ಸ್ಕ್ವಾಡ್ರನ್‌ನಲ್ಲಿಯೂ ಸೇವೆ ಸಲ್ಲಿಸಿ ಹೆಚ್ಚಿನ ಅನುಭವ ಪಡೆದು ೧೯೬೮ರಿಂದೀಚೆಗೆ ನ್ಯಾಟ್ ದಳದಲ್ಲಿ ಕೆಲಸ ಮಾಡುತ್ತಿದ್ದಾರೆ.

೧೯೬೫ರಲ್ಲಿ ನಡೆದ ಭಾರತ-ಪಾಕ್ ಯುದ್ಧದಲ್ಲಿ ಗಣಪತಿಯವರು ಗೂರ್ಖಾ ಪಡೆಗಳೊಂದಿಗೆ F.A.C. (Forward Air Control) ಆಫೀಸರ್ ಆಗಿ ಸೇವೆ ಸಲ್ಲಿಸಿ ಮೇಲಣ ಅಧಿಕಾರಿಗಳ ಪ್ರೀತಿವಿಶ್ವಾಸಗಳನ್ನು ಗಳಿಸಿದರು. ಈ ರೀತಿ ಇಷ್ಟು ಚಿಕ್ಕ ವಯಸ್ಸಿನಲ್ಲಿಯೇ ಇಷ್ಟೆಲ್ಲ ಕೀರ್ತಿ ಗಳಿಸಿರುವ ವೀರಯುವಕ ಗಣಪತಿ ಯವರ ಭವಿಷ್ಯ ಉಜ್ವಲವಾಗಿದೆ, ಎಲ್ಲಕ್ಕಿಂತ ಮುಖ್ಯವಾಗಿ ಮೊನ್ನಿನ ಯುದ್ಧದಲ್ಲಿ ಪ್ರಪ್ರಥಮವಾಗಿ ಶತ್ರು ವಿಮಾನವನ್ನು ಉರುಳಿಸಿದ ಕೀರ್ತಿ ಗಣಪತಿಯವರಿಗೇ ಲಭಿಸಿದೆ. ಯಾವ ಕಾರ್ಯವೇ ಆಗಲಿ ಗಣಪತಿ ಪೂಜೆಯಿಂದಲೇ ಆರಂಭವಾಗ ಬೇಕೆಂದು ಹಿಂದೂಗಳಲ್ಲಿ ಒಂದು ಸಂಪ್ರದಾಯ. ಅದರಂತೆ ಶತ್ರು ವಿಮಾನದ ಪ್ರಥಮ ಆಹುತಿ ಗಣಪತಿಗೇ ಆಯಿತು. ಯುದ್ಧ ನಡೆದು ಭಾರತಕ್ಕೆ ನಿರ್ವಿಘ್ನವಾಗಿ ಜಯವೂ ದೊರಕಿತು. ನಮ್ಮ ಕನ್ನಡ ನಾಡಿನ ಗಣಪತಿಯವರೇ ಪ್ರಥಮ ಯೋಧ ರೆನಿಸಿಕೊಂಡರು. ಎಂತಲೇ ಇವರಿಗೆ ಸರ್ಕಾರವು "ವೀರಚಕ್ರ" ಪ್ರಶಸ್ತಿಯಿತ್ತು ಗೌರವಿಸಿದೆ.

ಇಂಥ ಸುಪುತ್ರನನ್ನು ಪಡೆದ ತಾಯಿತಂದೆಗಳು ನಿಜವಾಗಿಯೂ ಧನ್ಯರು.

ಫ್ಲೈಟ್ ಲೆಫ್ಟಿನೆಂಟ್ ಕೆ. ಎಸ್. ಸುರೇಶ್

"ಪಾಕ್ ವಿಮಾನ ಹೊಡೆದ ವೀರ ಹೊಯ್ಸಳನಿಗೆ ಸನ್ಮಾನ" ಎಂಬ ಶೀರ್ಷಿಕೆಯಲ್ಲಿ ಸುದ್ದಿಯೊಂದು ಕನ್ನಡ ಪತ್ರಿಕೆಯಲ್ಲಿ ಪ್ರಕಟವಾಗಿದ್ದುದನ್ನು ಕಂಡು ಅನೇಕರು

ಆಶ್ಚರ್ಯಗೊಂಡರು. ಹೊಯ್ಸಳ ಈಗ, ಹೇಗೆ, ಎಲ್ಲಿಂದ ಬಂದನೆಂಬ ಕುತೂಹಲ ಜನರಲ್ಲಿ ಮೂಡಿತು. ಈ ಹೊಯ್ಸಳ ಯಾರೆಂಬುದನ್ನು ತಿಳಿಯಲು ಎಲ್ಲರೂ ಕಾತುರಗೊಂಡರು.

ಸ್ಮಾರ್ತರಲ್ಲಿ 'ಹೊಯ್ಸಳ ಕರ್ಣಾಟಕರು' ಎಂಬುದು ಒಂದು ಒಳಪಂಗಡ. (ಬಡಗನಾಡು, ಮುಲ್ಕಿನಾಡು, ಬೊಬ್ಬೂರು ಕಮ್ಮೆ ಇತ್ಯಾದಿಗಳಂತೆ) ಈ ಪಂಗಡದವರೆಲ್ಲ ಸೇರಿ ಒಂದು ಸಂಘವನ್ನು ಸ್ಥಾಪಿಸಿಕೊಂಡಿದ್ದಾರೆ. ಅವರದೇ ಆದ ಒಂದು ವಿದ್ಯಾರ್ಥಿನಿಲಯವೂ ಇದೆ. ಈ ಪಂಗಡಕ್ಕೆ ಸೇರಿದವರಾದ ಫ್ಲೈಟ್ ಲೆಫ್ಟಿನೆಂಟ್ ಕೆ. ಎಸ್. ಸುರೇಶ್‌ರವರಿಗಾಗಿ ಸಂಘದಲ್ಲಿ ಒಂದು ಸತ್ಕಾರಕೂಟವನ್ನು ಏರ್ಪಡಿಸಲಾಗಿತ್ತು. ಶ್ರೀ ಕೆ. ಎಸ್. ಸುರೇಶ್‌ರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. (ಗಗನ ಸಮರದಲ್ಲಿ ಸಾಹಸ ತೋರಿ ಗೆದ್ದು ಬಂದ ಈ ವೀರ ಹೊಯ್ಸಳನು ಈ ನಗರಕ್ಕೆ ಬಂದಾಗ ರಾಜ್ಯಪಾಲ ಶ್ರೀ ಧರ್ಮವೀರರೇ ಪುಷ್ಪಮಾಲೆ ಹಾಕಿ ಗೌರವಿಸಿ ಕೊಂಡಾಡಿದ್ದರು.) ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶ್ರೀ ಕೆ. ಸೂರ್ಯನಾರಾಯಣ ಅಡಿಗರಿಗಂತೂ ಈ ವೀರನನ್ನು ಎಷ್ಟು ಹೊಗಳಿದರೂ ತೃಪ್ತಿಯಿಲ್ಲ. ತಮ್ಮ ಮಾತುಗಳ ಮಧ್ಯೆ "ಸುರೇಶ್‌ರವರು ಧೀರರು ಹೇಗೋ ಸುಂದರರೂ ಹೌದು. ಇವರಿಗೆ ಯಾರುತಾನೆ ಹೆಣ್ಣು ಕೊಡುವುದಿಲ್ಲ?" ಎಂದು ಹೇಳಿ ಆನಂದ ಬಾಷ್ಪಗಳನ್ನು ಹರಿಸಿ ಮುಕ್ತಕಂಠದಿಂದ ಕೊಂಡಾಡಿದರು.

ಸಳನಂತೆ ಸುರೇಶ್‌ರವರೂ ಧೀರರೇ. ಫ್ಲೈಟ್ ಲೆಫ್ಟಿನೆಂಟ್ ಕೆ. ಎಸ್. ಸುರೇಶ್‌ರವರು ೧೯೭೧ರ ಡಿಸೆಂಬರ್ ೧೩ರಂದು ಬೆಳಗ್ಗೆ ಐ.ಎ.ಎಫ್. ಹಂಟರ್ ವಿಮಾನದಲ್ಲಿ ಕುಳಿತು ಸಿಂಧ್ ವಲಯದಲ್ಲಿ (ತಲ್ಹಾರ್ ಕ್ಷೇತ್ರದಲ್ಲಿ) ಶತ್ರು ವಿಮಾನಗಳ ಬೇಟೆಗಾಗಿ ಹೊಂಚು ಕಾಯುತ್ತಿದ್ದರು. ಯಾವುದೋ ವಿಮಾನ ಸೂಕ್ಷ್ಮವಾಗಿ ಗೋಚರಿಸಿತು. ಅದು ಸೇಬರ್ ಜೆಟ್ ಇರಬೇಕೆಂದು ಸುರೇಶ್‌ರವರು ಊಹಿಸಿದರು.

ಅವರ ಊಹೆ ನಿಜವಾಗಿತ್ತು. ತಮ್ಮ ವಿಮಾನದಲ್ಲಿದ್ದ ಬಂದೂಕಿನ ನೆರವಿನಿಂ ನಿಮಿಷಮಾತ್ರದಲ್ಲಿ ಆ ಶತ್ರು ವಿಮಾನವನ್ನು ಹೊಡೆದು ಉರುಳಿಸಿದರು.

ಇನ್ನೊಮ್ಮೆ ರಾಜಾಸ್ಥಾನ್ ವಿಭಾಗದ 'ಲಾಂಗೆವಾಲಾ' ನಿಲ್ದಾಣವನ್ ಕಾಯುತ್ತಿದ್ದ ಭೂಸೇನೆಗೆ ಬೆಂಗಾವಲಾಗಿ ನಿಂತಿದ್ದ ಸಂದರ್ಭ. ಕೇವಲ ಮೂ ಹಂಟರ್ ವಿಮಾನಗಳು ಶತ್ರು ದಾಳಿಯನ್ನು ಎದುರಿಸಲು ಸಿದ್ಧವಾದುವು. ಶ್ರೀ ಸುರೇಶ್‌ರವರು ಆ ಮೂರು ಹಂಟರ್ ವಿಮಾನಗಳಲ್ಲಿ ಒಂದರ ಚಾಲಕರಾಗಿದ್ದರ ತಮ್ಮ ಸ್ಕ್ವಾಡ್ರನ್ ಲೀಡರ್ ಜೊತೆಯಲ್ಲಿ ನಡೆಸಿದ ಹೊರದಾಳಿಯಲ್ಲಿ ಸುರೇಶ್‌ರವರ ಶತ್ರುಗಳ ಒಂಭತ್ತು ಟ್ಯಾಂಕುಗಳನ್ನು ನಾಶಪಡಿಸಿದರು.

ಮತ್ತೊಂದು ಹೊರದಾಳಿಯಲ್ಲಿ ಸುರೇಶ್‌ರವರ ವಿಮಾನಕ್ಕೆ ಶತ್ರುಗ ಟ್ಯಾಂಕುಗಳಿಂದ ಸಿಡಿದ ಗುಂಡು ತಗುಲಿ ವಿಮಾನ ಹತೋಟಿ ತಪ್ಪಿತು. ಸಿಡಿಮದ್ದಿನ ಬೆಳಕಿಗೆ ಕಣ್ಣು ಕೋರೈಸಿತು. ವಿಮಾನಕ್ಕೆ ಜಖಂ ಆಗಿದ್ದರೂ ಗಮನಿಸ ವಿಮಾನವನ್ನು ಮತ್ತೆ ತಮ್ಮ ಹತೋಟಿಗೆ ತಂದುಕೊಂಡು ಶತ್ರುಗಳ ಟ್ಯಾಂಕ್ ಗಳನ್ನು ಧ್ವಂಸ ಮಾಡಿದ ಕೀರ್ತಿ ಸುರೇಶ್‌ರವರದು. ಈ ಸಂದರ್ಭದಲ್ಲಿ ಅವರು ಧೈರ್ಯಗೆಡದೆ ತೋರಿದ ಸಾಹಸ ಅಪ್ರತಿಮವಾದುದು. ದಾಳಿ ನಡೆಸಿದ ನಂತರ ಪಾಳೆಯಕ್ಕೆ ಹಿಂದಿರುಗಿ ಬಂದಾಗಲೇ ಸುರೇಶ್‌ರವರಿಗೆ ತಮ್ಮ ವಿಮಾನಕ್ಕೆ ಬಲವಾಗಿ ಪೆಟ್ಟು ಬಿದ್ದಿತ್ತೆಂಬ ವಿಚಾರ ಅರಿವಾದುದು. ಈ ವಿಷಯವನ್ನರಿತ ಇವರ ತಂಡದ ನಾಯಕ ಸ್ಕ್ವಾಡ್ರನ್ ಲೀಡರ್ ಎಸ್. ಡಿ. ಟುಲ್ಲಿಯವರು ತಮ್ಮ ವಿಮಾನದ ಬೆಂಗಾ ವಲಿನೊಂದಿಗೆ ಸುರೇಶ್‌ರವರನ್ನು ನೆಲೆಗೆ ತಲುಪಿಸಿದರು. ಹೀಗೆ ಅಪಾಯಕರ ವಾಗಿದ್ದ ವಿಮಾನದಿಂದ ಸುರೇಶ್‌ರವರು ಪಾರಾದುದು ಒಂದು ಸ್ತುತ್ಯರ್ಹವಾದ ಸಾಹಸ ಹಾಗೂ ರೋಮಾಂಚಕಾರಿಯಾದ ಸಂದರ್ಭ. ಸುರೇಶ್‌ರವರ ಅಪ್ರತಿಮ ಶೌರ್ಯ ಮತ್ತು ಯುದ್ಧ ಕೌಶಲ್ಯಕ್ಕೆ ಇದು ಪ್ರಮುಖ ಸಾಕ್ಷಿ. ಹೀಗೆ ರಣರಂಗದಲ್ಲಿ ಅದರಲ್ಲಿಯೂ ಗಗನದಲ್ಲಿ ಹಾರಾಡುತ್ತ ಹೋರಾಟ ನಡೆಸಿ, ಚಾಲನೆಯ ಹತೋಟಿ ತಪ್ಪಿದಂಥ ಅಪಾಯ ಪರಿಸ್ಥಿತಿಯಲ್ಲಿಯೂ ಧೃತಿಗೆಡದೆ ಚಿತ್ತಸ್ಥೈರ್ಯದಿಂದ ವರ್ತಿಸಿದುದು ಸುರೇಶ್‌ರವರ ಧೀರತನಕ್ಕೊಂದು ದ್ಯೋತಕ. ಅವರ ಪಾಲಿಗೆ ಅದು ಪುನರ್ಜನ್ಮವೇ ಸರಿ. ಈ ಬಗ್ಗೆ ಸುರೇಶ್‌ರವರನ್ನೇ ಪ್ರಶ್ನಿಸಿದಾಗ ಅವರಿತ್ತ ಉತ್ತರ ವಿದು—"ದೇವರ ದಯೆ ನನ್ನ ಮೇಲಿತ್ತು". ಎಂಥ ಮಾತು! ಯುದ್ಧಕ್ಕೆ ಸೇರಿ ಮಿಲಿಟರಿಯವರೆಂದಾದೊಡನೆ ಅವರು ನಾಸ್ತಿಕರಾಗಿಬಿಡುವರೆಂದು ಜನರಲ್ಲಿ ಒಂದು ಸಾಮಾನ್ಯ ಅಭಿಪ್ರಾಯ. ಆದರೆ ಅವರೂ ಭಕ್ತರಾಗಿರಲು ಸಾಧ್ಯವೆಂಬುದಕ್ಕೆ ಸುರೇಶ್‌ರವರು ಒಂದು ಉದಾಹರಣೆ. ಮಿಲಿಟರಿಗೆ ಸೇರಿಬಿಟ್ಟಾಕ್ಷಣ ದೇವರನ್ನೇ ಮರೆತುಬಿಡಬೇಕೆಂದು ಯಾರೂ ಹೇಳಿಲ್ಲ: ಎಲ್ಲಿಯೂ ಹೇಳಿಲ್ಲ.

ಮತ್ತೊಂದು ಸಂದರ್ಭ: ಒಮ್ಮೆ ಸುರೇಶ್‌ರವರು ಒಂದು ಹೊರದಾಳಿಯಲ್ಲಿ ತಮ್ಮ ವಿಮಾನವನ್ನು ಗುರಿಯತ್ತ ನಡೆಸುತ್ತಿರುವಾಗ ಶತ್ರುಗಳ ಎರಡು ಸೇಬ್ರ್

ಜೆಟ್ ವಿಮಾನಗಳು ಗಗನ ಮಾರ್ಗದಲ್ಲಿ ಅಡ್ಡಗಟ್ಟಲು ಬಂದುವು. ಆಗ ಸುರೇಶ್ ರವರು ತಮ್ಮ ಹಂಟರ್ ವಿಮಾನವನ್ನು ಚಾಕಚಕ್ಯತೆಯಿಂದ ನಡೆಸಿ ಕ್ಷಣಮಾತ್ರ ದಲ್ಲಿ ಒಂದು ಶತ್ರು ವಿಮಾನವನ್ನು ಹೊಡೆದಪ್ಪಳಿಸಿದರು. ಇನ್ನೊಂದು ಸೇಬರ್ ಜೆಟ್ ತಪ್ಪಿಸಿಕೊಂಡು ಓಡಲು ಹವಣಿಸಿತು. ಆದರೆ ಸುರೇಶ್‌ರವರು ಬಿಡದೆ ತಮ್ಮ ತಂಡದ ನಾಯಕರೊಂದಿಗೆ ಅಟ್ಟಿಸಿಕೊಂಡು ಹೋಗಿ ನೇರವಾದ ಗುರಿಯಿಟ್ಟು ಗುಂಡಿಕ್ಕಿ ಅದನ್ನೂ ಉರುಳಿಸಿದರು. ಹೀಗೆ ಇವರಿಂದ ಎರಡು ಸೇಬರ್ ಜೆಟ್‌ಗಳು ತಮ್ಮ ಅಂತ್ಯವನ್ನು ಕಂಡವು. ಇದು ಸುರೇಶ್‌ರವರ ಅಪ್ರತಿಮ ಶೌರ್ಯದ ಕುರು ಹಾಗಿದೆ. ಹಾಗೂ ಉಳಿದ ಯೋಧರಿಗೆ ಶ್ರೇಷ್ಠ ಮೇಲ್ಪಂಕ್ತಿಯಾಗಿದೆ. ಈ ವಿಧ ವಾದ ಗಗನ ಸಮರದಲ್ಲಿ ತೋರಿಸಿದ ಮಹಾ ಸಾಹಸಕ್ಕಾಗಿ ರಾಷ್ಟ್ರಪತಿಯವರು ಸುರೇಶ್‌ರವರಿಗೆ “ವೀರಚಕ್ರ” ಪ್ರಶಸ್ತಿಯನ್ನು ದಯಪಾಲಿಸಿದ್ದಾರೆ.

ಫ್ಲೈ|| ಲೆ|| ಸುರೇಶ್‌ರವರು ಇಂಟರ್ ನ್ಯಾಷನಲ್ ಇನ್ಸ್ಟ್ರುಮೆಂಟ್‌ನಲ್ಲಿ ಈಗ ವಿಜಿಲೆನ್ಸ್ ಅಧಿಕಾರಿಗಳಾಗಿರುವ ಶ್ರೀ ಕೆ. ಎಸ್. ಶ್ರೀಕಂಠಶಾಸ್ತ್ರಿಯವರ ಪುತ್ರರು. ದಿವಂಗತ ಶ್ರೀ ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿಗಳ ಮೊಮ್ಮಗ. ಬೆಂಗಳೂರಿನಲ್ಲಿ ಪ್ರಖ್ಯಾತ ವಕೀಲರಾಗಿದ್ದ ದಿವಂಗತ ಎಂ.ಪಿ. ಸೋಮಶೇಖರರಾಯರು ಶ್ರೀ ಸುರೇಶ್ ರವರ ಮಾತಾಮಹರು.

ತಂದೆ ಶ್ರೀಕಂಠಶಾಸ್ತ್ರಿಗಳು ಹಿಂದೂಸ್ಥಾನ್ ವಿಮಾನ ಕಾರ್ಖಾನೆಯಲ್ಲಿ ಪೋಲೀಸ್ ಅಧಿಕಾರಿಗಳಾಗಿದ್ದಾಗ(೧೯೫೩-೫೮)ಸುರೇಶ್‌ರವರು ಇನ್ನೂ ಹೈಸ್ಕೂಲ್ ವಿದ್ಯಾರ್ಥಿ. ತಂದೆಯೊಡನೆ ವಿಮಾನ ನಿಲ್ದಾಣಕ್ಕೆ ಹೋದಾಗಲೆಲ್ಲ ವಿಮಾನಗಳ ಹಾರಾಟವನ್ನೇ ನೋಡುತ್ತ ಘಂಟೆಗಟ್ಟಳೆ ತನ್ಮಯರಾಗಿ ನೋಡುತ್ತ ನಿಂತುಬಿಡುತ್ತಿ ದ್ದರು ಈ ವಿದ್ಯಾರ್ಥಿ. ವಿಮಾನಗಳ ಹಾರಾಟವನ್ನು ಕಂಡು ಆನಂದಭರಿತರಾದ ಆ ಸಮಯದಲ್ಲಿಯೇ ಈ ವಿದ್ಯಾರ್ಥಿಗೆ ತಾನೂ ಓರ್ವ ವೈಮಾನಿಕನಾಗಬೇಕೆಂಬ ಹೆಬ್ಬಯಕೆ ಮೂಡಿತು. ಅದಕ್ಕೆ ತಕ್ಕಂತಹ ವಾತಾವರಣವೇ ಸಿಕ್ಕ ಸುರೇಶ್‌ರವರ ಮನದ ಹೆಬ್ಬಯಕೆ ಸಂದಿತು.

ಶ್ರೀ ಕೆ. ಎಸ್. ಸುರೇಶ್‌ರವರ ವಿದ್ಯಾಭ್ಯಾಸ ಬೆಂಗಳೂರಿನ ಬೆಂಗಳೂರು ಹೈಸ್ಕೂಲ್, ವಿಜಯಾ ಕಾಲೇಜು ಮತ್ತು ಸೆಂಟ್ರಲ್ ಕಾಲೇಜುಗಳಲ್ಲಿ ನಡೆಯಿತು. ವಿದ್ಯಾರ್ಥಿ ದೆಶೆಯಲ್ಲಿ ನ್ಯಾಷನಲ್ ಕ್ಯಾಡೆಟ್ ಕೋರ್‌ನ ‘ಏರ್‌ವಿಂಗ್’ನಲ್ಲಿ ನಾಲ್ಕು ವರ್ಷದ ಶಿಕ್ಷಣ ದೊರಕಿತು. ತಮ್ಮ ಇಪ್ಪತ್ತನೆಯ ವಯಸ್ಸಿನಲ್ಲಿ ಭಾರತದ ವಿಮಾನ ಪಡೆಯ ಪರೀಕ್ಷೆಯೊಂದರಲ್ಲಿ ಇವರು ತೇರ್ಗಡೆಯಾದರು. ಅನಂತರ ಜೋಧ್‌ಪುರದ ಏರ್‌ಫೋರ್ಸ್ ಟ್ರೈನಿಂಗ್ ಕಾಲೇಜಿನಲ್ಲಿ ಒಂದು ವರ್ಷದ ತರಪೇತಿ ಮುಗಿಸಿ, ಹೈದರಾಬಾದ್‌ಗೆ ಹೊರಟು, ಜೆಟ್ ವಿಮಾನ ಚಾಲನೆ ಯಲ್ಲಿ ಹೆಚ್ಚಿನ ಪರಿಶ್ರಮ ಪಡೆದರು. ೧೯೬೦ನೆಯ ನವೆಂಬರ್ ತಿಂಗಳಿನಲ್ಲಿ ಪೈಲಟ್ ಆಫೀಸರ್ ಆಗಿ ಭಾರತ ವಿಮಾನ ಪಡೆಯ ಕಮಿಷನ್ ಇವರಿಗೆ ದೊರಕಿತು.

ಅತ್ಯುತ್ತಮ ಆಲ್‌ರೌಂಡ್ ಕ್ಯಾಡೆಟ್ ಎನಿಸಿಕೊಂಡು ಆಯ್ಕೆಯಾಗಿ ರಾಷ್ಟ್ರಪತಿಯವರಿಂದ ಚಿನ್ನದ ಪದಕವನ್ನು ಗಳಿಸಿದರು. ಅದೇ ವರ್ಷ ಜೆಟ್ ಟ್ರೈನಿಂಗ್ ವಿಂಗ್‌ನಲ್ಲಿ ಶ್ರೇಷ್ಠ ದರ್ಜೆಯ ಆಲ್‌ರೌಂಡ್ ಆಫೀಸರ್ ಎಂದು ಪರಿಗಣಿಸಲ್ಪಟ್ಟು ವಿಮಾನಬಲದ ದಂಡನಾಯಕರ ಬೆಳ್ಳಿಯ ಪದಕವನ್ನು ಇವರು ಸಂಪಾದಿಸಿದರು.

೧೯೬೫ರಲ್ಲಿ ನಡೆದ ಭಾರತ ಪಾಕಿಸ್ತಾನ್ ಯುದ್ಧದಲ್ಲಿಯೂ ಶ್ರೀ ಸುರೇಶ್‌ರವರು ಭಾಗ ವಹಿಸಿ, ತಮಗೊಪ್ಪಿಸಿದ್ದ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದರು. (ಈ ಸಂದರ್ಭದಲ್ಲಿಯೇ ಜನರಲ್ ಕರಿಯಪ್ಪನವರ ಪುತ್ರರಾದ ಫ್ಲೈ|| ಲೆ|| ಕೆ. ಸಿ. ಕರಿಯಪ್ಪನವರು ಶತ್ರು ದಾಳಿಗೆ ಸಿಕ್ಕಿ ಸೆರೆ ಹಿಡಿಯಲ್ಪಟ್ಟರು.) ೧೯೬೫ರ ಸೆಪ್ಟೆಂಬರ್ ೨೫ರಂದು ಖೇಂಖರನ್ ಎಂಬಲ್ಲಿ ಈ ವಿಮಾನ ಮುತ್ತಿಗೆ ನಡೆಯಿತು. ಆ ಸಮಯದಲ್ಲಿ ಶ್ರೀ ಸುರೇಶ್‌ರವರ ವಿಮಾನಕ್ಕೂ ಭಾರಿ ಪೆಟ್ಟು ತಗುಲಿತು. ಆದರೂ ಧೃತಿಗೆಡದೆ ತಮ್ಮ ವಿಮಾನವನ್ನು ನೆಲೆಗೆ ತಂದು ಸೈನಿಕದಳದವರಿಗೆ ಅಚ್ಚರಿಯನ್ನುಂಟುಮಾಡಿದರು. ೧೯೬೬ರಲ್ಲಿ ದೆಹಲಿಯಲ್ಲಿ ನಡೆದ ಗಣರಾಜ್ಯ ದಿನಾಚರಣೆಯಂದು ಶ್ರೀ ಸುರೇಶ್‌ರವರು ವಿಮಾನದ ಹಾರಾಟದಲ್ಲಿ ತಮ್ಮ ಕೌಶಲವನ್ನು ಪ್ರದರ್ಶಿಸಿದ್ದರು. ಅವರ ಸುಂದರ ಮುಖದ ಪರಿಚಯ ದೆಹಲಿಯ ನಾಗರಿಕರಿಗೆ ಇನ್ನೂ ಹಸಿರಾಗಿಯೇ ಉಳಿದಿರಬಹುದು.

ಹೀಗೆ ಬಹುಮುಖ ಪ್ರತಿಭೆಯುಳ್ಳ ಶ್ರೀ ಸುರೇಶ್‌ರವರು ಮಿಗ್ ೨೧ ವಿಮಾನ ಚಾಲನೆಯಲ್ಲಿ ಪರಿಣಿತರಾಗಿ ಈಗ ಅಂದರೆ ೧೯೭೧ರಿಂದೀಚೆಗೆ ವಿಮಾನ ಚಾಲನೆಯ ಅಭ್ಯಾಸ ಮಾಡುತ್ತಿರುವ ಯುವಕರ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವರು. ಇವರು ಹದಿನೇಳು ವಿಧದ ವಿಮಾನಗಳನ್ನು ನಡೆಸುವ ಪರಿಶ್ರಮ ಪಡೆದಿದ್ದಾರೆ. ಎರಡು ಸಾವಿರ ಘಂಟೆಗಳಿಗೂ ಮೇಲ್ಪಟ್ಟು ಜೆಟ್ ವಿಮಾನದ ಹಾರಾಟದಲ್ಲಿ ದಾಖಲೆ ಸ್ಥಾಪಿಸಿದ ಕೀರ್ತಿ ಶ್ರೀ ಸುರೇಶ್‌ರವರದು. ಉಜ್ವಲ ಭವಿಷ್ಯವನ್ನು ಹೊಂದಿರುವ ಇಂಥ ವೀರಪುತ್ರನನ್ನು ಪಡೆದ ಭಾರತಮಾತೆ ಧನ್ಯಳಲ್ಲವೇ ?

ಫ್ಲೈಟ್ ಲೆಫ್ಟಿನೆಂಟ್ ಎ. ರಘುನಾಥ್

"ನಗರದ ಯುವಕರೊಬ್ಬರಿಗೆ ವೀರಚಕ್ರ ಪ್ರಶಸ್ತಿ ದೊರಕಿದೆ" ಎಂಬ ಶೀರ್ಷಿಕೆಯಲ್ಲಿ ಸುದ್ದಿಯೊಂದನ್ನು ಡೆಕ್ಕನ್ ಹೆರಾಲ್ಡ್ ಪತ್ರಿಕೆಯು ದಿನಾಂಕ ೩-೧-೭೨ ರಂದು ಪ್ರಕಟಿಸಿತು. ಫ್ಲೈಟ್ ಲೆಫ್ಟಿನೆಂಟ್ ರಘುನಾಥ್‌ರವರು ಇತ್ತೀಚಿನ ಭಾರತ-ಪಾಕಿಸ್ತಾನ ಯುದ್ಧದಲ್ಲಿ ಪ್ರದರ್ಶಿಸಿದ ಧೈರ್ಯಶೌರ್ಯಗಳಿಗಾಗಿ ರಾಷ್ಟ್ರಪತಿಯವರು ಅವರಿಗೆ ವೀರಚಕ್ರ ಪ್ರಶಸ್ತಿಯನ್ನು ದಯಪಾಲಿಸಿದ್ದಾರೆ.

ಶ್ರೀ ರಘುನಾಥ್‌ರವರ ತಂದೆ ದಿ|| ಎ. ನಂಜುಂಡರಾಯರು. ಇವರು ಸುಪ್ರಸಿದ್ಧ ಪತ್ರಿಕಾ ವರದಿಗಾರರಾಗಿದ್ದರು. "ಟೈಂಸ್ ಆಫ್ ಇಂಡಿಯಾ" ಮತ್ತು "ಹಿಂದೂ" ಪತ್ರಿಕೆಗಳ ಮುಖ್ಯ ವರದಿಗಾರರಾಗಿ ಅಮೋಘ ಸೇವೆಸಲ್ಲಿಸಿದ್ದರು. (ಸ್ಕೌಟ್ ಪತ್ರಿಕೆಯಾಗಿದ್ದ 'ರ್‍ಯಾಲಿ ಸಮಾಚಾರ್'ನಲ್ಲಿ ನಾನು ಇವರ ಜೊತೆಯಲ್ಲಿ ಕೆಲಸಮಾಡುವ ಸುಯೋಗವನ್ನು ಪಡೆದಿದ್ದೆ. ನಂಜುಂಡರಾಯರ ಇಂಗ್ಲಿಷ್ ಶೈಲಿ ಮಾದರಿಯಾಗಿರುತ್ತಿತ್ತು.) ಶ್ರೀ ರಘುನಾಥ್‌ರವರು ನಂಜುಂಡರಾಯರ ದ್ವಿತೀಯ ಪುತ್ರರು. ಇವರದ್ದು ಸುಶಿಕ್ಷಿತ ಮನೆತನ. ನಂಜುಂಡರಾಯರ ಪ್ರಥಮ ಪುತ್ರರಾದ ಶ್ರೀ ಎ. ರತ್ನಾಕರ್‌ರವರು ತಾತಾ ವಿಜ್ಞಾನ ಮಂದಿರದಲ್ಲಿ ಪುಸ್ತಕ ಭಂಡಾರಿಗಳಾಗಿದ್ದಾರೆ. ನಂಜುಂಡರಾಯರ ತಮ್ಮಂದಿರಾದ ಶ್ರೀ ಎ. ರಾಮಮೂರ್ತಿಯವರು ಮೈಸೂರು ಸರ್ಕಾರದ ಪಶುವೈದ್ಯ ಇಲಾಖೆಯಲ್ಲಿ ಅಸಿಸ್ಟೆಂಟ್ ಡೈರೆಕ್ಟರ್ ಆಗಿ ಕೆಲಸಮಾಡುತ್ತಿದ್ದಾರೆ. ಇಂಥ ಉತ್ತಮ ಮನೆತನದಲ್ಲಿ ಜನಿಸಿದ ಶ್ರೀ ರಘುನಾಥ್‌ರವರು ತಮ್ಮ ಮನೆತನಕ್ಕಷ್ಟೇ ಅಲ್ಲದೆ ಬೆಂಗಳೂರು ನಗರಕ್ಕೂ, ಕನ್ನಡ ನಾಡಿಗೂ, ಇಡೀ ಭರತಖಂಡಕ್ಕೂ ಗೌರವ ತಂದಿದ್ದಾರೆ.

೧೯೪೫ರಲ್ಲಿ ಜನಿಸಿದ ಶ್ರೀ ರಘುನಾಥ್‌ರವರಿಗೆ ಚಿಕ್ಕಂದಿನಿಂದಲೂ ವಿಮಾನಗಳ ಹಾರಾಟದ ಮೇಲೇ ಗಮನ. ಶಾಲೆಯ ರಜದ ದಿನಗಳಲ್ಲಿ ಜಕ್ಕೂರು ಏರೋಡ್ರೋಂಗೆ ಹೋಗಿ ವಿಮಾನಗಳು ನೆಲಕ್ಕಿಳಿಯುವುದು, ಮೇಲೇರುವುದನ್ನೇ ನೋಡುತ್ತ ಗಂಟೆಗಟ್ಟಳೆ ಕುಳಿತಿರುತ್ತಿದ್ದರು. ವಿಮಾನದ ಚಾಲಕನಾಗಬೇಕೆಂಬ ಹಂಬಲು

ಅಂದಿನಿಂದಲೂ ಇವರಿಗಿತ್ತು. ಇವರ ಬಾಲ್ಯ ಶಿಕ್ಷಣ ಮಲ್ಲೇಶ್ವರದ ರುಕ್ಕಮ್ಮ ರಾಘವಾಚಾರ್ ವಿದ್ಯಾಮಂದಿರದಲ್ಲಿಯೂ, ಹೈಸ್ಕೂಲ್ ಶಿಕ್ಷಣ ಮಲ್ಲೇಶ್ವರದ ಹೈಸ್ಕೂಲ್‌ನಲ್ಲಿಯೂ ನಡೆಯಿತು. ಅನಂತರ ಅವರು ಸೇಂಟ್ ಜೋಸೆಫ್ ಕಾಲೇಜಿಗೆ ಸೇರಿ ಬಿ. ಎಸ್‌ಸಿ. ಪದವಿಯನ್ನು ಪಡೆದರು.

ಶ್ರೀ ಎ. ರಘುನಾಥ್‌ರವರು ೧೯೬೪ರಲ್ಲಿ ವಾಯುಪಡೆಗೆ ಸೇರಿದರು. ಅದಕ್ಕೆ ಮುನ್ನ ಇವರಿಗೆ ಜೋಧ್‌ಪುರದಲ್ಲಿ ಹಾಗೂ ಹೈದರಾಬಾದ್‌ನಲ್ಲಿ ಪೂರ್ವಭಾವಿ ಶಿಕ್ಷಣ ದೊರಕಿತ್ತು.

ಮೊನ್ನಿನ ಭಾರತ-ಪಾಕ್ ಯುದ್ಧದಲ್ಲಿ ಶತ್ರುನೆಲೆಗಳ ಮೇಲೆ ಹಾಗೂ ರಾಡಾರ್ ಕೇಂದ್ರಗಳ ಮೇಲೆ ದಾಳಿ ನಡೆಸುವ ಸದವಕಾಶ ಇವರಿಗೆ ಲಭಿಸಿತ್ತು. ಈ ಸಾಹಸ ಕಾರ್ಯದಲ್ಲಿ ತೊಡಗಿ ಇವರು ಯಶಸ್ಸುಗಳಿಸಿದರು. ಎಂತಲೇ ಇವರಿಗೆ ರಾಷ್ಟ್ರಪತಿಯವರಿಂದ ವೀರಚಕ್ರ ದೊರೆತಿರುವುದು.

ಪಶ್ಚಿಮ ವಲಯದ ಛಾಂಬ್ ವಲಯದಲ್ಲಿ ಶತ್ರುಗಳನ್ನು ಸದೆಬಡಿದ ಕೀರ್ತಿ ಇವರದು. ಪೂರ್ವವಲಯದಲ್ಲಿಯೂ ಇವರ ಸಾಹಸ ಪ್ರದರ್ಶನ ನಡೆದಿದೆ. ಎರಡು ವಲಯಗಳಲ್ಲಿಯೂ ಇವರು ಗ ಗ ನ ವಿ ಹಾ ರಿ ಗ ಳಾ ಗಿ ರಾರಾಜಿಸಿದ್ದಾರೆ. ವಿಮಾನದಲ್ಲಿ ಕುಳಿತು ಶತ್ರುಗಳ ನೆಲೆಗಳನ್ನು ಕಂಡು ಹಿಡಿಯುವುದು, ಅದರ ನಿರ್ಮೂಲನ ಮಾಡುವುದು ಎಂದರೆ ಇವರಿಗೊಂದು ಮೋಜು. ಕೆಚ್ಚೆದೆಯ ವೀರರಾಗಿ ಹಗಲೆನ್ನದೆ ಇರುಳೆನ್ನದೆ ಹೋರಾಡಿ, ತಮ್ಮ ಪಾಲಿನ ಕರ್ತವ್ಯವನ್ನು ಮಾಡಿ ಭಾರತದ ಜಯಭೇರಿಗೆ ಕಾರಣಕರ್ತರಾಗಿದ್ದಾರೆ. ಇಂಥ ಕೆಚ್ಚೆದೆಯ ತರುಣ ಯೋಧರ ಅವಶ್ಯಕತೆ ಇಂದು ಬಹಳವಾಗಿದೆ. ಇದೇ ರೀತಿಯ ಸಾಹಸಗಳ ಪ್ರದರ್ಶನ ನಡೆಸಿ ಶ್ರೀ ರಘುನಾಥ್‌ರವರು ಇನ್ನೂ ಉನ್ನತ ಪದವಿಗೇರಿ ಶ್ರೇಷ್ಠಪ್ರಶಸ್ತಿಗಳನ್ನು ಗಳಿಸಲೆಂದೇ ನಮ್ಮ ಹಾರೈಕೆ.

●

ಲೆಫ್ಟಿನೆಂಟ್ ಕಮ್ಯಾಂಡರ್ ಜಾರ್ಜ್ ಮಾರ್ಟಿಸ್

ಇತ್ತೀಚೆಗೆ ನಡೆದ ಭಾರತ-ಪಾಕ್ ಸಮರದಲ್ಲಿ ಅತ್ಯಂತ ಸಾಹಸವನ್ನು ತೋರಿದುದಕ್ಕಾಗಿ ಶ್ರೀ ಜಾರ್ಜ್‌ಮಾರ್ಟಿಸ್ ಅವರು ರಾಷ್ಟ್ರಪತಿಯವರಿಂದ ವೀರಚಕ್ರ ಪ್ರಶಸ್ತಿಯನ್ನು ಪಡೆದಿದ್ದಾರೆ.

ಮಂಗಳೂರಿನ ದಿವಂಗತ ಮಥಿಯಾಸ್ ಮಾರ್ಟಿಸ್ ಮತ್ತು ಆಲಿಸ್ ಮಾರ್ಟಿಸ್‌ರವರ ಪುತ್ರರೇ ಶ್ರೀ ಜಾರ್ಜ್‌ಮಾರ್ಟಿಸ್. ಇವರು ೧೯೩೬ರ ಡಿಸೆಂಬರ್ ೧೧ರಂದು ಮಂಗಳೂರಿನಲ್ಲಿ ಜನಿಸಿದರು. ಇವರ ಪ್ರಾಥಮಿಕ ಶಿಕ್ಷಣ ಸೆಂಟ್

ಸಬಾಸ್ಟಿಯನ್ ಶಾಲೆಯಲ್ಲಿ ನಡೆಯಿತು. ಬಳಿಕ ಪಡುವ ಹೈಸ್ಕೂಲ್‌ನಲ್ಲಿ ವ್ಯಾಸಂಗ ಮಾಡಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಇವರಿಗೆ ಕ್ರೀಡೆಗಳಲ್ಲಿ ಅತ್ಯಂತ ಆಸಕ್ತಿ. ಈಜುವುದೆಂದರೆ ಪಂಚಪ್ರಾಣ. ೧೯೬೪ರಿಂದೀಚೆಗೆ ಇವರು ಹಲವಾರು ಈಜು ಪ್ರದರ್ಶನಗಳನ್ನಿತ್ತಿರುವರು. 'ಡೈವಿಂಗ್' ನಲ್ಲಿ ಇವರು ಎತ್ತಿದ ಕೈ. ಸುಪ್ರಸಿದ್ಧ ಈಜುಗಾರರಾದ ಶ್ರೀ ಮಿಹಿರ್‌ಸೇನ್‌ರವರು ಪಾಕ್ ಭೂಸಂಧಿಯಲ್ಲಿ ಈಜುವ ಸ್ಪರ್ಧೆಯಲ್ಲಿ ತೊಡಗಿದ್ದಾಗ ಶ್ರೀ ಜಾರ್ಜ್‌ಮಾರ್ಟಿಸ್‌ರನ್ನು 'ಗೈಡ್' ಆಗಿ ನೇಮಿಸಲಾಗಿದ್ದಿತು. ಇವರು ಕೇವಲ ಮಾರ್ಗದರ್ಶಕರಷ್ಟೇ ಆಗಿರಲಿಲ್ಲ. ಪ್ರಾಣರಕ್ಷಕರೂ ಆಗಿದ್ದರು. ಈ ಈಜು ಪ್ರದರ್ಶನ ಯಶಸ್ವಿಯಾಗಿನಡೆಯಿತೆಂಬುದನ್ನು ಎಲ್ಲರೂ ಬಲ್ಲರು. ಭಾರತದ ಹಾಗೂ ವಿಶ್ವದ ಎಲ್ಲಾ ಪತ್ರಿಕೆಗಳಲ್ಲಿಯೂ ಈ ಸುದ್ದಿ ಪ್ರಕಟವಾಗಿತ್ತು. ಹೀಗೆ ಇವರು ಈಜುವ ಕಲೆಯಲ್ಲಿ ಸುಪ್ರಸಿದ್ಧರಾಗಿರುವ ವಿಷಯ ತಿಳಿದು ರಾಷ್ಟ್ರಾಧ್ಯಕ್ಷರು ೧೯೬೮ರ ಜನವರಿ ೨೬ ರಂದು (ಗಣರಾಜ್ಯದಿನಾಚರಣೆಯ ಪ್ರಯುಕ್ತ) 'ನೌಸೇನಾಪದಕ'ವನ್ನು ಕೊಟ್ಟು ಗೌರವಿಸಿದ್ದಾರೆ.

ಶ್ರೀ ಜಾರ್ಜ್‌ಮಾರ್ಟಿಸ್‌ರವರು ೧೯೫೩ರಲ್ಲಿ ಭಾರತದ ನೌಕಾದಳಕ್ಕೆ ಸೇರಿಕೊಂಡು, ವೈರ್‌ಲೆಸ್ ಆಪರೇಟರ್ ಆಗಿ ಕೆಲವು ಕಾಲ ಕೆಲಸ ಮಾಡಿದರು. ಅನಂತರ ೧೯೫೩ರ ಏಪ್ರಿಲ್ ೧೮ರಂದು 'ಐ.ಎನ್.ಎಸ್. ಸರ್ಕಾರ'ದಲ್ಲಿ ಕೆಲಸಕ್ಕೆ ಸೇರಿ ಹೆಚ್ಚಿನ ಅನುಭವವನ್ನು ಪಡೆದರು. ಅನಂತರ ಇವರ ಬುದ್ಧಿಚಾತುರ್ಯವನ್ನು ಗಮನಿಸಿ, ಇವರನ್ನು ಅಧಿಕಾರಿವರ್ಗದ ಶಿಕ್ಷಣಕ್ಕೆ ಕಳುಹಿಸಲಾಯಿತು. ಈ ಶಿಕ್ಷಣದಲ್ಲಿ ಯಶಸ್ಸು ಗಳಿಸಿದ ನಂತರ ಇವರು ೧೯೬೦ರ ಸೆಪ್ಟೆಂಬರ್ ಆರರಂದು ಭಾರತದ ನೌಕಾ ಸೈನ್ಯದ ಕಾರ್ಯಾಡಳಿತ ಶಾಖೆಯಲ್ಲಿ ಸಬ್ ಲೆಫ್ಟಿನೆಂಟ್ ಆಗಿ ನೇಮಕಗೊಂಡರು. ಈ ಅಧಿಕಾರಾವಧಿಯಲ್ಲಿ 'ಐ. ಎನ್. ಎಸ್. ವೆಂಡುರುತಿ', 'ಬೆಟ್' ಮತ್ತು 'ಸುವರ್ಣ' ಎಂಬ ಹಡಗುಗಳಲ್ಲಿ ಸೇವೆಸಲ್ಲಿಸಿ ಸಮರ್ಥ ಅಧಿಕಾರಿಗಳೆನಿಸಿಕೊಂಡರು.

೧೯೬೫ರ ಮೇ ೨ರಿಂದ ೨೧ರವರೆಗೆ ಇವರನ್ನು ಮೆಟ್ಟೂರ್ ಅಣೆಕಟ್ಟೆನಲ್ಲಿ ನೀರಿನ ಕೊಳವೆಗಳ ಶುದ್ಧೀಕರಣ ಕಾರ್ಯಗಳಿಗಾಗಿ ವಿಶೇಷವಾಗಿ ನೇಮಿಸಲಾಗಿತ್ತು.

೧೯೬೩ರ ಜೂನ್ ಆರರಂದು ಇವರಿಗೆ ಬಡ್ತಿ ದೊರೆತು ಲೆಫ್ಟಿನೆಂಟ್ ಪದವಿ ಗೇರಿದರು. ಐ. ಎನ್. ಎಸ್. ಬಿಯಾಸ್ ಎಂಬ ನೌಕಾದಳದ ಹಡಗಿನಲ್ಲಿ ಸ್ವಲ್ಪ ಕಾಲ ಸೇವೆ ಸಲ್ಲಿಸಿದರು. ಅನಂತರ ಇವರನ್ನು ಉನ್ನತ ಶಿಕ್ಷಣಕ್ಕಾಗಿ ಬ್ರಿಟಿಷ್ ದ್ವೀಪಗಳಿಗೆ ಕಳುಹಿಸಲಾಯಿತು. ಅಲ್ಲಿಯ ಶಿಕ್ಷಣ ಮುಗಿದ ಬಳಿಕ ಕೊಚ್ಚಿನ್‌ನಲ್ಲಿರುವ ಭಾರತದ ನೌಕಾಪಡೆಗಳ ಶಿಕ್ಷಣ ಶಾಲೆಯ ಅಧಿಕಾರಿಗಳಾಗಿ ನೇಮಕ ಗೊಂಡರು.

೧೯೬೫ರ ಅಕ್ಟೋಬರ್‌ನಲ್ಲಿ ಇವರು ಮಧ್ (Madh) ದ್ವೀಪದಲ್ಲಿ ಸಮುದ್ರದ ಕಾರ್ಯಾಚರಣೆಯಲ್ಲಿ ನೇಮಕಗೊಂಡು ಯಶಸ್ಸು ಪಡೆದರು. ಭಾರೀ ಪ್ರಮಾಣದ ಅಲೆಗಳ ಮಧ್ಯೆ, ಅನಾನುಕೂಲವಾದ ವಾತಾವರಣದಲ್ಲಿ ಬಹಿರಂಗವಾಗಿ ಹೀಗೆ ಕಾರ್ಯಕಲಾಪಗಳನ್ನು ನಡೆಸಿದುದು ಇದೇ ಮೊದಲಸಲವೆನ್ನಬಹುದು. ಸಮುದ್ರ ವಿಮಾನಗಳ ರಕ್ಷಣೆ; ಅವುಗಳ ನೈರ್ಮಲ್ಯದ ಕಡೆ ಗಮನ ಕೊಡುವುದು ಇವೇ ಮುಂತಾದ ಕೆಲಸಗಳನ್ನು ಇವರು ಶ್ರ ದ್ಧಾ ಸ ಕ್ತಿ ಗ ಳಿಂ ದ ಮಾಡಿದರು. ಸಮುದ್ರದ ನೀರು ಮೊದಲೇ ಉಪ್ಪು: ಜೊತೆಗೆ ಕದಡಿದ ಕೆಸರು ಬೇರೆ. (Muddy Water) ಇಂತಹ ನೀರಿನಲ್ಲಿ ಮುಳುಗಿ, ವಿಮಾನಗಳನ್ನು ಹೊರ ತಂದು ಶುದ್ಧಿಗೊಳಿಸುವುದೆಂದರೆ ಸಾಮಾನ್ಯದ ಕೆಲಸವಲ್ಲ. ಇಂಥ ಕೆಲಸದಲ್ಲಿಯೂ ಶ್ರೀ ಜಾರ್ಜ್ ಮಾರ್ಟಿಸ್‌ರವರು ತಮ್ಮ ಕರ್ತವ್ಯಪಾಲನೆ ಮಾಡಿ ಮೇಲಧಿಕಾರಿಗಳ ಮನ್ನಣೆಗೆ ಪಾತ್ರರಾದರು.

೧೯೬೫ರ ನವೆಂಬರ್ ೨೩ರಿಂದ ೧೯೬೫ರ ಡಿಸೆಂಬರ್ ೨೫ರವರೆಗೆ ಇವರು ಗೋವಾದಲ್ಲಿ ಡೈವಿಂಗ್ ಆಪರೇಷನ್ಸ್ ಕಾರ್ಯಾಚರಣೆಯಲ್ಲಿ ನಿರತರಾಗಿದ್ದರು. ಒಮ್ಮೆ ಮುನ್ನಾರ್ ಅಣೆಕಟ್ಟಿನಲ್ಲಿ ನೂರೈವತ್ತು ಅಡಿಗಳಷ್ಟು ಆಳದವರೆಗೂ ಹೋಗಿ ಕೆಲಸಮಾಡಿಕೊಂಡು ಹಿಂದಿರುಗಿದ್ದಾರೆ.

ಅನಂತರ ಇವರು ಕೊಂಕಣ, ಬೇಂಗ್ರೆ, ಠಾಣ, ಕಿರ್ಪಾನ್ ಎಂಬ ನೌಕಾ ಪಡೆಯ ಹಡಗುಗಳಲ್ಲಿ ಸೇವೆಸಲ್ಲಿಸಿದರು. ೧೯೭೦ರ ಅಕ್ಟೋಬರ್ ಮೂರರಂದು ಇವರನ್ನು ಲೆಫ್ಟಿನೆಂಟ್ ಕಮ್ಯಾಂಡರ್ ಪದವಿಗೇರಿಸಿ, ನೌಕಾಪಡೆಗಳ ಕೇಂದ್ರ ಕಛೇರಿಯಲ್ಲಿ ಶಸ್ತ್ರಾಸ್ತ್ರಗಳ ಮೇಲ್ವಿಚಾರಣಾಧಿಕಾರಿಗಳಾಗಿ ನೇಮಿಸಲಾಯಿತು.

೧೯೭೧ರಲ್ಲಿ ನಡೆದ ಭಾರತ-ಪಾಕ್ ಯುದ್ಧದಲ್ಲಿ ಇವರು ಪೂರ್ವ ವಲಯ ದಲ್ಲಿ ಅಂದರೆ ಬಂಗ್ಲಾದೇಶ್ ವಿಮೋಚನಾ ಕಾರ್ಯರಂಗದಲ್ಲಿ ಸಕ್ರಿಯವಾಗಿ ಭಾಗ ವಹಿಸಿದರು. ಅವರ ಶಕ್ತಿಸಾಮರ್ಥ್ಯಗಳು ವ್ಯಕ್ತಪಡಲು ಇದು ಅಪೂರ್ವವಾದ ಒಂದು ಅವಕಾಶವಾಯಿತು : ಇವರ ಸಾಹಸವನ್ನು ಗಮನಿಸಿ ರಾಷ್ಟ್ರಪತಿಯವರು ಇವರಿಗೆ 'ವೀರಚಕ್ರ' ಪ್ರಶಸ್ತಿಯನ್ನಿತ್ತು ಗೌರವಿಸಿದರು.

ಯುದ್ಧದ ಸಮಯದಲ್ಲಿ ಇವರು ಬಂಗ್ಲಾದೇಶಕ್ಕೆ ಸೇರಿದ ಕರಾವಳಿಯಲ್ಲಿ ಒಂದು ನೌಕಾದಳದ ನಾಯಕರಾಗಿದ್ದರು. ಆ ಕರಾವಳಿಯು ಶತ್ರುಗಳ ವಶದಲ್ಲಿ

ದ್ದುದರಿಂದ ಹೋರಾಟ ನಡೆಸುವುದು ಅಷ್ಟೇನೂ ಸುಲಭಸಾಧ್ಯವಾಗಿರಲಿಲ್ಲ. ಈ ಪಾಕ್ ಆಕ್ರಮಿತ ತೀರ ಪ್ರದೇಶದೊಳಕ್ಕೆ ನುಗ್ಗಿ ಶತ್ರುಗಳನ್ನು ಸದೆಬಡಿದು ವಿಷಯ ಸಂಗ್ರಹವನ್ನಾಡಿಕೊಂಡು ಬರಬೇಕೆಂದು ಮೇಲಧಿಕಾರಿಗಳಿಂದ ಆದೇಶ ಬಂದಿತು. ಮೇಲಧಿಕಾರಿಗಳ ಆಜ್ಞೆಯೆಂದ ಮೇಲೆ ಅದನ್ನು ಶಿರಸಾವಹಿಸಿ ಪಾಲಿಸಬೇಕಾದುದು ಸಮಸ್ತ ಸೈನಿಕರ ಆದ್ಯಕರ್ತವ್ಯವಷ್ಟೆ. ಆದರೆ ಆ ಸಂದರ್ಭದಲ್ಲಿ ಶತ್ರುವಲಯ ದೊಳಗೆ ಪ್ರವೇಶಮಾಡುವುದು ಹುಡುಗಾಟದ ವಿಚಾರವಾಗಿರಲಿಲ್ಲ.

ಆದರೂ ಇವರು ತಮ್ಮ ಜೀವದ ಮೇಲಿನ ಆಸೆ ತೊರೆದು, ಧೈರ್ಯದಿಂದ ತಮ್ಮ ದಳವನ್ನು ಶತ್ರುವಲಯದೊಳಕ್ಕೆ ನುಗ್ಗಿಸಿಯೇ ಬಿಟ್ಟರು. ಇವರ ನಾಯಕತ್ವದಲ್ಲಿ ಇವರ ದಳವು ಸಾಕಷ್ಟು ಸಾಹಸ ಮಾಡಿತು. ವಿಷಯ ಸಂಗ್ರಹವಷ್ಟೇ ಅಲ್ಲದೆ ಅನೇಕ ಶತ್ರುಗಳ ಹಡಗುಗಳ ನಾಶವೂ ಆಯಿತು. ಶತ್ರುಗಳ ಗನ್‌ಬೋಟ್‌ಗಳನ್ನು ನುಚ್ಚುನೂರು ಮಾಡಿ, ಅವರ ಹಡಗುಗಳನ್ನು ನಾಶಪಡಿಸಿ, ಅವರ ಜಾಲದಲ್ಲಿ ತಾವು ಸಿಕ್ಕದೆ ಪಾರಾಗಿ ಬಂದು ಜಯಭೇರಿ ಹೊಡೆದರು.

ಇಂತಹ ಅಸಾಧಾರಣ ಸಾಹಸಕಾರ್ಯ, ನಾಯಕತ್ವ, ಕಾರ್ಯತತ್ಪರತೆ ಮೊದಲಾದ ಇವರ ಸದ್ಗುಣಗಳು ಇತರರಿಗೆ ಮೇಲ್ಪಂಕ್ತಿಯಾಗಿವೆ. ಅವು ಭಾರತದ ಸೈನಿಕ ಸೇವೆಯ ಸತ್ಸಂಪ್ರದಾಯವೇ ಅಲ್ಲವೇ ?

ಮಂಗಳೂರಿನ ಪುರಸಭೆಯವರು ಶ್ರೀ ಜಾರ್ಜ್‌ಮಾರ್ಟಿಸ್‌ರವರಿಗೆ ಒಂದು ಭಾರಿ ಸನ್ಮಾನ ಸಮಾರಂಭವನ್ನು ಏರ್ಪಡಿಸಿ ಗೌರವಿಸಿರುವುದಲ್ಲದೆ ಆ ಊರಿನ ಒಂದು ಮುಖ್ಯರಸ್ತೆಗೆ 'ಜಾರ್ಜ್‌ಮಾರ್ಟಿಸ್ ರಸ್ತೆ' ಎಂಬ ಹೆಸರನ್ನಿಟ್ಟಿದ್ದಾರೆ.

●

ಹುತಾತ್ಮ ಲೆ|| ಎಸ್. ಮಂಜುನಾಥ್

ಬಾಂಗ್ಲಾದಲ್ಲಿ ಕೋಟ್ಯಂತರ ಮಂದಿಯ ಕಗ್ಗೊಲೆ ಮಾಡಿ ರಕ್ತದ ಹೊಳೆಯನ್ನು ಹರಿಸಿತು ಪಾಕ್ ಸೇನೆ. ಇಂಥ ಭೀಭತ್ಸ ಕಾರ್ಯ ನಡೆದುದು ಮಾನವ ಜನಾಂಗದ ಇತಿಹಾಸದಲ್ಲಿ ಇದೇ ಮೊದಲು. ಪಿಶಾಚರೂಪವಾದ ಆ ಪಾಕ್ ಸೇನೆಯನ್ನು ಕೇವಲ ಹದಿನಾಲ್ಕು ದಿನಗಳ ಅವಧಿಯಲ್ಲಿ ಭಾರತದ ವೀರಯೋಧರು ಸದೆಬಡಿದರು. ಸೇಬರ್‌ಜೆಟ್‌ಗಳನ್ನೂ, ಪ್ಯಾಟನ್ ಟ್ಯಾಂಕ್‌ಗಳನ್ನೂ, ವೈರಿಗಳನ್ನೂ, ಅವರ ಶಸ್ತ್ರಾಸ್ತ್ರಗಳನ್ನೂ ಧೂಳೀಪಟ ಮಾಡುತ್ತಾ ಭಾರತಸೇನೆ ಮುನ್ನುಗ್ಗಿತು. ಭಾರತದ ವೀರಯೋಧರ ಸಾಹಸ ವರ್ಣನಾತೀತ. ಈ ವೀರಾಗ್ರಣಿಗಳು ವ್ಯಕ್ತಪಡಿಸಿದ ಧೈರ್ಯ ಸಾಹಸ, ಆತ್ಮಾರ್ಪಣ, ಬಲಿದಾನಗಳು ಚಿರ

ಸ್ಮರಣೀಯ. ಈ ಸಾಹಸಿಗಳ ನೆತ್ತರಿನಿಂದ ತೊಯ್ದು ಸುಭದ್ರವಾಗಿರುವ ನಮ್ಮ ಸ್ವಾತಂತ್ರ್ಯ ಅತಿ ಪವಿತ್ರ. ದೇಶಕ್ಕಾಗಿ ಪ್ರಾಣ ತೆತ್ತ ನಮ್ಮ ಶೂರ ಯೋಧರು



ಪ್ರಾತಃಸ್ಮರಣೀಯರು. ಬಂಗ್ಲಾದ ಜನತೆಗೆ ಭಾರತದ ಯೋಧನೆಂದರೆ ದೇವತೆಯ ಸಮಾನ.

ನಮ್ಮ ನಾಡಿನ ಸ್ವಾತಂತ್ರ್ಯಕ್ಕಾಗಿ, ದೇಶ ರಕ್ಷಣೆಗಾಗಿ ಅನೇಕ ಯೋಧರು ಆತ್ಮಾರ್ಪಣೆಮಾಡಿ ಅಮರರೂ ಆಗಿರುವರು ಅಂಥವರಲ್ಲಿ ಲೆಫ್ಟಿನೆಂಟ್ ಎಸ್. ಮಂಜುನಾಥ್ ರವರೂ ಒಬ್ಬರು. ಪಾಕ್ ದುರಾಕ್ರಮಣವನ್ನು ಹೊಡೆದಟ್ಟುವುದರಲ್ಲಿ ಅಮೋಘ ಪರಾಕ್ರಮವನ್ನು ಪ್ರದರ್ಶಿಸುತ್ತ ಲೆ|| ಮಂಜುನಾಥ್ ಹೋರಾಡಿದರು. ೧೯೭೧ನೇ ಡಿಸೆಂಬರ್ ಮೂರರಂದು ಹೋರಾಡುತ್ತಲೇ ಶತ್ರುಗಳ ಗುಂಡಿನೇಟಿಗೆ ಬಲಿಯಾಗಿ, ಅನಂತರ ಆಸ್ಪತ್ರೆಯಲ್ಲಿ ನಿಧನರಾದರು.

ಲೆ|| ಎಸ್. ಮಂಜುನಾಥ್‌ರವರು ಶಿವಮೊಗ್ಗ ಪುರಸಭೆಯ ಕಂದಾಯ ಅಧಿಕಾರಿ ಶ್ರೀ ಎ. ಶೇಷಣ್ಣನವರ ಪ್ರಥಮಪುತ್ರರು. ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಶಿವನಿಯಲ್ಲಿ ೧೯೪೫ನೇ ಫೆಬ್ರವರಿ ೨೪ರಂದು ಇವರು ಜನಿಸಿದರು. ಇವರು ಇಂಟರ್‌ಮಿಡಿಯೆಟ್‌ವರೆಗೆ ಶಿಕ್ಷಣ ಪಡೆದರು.

೧೯೬೨ರ ಡಿಸೆಂಬರ್‌ನಲ್ಲಿ ಸೈನ್ಯದಲ್ಲಿ ನೇಮಕಗೊಂಡ ಲೆ|| ಮಂಜುನಾಥ್ ರವರು ಜಬ್ಬಲ್‌ಪುರದಲ್ಲಿ ಲಾನ್ಸ್ ನಾಯಕರಾಗಿ ಲಡಕ್, ಸಿಮ್ಲಾದ ಬಳಿಯ ನೀರುತ್ ಮತ್ತು ಚಂಡೀಘರ್‌ಗಳಲ್ಲಿ ಹವಿಲ್ದಾರರಾಗಿ ಸೇವೆ ಸಲ್ಲಿಸಿದರು. ೧೯೬೫ನೇ ಸಮರದಲ್ಲಿ ಅವರನ್ನು ಪಶ್ಚಿಮ ಪಾಕೀಸ್ತಾನದ ಗಡಿಗೆ ಕಳುಹಿಸಲಾಯಿತು. ಅನಂತರ ಅವರನ್ನು ಕಮಿಷನ್ಡ್ ರ್‍ಯಾಂಕ್‌ಗೆ ಆಯ್ಕೆಮಾಡಿ, ೧೯೬೬ರಿಂದ ೧೯೬೮ರ ವರೆಗೆ ಪುಣೆಯ ಆರ್ಮಿಕೆಡೆಟ್ ಕಾಲೇಜಿಗೆ ತರಬೇತಿಗಾಗಿ ಕಳುಹಿಸಲಾಯಿತು. ಡೆಹರಾಡೂನಿನ ಭಾರತೀಯ ಮಿಲಿಟರಿ ಅಕ್ಯಾಡೆಮಿಯಲ್ಲಿಯೂ ಸಹ ಅವರು ಸುಮಾರು ಒಂದೂವರೆ ವರ್ಷಗಳ ಕಾಲ ಇದ್ದರು. ಅವರ ನಿಷ್ಠೆ ಮತ್ತು ಧೈರ್ಯಗಳನ್ನು ಪರಿಗಣಿಸಿ ೧೯೭೦ನೇ ಡಿಸೆಂಬರ್ ೧೬ರಂದು ಅವರನ್ನು ಅಸ್ಸಾಂ ಗಡಿಯಲ್ಲಿ ರಾಜಪುತ್ ರೆಜಿಮೆಂಟಿನಲ್ಲಿ (ರಕ್ಷಣಾದಳ) ಸೆಕೆಂಡ್ ಲೆಫ್ಟಿನೆಂಟ್ ಆಗಿ ನೇಮಿಸಲಾಯಿತು.

ಈ ನೇಮಕದ ನಂತರ ಪುನಃ ಅವರನ್ನು ಆರು ತಿಂಗಳಕಾಲ ಮಿಲಿಟರಿ ತರಬೇತಿಗಾಗಿ ಬೆಳಗಾಂಗೆ ಕಳುಹಿಸಲಾಯಿತು. ಈ ತರಬೇತಿಯ ಅವಧಿಯಲ್ಲೇ ಸೇನೆಯ ಸೇವೆಗೆಂದು ಅವರನ್ನು ಹಿಂದಕ್ಕೆ ಕರೆಸಿಕೊಳ್ಳಲಾಯಿತು. ಅವರು ಸಿಲಿಗುರಿ ಗಡಿಪ್ರದೇಶದಲ್ಲಿ ಸೇವೆ ಸಲ್ಲಿಸುತ್ತಿದ್ದರು.

ಲೆ|| ಮಂಜುನಾಥ್ ಅವರ ನಿಧನದ ಸುದ್ದಿಯನ್ನು ತಿಳಿಸಿ, ಕಮ್ಯಾಂಡಿಂಗ್ ಆಫೀಸರ್ ಎ. ಎಸ್. ಆಹ್ಲಾವತ್‌ರವರು ಶ್ರೀ ಎ. ಶೇಷಣ್ಣನವರಿಗೆ ಬರೆದಿರುವ ಪತ್ರ ಮಂಜುನಾಥ್‌ರವರ ಸೇವಾ ಚಾರಿತ್ರ್ಯಕ್ಕೆ ಸಾಕ್ಷಿಯಾಗಿದೆ.

"ನಿಮ್ಮ ಮಗನ ಅಕಾಲಿಕ ಮರಣಕ್ಕೆ ನಾನು ಹಾಗೂ ನಮ್ಮ ತಂಡದ ಸೈನಿಕರೆಲ್ಲ ಸಂಪೂರ್ಣ ಅನುತಾಪಗೊಂಡಿದ್ದೇವೆ.

....ಲೆಫ್ಟಿನೆಂಟ್ ಮಂಜುನಾಥ್ ಓರ್ವ ಉತ್ತಮ ಅಧಿಕಾರಿಯಾಗಿದ್ದರು.

ನಮ್ಮ ತಂಡದಲ್ಲಿದ್ದ ಸೇವಾವಧಿಯಲ್ಲಿ ಅವರು ತೋರಿದ ಶಿಸ್ತು, ನಿಷ್ಠೆ ಮತ್ತು ಧೈರ್ಯಗಳು ನಿಜಕ್ಕೂ ಪ್ರಶಂಸನೀಯ. ಅವರ ಮರಣ ತುಂಬಲಾಗದ ನಷ್ಟ."

ಲೆಫ್ಟಿನೆಂಟ್ ಮಂಜುನಾಥ್ ಮಾತೃಭೂಮಿಯ ಋಣ ಸಲ್ಲಿಸಿ ಕೃತಾರ್ಥರಾಗಿದ್ದಾರೆ. ಕನ್ನಡ ನಾಡಿಗೆ ಕೀರ್ತಿ ತಂದಿದ್ದಾರೆ. ಅವರ ಆತ್ಮಕ್ಕೆ ಸಮಸ್ತ ದೇಶಾಭಿಮಾನಿಗಳೂ ಶಾಂತಿ ಕೋರಿದ್ದಾರೆ. ಅವರ ತ್ಯಾಗಕ್ಕೆ ಸಮಗ್ರ ರಾಷ್ಟ್ರವೇ ಕೃತಜ್ಞವಾಗಿದೆ. ಕೃತಜ್ಞತೆಯ ಕುರುಹಾಗಿ ಶಿವಮೊಗ್ಗ ಜಿಲ್ಲೆಯ ಜಿಲ್ಲಾಧಿಕಾರಿಗಳಾದ ಶ್ರೀ ಬಾಲಸುಬ್ರಹ್ಮಣ್ಯಂರವರು ಸರ್ಕಾರದ ಪರವಾಗಿ ಡಿಸೆಂಬರ್ ೩೦ ರಂದು ಶ್ರೀ ಶೇಷಣ್ಣನವರ ಗೃಹಕ್ಕೆ ತೆರಳಿ ಶ್ರೀ ಶೇಷಣ್ಣನವರಿಗೆ ಐದು ಸಾವಿರ ರೂ. ಮೊಬಲಗಿನ ಚೆಕ್ಕನ್ನು ಕೊಟ್ಟರಲ್ಲದೆ ಹೊಸೂಡಿ ಗ್ರಾಮದಲ್ಲಿ ಮೂರು ಹೆಕ್ಟೇರ್ ಗದ್ದೆಸಾಗುವಳಿ ಚೀಟಿಯನ್ನೂ ನೀಡಿದರು.

ಭಾರತದ ರಾಷ್ಟ್ರಪತಿಯವರು ಇವರಿಗೆ "ವೀರಚಕ್ರ" ಪ್ರಶಸ್ತಿಯನ್ನು (ಮರಣೋತ್ತರ) ನೀಡಿ, ದಿವಂಗತರ ದೇಶಸೇವೆಯನ್ನು ಕೊಂಡಾಡಿದ್ದಾರೆ.

●

ಮೇಜರ್ ಎಂ. ಎಂ. ರವಿ

ಕೊಡಗಿನವರಾದ ಮೇಜರ್ ಎಂ. ಎಂ. ರವಿಯವರು ಇತ್ತೀಚಿನ ಯುದ್ಧದಲ್ಲಿ ಗಾಯಗೊಂಡು ಬೆಂಗಳೂರಿನ ಮಿಲಿಟರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಇವರನ್ನು ಕಾಣಲು ನಾನು ಕರ್ನಲ್ ಕಡಕೋಳ್‌ರವರೊಡನೆ ಆಸ್ಪತ್ರೆಗೆ ಹೋದೆ.

ಆಸ್ಪತ್ರೆಯ ಕಮ್ಯಾಂಡಿಂಗ್ ಆಫೀಸರ್‌ರವರಾದ ಮೇಜರ್ ಬಿ. ಸಿ. ಬಸುರವರ ಅನುಮತಿ ಪಡೆದು ನಾವು ಮೇಜರ್ ರವಿಯವರಿದ್ದ ವಾರ್ಡ್‌ಗೆ ಬಂದೆವು. ವಾರ್ಡ್‌ನಲ್ಲಿ ಶ್ರೀ ರವಿಯವರೊಡನೆ ಇನ್ನೂ ಅನೇಕ ತರುಣರು ಕುಳಿತು ಹರಟೆ ಹೊಡೆಯುತ್ತಿದ್ದರು. ನಾವು ಹೋದುದೇಕೆಂಬುದು ಅವರಲ್ಲಿ ಯಾರಿಗೂ ತಿಳಿಯದು. ಒಬ್ಬರು ನಮ್ಮನ್ನು ಕಂಡು "ನಿಮಗೆ ಯಾರು ಬೇಕಾಗಿತ್ತು ?" ಎಂದು ಕೇಳಿದರು.

ನಾವು—"ಮೇಜರ್ ಎಂ. ಎಂ. ರವಿಯವರನ್ನು ಕಾಣಬೇಕಾಗಿತ್ತು" ಎಂದು ಹೇಳಿದೆವು.

ಆರಾಮಕುರ್ಚಿಯಲ್ಲಿ ಕುಳಿತಿದ್ದ ಶ್ರೀ ರವಿಯವರು ಆ ಕೂಡಲೇ ಮೇಲೆದ್ದು ನಮಗೆ ವಂದಿಸಿ, ನಮಗೂ ಕುಳಿತುಕೊಳ್ಳಲು ಹೇಳಿದರು. ಅವರ ಕಾಲುಗಳಿಗೆ ಗಾಯಗಳಾಗಿದ್ದುದರಿಂದ ಸಲೀಸಾಗಿ ಓಡಾಡಲು ಸಾಧ್ಯವಾಗುತ್ತಿರಲಿಲ್ಲ. ಆದರೂ ನಮಗಾಗಿ ಸ್ವಲ್ಪ ದೂರ ನಡೆದು, ವರಾಂಡದಲ್ಲಿ ಕುಳಿತರು. ನಾವು ಅವರ ಬಳಿಯಲ್ಲಿಯೇ ಕುಳಿತೆವು. ಮೊದಲು ಯೋಗಕ್ಷೇಮದ ಮಾತುಗಳಾದುವು. ಅನಂತರ ಅವರು ತಮ್ಮ ವಿಚಾರವನ್ನು ಸಂಕ್ಷಿಪ್ತವಾಗಿ ತಿಳಿಸಿದರು.

ಶ್ರೀ ರವಿಯವರು ಕೊಡಗು ಜಿಲ್ಲೆಯ ಕಾಕೋಟುಪರಂಬು ಗ್ರಾಮಕ್ಕೆ ಸೇರಿದವರು. ಇವರ ತಂದೆ ಮಾಂಡೆತಿರ ಮುಂದಪ್ಪನವರು. ಶ್ರೀ ರವಿಯವರು ತಮ್ಮ ಬಾಲ್ಯ ಶಿಕ್ಷಣವನ್ನು ಕೊಡಗಿನಲ್ಲಿಯೇ ಪೂರೈಸಿ, ಕಾಲೇಜು ಶಿಕ್ಷಣಕ್ಕಾಗಿ ಮೈಸೂರಿಗೆ ಬಂದು, ಅಲ್ಲಿಯ ಸೆಂಟ್ ಫಿಲೋಮಿನಾ ಕಾಲೇಜಿನಲ್ಲಿ ಓದಿ ಪದವೀಧರರಾದರು.

"ಈ ಕಾಲೇಜಿನಲ್ಲಿ ಸಸ್ಯಶಾಸ್ತ್ರದ ಪ್ರಾಧ್ಯಾಪಕರಾಗಿರುವ ನನ್ನ ಸೋದರ ಶ್ರೀ ಬಿ. ಎನ್. ನಾರಾಯಣರಾಯರ ಪರಿಚಯವಿದೆಯೇ ?" ಎಂದು ನಾನು ಕೇಳಿದೆ.

ಪರಿಚಯವುಂಟೆಂದು ಅವರು ತಿಳಿಸಿ, ತಮ್ಮ ಕಾಲೇಜು ದಿನಗಳ ಅನೇಕ ಸಂಗತಿಗಳನ್ನು ನೆನಪು ಮಾಡಿಕೊಂಡರು.

೧೯೬೦ರಲ್ಲಿ ಇವರು ಸೈನ್ಯಕ್ಕೆ ಸೇರಿದರು. ಇತ್ತೀಚಿನ ಭಾರತ ಪಾಕ್ ಯುದ್ಧದಲ್ಲಿ ಸಾಹಸದಿಂದ ಹೋರಾಡಿದ ಇವರಿಗೆ ರಾಷ್ಟ್ರಾಧ್ಯಕ್ಷರು 'ವೀರಚಕ್ರ' ಪ್ರಶಸ್ತಿಯನ್ನು ನೀಡಿ ಗೌರವಿಸಿದ್ದಾರೆ. ಇವರು ಸ್ವಗ್ರಾಮಕ್ಕೆ ಹೋದಾಗ ಅಲ್ಲಿಯ ಜನಕ್ಕೆ ಆದ ಸಂತೋಷ ಹೇಳತೀರದು.

ಯುದ್ಧದ ಸಮಯದಲ್ಲಿ ಇವರ ಕಾಲಿಗೆ ತೀವ್ರವಾದ ಗುಂಡಿನೇಟು ಬಿತ್ತು. ಕೂಡಲೇ ಇವರನ್ನು ಬರ್ೈಲಿಯ ಮಿಲಿಟರಿ ಆಸ್ಪತ್ರೆಗೆ ಸೇರಿಸಲಾಯಿತು. ೧೯೭೨ರ ಮಾರ್ಚ್ ಇಪ್ಪತ್ತನಾಲ್ಕರಂದು ಬೆಂಗಳೂರಿನ ರಾಜಭವನದಲ್ಲಿ ರಾಜ್ಯಪಾಲ ಶ್ರೀ ಮೋಹನ್‌ಲಾಲ್ ಸುಖಾಡಿಯಾರವರ ಸಮ್ಮುಖದಲ್ಲಿ ಒಂದು ಸನ್ಮಾನ

ಸಭೆ ನಡೆಯಿತು. ಆ ಸಮಾರಂಭದಲ್ಲಿ ಶ್ರೀ ರವಿಯವರೂ ಹಾಜರಾಗಿದ್ದರು.

ಆಗ ಕರ್ನಲ್ ಎ. ಎಂ. ಕಡಕೋಳ್‌ರವರು ಪ್ರಶಸ್ತಿ ಪತ್ರವನ್ನು ಓದಿದರು.

"ಬಾಂಗ್ಲಾದೇಶದಲ್ಲಿ ಮೇಜರ್ ಎಂ. ಎಂ. ರವಿಯವರು ಒಂದು ಪಡೆಯ ನಾಯಕರಾಗಿದ್ದರು. ಅಖೌರ ವಲಯದಲ್ಲಿ ಶತ್ರುಗಳ ಮೇಲೆ ದಾಳಿಮಾಡಲು ಇವರಿಗೆ ಆಜ್ಞೆಮಾಡಲಾಯಿತು. ಡಿಸೆಂಬರ್ ನಾಲ್ಕರಂದು ರಾತ್ರಿ ೧೧ ಘಂಟೆಗೆ ಗುಂಡಿನ ಮಳೆಗರೆಯುವ ಸಿದ್ಧತೆ ನಡೆಸಿದರು. ದಾಳಿಯೂ ಆರಂಭವಾಯಿತು. ಶತ್ರುಗಳ ಬಲವೂ ಜೋರಾಗಿಯೇ ಇತ್ತು. ಗೆಲ್ಲುವುದು ಸುಲಭ ಸಾಧ್ಯವಾಗಿರಲಿಲ್ಲ. ಹೀಗಾಗಿ ಸುಮಾರು ಮೂವತ್ತು ಮಂದಿ ಯೋಧರು ಗಾಯಗೊಂಡರು. ಹಲವರು ವೀರಮರಣವನ್ನಪ್ಪಿದರು. ಈ ಘರ್ಷಣೆಯಲ್ಲಿ ಶ್ರೀ ರವಿಯವರ ಮೊಣಕಾಲಿಗೆ ಗುಂಡಿನೇಟು ಬಿತ್ತು. ಆಗ ಇವರ ದಳದಲ್ಲಿ ಕೇವಲ ಐವತ್ತು ಮಂದಿ ಮಾತ್ರ ಉಳಿದಿದ್ದರು. ಆದರೂ ಧೃತಿಗೆಡಲಿಲ್ಲ. ಹಾಗೂ ಹೀಗೂ ಸಾಹಸ ಮಾಡಿ ಹಿಂದಿನಿಂದ ಬಂದು ಶತ್ರುಗಳನ್ನು ಮುತ್ತಿದರು. ಇದನ್ನು ಕಂಡು ಶತ್ರುಗಳು ಬೆರಗಾದರು. ಈ ಘರ್ಷಣೆಯಲ್ಲಿ ಹದಿನೆಂಟು ಮಂದಿ ಪಾಕ್ ಸೈನಿಕರು ಮಡಿದರು. ಉಳಿದವರು ಪಲಾಯನ ಮಾಡಿದರು. ಶತ್ರುಗಳ ಟ್ಯಾಂಕ್ ಒಂದನ್ನು ಸುರಕ್ಷಿತವಾಗಿ ಸಾಗಿಸಿಕೊಂಡು ಬಂದರು. ಈ ಹೋರಾಟದಲ್ಲಿ ರವಿಯವರು ಸ್ಫೂರ್ತಿಯುತ ನಾಯಕತ್ವವನ್ನು ವಹಿಸಿದ್ದರು. ಕಾರ್ಯತತ್ಪರರಾಗಿದ್ದು, ಬುದ್ಧಿಚಾತುರ್ಯವನ್ನು ವ್ಯಕ್ತಪಡಿಸಿದರು. ಇದಕ್ಕಾಗಿ ಇವರಿಗೆ 'ವೀರಚಕ್ರ' ಪ್ರಶಸ್ತಿ ದೊರೆತಿದೆ."

ಅನಂತರ ರಾಜ್ಯಪಾಲರು ಐದು ಸಾವಿರ ರೂ.ಗಳ ಚೆಕ್ಕನ್ನು ಶ್ರೀ ರವಿಯವರಿಗೆ ಕೊಟ್ಟರು. ರಾಜ್ಯಪಾಲರ ಸಮ್ಮುಖದಲ್ಲಿಯೇ ಎಲ್ಲ ಅತಿಥಿಗಳಿಗೂ ಉಪಾಹಾರವಾಯಿತು.

ಮೇಜರ್ ರವಿಯವರ ಉನ್ನತ ಸೇವೆ ಎಂದೆಂದಿಗೂ ಆದರ್ಶವಾಗಿದೆ. ಇಂತಹ ವೀರ ಕನ್ನಡಿಗರಿಗೆ ಎಂದೆಂದಿಗೂ ಜಯಲಭಿಸುತ್ತಿರಲಿ.

●

ಫ್ಲೈಯಿಂಗ್ ಆಫೀಸರ್ ಬಲ್ಲಚಂದ್ರ ಚೆಂಗಪ್ಪ ಕರುಂಬಯ್ಯ

ಕೊಡಗು ಜಿಲ್ಲೆ ಕರುಣಿಸಿರುವ ಮತ್ತೊಬ್ಬ ವೀರರೇ ಶ್ರೀ ಬಿ. ಸಿ. ಕರುಂಬಯ್ಯನವರು. ಇವರು ಕಲ್ಕತ್ತೆಯಲ್ಲಿ ವ್ಯಾಸಂಗ ಮಾಡಿ, ನ್ಯಾಷನಲ್ ಡಿಫೆನ್ಸ್ ಅಕ್ಯಾಡೆಮಿಯಲ್ಲಿ ಹೆಚ್ಚಿನ ಶಿಕ್ಷಣ ಪಡೆದರು, ೧೯೬೭ರಲ್ಲಿ ಇವರು ಕಮಿಷನ್ಡ್ ಅಧಿಕಾರಿ

ಗಳಾಗಿ ನೇಮಕಗೊಂಡರು. ಇವರ ತಂದೆ ಶ್ರೀ ಬಿ. ಕೆ. ಚಂಗಪ್ಪನವರೂ ವೀರ ಯೋಧರೇ. ಇವರು ಮೊದಲನೆಯ ಮಹಾಯುದ್ಧದಲ್ಲಿ ಭಾಗವಹಿಸಿ ಅನೇಕ ಪ್ರಶಸ್ತಿಗಳನ್ನು ಪಡೆದಿದ್ದರು. ಶ್ರೀ ಕರುಂಬಯ್ಯನವರ ಸಹೋದರರೊಬ್ಬರು ಈಗಲೂ ಭೂಸೇನೆಯಲ್ಲಿ ಸೇವೆ ಸಲ್ಲಿಸುತ್ತಿರುವರು. ಇನ್ನೊಬ್ಬ ಸಹೋದರ ನೌಕಾದಳದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಶ್ರೀ ಕರುಂಬಯ್ಯನವರ ತಂದೆ ಶ್ರೀ ಬಿ. ಕೆ. ಚೆಂಗಪ್ಪನವರು ೧೯೩೩ರಲ್ಲಿ ಮಲಯಾಕ್ಕೆ ಹೋಗಿ ಅಲ್ಲಿಯ ಭಾರತೀಯರಲ್ಲಿ ಸಂಘಟನಾ ಕಾರ್ಯವನ್ನು ಕೈಗೊಂಡಿದ್ದರು. ೧೯೩೭ರಲ್ಲಿ ಪಂಡಿತ್ ಜವಹರಲಾಲ್ ನೆಹರೂರವರು ತಮ್ಮ ಪುತ್ರಿ ಶ್ರೀಮತಿ ಇಂದಿರಾಗಾಂಧಿಯವರೊಡನೆ ಕೌಲಾಲಂಪುರಕ್ಕೆ ಭೇಟಿಕೊಟ್ಟಾಗ ಶ್ರೀ ಬಿ.ಕೆ. ಚೆಂಗಪ್ಪನವರ ಅತಿಥಿಗಳಾಗಿದ್ದರು. ಶ್ರೀ ಬಿ.ಕೆ. ಚೆಂಗಪ್ಪನವರಿಗೆ ಒಟ್ಟು ಹದಿನಾಲ್ಕುಮಂದಿ ಮಕ್ಕಳಿದ್ದಾರೆ. ಅವರಲ್ಲಿ ಹತ್ತುಮಂದಿ ಗಂಡುಮಕ್ಕಳು: ನಾಲ್ಕು ಮಂದಿ ಹೆಣ್ಣು ಮಕ್ಕಳು. ಶ್ರೀ ಬಿ. ಸಿ. ಕರುಂಬಯ್ಯನವರು ಒಟ್ಟು ಮಕ್ಕಳಲ್ಲಿ ಎಂಟನೆಯವರು ; ಗಂಡು ಮಕ್ಕಳಲ್ಲಿ ಐದನೆಯವರು. ಶ್ರೀ ಚೆಂಗಪ್ಪ ದಂಪತಿಗಳು ಇಂದಿಗೂ ದೃಢಕಾಯರಾಗಿಯೂ ಆರೋಗ್ಯವಾಗಿಯೂ ಇದ್ದಾರೆ.

ಶ್ರೀ ಬಿ. ಸಿ. ಕರುಂಬಯ್ಯನವರು ಶತ್ರು ವಿಮಾನಗಳನ್ನು ಹೊಡೆದುರುಳಿಸಿದ ಕಾರ್ಯವನ್ನು ಗುರ್ತಿಸಿ ರಾಷ್ಟ್ರಪತಿಯವರು ‘ ವೀರಚಕ್ರ ’ ಪ್ರಶಸ್ತಿಯನ್ನಿತ್ತು ಗೌರವಿಸಿದ್ದಾರೆ.

ಶ್ರೀ ಕರುಂಬಯ್ಯನವರು ಆಗಸ್ಟ್ ೧೨ರಂದೇ ಜನಿಸಿದರು. ಆದರೆ ಸ್ವಾತಂತ್ರ್ಯ ದಿನಾಚರಣೆಯ ದಿನಕ್ಕೆ ಸರಿಯಾಗಿ ಮೂರು ವರ್ಷಗಳ ಮುಂಚೆ ಅಷ್ಟೆ. ಫ್ಲೈಟ್ ಲೆಫ್ಟಿನೆಂಟ್ ಎಂ. ಎ. ಗಣಪತಿಯವರೂ, ಶ್ರೀ ಕರುಂಬಯ್ಯನವರೂ ಒಂದೇ ಗ್ರಾಮಕ್ಕೆ ಸೇರಿದವರು. ಅದೇ ಕಡಂಗ ಮರೂರು ಗ್ರಾಮ.

೧೯೭೨ರ ಮಾರ್ಚ್ ೨೮ರಂದು ರಾಜ್ಯಪಾಲ ಶ್ರೀ ಮೋಹನ್‌ಲಾಲ್ ಸುಖಾಡಿಯಾರವರು ಏರ್ಪಡಿಸಿದ್ದ ಸತ್ಕಾರ ಕೂಟದಲ್ಲಿ ಶ್ರೀ ಕರುಂಬಯ್ಯನವರು ತಮ್ಮ ತಂದೆತಾಯಿಗಳೊಡನೆ ಹಾಜರಿದ್ದರು. ಆ ಸಮಾರಂಭದಲ್ಲಿ ಕರ್ನಲ್‌ಕಡಕೋಳ್‌ರವರು ಓದಿದ ಪ್ರಶಸ್ತಿಪತ್ರವಿದು.

"ಫ್ಲೈಯಿಂಗ್ ಆಫೀಸರ್ ಬಲ್ಲಚಂದ್ರ ಚೆಂಗಪ್ಪ ಕರುಂಬಯ್ಯನವರು (ವಿಮಾನದಳ) ಪಂಜಾಬಿನ ಮುಂಚೂಣಿ ವಾಯು ಪ್ರದೇಶದಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದರು. ೧೯೭೧ರ ಡಿಸೆಂಬರ್ ೪ ರಂದು ಇವರು ಎರಡು ವಿಮಾನಗಳ ತಂಡದಲ್ಲಿ ಸೇರಿದ್ದರು. ವಸ್ತುಗಳ ಸಾರಿಗೆಯ ಭಾರಿ ವಿಮಾನವೊಂದನ್ನು ಇವರು ನಾಶ ಪಡಿಸಿದರಲ್ಲದೆ ವಿಮಾನ ನಿಲ್ದಾಣಕ್ಕೂ ಸಾಕಷ್ಟು ಜಖಂ ಮಾಡಿದರು ಡಿಸೆಂಬರ್ ಆರರಂದು ನಾಲ್ಕು ವಿಮಾನಗಳ ಒಂದು ದಳದಲ್ಲಿ ಭಾಗವಹಿಸಿ ಶತ್ರುವಲಯದೊಳಕ್ಕೆ ನುಗ್ಗಿ ಮುತ್ತಿಗೆ ಹಾಕಿದರು. ಅಲ್ಲಿ ಯಂತ್ರಸ್ಥಾಪನೆಗಳನ್ನು ನಾಶಗೊಳಿ

ಗೊಳಿಸಿದರು. ಈ ಘರ್ಷಣೆಯಲ್ಲಿ ಪೆಟ್ಟು ಬಿದ್ದಿತಾದರೂ ಶ್ರೀ ಕರುಂಬಯ್ಯನವರು ಅದನ್ನು ಲೆಕ್ಕಿಸದೆ ತಮ್ಮ ವಿಮಾನವನ್ನು ನೆಲೆಗೆ ಸುರಕ್ಷಿತವಾಗಿ ತಲುಪಿಸಿದರು. ಡಿಸೆಂಬರ್ ಹನ್ನೊಂದರಂದು ಎರಡು ಸೇಬರ್‌ಜೆಟ್‌ಗಳನ್ನು ಹೊಡೆದು ಕೆಡವಿದರು. ಈ ಸಲ ಅವರ ವಿಮಾನಕ್ಕೆ ಪೆಟ್ಟು ಬಿದ್ದಿತು. ಆದರೂ ಹೆದರದೆ ತಮ್ಮ ನೆಲೆಗೆ ಹಿಂದಿರುಗಿಸಿದರು. ಇವರು ತಮ್ಮ ಕೈಕೆಳಗಿನ ಯುವಕ ಸೈನಿಕರಿಗೆ ಸ್ಫೂರ್ತಿ ನೀಡಿ ಹುರಿದುಂಬಿಸಿದರು. ಇವರ ದೃಢನಿರ್ಧಾರ, ಸ್ವಾರ್ಥಸೇವೆ, ಕಾರ್ಯತತ್ಪರತೆ ಇವೇ ಮೊದಲಾದ ಸದ್ಗುಣಗಳಿಗಾಗಿ ಇವರಿಗೆ 'ವೀರಚಕ್ರ' ಪ್ರಶಸ್ತಿಯನ್ನು ನೀಡಲಾಗಿದೆ."

ಫ್ಲೈಟ್ ಲೆಫ್ಟಿನೆಂಟ್ ಎಸ್. ಆರ್. ಜಯೇಂದ್ರ

ಅಮಾತ್ಯ ಶಿರೋಮಣಿ ತಂಬೂಚೆಟ್ಟಿಯವರ ಹೆಸರನ್ನು ಮೈಸೂರಿನ ಜನ ರೆಲ್ಲರೂ ಬಲ್ಲರು. ಇವರು ಮೈಸೂರಿನ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರಿಗೆ ಪ್ರೈವೇಟ್ ಸೆಕ್ರೆಟರಿಗಳಾಗಿದ್ದರು. ಮೇಜರ್ ಎಂ. ಸುಕೃತರಾಜ್ ರವರು ತಂಬೂ ಚೆಟ್ಟಿಯವರ ಮನೆತನಕ್ಕೆ ಸೇರಿದವರು. ಇವರ ಪುತ್ರರೇ ಫ್ಲೈಟ್ ಲೆಫ್ಟಿನೆಂಟ್ ಎಸ್. ಆರ್. ಜಯೇಂದ್ರರವರು.

ಇವರ ವಿದ್ಯಾಭ್ಯಾಸವೆಲ್ಲ ಬೆಂಗಳೂರಿನಲ್ಲಿಯೇ ಆಯಿತು. ಇವರು ಬೆಂಗ ಳೂರಿನ ಸೆಂಟ್ ಜೋಸೆಫ್ ಕಾಲೇಜಿನ ಪಧವೀಧರರು. ೧೯೬೦ರಲ್ಲಿ ಇವರು ಖಡಕ ವಾಸ್ಲಾದಲ್ಲಿರುವ ನ್ಯಾಷನಲ್ ಡಿಫೆನ್ಸ್ ಅಕ್ಯಾಡೆಮಿಗೆ ಸೇರಿ ಹೆಚ್ಚಿನ ಶಿಕ್ಷಣ ಪಡೆ ದರು. ಅನಂತರ ಭಾರತದ ವಾಯುದಳದಲ್ಲಿ ವಿಶೇಷ ಶಿಕ್ಷಣ ಪಡೆದ ಇವರು ಏಪ್ರಿಲ್ ೧೯೬೪ರಲ್ಲಿ ಕಮಿಷನ್ಡ್ ಆಫೀಸರ್ ಆದರು. ಅನಂತರ ಇವರನ್ನು ವಿಶೇಷ ವ್ಯಾಸಂಗಕ್ಕಾಗಿ ಅಮೆರಿಕಕ್ಕೆ ಕಳುಹಿಸಲಾಯಿತು.

ಇತ್ತೀಚಿನ ಯುದ್ಧದಲ್ಲಿ ತಮ್ಮ ಜಾಣ್ಮೆಯನ್ನೂ ಸ್ಥೈರ್ಯವನ್ನೂ ಪ್ರದರ್ಶಿಸಿ 'ವೀರಚಕ್ರ' ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಕೇವಲ ಇಪ್ಪತ್ತೇಳು ವರ್ಷ ವಯಸ್ಸಿನ ಇವರು ಈಗಾಗಲೇ 'ವೀರಚಕ್ರ' ಪ್ರಶಸ್ತಿಯನ್ನು ಗಳಿಸಿರುವುದು ಅವರ ಉಜ್ವಲ ಭವಿಷ್ಯದ ಕುರುಹಾಗಿದೆ.

ಫ್ಲೈಯಿಂಗ್ ಆಫೀಸರ್ ರಮೇಶ್ ಬರ್ಟನ್

ಡಿಸೆಂಬರ್ ೧೯೭೧ರಲ್ಲಿ ನಡೆದ ಭಾರತ ಪಾಕ್ ಯುದ್ಧದಲ್ಲಿ ಅಪ್ರತಿಮ ಸಾಹಸವನ್ನು ತೋರಿ, ಹಿರಿಯ ಸೇನಾಧಿಪತಿಗಳ ಮೆಚ್ಚುಗೆ ಪಡೆದ ವೀರಾಗ್ರಣಿಯೆಂದರೆ ಫ್ಲೈಯಿಂಗ್ ಆಫೀಸರ್ ರಮೇಶ ಬರ್ಟನ್‌ರವರು.

ಬೆಂಗಳೂರಿನಲ್ಲಿ ಸಬ್‌ಪೋಸ್ಟ್‌ಮಾಸ್ಟರ್ ಆಗಿದ್ದ ದಿವಂಗತ ಕೆ. ಬರ್ಟನ್‌ರವರೇ ಈ ವೀರಾಗ್ರಣಿಯ ತಂದೆ. ಇವರು ಬಹಳ ವರ್ಷಗಳ ಹಿಂದೆಯೇ ಬೆಂಗಳೂರಿಗೆ ಬಂದು ನೆಲೆಸಿದರು, ಶ್ರೀ ರಮೇಶ್ ಬರ್ಟನ್‌ರವರ ವಿದ್ಯಾಭ್ಯಾಸವೆಲ್ಲ ಬೆಂಗಳೂರಿನಲ್ಲಿಯೇ ಅಂದರೆ ಸೈಂಟ್ ಜರ್ಮೇನ್ಸ್ ಹೈಸ್ಕೂಲಿನಲ್ಲಿ ನಡೆಯಿತು. ಇವರು ಕಾಮರ್ಸ್ ಕಾಲೇಜಿನ ವಿದ್ಯಾರ್ಥಿಯೂ ಹೌದು.

ಬಾಲ್ಯದಿಂದಲೂ ಇವರಿಗೆ ವಿಮಾನಗಳ ಬಗ್ಗೆ ಹೆಚ್ಚಿನ ವಿಷಯಗಳನ್ನು ಅರಿಯಬೇಕೆಂಬ ಕುತೂಹಲ ಮತ್ತು ಆಸಕ್ತಿ. ವಿಮಾನದಲ್ಲಿ ಹಾರಾಟವೆಂದರೆ ಮತ್ತೂ ಉತ್ಸಾಹ. ಆ ದಿಶೆಯಲ್ಲಿಯೇ ಮುಂದುವರಿಯಲು ನಿರ್ಧರಿಸಿದ ಇವರು ಜಕ್ಕೂರಿನಲ್ಲಿ ವೈಮಾನಿಕ ಚಾಲನೆಯ ಶಿಕ್ಷಣ ಪಡೆದರು. ೧೯೬೭ರಲ್ಲಿ ಇವರು ಭಾರತ ವಿಮಾನ ಪಡೆಯಲ್ಲಿ ಕಮಿಷನ್ಡ್ ಆಫೀಸರ್ ಆದರು.

೧೯೬೧ರಲ್ಲಿ ಇಂಗ್ಲೆಂಡಿನ ಎಲಿಜಬೆತ್‌ರಾಣಿಯವರು ಭಾರತಕ್ಕೆ ಭೇಟಿ ನೀಡಿದರಷ್ಟೆ. ಆ ಸಂದರ್ಭದಲ್ಲಿ ದೆಹಲಿಯಲ್ಲಿ ಗಣರಾಜ್ಯ ದಿನಾಚರಣೆಯ ಅಂಗವಾಗಿ ಮೈಸೂರು ರಾಜ್ಯದ ವಿದ್ಯಾರ್ಥಿಗಳು ವಿಮಾನದಳದ ಪೆರೇಡ್ ನಡೆಸಿದರು. ಆಗ ಶ್ರೀ ರಮೇಶ್ ಬರ್ಟನ್‌ರವರು ಎನ್. ಸಿ. ಸಿ. ದಳದಲ್ಲಿ ಸೇರಿಕೊಂಡಿದ್ದರು. ಪೆರೇಡ್‌ನಲ್ಲಿ ಶ್ರೀ ರಮೇಶ್‌ರವರೂ ಸಹ ನಾನಾವಿಧವಾದ ಚಮತ್ಕಾರಗಳನ್ನು ಪ್ರದರ್ಶಿಸಿ ಅಂದಿನ ಅತಿಥಿಗಳಿಂದಲೂ, ಪ್ರೇಕ್ಷಕರಿಂದಲೂ ಮೆಚ್ಚುಗೆಯನ್ನು ಪಡೆದರು.

ತಮ್ಮ ಮೂವತ್ತನೆಯ ವಯಸ್ಸಿನಲ್ಲಿ ಇವರು ' ವೀರಚಕ್ರ ' ಪ್ರಶಸ್ತಿಯನ್ನು ಪಡೆದಿರುವರು. ಇವರ ಶ್ರೇಯೋಭಿವೃದ್ಧಿಯನ್ನು ಕೇಳಿ, ಇವರ ತಾಯಿ, ಅಜ್ಜಿ, ಮೂವರು ಸೋದರಿಯರು ಹಾಗೂ ಇತರ ಬಂಧು ಬಳಗದ ಜನರಿಗಾದ ಆನಂದ ಅಷ್ಟಿಷ್ಟಲ್ಲ.

ಮೇಜರ್ ಕೆ. ಪಿ. ನಂಜಪ್ಪ

ಭಾರತ-ಪಾಕ್ ಸಮರದಲ್ಲಿ ಹೋರಾಡಿ ಸಾಹಸವನ್ನು ಪ್ರದರ್ಶಿಸಿ 'ವೀರಚಕ್ರ' ಪ್ರಶಸ್ತಿಯನ್ನು ಪಡೆದಿರುವ ಯೋಧರಲ್ಲಿ ಮೇಜರ್ ಕೆ.ಪಿ. ನಂಜಪ್ಪನವರೂ ಒಬ್ಬರು.

ಇವರೂ ಸಹ ಕೊಡಗಿನ ಜಿಲ್ಲೆಯವರೇ. ೧೯೪೬ರ ಸೆಪ್ಟೆಂಬರ್ ಎರಡರಂದು ಇವರು ಜನಿಸಿದರು. ಕೊಡಗಿನ ಶ್ರೀ ಕೆ. ಬಿ. ಪೊನ್ನಪ್ಪನವರು ಇವರ ತಂದೆ. ಶ್ರೀಮತಿ ಪೊನ್ನಮ್ಮನವರು ಇವರ ತಾಯಿ, ಈ ದಂಪತಿಗಳು ಈಗ ಬೆಂಗಳೂರಿನಲ್ಲಿಯೇ ನೆಲೆಸಿರುವರು.

ಶ್ರೀ ಕೆ. ಪಿ. ನಂಜಪ್ಪನವರು ತಮ್ಮ ವಿದ್ಯಾರ್ಥಿದೆಸೆಯಲ್ಲಿಯೇ ಕೊಡಗಿನ ಎನ್. ಸಿ. ಸಿ.ಯ ಏಳನೆಯ ಬೆಟಾಲಿಯನ್ನಿನಲ್ಲಿ ಶ್ರೇಷ್ಠ ಕೇಡೆಟ್ ಎಂದು ಪರಿಗಣಿಸಲ್ಪಟ್ಟು, 'ಡೈರೆಕ್ಟರ್ಸ್ ಕೇನ್ ಅವಾರ್ಡ್' ಗೌರವವನ್ನು ಗಳಿಸಿದ್ದರು. ಮಡಿಕೇರಿಯಲ್ಲಿರುವ ಸೆಂಟ್ರಲ್ ಹೈಸ್ಕೂಲ್‌ನಲ್ಲಿ ಎಸ್. ಎಸ್. ಎಲ್. ಸಿ. ಪರೀಕ್ಷೆಯನ್ನು ಮುಗಿಸಿಕೊಂಡ ಇವರು ತಮ್ಮ ಶಿಕ್ಷಣವನ್ನು ಪುತ್ತೂರಿನಲ್ಲಿರುವ ಸೆಂಟ್ ಫಿಲೋಮಿನಾ ಕಾಲೇಜಿನಲ್ಲಿ ಮುಂದುವರೆಸಿದರು.

೧೯೬೬ನಲ್ಲಿ ಇವರು ಕುಮಾನ್ ರೆಜಿಮೆಂಟ್‌ನಲ್ಲಿ ಕಮಿಷನ್ಡ್ ಆಫೀಸರ್ ಆಗಿ ನೇಮಕಗೊಂಡರು. ಮದ್ರಾಸ್‌ನಲ್ಲಿ ಹತ್ತು ತಿಂಗಳ ಶಿಕ್ಷಣ ಪಡೆದು, ೧೯೬೭ರ ಏಪ್ರಿಲ್ ೨೩ರಂದು ಸೆಕೆಂಡ್ ಲೆಫ್ಟಿನೆಂಟ್ ಆಗಿ ಸೇರಿ ನಂ. ೧೨ ಕುಮಾನ್ ರೆಜಿಮೆಂಟ್‌ನಲ್ಲಿ ಕಮಿಷನ್ ಪಡೆದರು.

೧೯೬೭ರ ಏಪ್ರಿಲ್‌ನಿಂದ ೧೯೬೯ರ ನವೆಂಬರ್‌ವರೆಗೆ ಜಮ್ಮು-ಕಾಶ್ಮೀರ್ ವಲಯಗಳಲ್ಲಿಯೂ. ೧೯೬೯ರ ಡಿಸೆಂಬರ್‌ನಿಂದ ೧೯೭೧ರ ಜೂನ್‌ವರೆಗೆ ನೇಫಾದಲ್ಲಿಯೂ ೧೯೭೧ರ ಜೂನ್‌ನಿಂದ ತ್ರಿಪುರ ಮತ್ತು ಬಂಗ್ಲಾದೇಶಗಳಲ್ಲಿಯೂ ಇವರು ಸೇವೆ ಸಲ್ಲಿಸಿದರು. ಈಗ ಇವರು ಅಸ್ಸಾಂ ಪ್ರಾಂತದಲ್ಲಿ ಕಾರ್ಯನಿರ್ವಹಣೆ ಮಾಡುತ್ತಿದ್ದಾರೆ. ೧೯೭೦ರ ಅಕ್ಟೋಬರ್ ೨೭ ರಂದು ರಾಷ್ಟ್ರಪತಿಗಳಿಂದ ಇವರಿಗೆ ನಂ. ೧೨ ಕುಮಾನ್ ರೆಜಿಮೆಂಟಿನ ಪ್ರತಿನಿಧಿಯಾಗಿ 'ರೆಜಿಮೆಂಟಲ್ ಕಲರ್ಸ್' ದೊರಕಿತು.

ಮೊನ್ನಿನ ಸಮರದಲ್ಲಿ ಅಖೌರ ಕದನ ಅತ್ಯಂತ ಪ್ರಮುಖವಾದುದು. ಶತ್ರುಗಳು ನಿರಪರಾಧಿಗಳಾದ ಪ್ರಜೆಗಳ ಮೇಲೆ ಗುಂಡಿನ ದಾಳಿ ನಡೆಸಿರುವುದನ್ನು ತಿಳಿದೊಡನೆಯೇ ಭಾರತದ ಸೇನಾಧಿಕಾರಿಗಳು ಮೊದಲು ಅಗರ್ತಲದಲ್ಲಿ ಸೈನ್ಯವನ್ನು ಜಮಾಯಿಸ ತೊಡಗಿದರು. ಶತ್ರುಗಳನ್ನು ಹಿಮ್ಮೆಟ್ಟಿಸುವ ಸಲುವಾಗಿ ಅಲ್ಲಿಂದ ಸೇನಾಪಡೆಗಳನ್ನು ವಿವಿಧ ದಿಕ್ಕುಗಳಿಗೆ ಕಳುಹಿಸಿದರು. ಹೀಗೆ ಹೊರಟ ಸೈನಿಕರ ಪಡೆಯೊಂದಕ್ಕೆ ಕ್ಯಾ|| ಕೆ. ಪಿ. ನಂಜಪ್ಪನವರು ನಾಯಕರಾಗಿದ್ದರು. ಇವರ ನೇತೃತ್ವದಲ್ಲಿಯೇ ಪಡೆಯು ಮುನ್ನಡೆಯಿತು.

ಶತ್ರು ಶಿಬಿರಗಳ ಹಿಂಬದಿಯಲ್ಲಿ ಹೋಗಿ, ಬೀಳುತ್ತಿದ್ದ ಬಾಂಬ್‌ಗಳನ್ನೂ ಲೆಕ್ಕಿಸದೆ, ಎದುರಾಗಿ ಬರುತ್ತಿದ್ದ ಗುಂಡಿನ ಮಳೆಗೂ ಹೆದರದೆ ಮುಂಜಾನೆ ಈ ಸೇನೆಯು ಹೋರಾಟ ನಡೆಸಿತು. ಇವರಿದ್ದ ಜಾಗವೆಲ್ಲವೂ ಬಾಂಬುಗಳಿಂದ ಆವೃತ್ತವಾಗಿತ್ತು. ಆದರೂ ಶ್ರೀ ನಂಜಪ್ಪನವರು ಎದೆಗುಂದಲಿಲ್ಲ.

ಅನಂತರ ಅಗರ್ತಲ-ಅಖೌರ ರಸ್ತೆಯಲ್ಲಿ ಮುರಿದು ಬಿದ್ದಿದ್ದ ಸೇತುವೆಯೊಂದನ್ನು ವಶಪಡಿಸಿಕೊಳ್ಳುವ ಕಾರ್ಯಕ್ಕೆ ಇವರನ್ನು ನೇಮಿಸಲಾಯಿತು. ಈ ಸೇತುವೆಯ ದಿಗ್ಬಂಧನಕ್ಕಾಗಿ ನೂರಿಪ್ಪತ್ತು ಮಂದಿ ಸೈನಿಕರನ್ನು ಕೊಡಲಾಗಿತ್ತು. ಇವರು ಈ ಕಾರ್ಯವನ್ನು ಕೈಗೊಳ್ಳಬೇಕಾಗಿದ್ದ ವೇಳೆಯಾದರೂ ಎಂಥದ್ದು ? ನಡುರಾತ್ರೆಯ ಎರಡು ಘಂಟೆಯ ವೇಳೆ. ಇವರು ನಿಶಾಚರರಂತೆ ಕೆಲಸ ಮಾಡಬೇಕಾಗಿತ್ತು. ನದಿಯನ್ನು ದಾಟಬೇಕಾಗಿದ್ದುದು ಮೊದಲ ಕೆಲಸ. ಅನಂತರ ಸೇತುವೆಯ ದಿಗ್ಬಂಧನ. ಶತ್ರುಗಳ ಷೆಲ್ ದಾಳಿಯಾದರೋ ಬಿರುಸಾಗಿಯೇ ಸಾಗಿತ್ತು. ತತ್ಪರಿಣಾಮವಾಗಿ ಅನೇಕ ಮಂದಿಗೆ ಗಾಯಗಳಾದುವು. ಆ ಗಾಯಾಳುಗಳನ್ನು ಹೊತ್ತು ತರಬೇಕಾದ ಪ್ರಸಂಗವೂ ಒದಗಿತು. ಅಂಥ ಕ್ಲಿಷ್ಟ ಪರಿಸ್ಥಿತಿಯಲ್ಲಿ ಆ ಕೆಲಸವನ್ನು ಸೇನಾಧಿಪತಿಗಳು ರಿಸರ್ವ್ ಆಗಿದ್ದ ಶ್ರೀ ನಂಜಪ್ಪನವರಿಗೆ ವಹಿಸಿದರು.

ಬೇರೆ ಬೇರೆ ದಿಕ್ಕುಗಳಿಂದ ಹೊರಟು ಆ ಸೇತುವೆಗೆ ಮುತ್ತಿಗೆ ಹಾಕಬೇಕಾಗಿತ್ತು. ಶತ್ರುಗಳ ಷೆಲ್ ದಾಳಿಯಂತೂ ನಿಂತೇ ಇರಲಿಲ್ಲ. ತೋಟಾಗಳು ಬಿಡುವಿಲ್ಲದೆ ಓಡಾಡುತ್ತಿದ್ದುವು. ಆದರೇನು ? ಶ್ರೀ ನಂಜಪ್ಪನವರು ಸ್ವಲ್ಪವೂ ಅಂಜದೆ, ಅಳುಕದೆ ಮುನ್ನುಗ್ಗಿದರು. ಒಬ್ಬ ಗ್ರಾಮಸ್ಥನನ್ನು ಮಾರ್ಗದರ್ಶಕನನ್ನಾಗಿ ಗೊತ್ತು ಮಾಡಿಕೊಂಡು, ಮಾರ್ಗಗಳನ್ನು ಪತ್ತೆ ಹಚ್ಚಿ ನದಿಯನ್ನು ದಾಟಿದರು. ಇವರು ನದಿಯನ್ನು ದಾಟಿದ ರೀತಿಯಂತೂ ಅತ್ಯಂತ ಸಾಹಸಕರವೇ ಸರಿ. ಕೇವಲ ಒಂದು ಬಿದಿರಿನ ಬೊಂಬನ್ನು ಕಾಲುವೆಯ ಎರಡೂ ದಡಗಳ ಮೇಲಿಟ್ಟು, ಅದರ ಮೇಲೆ ಪಡೆಯವರೆಲ್ಲರೂ ಸಾಗಿದರು. ಗುಂಡಿನ ಮಳೆಗರೆದು ಅತ್ಯಂತ ಸಾಹಸದಿಂದ ಶತ್ರುಗಳನ್ನು ಹಿಮ್ಮೆಟ್ಟಿಸಿದರು.

ಸೇತುವೆಯನ್ನು ವಶಪಡಿಸಿಕೊಂಡನಂತರ ಅಲ್ಲಿ ಶತ್ರುಗಳು ಬಾರದಿರುವಂತೆ ನೋಡಿಕೊಳ್ಳುವುದು ಇನ್ನು ಮುಂದಿನ ಕೆಲಸ. ಆಗ ಶ್ರೀ ನಂಜಪ್ಪನವರ ದಳದಲ್ಲಿದ್ದುದು ಕೇವಲ ೬೦ ಮಂದಿ ಮಾತ್ರ. ಅಲ್ಲದೆ ಆರ್ಟಿಲರಿ ಅಧಿಕಾರಿಗಳ ನೆರವೂ ಇಲ್ಲ. ಆದರೂ ಸಹ ಇವರು ಧೈರ್ಯ ತಾಳಿ, ದಳದ ೬೦ ಮಂದಿಯೊಡನೆ ಬೆಳಗಿನ ಝಾವದ ಮಂಜಿನ ಮಳೆಯಲ್ಲಿಯೇ ಹೊರಟರು. ಗದ್ದೆಗಳನ್ನು ಹಾದು ಹೊರಟು ಶತ್ರು ಸಂಹಾರಕ್ಕೆ ಸಿದ್ಧರಾದರು. ಗಡಿಯಲ್ಲಿ ನಾನಾ ವಿಧವಾದ ಅಡಚಣೆಗಳು. ಮೊದಲು ಶತ್ರುಗಳ ಸಿಡಿಮದ್ದುಗಳನ್ನು ತಟಾಯಿಸಿಕೊಂಡು ಮುಂದುವರೆಯಬೇಕು. ಆ ಸಿಡಿಮದ್ದುಗಳು ಸ್ಫೋಟಗೊಳ್ಳದಂತೆ ಎಚ್ಚರ ವಹಿಸಬೇಕು. ಅನಂತರ ಮುಳ್ಳುಬೇಲಿಗಳನ್ನು ದಾಟಬೇಕು. ಸ್ವಲ್ಪ ಅಜಾಗರೂಕರಾದರೂ ಮುಳ್ಳಿನ ಜೊತೆ ಸರಸವಾಡಲು ಸಿದ್ಧವಾಗಿರಬೇಕು. ಇಷ್ಟೆಲ್ಲ ಆದಮೇಲೆ ವಿಷಮಿಶ್ರಿತ ಬಿದಿರು ಬೊಂಬುಗಳು ಸೋಕದಂತೆ ಮುಂದೆ ಸಾಗಬೇಕು. 'ಬೊಂಬು'ಗಳು ವಿಷಮಯವಾಗಿದ್ದುದರಿಂದ ಒಂದು ವೇಳೆ ಸೋಕಿದ್ದೇ ಆದರೆ ಮೈಯೆಲ್ಲಾ ಬೊಬ್ಬೆಯೇಳುವುದು ಖಂಡಿತ. ಹೀಗೆ ಇಷ್ಟೊಂದು ಅಡೆತಡೆಗಳನ್ನು ತಟಾಯ್ಸಿದ್ದು ಮುನ್ನುಗ್ಗಬೇಕು.

ಇಷ್ಟು ಸಾಹಸಪಟ್ಟು ಮುಂದೆ ಹೋಗಿ ಅಲ್ಲಿ ಶತ್ರುಗಳನ್ನೆದುರಿಸಿ ಆ ಪ್ರದೇಶವನ್ನು ಆಕ್ರಮಿಸಿಕೊಳ್ಳಬೇಕು. ಶತ್ರುಗಳಾದರೋ ಭದ್ರವಾಗಿ ಬಂಕರ್‌ಗಳನ್ನು ನಿರ್ಮಿಸಿಕೊಂಡು, ಅವುಗಳ ಮೂಲಕ ಹೋರಾಟ ನಡೆಸುತ್ತಿದ್ದರು. ಆದರೆ ಇವರಿಗೆ ಆ ಸೌಕರ್ಯವಿಲ್ಲ. ಆಗ ಶತ್ರುಗಳ ಕಡೆಯೂ ಸುಮಾರು ೬೫ ಮಂದಿ ಇದ್ದಿರಬಹುದು. ಸುಮಾರು ನೂರು ಘಂಟೆಗಳ ಕಾಲ ಹೋರಾಟ ನಡೆಯಿತು. ಕಡೆಗೊಮ್ಮೆ ಶತ್ರುಗಳ ಸುಳಿವಿಲ್ಲದಂತಾಯಿತು. ಈ ಹೋರಾಟದಿಂದಾಗಿ ಅಖೌರವನ್ನು ಮುತ್ತಿಗೆ ಹಾಕಲು ಅವಕಾಶವಾಯಿತು.

ಡಿಸೆಂಬರ್ ಆರರಂದು ರಾತ್ರೆ ಶ್ರೀ ನಂಜಪ್ಪನವರು ತಮ್ಮ ದಳದೊಡನೆ ಹೊರಟರು. ೨೭ ಮೈಲಿಗಳಷ್ಟು ದೂರ ಕಾಲುನಡಿಗೆಯ ಪ್ರಯಾಣ. ಜೊತೆಗೆ ಬೆನ್ನಿನ ಮೇಲೆ ಸುಮಾರು ಮೂವತ್ತು ಕೆ. ಜಿ. ಯಷ್ಟು ತೂಕದ ಮೂಟೆ ಬೇರೆ. ಅಲ್ಲಿಂದ ಮುಂದೆ ಮರುದಿನ ಮತ್ತೆ ೨೪ ಮೈಲಿಗಳ ದೂರ ನಡೆದು 'ದಾವೂದ್ ಖಂಡಿ' ಯನ್ನು ವಶಪಡಿಸಿಕೊಂಡರು. 'ದಾವೂದ್ ಖಂಡಿ'ಯು ಮೇಘ್ನಾ ನದಿಯ ದಡದಲ್ಲಿ, ಢಾಕ್ಕಾ–ಕೊಮಿಲ್ಲಾ ರಸ್ತೆಯಲ್ಲಿದೆ.

ಕಡೆಗೆ ಡಿಸೆಂಬರ್ ೧೨ರಂದು ಭಾರತದ ಪಡೆಯವರು ಇವರನ್ನೆಲ್ಲ ಹೆಲಿಕ್ಯಾಪ್ಟರ್‌ಗಳಲ್ಲಿ ಎತ್ತಿಕೊಂಡು ಹೋದರು. ಈ ಕಾರ್ಯದಲ್ಲಿ ನಾಯಕತ್ವ ವಹಿಸಿದ್ದವರು ಜನರಲ್ ಕರಿಯಪ್ಪನವರ ಪುತ್ರರಾದ ಸ್ಕ್ವಾಡ್ರನ್ ಲೀಡರ್ ನಂದ ಕರಿಯಪ್ಪನವರು. ಇವರೆಲ್ಲ ಇನ್ನೇನು, ಢಾಕ್ಕಾವನ್ನು ಮುಟ್ಟಬೇಕು—ಎನ್ನುವಷ್ಟರಲ್ಲಿ ಕದನ ವಿರಾಮದ ಸುದ್ದಿ ತಲುಪಿತು. ಬಂಗಾಳಿ ಜನಕ್ಕೆ ಇವರ ಪಡೆ

ಯವರು ಅಪಾರ ನೆರವನ್ನು ನೀಡಿ, ಅವರ ವಿಶ್ವಾಸಕ್ಕೆ ಪಾತ್ರರಾದರು.

ಮೇಜರ್ ಕೆ. ಪಿ. ನಂಜಪ್ಪನವರ ಈ ಸಾಹಸಕಾರ್ಯಗಳನ್ನು ಗುರ್ತಿಸಿ, 'ವೀರಚಕ್ರ' ಪ್ರಶಸ್ತಿಯನ್ನು ನೀಡಿರುವುದು ಸೂಕ್ತವೇ ಆಗಿದೆ. ಕೇವಲ ಇಪ್ಪತ್ತೈದು ವರ್ಷದ ಈ ತರುಣ ಸಾಹಸಿಗೆ ಉಜ್ವಲ ಭವಿಷ್ಯವಿದೆಯೆನ್ನುವುದರಲ್ಲಿ ಸಂದೇಹವಿಲ್ಲ

●

ಮೇಜರ್ ಬಿ. ಆರ್. ನಾಯಕ್

ಮೇಜರ್ ಬಿ.ಆರ್ ನಾಯಕ್ ಅವರು ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ 'ದಡ್ಡಿ' ಗ್ರಾಮದವರು. ೧೯೪೫ರ ನವೆಂಬರ್ ೨೧ರಂದು ಇವರು ಜನಿಸಿದರು. ಇವರ ತಂದೆ ಬ್ರಿಗೇಡಿಯರ್ ಬಿ. ಎಲ್. ನಾಯಕ್ ಅವರು ೧೯೪೨-೪೫ರ ಅವಧಿಯಲ್ಲಿ ನಡೆದ ದ್ವಿತೀಯ ಮಹಾಯುದ್ಧದಲ್ಲಿ ಭಾಗವಹಿಸಿದ್ದರಲ್ಲದೆ, ಬರ್ಮಾ-ಮಲಯಾಗಳಲ್ಲಿ ನಡೆದ ಸಮರಗಳಲ್ಲಿಯೂ ಭಾಗವಹಿಸಿದ್ದರು. ಕ್ಯಾಪ್ಟನ್ ಬಿ. ಆರ್. ನಾಯಕ್‌ರವರಿಗೆ ಶೌರ್ಯ, ಸಾಹಸಗಳ ಪರಂಪರೆ ತಂದೆಯಿಂದಲೇ ದೊರಕಿದ್ದ ಆಸ್ತಿಯೆನ್ನಬಹುದು.

ಶ್ರೀ ನಾಯಕ್ ಅವರು ಖಡಕವಾಸ್ಲದ ನ್ಯಾಷನಲ್ ಡಿಫೆನ್ಸ್ ಅಕ್ಯಾಡೆಮಿಯಲ್ಲಿ ತರಬೇತಿಯನ್ನು ಪಡೆದು, ಅನಂತರ ಡೆಹ್ರಾಡೂನಿನ ಇಂಡಿಯನ್ ಮಿಲಿಟರಿ ಅಕ್ಯಾಡೆಮಿಯಲ್ಲಿ ಹೆಚ್ಚಿನ ಶಿಕ್ಷಣವನ್ನು ಪಡೆದರು. ಬಳಿಕ ೧೯೬೪ರ ಆಗಸ್ಟ್ ಎರಡರಂದು ಇವರನ್ನು ಮೊಟ್ಟಮೊದಲನೆಯದಾಗಿ ಆರ್ಟಿಲರಿ ವಿಭಾಗದಲ್ಲಿ ಸೆಕೆಂಡ್ ಲೆಫ್ಟಿನೆಂಟ್ ಹುದ್ದೆಯಲ್ಲಿ ನೇಮಿಸಿ ಜಮ್ಮುವಿಗೆ ಕಳುಹಿಸಲಾಯಿತು. ಅಲ್ಲಿಂದ ಇವರನ್ನು ಪಂಜಾಬಿನ ಅಮೃತಸರದ ಬಳಿಗೆ ವರ್ಗಾಯಿಸಲಾಯಿತು. ೧೯೬೮ರಲ್ಲಿ ಉತ್ತರ ಬಂಗಾಳದ ಬಿನಾಗೊರಿಯಲ್ಲಿಯೂ, ೧೯೭೦ರಲ್ಲಿ ನೇಫಾದ ಸೆಲಾಪಾಸದಲ್ಲಿಯೂ, ೧೯೭೧ರಲ್ಲಿ ಅಲಹಾಬಾದ್‌ನಲ್ಲಿಯೂ ಸೇವೆಸಲ್ಲಿಸಿದ ಬಳಿಕ ೧೯೭೧ರ ಅಕ್ಟೋಬರ್ ತಿಂಗಳಲ್ಲಿ ಭಾರತ-ಬಾಂಗ್ಲಾ ಗಡಿಯಲ್ಲಿ ರಕ್ಷಣಾ ಕಾರ್ಯಕ್ಕೆ ಇವರನ್ನು ನೇಮಿಸಲಾಯಿತು.

೧೯೭೧ರ ಡಿಸೆಂಬರ್ ನಾಲ್ಕರಂದು ಭಾರತದ ಸೈನ್ಯಗಳು ಪಾಕ್ ಸೈನ್ಯವನ್ನೆದುರಿಸಿದ ಮೊದಲನೆಯ ದಿನ. ಗುರ್ಖಾ ಬೆಟಾಲಿಯನ್ನಿಗೆ ಇವರು ಆರ್ಟಿಲರಿಯ ಬೆಂಬಲವನ್ನೊದಗಿಸುತ್ತಿದ್ದರು. ಬಾಂಗ್ಲಾದೇಶದ ಜೆಸ್ಸೂರು ವಿಭಾಗದ ದರಸಾನಾದ ಮೇಲೆ ಬೆಳಗ್ಗೆ ೬-೩೦ರ ಸಮಯದಲ್ಲಿ ಮೊತ್ತಮೊದಲ ದಾಳಿ

ನಡೆಯಿತು. ಈ ಮೊದಲ ದಾಳಿಯಲ್ಲಿ ಭಾಗವಹಿಸಿದ ಕೀರ್ತಿ ಕ್ಯಾ. ನಾಯಕ್ ಅವರದು. ದಾಳಿ ಪ್ರಾರಂಭವಾದ ಎರಡೇ ಘಂಟೆಗಳಲ್ಲಿ ವೈರಿ ಬಂಕರುಗಳ ಮೊದಲ ಹಂತವನ್ನು ಸೋಲಿಸಿದ ಬಳಿಕ ಮುಂದಿನ ಹಂತದ ಮೇಲೆ ದಾಳಿ ಮಾಡಲಾಯಿತು. ಆಗ ದರಸಾನಾದ ಹೊರ ವಲಯದಲ್ಲಿದ್ದ ಗಣಿ ಪ್ರದೇಶದಲ್ಲಿ ವೈರಿಗಳ ಮೂರು ಕಂಪೆನಿಯಷ್ಟು ಸೈನ್ಯವನ್ನು ಎದುರಿಸಬೇಕಾಯಿತು ವೈರಿಗಳ ಈ ದಾಳಿ ಪ್ರಬಲವಾಗಿಯೇ ಇತ್ತು. ಭಾರಿ ಪ್ರಮಾಣದ ಬಾಂಬ್ ದಾಳಿಯೂ ನಡೆಯಿತು. ಈ ಭೀಷಣ ಕದನದಲ್ಲಿ ಬೆಳಗಿನ ಸುಮಾರು ೮-೩೦ ಘಂಟೆಯ ವೇಳೆಯಲ್ಲಿ ಕ್ಯಾಪ್ಟನ್ ನಾಯಕ್ ಅವರಿಗೆ ಗುಂಡಿನ ಬಡಿತದಿಂದಾಗಿ ಎರಡು ಕಾಲುಗಳಿಗೂ ತೀವ್ರಗಾಯವಾಯಿತು. ಈ ಗಾಯಗಳು ಈ ವೀರಯೋಧನನ್ನು ಕಂಗೆಡಿಸಲಿಲ್ಲ. ಮಾತೃ ಭೂಮಿಯ ರಕ್ಷಣಾ ಕಾರ್ಯದ ಗುರುತರ ಹೊಣೆಯನ್ನು ಹೊತ್ತಿದ್ದ ಈ ಕ್ಯಾಪ್ಟನ್‌ರಿಗೆ ತಮ್ಮ ಭೀಕರ ಗಾಯಗಳ ಪರಿವೆಯೇ ಇರಲಿಲ್ಲ. ಸಂಗಾತಿಗಳಾಗಿದ್ದ ಇತರ ಭಾರತೀಯ ಸೈನಿಕರ ಜೊತೆಯಲ್ಲಿ ಧೈರ್ಯ ಆತ್ಮ ವಿಶ್ವಾಸಗಳಿಂದ ತೀವ್ರ ಹೋರಾಟವನ್ನು ಮುಂದುವರಿಸಿದರು. ಈ ಭೀಷಣ ಹೋರಾಟದ ಫಲವಾಗಿ ಅದೇ ಮಧ್ಯಾಹ್ನ ೧೨-೩೦ರ ವೇಳೆಗೆ ಇವರ ಪಡೆಗೆ ಅಭೂತ ಪೂರ್ವ ಯಶಸ್ಸು ದೊರಕಿತು. ಆ ಸಮಯದಲ್ಲಿ ಅಷ್ಟು ತೀವ್ರವಾಗಿ ಗಾಯಗೊಂಡಿದ್ದರೂ ಸಹ ಕ್ಯಾ. ನಾಯಕ್ ಅವರಿಗೆ ಆದ ಸಂತೋಷ ಅಷ್ಟಿಷ್ಟಲ್ಲ. ಗಾಯಗೊಂಡಿದ್ದರೂ ಸಹ ನಾಲ್ಕು ಘಂಟೆಗಳ ಕಾಲ ವೈರಿಗಳೊಡನೆ ಅಪ್ರತಿಮ ಸಾಹಸದಿಂದ ಹೋರಾಡಿ, ಬಾಂಗ್ಲಾದೇಶದ ದರಸಾನಾದ ಪತನಕ್ಕೆ ಇವರು ಮುಖ್ಯ ಕಾರಣರಾದರು. ಇವರ ಈ ಮಹಾಪರಾಕ್ರಮವನ್ನು ಗುರ್ತಿಸಿ, ಭಾರತ ಸರ್ಕಾರ ಇವರಿಗೆ 'ವೀರಚಕ್ರ' ಗೌರವವನ್ನಿತ್ತು ಗೌರವಿಸಿತು.

ದರಸಾನಾದ ಪತನದ ನಂತರ ಶ್ರೀ ನಾಯಕ್ ಅವರನ್ನು ಭಾರತದ ಗಡಿಯಲ್ಲಿದ್ದ ಕೃಷ್ಣನಗರ ಆಸ್ಪತ್ರೆಗೆ ಸಾಗಿಸಲಾಯಿತು. ಅಲ್ಲಿ ಅವರಿಗೆ ಶಸ್ತ್ರಕ್ರಿಯೆ ಮಾಡಲಾಯಿತು. ಅನಂತರ ಬ್ಯಾರಕ್‌ಪುರದ ಆಸ್ಪತ್ರೆಗೆ ಸೇರಿದರು. ಅಲ್ಲಿ ಎರಡನೆಯ ಶಸ್ತ್ರಕ್ರಿಯೆಯಾದ ಬಳಿಕ ಕಲ್ಕತ್ತೆಯಲ್ಲಿ ಮೂರನೆಯ ಸಲ ಶಸ್ತ್ರ ಚಿಕಿತ್ಸೆಯನ್ನು ಮಾಡಲಾಯಿತು. ಸುಮಾರು ಎರಡೂವರೆ ತಿಂಗಳುಗಳ ಕಾಲ ಅವರು ಆಸ್ಪತ್ರೆಯಲ್ಲಿದ್ದು ಚಿಕಿತ್ಸೆ ಪಡೆಯಬೇಕಾಯಿತು. ದೇವರ ದಯೆಯಿಂದ ಗುಣಮುಖರಾಗಿ ಆರೋಗ್ಯವಂತರಾದರು. ಅನಂತರ ಇವರಿಗೆ ಮೇಜರ್ ಪದವಿಗೆ ಬಡ್ತಿ ದೊರೆಯಿತು.

ಶ್ರೀ ಬಿ. ಆರ್. ನಾಯಕ್ ಅವರು ಬ್ರಿಗೇಡಿಯರ್ ರಾಮಚಂದ್ರರಾಯರ ಏಕಮಾತ್ರ ಪುತ್ರರು. ಒಬ್ಬನೇ ಪುತ್ರ ಹಾಗೂ ಮತ್ತೋರ್ವ ಪುತ್ರಿಯನ್ನು ಮಾತ್ರ ಪಡೆದಿರುವ ಬ್ರಿ|| ರಾಮಚಂದ್ರರಾಯರು ತಮ್ಮ ಏಕಮೇವ ಪರಾಕ್ರಮಿ

ಪುತ್ರನನ್ನು ದೇಶಸೇವೆಗಾಗಿ ಅರ್ಪಿಸಿರುವುದು ಅಭಿಮಾನದ ವಿಷಯ.

ಚಿಕ್ಕೋಡಿಯಲ್ಲಿ ಇತ್ತೀಚೆಗೆ ನಡೆದ ಸೈನಿಕರ ಸಮ್ಮೇಳನದಲ್ಲಿ ಡಿವ್ಹಿಜನಲ್ ಕಮಿಷನ್‌ರವರಾದ ಶ್ರೀ ಕೆ. ಆರ್. ರಾಮಚಂದ್ರನ್ ಅವರು ಮೇಜರ್ ನಾಯಕ್ ಅವರನ್ನು ಸತ್ಕರಿಸಿದರು. ಈ ಸಂದರ್ಭದಲ್ಲಿ ಮಾತನಾಡುತ್ತ ಬಿ. ಆರ್. ನಾಯಕ್ ಅವರು ದೇಶಸೇವೆಗಾಗಿ ಇನ್ನೂ ಹೆಚ್ಚಿನ ಹುಮ್ಮಸ್ಸಿನಿಂದ ಹೋರಾಡಲು ತಾವು ಸಿದ್ಧವಾಗಿರುವುದಾಗಿ ತಿಳಿಸಿದರು. ಅವರ ಈ ಮಾತಿನಲ್ಲಿ ಕಲಿತನ, ಕೆಚ್ಚು, ದೇಶ ಪ್ರೇಮಗಳು ಅಡಗಿದ್ದುವು. ದರಸಾನಾ ಪತನಕ್ಕೆ ಕಾರಣರಾದ ಈ ವೀರರು ಮಾತೃಭೂಮಿಗಷ್ಟೇ ಅಲ್ಲದೆ ಬೆಳಗಾಂ ಜಿಲ್ಲೆಗೇ ಕೀರ್ತಿ ತಂದಿರುವರು.

ಭಾರತದ ಸೈನಿಕರು ಜಗತ್ತಿನಲ್ಲಿಯೇ ಶ್ರೇಷ್ಠರಾದವರೆನಿಸಿದ್ದು ಎಂಥದೇ ಕಠಿಣ ಪರಿಸ್ಥಿತಿಯಲ್ಲಾದರೂ ಹೆದರದೆ ಮುನ್ನುಗ್ಗಲು ಸಿದ್ಧರಿರುವರೆಂದೂ, ಅಧಿಕಾರಿಗಳ ಉತ್ತಮ ಮಾರ್ಗದರ್ಶನದಲ್ಲಿ ಅವರು ಮುಂದುವರೆಯುತ್ತಿರುವರೆಂದೂ ಮೇಜರ್ ನಾಯಕ್‌ರವರ ಅಭಿಪ್ರಾಯ.

ಮತ್ತೊಂದು ಸಂತೋಷದ ಸಮಾಚಾರವೆಂದರೆ ಇದೇ ಮೇ ಮೂವತ್ತರಂದು ಶ್ರೀ ನಾಯಕ್‌ರವರ ವಿವಾಹವು ಧಾರವಾಡದ ಆರ್. ಎ. ಕಾಮತ್ ಅವರ ಪುತ್ರಿ ನಳಿನಿಯವರೊಡನೆ ವೈಭವದಿಂದ ನೆರವೇರಿತು. ಈ ದಂಪತಿಗಳಿಗೆ ಭಗವಂತನು ಆಯುರಾರೋಗ್ಯಗಳನ್ನು ಕೊಟ್ಟು ಕಾಪಾಡಲೆಂದೇ ನಮ್ಮ ಹಾರೈಕೆ.

ಲೆಫ್ಟಿನೆಂಟ್ ಪ್ರೇಂ ಕುಮಾರ್

ಲೆ|| ಪ್ರೇಮ್ ಕುಮಾರ್‌ರವರು ಕೋಲಾರದ ಚಿನ್ನದ ಗಣಿಯ ಮುಖ್ಯ ಏಜೆಂಟರಾದ ಶ್ರೀ ಎ. ಬಿ. ಮೆನನ್‌ರವರ ಪುತ್ರರು. ೧೯೪೭ರ ಜುಲೈ ೩೧ರಂದು ಜನಿಸಿದ ಅವರು ಸೆಂಟ್ ಜೋಸೆಫ್ ಕಾನ್ವೆಂಟಿನಲ್ಲಿಯೂ, ಕೆ. ಜಿ. ಎಫ್. ಸ್ಕೂಲ್‌ನಲ್ಲಿಯೂ ವ್ಯಾಸಂಗಮಾಡಿದರು. ಅನಂತರ ಬೆಂಗಳೂರಿನ ಕಿಂಗ್ ಜಾರ್ಜ್ ಸ್ಕೂಲ್‌ನಲ್ಲಿ ವ್ಯಾಸಂಗಮಾಡಿ ೧೯೬೨ರಲ್ಲಿ ಸೀನಿಯರ್ ಕೇಂಬ್ರಿಡ್ಜ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ೧೯೬೬ರಲ್ಲಿ ಬೆಂಗಳೂರಿನ ಸೆಂಟ್ ಜೋಸೆಫ್ ಕಾಲೇಜಿನಲ್ಲಿ ಬಿ. ಎ. ಪರೀಕ್ಷೆಯನ್ನು ಮುಗಿಸಿಕೊಂಡು ಅನಂತರ ಸೆಂಟ್ರಲ್ ಕಾಲೇಜಿನಲ್ಲಿ ಎಂ. ಎ. ಪರೀಕ್ಷೆಗಾಗಿ ವ್ಯಾಸಂಗ ಮಾಡುತ್ತಿದ್ದರು. ಅಷ್ಟರಲ್ಲಿ ಸಮರದಲ್ಲಿ ಆಸಕ್ತಿ ಹುಟ್ಟಿ ಸೈನಿಕನಾಗಬೇಕೆಂಬ ಹಂಬಲು ಪ್ರಬಲವಾಯಿತು. ಕಡೆಗೆ ಭಾರತದ ನೌಕಾದಳಕ್ಕೆ ಸೇರಿ ವ್ಯಾಸಂಗಕ್ಕೆ ಶರಣು ಹೊಡೆದರು. ಅಲ್ಲಿಂದ

ಮುಂದೆ ದೇಶಸೇವೆಯೇ ಅವರ ಗುರಿಯಾಯಿತು.

೧೯೬೬ರ ಆಗಸ್ಟ್‌ನಲ್ಲಿ ಸೆಂಟ್ರಲ್ ಕಾಲೇಜಿನ ಅರ್ಥಶಾಸ್ತ್ರ ಸ್ನಾತಕೋತ್ತರ

ತರಗತಿಗೆ ಇವರು ಸೇರಿದರಾದರೂ, ಭಾರತೀಯ ನೌಕಾದಳದ ನೇವಲ್ ಏವಿಯೇಷನ್ ವಿಭಾಗಕ್ಕೆ ಆಯ್ಕೆಗೊಂಡ ಕಾರಣ ಡಿಸೆಂಬರ್ ತಿಂಗಳಲ್ಲಿ ಇವರು ವ್ಯಾಸಂಗವನ್ನು ಅರ್ಧಕ್ಕೆ ನಿಲ್ಲಿಸಬೇಕಾಯಿತು. ೧೯೬೭ರ ಜನವರಿಯಲ್ಲಿ ಗಗನಯಾನ ತರಬೇತಿಗಾಗಿ ಹೊರಟ ಇವರು ೧೯೬೮ರ ಜೂನ್ ತಿಂಗಳಲ್ಲಿ ಆಕ್ಟಿಂಗ್ ಸಬ್–ಲೆಫ್ಟಿನೆಂಟ್ ಆಗಿ ನೇಮಕಗೊಂಡರು.

ಇತ್ತೀಚಿನ ಭಾರತ-ಪಾಕ್ ಯುದ್ಧದಲ್ಲಿ ಐ. ಎನ್. ಎಸ್. ವಿಕ್ರಾಂತ್ ನೌಕೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದ ಇವರು ಡೆಕ್ ಮೇಲೆ ವಿಮಾನವನ್ನಿಳಿಸಲು ಅರ್ಹತೆ ಪಡೆದರು. ೫೫೦ ಘಂಟೆಗಳ ಗಗನಯಾನ ಮತ್ತು ಡೆಕ್‌ಮೇಲೆ ೮೦ ಬಾರಿ ವಿಮಾನವನ್ನಿಳಿಸಿದ ಕೀರ್ತಿ ಇವರದಾಗಿದೆ. ವಿಮಾನ ವಾಹಕ ನೌಕೆಯಿಂದ ಕಾರ್ಯಾಚರಣೆ ಮಾಡುವ 'ಸೀ ಹಾಕ್ ಏರ್‌ಕ್ರಾಫ್ಟ್'ಗಳನ್ನು ಇವರು ಚಾಲನೆ ಮಾಡುವರು.

ಇತ್ತೀಚಿನ ಭಾರತ-ಪಾಕ್ ಸಮರ ನಡೆದಾಗ ಪೂರ್ವವಲಯದ ಕಾರ್ಯಾಚರಣೆಗಳಲ್ಲಿ ಭಾಗವಹಿಸಿ, ಸಾಹಸ ಪ್ರದರ್ಶನವಿತ್ತುದಕ್ಕಾಗಿ ಇವರು 'ವೀರಚಕ್ರ' ಪ್ರಶಸ್ತಿಯನ್ನು ಗಳಿಸಿದ್ದಾರೆ.

ಇವರು ತಮ್ಮ ವಿದ್ಯಾರ್ಥಿದೆಶೆಯಲ್ಲಿ ಉತ್ತಮ ಕ್ರೀಡಾಪಟುಗಳಾಗಿದ್ದರು. ಕೋಲಾರದ ಚಿನ್ನದ ಗಣಿ ಪ್ರದೇಶದಲ್ಲಿ ಉನ್ನತ ಪ್ರಶಸ್ತಿಗಳನ್ನು ಪಡೆದ ಕ್ರೀಡಾಪಟುಗಳಲ್ಲಿ ಇವರೇ ಮೊದಲಿಗರು ಹಾಗೂ ಅಗ್ರಗಣ್ಯರು.

ಇವರು ಮುಂದೆಯೂ ಉನ್ನತ ಪದವಿ ಪ್ರಶಸ್ತಿಗಳನ್ನು ಗಳಿಸುತ್ತಿರಲೆಂದೇ ನಮ್ಮ ಹಾರೈಕೆ.

ಸ್ಕ್ವಾಡ್ರನ್ ಲೀಡರ್ ದಿನೇಶ್‌ಚಂದ್ರ ಭಂಡಾರಿ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಮುಲ್ಕಿ ಎಂಬಲ್ಲಿ ೧೯೩೪ರ ಜನವರಿ ೪ರಂದು ಶ್ರೀ ದಿನೇಶ್ ಚಂದ್ರ ಭಂಡಾರಿಯವರು ಜನಿಸಿದರು. ಇವರ ಪ್ರಾಥಮಿಕ ಮಾಧ್ಯಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಣವು ಮುಲ್ಕಿಯಲ್ಲಿಯೇ ನಡೆಯಿತು. ಅನಂತರ ಇವರು ಮಂಗಳೂರಿನ ಸೆಂಟ್ ಅಲೋಷಿಯಸ್ ಕಾಲೇಜಿನಲ್ಲಿ ೧೯೪೯ ರಿಂದ ೧೯೫೧ ರವರೆಗೆ ವ್ಯಾಸಂಗ ಮಾಡಿದರು.

ಇವರ ತಂದೆ ಶ್ರೀ ಸಂಜೀವ ಭಂಡಾರಿಯವರು ಮತ್ತು ಇವರ ತಾಯಿ ಶ್ರೀಮತಿ ಶಾಂತಾ ಭಂಡಾರಿಯವರು ದೈವಭಕ್ತರು ಹಾಗೂ ಯೋಗ್ಯ ಪ್ರಜೆಗಳು. ಈ ದಂಪತಿಗಳ ಪುತ್ರರಾದ ಶ್ರೀ ದಿನೇಶ್‌ಚಂದ್ರರವರು ದೇಶವಾತ್ಸಲ್ಯದಿಂದಾಗಿ ಸೈನ್ಯಕ್ಕೆ ಸೇರಲು ಇಚ್ಛೆ ಪಟ್ಟುದರಲ್ಲಿ ಯಾವ ಆಶ್ಚರ್ಯವೂ ಇಲ್ಲ. ಇದು ಇವರ ಉಜ್ವಲ ದೇಶಾಭಿಮಾನಕ್ಕೆ ತಕ್ಕ ಸಾಕ್ಷಿ.

೧೯೫೧ರ ಡಿಸೆಂಬರ್ ತಿಂಗಳ ೧೬ರಂದು ಇವರು ಭಾರತದ ವೈಮಾನಿಕ ದಳಕ್ಕೆ ಸೇರಿ ಬೆಂಗಳೂರಿನ ಟೆಕ್ನಿಕಲ್ ಟ್ರೈನಿಂಗ್ ಕಾಲೇಜಿನಲ್ಲಿ ಹೆಚ್ಚಿನ ಶಿಕ್ಷಣವನ್ನು ಪಡೆದರು. ೧೯೫೬ರ ಆಗಸ್ಟ್ ೨೫ರಂದು ಇವರು ಪೈಲಟ್ ಆಫೀಸರ್ ಆಗಿ ಕಮಿಷನ್ ಪಡೆದರು. ಬಳಿಕ ಪೂನಾಕ್ಕೆ ಹೋಗಿ ಬಾಂಬರ್ ವಿಮಾನಗಳಲ್ಲಿ ಕುಶಲತೆಯನ್ನು ಗಳಿಸಿಕೊಂಡರು. ಅನಂತರ 'ಜೆಟ್ ಬಾಂಬರ್' ಮತ್ತು 'ಹೆವಿಬಾಂಬರ್'ಗಳಲ್ಲಿಯೂ ಪ್ರವೀಣತೆ ಪಡೆದರು.

ಗೋವಾ ಕದನದಲ್ಲಿಯೂ, ಚೀಣಾದಾಳಿಯಲ್ಲಿಯೂ ಇವರು ಭಾಗವಹಿಸಿ ಹೆಚ್ಚಿನ ಅನುಭವವನ್ನು ಗಳಿಸಿರುವರು. ೧೯೬೫ರಲ್ಲಿ ಪಾಕಿಸ್ತಾನದೊಡನೆ ನಡೆದ ಘರ್ಷಣೆಯಲ್ಲಿಯೂ ಇವರು ಸಕ್ರಿಯವಾಗಿ ಭಾಗವಹಿಸಿದ್ದರು. ೧೯೬೯ರಲ್ಲಿ ಮತ್ತು ೧೯೭೦ರಲ್ಲಿ ಇವರು ಏರ್ ಚೀಫ್‌ಮಾರ್ಷಲ್‌ರವರಿಂದ ಮಾನ್ಯತೆ ಪಡೆದಿರುವುದು ಹೆಮ್ಮೆಯ ಸಂಗತಿ.

ಇತ್ತೀಚಿನ ಭಾರತ-ಪಾಕ್ ಯುದ್ಧದಲ್ಲಿ ಇವರು ತೋರಿರುವ ಅಸಾಧಾರಣ ಪರಾಕ್ರಮವನ್ನು ಗುರ್ತಿಸಿ, ರಾಷ್ಟ್ರಪತಿಗಳು ಇವರಿಗೆ ೧೯೭೧ರ ಡಿಸೆಂಬರ್ ೨೪

ರಂದು 'ವೀರಚಕ್ರ' ಪ್ರಶಸ್ತಿಯನ್ನಿತ್ತು ಗೌರವಿಸಿರುವರು.

ಈ ಸಂದರ್ಭದಲ್ಲಿ ರಾಷ್ಟ್ರಪತಿಭವನದಲ್ಲಿ ಓದಲಾದ ಪ್ರಶಸ್ತಿ ಪತ್ರ ಹೀಗಿದೆ.

"ಡಿಸೆಂಬರ್ ೧೯೭೧ರಲ್ಲಿ ಪಾಕಿಸ್ತಾನದೊಡನೆ ಹೋರಾಡುವ ಸಂದರ್ಭದಲ್ಲಿ ಸ್ಕ್ವಾಡ್ರನ್ ಲೀಡರ್ ದಿನೇಶ್‌ಚಂದ್ರ ಭಂಡಾರಿಯವರು ಬಾಂಬರ್ ದಳದ ನಾಯಕತ್ವವನ್ನು ಪಡೆದಿದ್ದರು. ಶತ್ರುಗಳ ಪ್ರತಿಭಟನೆಯನ್ನು ಲೆಕ್ಕಿಸದೆ ಧೈರ್ಯ ದಿಂದ ಎದುರಿಸಿ ಒಂಭತ್ತು ಬಾರಿ ಬಾಂಬ್ ದಾಳಿ ನಡೆಸಿ, ಶತ್ರುಗಳ ನೆಲೆಗಳನ್ನು ನಾಶಪಡಿಸಿ ಅವರಿಗೆಲ್ಲಾ ಸಿಂಹಪ್ರಾಯರಾಗಿ ಕಂಡುಬಂದರು. ಶತ್ರು ಪಡೆಗಳ ಮಧ್ಯೆ ಮುನ್ನುಗ್ಗಿ ಅವರಿಗೆ ಭಯೋತ್ಪಾದನೆಯನ್ನುಂಟುಮಾಡಿ ಪುನಃ ತಮ್ಮ ನೆಲೆಗೆ ಜಯಶಾಲಿಗಳಾಗಿ ಹಿಂತಿರುಗಿದರು. ತಮ್ಮ ಪ್ರಾಣದ ಮೇಲಣ ಆಶೆ ಯನ್ನು ತ್ಯಜಿಸಿ, ಏಕಾಗ್ರಚಿತ್ತರಾಗಿ ಧೈರ್ಯವನ್ನು ಪ್ರದರ್ಶಿಸಿ ವೀರಾಗ್ರಣಿಯಂತೆ ಹೋರಾಡಿದ್ದಾರೆ. ಇವರ ನಡೆನುಡಿ, ಮಾರ್ಗದರ್ಶನಗಳು ಎಲ್ಲ ಯೋಧರಿಗೂ ಆದರ್ಶವಾಗಿದೆ.

ಶ್ರೀ ದಿನೇಶ್ ಚಂದ್ರ ಭಂಡಾರಿಯವರು ಸೈನಿಕ ಸತ್ಸಂಪ್ರದಾಯಗಳನ್ನು ಎತ್ತಿಹಿಡಿದು, ಭಾರತಕ್ಕೆ ಗೌರವವನ್ನೂ ಕೀರ್ತಿಯನ್ನೂ ತಂದಿದ್ದಾರೆ."

ಲೆಫ್ಟಿನೆಂಟ್ ಸುಂದರರಾಜ್ ಸಂಪತ್ ಗೋಪಾಲ್

"ನಗರದ ಕನ್ನಡ ತರುಣ ವೀರನಿಗೆ ಸೇನಾಪದಕ" ಎಂಬ ಶಿರೋನಾಮೆ ಯಲ್ಲಿ ಬೆಂಗಳೂರಿನ ಸ್ಥಳೀಯ ಪತ್ರಿಕೆಗಳಲ್ಲಿ ಸುದ್ದಿ ಪ್ರಕಟವಾಯಿತು. (ತಾ|| ೨೫-೧೨-೭೧) ಆ ವೀರ ತರುಣ ಯಾರಿರಬಹುದು ? ಎಂಬ ಕುತೂಹಲ ಜನರಲ್ಲಿ ಮೂಡಿದುದೂ ಸಹಜವೇ. ಇತ್ತೀಚಿನ ಭಾರತ-ಪಾಕ್ ಸಮರದಲ್ಲಿ ಹೋರಾಡಿ ಕೀರ್ತಿಗಳಿಸಿದ ಲೆಫ್ಟಿನೆಂಟ್ ಸುಂದರರಾಜ್ ಸಂಪತ್‌ಗೋಪಾಲ್ ಎಂಬುವರೇ ಆ ವೀರ ತರುಣರು. ಕೇವಲ ಇಪ್ಪತ್ತಾರು ವರ್ಷ ವಯಸ್ಸಿನ ಈ ಯುವಕ ಯುದ್ಧ ಸಮಯದಲ್ಲಿ ತೋರಿದ ಸಾಹಸಕ್ಕಾಗಿ ಕೇಂದ್ರ ಸರ್ಕಾರವು ಇವರಿಗೆ "ನೌ ಸೇನಾ ಪದಕ"ವನ್ನು ಕೊಟ್ಟು ಗೌರವಿಸಿತು.

ಭಾರತ್ ಅರ್ಥ್‌ಮೂವರ್ಸ್ ಸಂಸ್ಥೆಯ ಫ್ಯಾಕ್ಟರಿ ಮ್ಯಾನೇಜರ್ ಆಗಿರುವ ಶ್ರೀ ಕೆ. ಟಿ. ಸಂಪತ್‌ಗೋಪಾಲ್‌ರವರು ಈ ವೀರಯೋಧನ ತಂದೆ. ಶ್ರೀ ಸುಂದರ ರಾಜ್‌ರವರ ಶಿಕ್ಷಣ ನಗರದ ನ್ಯಾಷನಲ್ ಮಿಡ್ಲ್‌ಸ್ಕೂಲ್, ನ್ಯಾಷನಲ್ ಹೈಸ್ಕೂಲ್ ಮತ್ತು ನ್ಯಾಷನಲ್ ಕಾಲೇಜುಗಳಲ್ಲಿ ನಡೆಯಿತು. ೧೯೬೬ರಲ್ಲಿ ಕಮಿಷನ್

ಗಳಿಸಿದ ಅವರು ವಿದ್ಯಾರ್ಥಿದೆಶೆಯಿಂದಲೂ ಎನ್. ಸಿ. ಸಿ. (N.C.C.) ನೌಕಾ ವಿಭಾಗದಲ್ಲಿ ಸೇರಿ ತುಂಬಾ ಆಸಕ್ತಿ ವಹಿಸುತ್ತಿದ್ದರು. ಅಲ್ಲದೆ ಇವರು ಹಿರಿಯ ಕ್ಯಾಡೆಟ್ ಸಹ ಆಗಿದ್ದರು.

ತಮ್ಮ ಕಾಲೇಜಿನ ಹಳೆಯ ವಿದ್ಯಾರ್ಥಿಯೊಬ್ಬರಿಗೆ ಪ್ರಶಸ್ತಿ ದೊರೆತುದಕ್ಕಾಗಿ ಹೆಮ್ಮೆಗೊಂಡ ನ್ಯಾಷನಲ್ ಕಾಲೇಜಿನ ವಿದ್ಯಾರ್ಥಿಗಳು ಒಂದು ಸನ್ಮಾನ ಸಭೆಯನ್ನೇರ್ಪಡಿಸಿ, ತಮ್ಮ ಪ್ರೀತಿ ವಿಶ್ವಾಸಗಳ ಕುರುಹಾಗಿ ಶ್ರೀಗಂಧದ ಮರದಲ್ಲಿ ತಯಾರಿಸಿದ್ದ ಹಡಗಿನ ಮಾದರಿಯ ಒಂದು ಕಲಾಕೃತಿಯನ್ನು ಕಾಣಿಕೆಯಾಗಿ ಕೊಟ್ಟು ಗೌರವಿಸಿದರು. ಕಾಲೇಜಿನ ಪ್ರಿನ್ಸಿಪಾಲ್ ಡಾ|| ಎಚ್. ನರಸಿಂಹಯ್ಯನವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಶ್ರೀ ಸುಂದರರಾಜ್ ಸಂಪತ್‌ಗೋಪಾಲ್‌ರವರನ್ನು ಮುಕ್ತಕಂಠದಿಂದ ಹೊಗಳಿ, "ನ್ಯಾಷನಲ್ ಕಾಲೇಜು ಕೇವಲ ರ್‍ಯಾಂಕ್‌ಗಳಿಗೇ ಹೆಸರು ಪಡೆದಿಲ್ಲ. ವೀರಯೋಧರನ್ನು ಒದಗಿಸುವುದರಲ್ಲಿಯೂ ಖ್ಯಾತಿ ಪಡೆದಿದೆ." ಎಂದು ಹೇಳಿದಾಗ ಸಭೆ ಪ್ರಚಂಡ ಕರತಾಡನದೊಂದಿಗೆ ತನ್ನ ಸಂತೋಷವನ್ನು ವ್ಯಕ್ತಪಡಿಸಿತು. ಅಂದಿನ ಸಭೆಗೆ ಶ್ರೀ ಸುಂದರರಾಜ್‌ರವರ ತಾಯಿತಂದೆಗಳೂ ಆಗಮಿಸಿ, ತಮ್ಮ ಪುತ್ರನ ಶ್ರೇಯೋಭಿವೃದ್ಧಿಯನ್ನು ಕಂಡು ಹರ್ಷಪಟ್ಟರು.

ಮುಖ್ಯ ಅತಿಥಿಗಳಾಗಿದ್ದ ಶ್ರೀ ಸುಂದರರಾಜ್ ಸಂಪತ್‌ಗೋಪಾಲ್‌ರವರು ಮಾತನಾಡುತ್ತ ತಮ್ಮ ರಷ್ಯಾ ಪ್ರವಾಸದ ಕೆಲವು ಅನುಭವಗಳನ್ನು ಸ್ವಾರಸ್ಯವಾಗಿ ವಿವರಿಸಿದರು. ತಮ್ಮ ಬಾಲ್ಯಕಾಲದ ನೆನಪುಗಳನ್ನು ಮೆಲುಕು ಹಾಕಿದರು. ಹಾಗೆಯೇ ವಿದ್ಯಾರ್ಥಿಗಳು ಕೇಳಿದ ಪ್ರಶ್ನೆಗಳಿಗೆ ಮೊಟಕಾಗಿ ಉತ್ತರಗಳನ್ನಿತ್ತರು. (ಯುದ್ಧದ ರಹಸ್ಯಗಳನ್ನು ಬಹಿರಂಗಪಡಿಸಬಾರದೆಂಬ ಒಂದು ತತ್ವ ಪಾಲನೆಗಾಗಿ.)

ಶ್ರೀ ಸುಂದರರಾಜ್‌ರವರು ತಮ್ಮ ಚಿಕ್ಕಂದಿನಿಂದಲೂ ಪಾಕಿಸ್ತಾನದ ರೀತಿನೀತಿಗಳನ್ನೂ, ಭಾರತದ ಬಗ್ಗೆ ಅದಕ್ಕಿದ್ದ ಬದ್ಧ ದ್ವೇಷಗಳನ್ನೂ ಪತ್ರಿಕೆಗಳಲ್ಲಿ ಓದಿ ಅರಿತುಕೊಳ್ಳುತ್ತಿದ್ದರು. ಪಾಕಿಸ್ತಾನದ ಸುಳ್ಳು, ಮೋಸ, ಅಪಪ್ರಚಾರಗಳನ್ನು ಕಂಡು ಅವರ ರಕ್ತ ಬಿಸಿಯಾಗುತ್ತಿತ್ತು. ಹೇಗಾದರೂ ಭಾರತೀಯರ

ಶೌರ್ಯದ ಪರಿಚಯವನ್ನು ಅವರಿಗೆ ಮಾಡಿಕೊಟ್ಟು ಸರಿಯಾಗಿ ಬುದ್ಧಿಕಲಿಸಲೇಬೇಕೆಂಬ ಹಠ ಮನದಲ್ಲಿ ಮೂಡಿತು. ನೌಕಾಸೇನೆಗೆ ಸೇರಿದ ಮೇಲೆ ಕನಸಾಗಿದ್ದ ಆ ಹಂಬಲು ನನಸಾಗುವ ಸನ್ನಿವೇಶ ಒದಗಿಬಂತು.

ಶ್ರೀ ಸುಂದರರಾಜ್ ಅವರು ಸೇವೆಸಲ್ಲಿಸುತ್ತಿದ್ಧುದು ಐ. ಎನ್. ಎಸ್. "ನಿಪತ್" ಎಂಬ ಹಡಗಿನಲ್ಲಿ. ಭಾರತದ ನೌಕಾಸೇನೆ ಕರಾಚಿ ಬಂದರಿನ ಮೇಲೆ ದಾಳಿ ನಡೆಸಿದಾಗ ಇನ್ನೂರು ಟನ್ ತೂಕದ 'ಪಿ.ಎನ್.ಎಸ್. ಖೈಬರ್' ಎಂಬ ಪಾಕ್ ಹಡಗನ್ನು ಮುಳುಗಿಸಲು ದೊಡ್ಡ ಹೋರಾಟವೇ ನಡೆಯಿತು. ಆ ಸಮಯದಲ್ಲಿ ಶತ್ರುವಿಮಾನಗಳು ಗುಂಡಿನ ಮಳೆಯನ್ನೇ ಸುರಿಸಿದುವು. ಆದರೂ ಶ್ರೀ ಸುಂದರರಾಜ್ ಮತ್ತು ತಂಡದವರು ಎದೆಗುಂದಲಿಲ್ಲ. ಕಡೆಗೆ ಈ ಸಮರ ವೀರರಿಗೇ ಜಯಲಭಿಸಿತು. ಕರಾಚಿಯಲ್ಲಿ ನಡೆದ ಈ ನೌಕಾ ಯುದ್ಧದಲ್ಲಿ ಈ ಭಾರತ ವೀರರೇ ಮೊದಲು ಶತ್ರು ಹಡಗುಗಳನ್ನು ಮುಳುಗಿಸಿ ಜಯಭೇರಿ ಹೊಡೆದರು. ಈ ಬಗ್ಗೆ ಶ್ರೀ ಸುಂದರರಾಜ್‌ರವರು ಹೇಳಿರುವ ಮಾತುಗಳಿವು—"ಈಗ ಪಾಕಿಸ್ಥಾನದ ನೌಕಾಬಲ ಬಹಳ ಮಟ್ಟಿಗೆ ಕುಸಿದು ಹೋಗಿದೆ. ಭೂಸೈನ್ಯ ಹಾಗೂ ವಾಯುಪಡೆಗಳಿಂದ ನಮಗೆ ಒಳ್ಳೆಯ ನೆರವು ಸಿಕ್ಕಿ ಜಯ ನಮ್ಮದಾಯಿತು. ವಾಸ್ತವವಾಗಿ ಹೇಳುವುದಾದರೆ ಪಾಕ್ ಸೈನಿಕರ ಶಕ್ತಿ ಉಡುಗಿಯೇ ಹೋಗಿತ್ತು. ನಮ್ಮನ್ನೆದುರಿಸಲು ಅವರಿಂದ ಸಾಧ್ಯವೇ ಆಗುತ್ತಿರಲಿಲ್ಲ. ಅವರ ಆಯುಧಗಳು ಬಹಳ ಬೆಲೆಬಾಳುವಂಥದ್ದಾಗಿರಬಹುದು. ಆದರೆ ಭಾರತೀಯ ಸೈನಿಕರ ಧೈರ್ಯ ಸ್ಥೈರ್ಯಗಳ ಮುಂದೆ ಅವು ನಿಸ್ತೇಜವಾದುವು. ಬಹುಶಃ ಭಾರತದ ಸೇನಾಬಲ ಶತ್ರುಬಲಕ್ಕಿಂತ ಎಂಟರಷ್ಟಿತ್ತೆಂಬುದು ಒಂದು ಅಂದಾಜು. ಯುದ್ಧ ಮಾಡಲು ಇನ್ನೂ ಅವಕಾಶವಿದ್ದಿದ್ದರೆ ಆಗ ಆ ಕತೆಯೇ ಬೇರೆಯಾಗಿರುತ್ತಿತ್ತು. ಆದರೆ ನಮ್ಮ ಪ್ರಧಾನಿಯವರು ತಮ್ಮ ದೂರದೃಷ್ಟಿಯಿಂದ ವಿಶ್ವಸಂಸ್ಥೆಯ ಕರೆಗೆ ಓಗೊಟ್ಟು ಕದನವಿರಾಮಕ್ಕೆಡೆ ಮಾಡಿಕೊಟ್ಟರು."

ನಾಡೆಲ್ಲ ದೀಪಾವಳಿ ಹಬ್ಬದ ಸಂಭ್ರಮದಲ್ಲಿದ್ದಾಗ ಈ ಯೋಧರು ಸಮರದಲ್ಲಿ ಹೋರಾಡುತ್ತ ಹಬ್ಬವನ್ನಾಚರಿಸಿದರು. ಆ ಹೋರಾಟವೇ ಅವರಿಗೆ ದೀಪಾವಳಿಯಾಯಿತು. ಹುಡುಗರು ಪಟಾಕಿ ಹೊಡೆದರೆ ಇವರು ಅಲ್ಲಿ ತುಪಾಕಿ ಹಾರಿಸಿದರು, ಮನೆಗಳಲ್ಲಿ ಹಣತೆಗಳು ಉರಿದರೆ ಅಲ್ಲಿ ಶತ್ರುವಿಮಾನಗಳೇ ಹತ್ತಿ ಉರಿದು ರಣರಂಗದಲ್ಲಿ ಬೆಳಕನ್ನು ಕೊಡುತ್ತಿದ್ದುವು. ದೀಪಾವಳಿ ಸಮರ ಯೋಧರಿಗೆ ಎಂದೆಂದಿಗೂ ಮರೆಯಲಾಗದ ದೀಪಾವಳಿಯೇ ಆಗಿತ್ತು.

ಶ್ರೀ ಸುಂದರರಾಜ್‌ರವರು ೧೯೬೪ರಲ್ಲಿ ಮುಂಬಯಿಗೆ ಹೋಗಿ ಹೆಚ್ಚಿನ ಶಿಕ್ಷಣ ಪಡೆದರು. ಅಲ್ಲದೆ ಕರಾವಳಿಯುದ್ದಕ್ಕೂ ನೌಕಾಯಾತ್ರೆ ಮಾಡಿದ ವಿಶೇಷ ಅನುಭವವೂ ಇವರಿಗುಂಟು. ಉತ್ಸಾಹೀಯುವಕರಾದ ಶ್ರೀ ಸುಂದರರಾಜ್‌ರವರಿಂದ ಇನ್ನೂ ಹೆಚ್ಚಿನ ಸೇವಾಭಾಗ್ಯ ನಮ್ಮ ನಾಡಿಗೆ ದೊರಕುವಂತಾಗಲಿ, ಉತ್ತಮ

ದರ್ಜೆಯ ದೇಶಾಭಿಮಾನಿಗಳಾದ ಶ್ರೀಯುತರಿಗೆ ಇನ್ನೂ ಹೆಚ್ಚು ಹೆಚ್ಚು ಪ್ರಶಸ್ತಿಗಳು ಲಭಿಸಿ, ಅವರು ಉನ್ನತ ಪದವಿಗಳನ್ನು ಪಡೆಯಲಿ ಎಂಬುದೇ ನಮ್ಮ ಹಾರೈಕೆ

ಲೆಫ್ಟಿನೆಂಟ್ ಆಂಥೋಣಿ ಡಿ. ಸ್ಯಾಮ್ ಲಜ಼ಾರೋ

"ನಗರದ ಇನ್ನೊಬ್ಬ ಯುವಕರಿಗೆ ನವ್‌ಸೇನಾ ಪದಕ ದೊರೆತಿದೆ"—ಎಂದು ೧೯೭೧ರ ಡಿಸೆಂಬರ್ ೨೭ರಂದು ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ವಿವರಗಳನ್ನು ಪರಿ



ಶೀಲಿಸಿದಾಗ ಲೆಫ್ಟಿನೆಂಟ್ ಡಿ. ಸ್ಯಾಮ್ ಲಜ಼ಾರೋ ಎಂಬುವವರೇ ಆ ಯುವಕರೆಂಬುದು ತಿಳಿಯಿತು. ಎ. ಡಿ. ಎಸ್. ಲಜ಼ಾರೋ ಅವರು ಬೆಂಗಳೂರಿನ ರಿಚರ್ಡ್ಸ್ ಟೌನಿನವರು. ಇವರ ತಂದೆ ಶ್ರೀ ಬಿ. ಡಿ. ಸ್ಯಾಮ್ ಲಜಾರೋ ಅವರು ಷಾಂಘೈ (Shanghai) ನಲ್ಲಿ ಪಾಶ್ಚಾತ್ಯ ಸಂಗೀತದ ಅಧ್ಯಾಪಕರಾಗಿದ್ದರಲ್ಲದೆ ಒಂದು ಪಿಯಾನೋ ಕಾರ್ಖಾನೆಯ ಮಾಲೀಕರೂ ಆಗಿದ್ದರು.

ಲೆಫ್ಟಿನೆಂಟ್ ಲಜ಼ಾರೋರವರು ೧೯೪೩ರಲ್ಲಿ ಚೀಣಾದೇಶದಲ್ಲಿರುವ ಷಾಂಘೈ ಎಂಬಲ್ಲಿ ಜನಿಸಿದರು. ಆಗ ಅವರ ತಂದೆ ಅಲ್ಲಿಯೇ ವಾಸಿಸುತ್ತಿದ್ದರು. ಇವರ ವಿದ್ಯಾಭ್ಯಾಸವು ಬೆಂಗಳೂರಿನ ಸೆಂಟ್ ಜೋಸೆಫ್ ಬಾಲಕರ ಹೈಸ್ಕೂಲಿನಲ್ಲಿಯೂ, ಸೆಂಟ್ ಜರ್ಮೈನ್ ಹೈಸ್ಕೂಲ್‌ನಲ್ಲಿಯೂ ನಡೆಯಿತು ಮುಂದೆ ಮದ್ರಾಸಿನ ಲಯೋಲಾ ಕಾಲೇಜಿನಲ್ಲಿ ಮುಂದುವರೆಯಿತು.

ವಿದ್ಯಾರ್ಥಿ ದೆಶೆಯಿಂದಲೂ ಇವರಿಗೆ ಸೈನಿಕ ಜೀವನ ಆಕರ್ಷಣೀಯವಾಗಿ ಕಂಡಿತ್ತು. ಎನ್.ಸಿ ಸಿ. (N.C.C.)ಯಲ್ಲಿ ಇವರು ಮುಖ್ಯಪಾತ್ರ ವಹಿಸುತ್ತಿದ್ದರು. ಪುಣೆಯ ಬಳಿಯಿರುವ ಖಡಕ್‌ವಾಸ್ಲಾ ಎಂಬಲ್ಲಿ ಇವರು ಕೆಲವು ವರ್ಷಗಳಿದ್ದು ಹೆಚ್ಚಿನ ಶಿಕ್ಷಣ ಪಡೆದರು. ಸಮುದ್ರಯಾನವೆಂದರೆ ಇವರಿಗೆ ಅತ್ಯಂತ ಆಸಕ್ತಿ. ಎಂತಲೇ ಇವರು ನೌಕಾಸೇನೆಗೆ ಸೇರಿಕೊಂಡರು. ಇವರು ರಷ್ಯಾಕ್ಕೆ ಹೋಗಿ

ಉನ್ನತ ವ್ಯಾಸಂಗಮಾಡಿ ಬಂದಿರುವರು. ಇತ್ತೀಚಿನ ಭಾರತಪಾಕ್ ಸಮರದಲ್ಲಿ ಇವರು ತೋರಿರುವ ಸಾಹಸಕ್ಕಾಗಿ ರಾಷ್ಟ್ರಪತಿಯವರು ಇವರಿಗೆ 'ನೌ ಸೇನಾ ಪದಕ' ವನ್ನಿತ್ತು ಗೌರವಿಸಿದ್ದಾರೆ.

ಶ್ರೀ ಲಜಾರೋರವರು ದೊಡ್ಡ ಕುಟುಂಬಕ್ಕೆ ಸೇರಿದವರು, ಇವರಿಗೆ ಮೂವರು ಅಕ್ಕಂದಿರೂ, ಇಬ್ಬರು ತಮ್ಮಂದಿರೂ ಇದ್ದಾರೆ. ಅಕ್ಕಂದಿರಲ್ಲಿ ಒಬ್ಬಾಕೆ ಇಂಗ್ಲೆಂಡಿನಲ್ಲಿಯೂ, ಇನ್ನೊಬ್ಬರು ಅಮೇರಿಕದಲ್ಲಿಯೂ, ಮತ್ತೊಬ್ಬರು ಬೆಂಗಳೂರಿನಲ್ಲಿಯೂ ಇದ್ದಾರೆ. ಇವರ ತಾಯಿ ಶ್ರೀಮತಿ ಡಿ. ಸ್ಯಾಮ್ ಲಜಾರೋರವರು ಖಾಸಗಿಯಾಗಿ ಒಂದು ಹೆರಿಗೆ ಆಸ್ಪತ್ರೆಯನ್ನು ನಡೆಸುತ್ತಿದ್ದಾರೆ. ಯುವಕ ಲಜಾರೋರವರಿಗೆ ಪಾಶ್ಚಾತ್ಯ ಸಂಗೀತದಲ್ಲಿ ವಿಶೇಷ ಆಸಕ್ತಿ.

ಯುವಕ ಲಜಾರೋರವರಿಗೆ ಉಜ್ವಲ ಭವಿಷ್ಯವಿದೆ. ಇವರಿಂದ ನಾಡಿಗೆ ಹೆಚ್ಚುಹೆಚ್ಚಿನ ಸೇವೆ ಸಲ್ಲುವಂತಾಗಲಿ: ಅವರಿಗೆ ಉನ್ನತ ಪ್ರಶಸ್ತಿ, ಪದವಿಗಳು ದೊರಕಲಿ.

ವಾರೆಂಟ್ ಆಫೀಸರ್ ರಂಗಪ್ಪ ರಂಗಸ್ವಾಮಿ

"ಕೇವಲ ಪದವಿಗಳು ಮುಖ್ಯವಲ್ಲ: ಡಿಗ್ರಿಗಳಿಂದಷ್ಟೇ ದೊಡ್ಡವರೆನಿಸಿಕೊಳ್ಳಲು ಸಾಧ್ಯವಿಲ್ಲ. ಯಾವುದಕ್ಕೂ ಶಕ್ತಿಬೇಕು, ಸಾಹಸಬೇಕು." ಎಂಬ ಮಾತುಗಳನ್ನು ಅನುಭವಿಗಳ ಮೂಲಕ ನಾವು ಆಗಾಗ ಕೇಳುತ್ತಿರುತ್ತೇವೆ. ಆದರೆ ಈ ಮಾತುಗಳಿಗೆ ಪೋಷಕವಾಗಿ ಒಂದು ಉದಾಹರಣೆ ಬೇಕಲ್ಲವೇ?

ಶ್ರೀ ರಂಗಪ್ಪ ರಂಗಸ್ವಾಮಿಯವರು ಈ ಮಾತಿಗೆ ಸರಿಯಾದ ಸಾಕ್ಷಿ-ತಕ್ಕ ಉದಾಹರಣೆ. ಇವರು ವಿಶ್ವವಿದ್ಯಾನಿಲಯದ ಯಾವ ಪದವಿಯನ್ನೂ ಗಳಿಸಿಲ್ಲ. ಆದರೆ ಅವರು ರಣರಂಗದಲ್ಲಿ ತೋರಿದ ಅಪ್ರತಿಮ ಸಾಹಸ ಯೋಧರಿಗೆಲ್ಲ ಆದರ್ಶವಾಗಿದೆ. ಸಮರ ಶಿಲ್ಪಿಗಳಾದ ಏರ್ ಮಾರ್ಷಲ್ ಪಿ. ಸಿ. ಲಾಲ್‌ರವರು ಶ್ರೀ ರಂಗಸ್ವಾಮಿಯವರಿಗೊಂದು ಪತ್ರ ಬರೆದು, ಅವರು ತೋರಿದ ಧೈರ್ಯವನ್ನೂ ಸಾಹಸವನ್ನೂ ಮೆಚ್ಚಿ ಪ್ರೋತ್ಸಾಹಿಸಿದ್ದಾರೆ. (ಈ ಪತ್ರವನ್ನು ನಾನು ಕಣ್ಣಾರೆ ಕಂಡು ಸಂತೋಷಪಟ್ಟಿದ್ದೇನೆ.) ಸೈನಿಕರಲ್ಲಿ ಈ ಒಂದು ಸಂಪ್ರದಾಯ ಬೆಳೆದುಬಂದಿರುವುದು ಶ್ಲಾಘನೀಯ. ಸಾಧಾರಣ ಒಬ್ಬ ಸಿಪಾಯಿಯಾಗಿರಲಿ, ಅವನು ತನ್ನ ಸಾಹಸವನ್ನು ತೋರಿದನೆಂದರೆ ಕೂಡಲೇ ಅದನ್ನು ಗುರ್ತಿಸಿ ಪತ್ರ ಬರೆದು ಶಹಭಾಶ್ ಎನ್ನುತ್ತಾರೆ. ಈ ಶಹಭಾಶ್‌ಗಿರಿ ಪಡೆಯುವುದು ಅಷ್ಟು ಸುಲಭಸಾಧ್ಯವಲ್ಲ. ಅದಕೆ

ಅರ್ಹನೆನಿಸುವಷ್ಟು ಸಾಹಸಿಯಾಗಿರಬೇಕು: ಧೈರ್ಯಶಾಲಿಯಾಗಿರಬೇಕು. ಆದರೆ ಸರ್ಕಾರದ ಸಿವಿಲ್ ಇಲಾಖೆಗಳಲ್ಲಿ ಒಬ್ಬ ನೌಕರ ಎಷ್ಟು ಕಷ್ಟಪಟ್ಟರೂ ಅವನಿಗೆ

ಮೇಲಧಿಕಾರಿಗಳಿಂದ ಒಂದು ಮೆಚ್ಚಿಕೆ ಪತ್ರ ದೊರೆಯುವುದೆಂದರೆ ಅದು ಕನಸೇ ಸರಿ.

ಶ್ರೀ ರಂಗಸ್ವಾಮಿಯವರು ಕಳೆದ ಸಾರಿ ನಡೆದ ಇಂಡೋ - ಪಾಕ್ ಸಮರದಲ್ಲಿ ಯಶಸ್ಸು ಗಳಿಸಿ 'ವಾಯು ಸೇನಾ ಪದಕ' ವನ್ನು ಪಡೆದರು. ಅಂತೆಯೇ ಇತ್ತೀಚಿನ ಯುದ್ಧದಲ್ಲಿಯೂ ತಮ್ಮ ಸಾಹಸವನ್ನು ಪ್ರದರ್ಶಿಸಿ ಮತ್ತೊಮ್ಮೆ ವಾಯು ಸೇನಾ ಪದಕವನ್ನು ಪಡೆದಿದ್ದಾರೆ. ಇದೀಗ ಹೆಮ್ಮೆಯ ಸಂಗತಿ: ಇಡೀ ನಾಡಿಗೇ ಕೀರ್ತಿ ತರುವಂಥ ಸುದ್ದಿ.

ಶ್ರೀ ರಂಗಸ್ವಾಮಿಯವರ ತಂದೆ ಶ್ರೀ ಐ. ಟಿ. ರಂಗಪ್ಪನವರು ಮೈಸೂರು ಸರ್ಕಾರದ ರೆವಿನ್ಯೂ ಇಲಾಖೆಯಲ್ಲಿ ಅಧಿಕಾರಿಗಳಾಗಿದ್ದರು. ಕಷ್ಟಪಟ್ಟು ದುಡಿಯುತ್ತಿದ್ದ ಕೆಚ್ಚೆದೆಯ ಕಟ್ಟಾಳು. ಹಗಲೆನ್ನದೆ ರಾತ್ರಿಯೆನ್ನದೆ ತಮ್ಮ ಕರ್ತವ್ಯದಲ್ಲಿ ತತ್ಪರರಾಗುತ್ತಿದ್ದರು. ಇವರು ವರ್ತೂರು ಹೋಬಳಿಯಲ್ಲಿ ರೆವಿನ್ಯೂ ಇನ್‌ಸ್ಪೆಕ್ಟರ್ ಆಗಿದ್ದ ಕಾಲದಲ್ಲಿ ನಾನಿವರನ್ನು ಕಂಡಿದ್ದೆ. ಎಷ್ಟೋ ಗ್ರಾಮಗಳಿಗೆ ನಾವಿಬ್ಬರೂ ಒಟ್ಟಿಗೆ ಹೋಗಿಬಂದಿದ್ದೇವೆ. ಗ್ರಾಮಾಂತರ ಪ್ರದೇಶದ ಅನುಭವ ಇವರಿಗೆ ಅಪಾರವಾಗಿತ್ತು.

"ತಂದೆಯಂತೆ ಮಗ: ದಾರದಂತೆ ಬಟ್ಟೆ" ಎಂಬ ಗಾದೆಯಂತೆ ಬಿಡುವಿಲ್ಲದ ದುಡಿಮೆಯೆಂಬ ಒಂದು ವಿಚಾರದಲ್ಲಿ ಶ್ರೀ ರಂಗಸ್ವಾಮಿಯವರು ತಂದೆಯ ಮೇಲ್ಪಂಕ್ತಿಯನ್ನೇ ಅನುಸರಿಸಿದ್ದಾರೆ. ಇವರು ೧೯೩೪ರ ಡಿಸೆಂಬರ್ ೧೬ರಂದು ಜನಿಸಿದರು. ಹಾಸನ ಜಿಲ್ಲೆಯ ಬೇಲೂರು ಇವರ ಸ್ಥಳ. ಬೆಂಗಳೂರಿನಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆ ಮುಗಿಸಿಕೊಂಡು ಶ್ರೀ ರಂಗಸ್ವಾಮಿಯವರು ಟೆಕ್ನಿಕಲ್ ಟ್ರೈನಿಂಗ್ ಕಾಲೇಜಿಗೆ ಸೇರಿದರು. ೧೯೫೦ರಲ್ಲಿ ಟೆಕ್ನಿಕಲ್ ಪರೀಕ್ಷೆಯಲ್ಲಿಯೂ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗಿ ವಾಯು ಸೇನೆಯಲ್ಲಿ ಸ್ಕ್ವಾಡ್ರನ್ನಾಗಿ ನೌಕರಿಗೆ ಸೇರಿದರು.

ವಿಮಾನ ಹಾರಾಟದಲ್ಲಿ ಇವರಿಗೆ ಅತ್ಯಂತ ಆಸಕ್ತಿಯಿತ್ತು. ತತ್ಫಲವಾಗಿ ೧೯೫೫ರಲ್ಲಿ ಇವರನ್ನು 'ಹೆವಿ ಬಾಂಬರ್'ಗಳಲ್ಲಿ 'ಫ್ಲೈಟ್ ಗನ್ನರ್' ಆಗಿ ನೇಮಿಸಲಾಯಿತು. ಈಗ ಅದೇ ಹುದ್ದೆಯಲ್ಲಿ ಮುಂದುವರೆದು ಶ್ರದ್ಧಾಸಕ್ತಿಗಳಿಂದ ಕೆಲಸ

ನಿರ್ವಹಿಸಿ ಮೇಲಧಿಕಾರಿಗಳ ಮನ್ನಣೆಗೆ ಪಾತ್ರರಾಗಿದ್ದಾರೆ. ಇದೇ ಸಮಯ ದಲ್ಲಿಯೇ ಹೆಚ್ಚಿನ ಶಿಕ್ಷಣ ಪಡೆಯಲು ಇವರನ್ನು ರಷ್ಯಾ ದೇಶಕ್ಕೆ ಕಳುಹಿಸಲಾಗಿ ದ್ದಿತು. ಅಲ್ಲಿ ಕೆಲವು ಕಾಲವಿದ್ದು ಅಲ್ಲಿಯ ವಿಮಾನಗಳ ಬಗ್ಗೆ ಹೆಚ್ಚಿನ ಮಾಹಿತಿ ಪಡೆದು ಹಿಂತಿರುಗಿದರು. ಈ ಬಾರಿ ಬಾಂಬರ್ ವಿಮಾನದಲ್ಲಿ ಕುಳಿತು ಗಗನ ವಿಹಾರಿಗಳಾಗಿ, ಶತ್ರುಗಳ ನೆಲೆಗಳನ್ನು ನಿರ್ಮೂಲ ಮಾಡುವುದೇ ಇವರ ಮುಖ್ಯ ಕೆಲಸವಾಗಿತ್ತು.

೧೯೬೧ರಲ್ಲಿ ಗೋವಾದಲ್ಲಿ ನಡೆದ ಯುದ್ಧದಲ್ಲಿಯೂ ಸಹ ಶ್ರೀ ರಂಗಸ್ವಾಮಿ ಯವರು ಭಾಗವಹಿಸಿದ್ದರು. ಅಲ್ಲಿಯೂ ಜಯಭೇರಿ ಹೊಡೆದು ಭಾರತಕ್ಕೆ ಕೀರ್ತಿ ತಂದರು.

೧೯೬೨ರಲ್ಲಿ ಚೀಣಾದವರು ನಮ್ಮ ಗಡಿಯನ್ನು ಪ್ರವೇಶಿಸಿ ಅನಧಿಕೃತವಾಗಿ ಯುದ್ಧ ಹೂಡಿದುದು ಸರಿಯಷ್ಟೆ. ಆಗ ವಾಯುಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಶ್ರೀ ರಂಗಸ್ವಾಮಿಯವರು ಅಪ್ರತಿಮ ಸಾಹಸವನ್ನು ಪ್ರದರ್ಶಿಸಿ, ಚೀಣೀ ಸೈನಿಕರ ನೆಲೆಗಳನ್ನು ಧ್ವಂಸಗೊಳಿಸಿದರು. ಮೇಲಣ ಅಧಿಕಾರಿಗಳ ಪ್ರಶಂಸೆಯನ್ನೂ ಪಡೆ ದರು. ಆಗ ಭಾರತದ ವಾಯು ಪಡೆಯ ನಿರ್ದೇಶಕ-ಆಜ್ಞಾಧಿಕಾರಿಗಳಾಗಿದ್ದ ಏರ್-ವೈಸ್-ಮಾರ್ಷಲ್ ಇ.ಡಬ್ಲ್ಯು. ಪಿಂಟೋರವರು ಶ್ರೀ ರಂಗಸ್ವಾಮಿಯವರಿಗೆ ಒಂದು ಪತ್ರ ಬರೆದು, ಇವರ ಅಪೂರ್ವ ಹಾಗೂ ಅಪ್ರತಿಮ ಸಾಹಸವನ್ನು ಕೊಂಡಾಡಿ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಮೊನ್ನೆ ನಡೆದ ಭಾರತ-ಪಾಕ್ ಯುದ್ಧದಲ್ಲಿಯೂ ಸಹ ಇವರು ಶತ್ರು ವಲಯ ಗಳಲ್ಲಿ ಮುನ್ನುಗ್ಗಿ, ಅವರ ಶಿಬಿರಗಳನ್ನು ಪತ್ತೆಹಚ್ಚಿ, ನೆಲೆಗಳನ್ನು ನಾಶಪಡಿಸಿರು ವರು. ಶತ್ರುಗಳು ರಭಸದಿಂದ ವಿಮಾನಗಳನ್ನು ನುಗ್ಗಿಸುತ್ತಿದ್ದರೂ ಬೆಂಕಿಯನ್ನು ಕಾರುತ್ತಿದ್ದರೂ ಜಗ್ಗದೆ ರಣರಂಗದ ಕಲಿಯಾಗಿ ಶ್ರೀ ರಂಗಸ್ವಾಮಿಯವರು ಶತ್ರು ಗಳನ್ನು ಸದೆಬಡಿದಿರುವರು. ಎಷ್ಟೋ ಸಂದರ್ಭಗಳಲ್ಲಿ ಬಾಂಬ್ ದಾಳಿ ಅನಿವಾರ್ಯ ವಾಗಿತ್ತು. ಭಾರತೀಯ ವಾಯು ಪಡೆಗಳ ಹೊಡೆತವನ್ನು ಸಹಿಸಲಾರದೆ ಪಾಕ್ ವಿಮಾನಗಳು ಹುಳುಗಳುದುರಿದಂತೆ ಉರುಳಿ ಬೀಳುತ್ತಿದ್ದುವು. ಶ್ರೀ ರಂಗಸ್ವಾಮಿ ಯವರು ವಿಮಾನದಲ್ಲಿ ಕುಳಿತು ಸಮರಭೂಮಿಗೆ ಹೊರಟರೆಂದರೆ ಶತ್ರು ಪಡೆಗಳ ನಾಶ ಮಾಡದೆ ಹಿಂದಿರುಗಿದ ಸಂದರ್ಭಗಳೇ ಇರಲಿಲ್ಲ.

ಹೀಗೆ ಮೇಲಿಂದ ಮೇಲೆ ಸೇನಾಧಿಪತಿಗಳಿಂದಲೂ ರಾಷ್ಟ್ರಪತಿಗಳಿಂದಲೂ ವಿವಿಧ ಪ್ರಶಸ್ತಿಗಳನ್ನು ಪಡೆದ ಶ್ರೀ ರಂಗಸ್ವಾಮಿಯವರು ತುಂಬಾ ಸರಳ ಹೃದಯರು. ಹಾಗೂ ವಿನಯಪರರು. ಬೇಟೆಯಾಡುವುದೆಂದರೆ ಇವರಿಗೆ ಅತ್ಯುತ್ಸಾಹ. ಆದರೆ ಅದಕ್ಕೆ ವಿರಾಮವೆಲ್ಲಿ? ಶತ್ರುಗಳ ಬೇಟೆಯಾಡುವುದೇ ಸಧ್ಯಕ್ಕೆ ಇವರ ಹವ್ಯಾಸ ವಾಗಿದೆ.

ಕಳೆದ ಐದು ವರ್ಷಗಳಿಂದಲೂ ಇವರು ವಾಯುಪಡೆಯ 'ಫ್ರೀಗನ್ನರಿ ಟ್ರೇಡ್' ನಲ್ಲಿ ಪರೀಕ್ಷಕರಾಗಿ ತಜ್ಞರೆನಿಸಿಕೊಂಡಿದ್ದಾರೆ.

ಇವರಿಗೆ ಐದು ಮಂದಿ ಸಹೋದರರಿರುವರು. ಹೊಸ ಎಲೆಕ್ಟ್ರಿಕ್ ಕಾರ್ಖಾನೆಯಲ್ಲಿ ಪರ್ಚೇಸ್ ಆಫೀಸರ್ ಆಗಿರುವ ಶ್ರೀ ಸತ್ಯನಾರಾಯಣ ಅವರು ಮೊದಲನೆಯವರು. ಸ್ಟೇಟ್ ಅಕೌಂಟ್ಸ್ ಇಲಾಖೆಯಲ್ಲಿರುವ ಶ್ರೀ ಆರ್. ರಾಮಚಂದ್ರ ಅವರು ಎರಡನೆಯವರು. ವ್ಯವಸಾಯ ಇಲಾಖೆಯಲ್ಲಿ ಅಧಿಕಾರಿಗಳಾಗಿರುವ ಶ್ರೀ ಆರ್. ಕೇಶವಮೂರ್ತಿಯವರು ಮೂರನೆಯವರು. ಬೌರಿಂಗ್ ಆಸ್ಪತ್ರೆಯಲ್ಲಿ ಸೀನಿಯರ್ ಹೌಸ್ ಸರ್ಜನ್ ಆಗಿರುವ ಶ್ರೀ ಆರ್. ಬಾಲಕೃಷ್ಣ ಅವರು ನಾಲ್ಕನೆಯವರು. ಕಡೆಯವರಾದ ಶ್ರೀ ಆರ್. ಚಂದ್ರಶೇಖರ್‌ರವರು ಬಿ.ಎಸ್‌ಸಿ. ತರಗತಿಯ ವಿದ್ಯಾರ್ಥಿಗಳಾಗಿದ್ದಾರೆ.

ಶ್ರೀ ರಂಗಸ್ವಾಮಿಯವರು ಇನ್ನೂ ಉನ್ನತ ಪದವಿಗೇರಿ, ಉನ್ನತ ಮಟ್ಟದ ಪ್ರಶಸ್ತಿಗಳನ್ನು ಪಡೆದು ನಾಡಿಗೆ ಹೆಚ್ಚಿನ ಸೇವೆ ಸಲ್ಲಿಸುವಂತಾಗಲಿ. ಅವರು ನೂರ್ಕಾಲ ಬಾಳಿ ಬದುಕಲೆಂದು ಹೃತ್ಪೂರ್ವಕವಾಗಿ ಹಾರೈಸೋಣ.

●

ಲೆಫ್ಟಿನೆಂಟ್ ರಾಯದುರ್ಗ ರಾಮಮೂರ್ತಿ

ಬಾಂಗ್ಲಾ ದೇಶದ ಹೋರಾಟದಲ್ಲಿ ಭಾರತ ಸೈನ್ಯದ ಪಾತ್ರ ತುಂಬಾ ಹಿರಿದಾಗಿದೆ. ಪೂರ್ವ ಬಂಗಾಳದವರು ಪಾಕ್ ದಬ್ಬಾಳಿಕೆಗೆ ಸಿಕ್ಕಿ ಹಲವು ವಿಧವಾದ ಕಷ್ಟನಷ್ಟಗಳನ್ನು ಅನುಭವಿಸಬೇಕಾಯಿತು. ಹೇಗಾದರೂ ಮಾಡಿ ಅವರನ್ನು ಕಷ್ಟಗಳಿಂದ ಪಾರು ಮಾಡಬೇಕೆಂದು ನಮ್ಮ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ನಿರ್ಧರಿಸಿದರು. ಸೇನಾಧಿಪತಿಗಳೊಡನೆ ಸಮಾಲೋಚನೆ ನಡೆಸಿ ಬಂಗ್ಲಾ ದೇಶದೊಳಕ್ಕೆ ನುಗ್ಗುವಂತೆ ಭಾರತ ಸೈನ್ಯಕ್ಕೆ ಆಜ್ಞೆ ಮಾಡಿದರು. ಬಹಳ ಶೀಘ್ರವಾಗಿಯೇ ಭಾರತಕ್ಕೆ ಜಯ ಲಭಿಸಿತು. ಪಾಕ್ ಸೈನಿಕರು ಸೋತು ಶರಣಾಗತರಾದರು.

ಈ ವಿಜಯೋತ್ಸವದಲ್ಲಿ ಲೆಫ್ಟಿನೆಂಟ್ ರಾಯದುರ್ಗ ರಾಮಮೂರ್ತಿಯವರೂ ಭಾಗಿಗಳಾಗಿದ್ದಾರೆ. ಪೂರ್ವ ಪಾಕಿಸ್ತಾನ ನಮ್ಮ ಶತ್ರುಗಳ ನೆಲೆಯಾಗಿತ್ತೆಂದು ಬೇರೆ ಹೇಳಬೇಕಾಗಿಲ್ಲ. ಆದ್ದರಿಂದ ಭಾರತದ ಸೈನಿಕರು ಪೂರ್ವ ಪಾಕಿಸ್ತಾನದೊಳಗೆ ಮುನ್ನುಗ್ಗಿ ಪಾಕ್ ಸೈನಿಕರನ್ನು ಸದೆಬಡಿದರು. ಅಲ್ಲಿ ಸಾಹಸದಿಂದ ಹೋರಾಡಿ

ದವರಲ್ಲಿ ಶ್ರೀ ರಾಯದುರ್ಗ ರಾಮಮೂರ್ತಿಯವರೂ ಒಬ್ಬರು. ಖುಲ್ನಾನವೆಗೂ ನುಗ್ಗಿ ದಂಗೆಯನ್ನು ಹತೋಟಿಗೆ ತಂದರಲ್ಲದೆ ಅನೇಕ ಶತ್ರುಗಳನ್ನು ಸೆರೆ ಹಿಡಿದರು.

ಇವರ ಅಪ್ರತಿಮ ಸಾಹಸವನ್ನು ಗಮನಿಸಿ ಭಾರತದ ರಾಷ್ಟ್ರಪತಿಯವರು ಇವರಿಗೆ ಸೇನಾಪದಕವನ್ನು ನೀಡಿದ್ದಾರೆ.

ಬಳ್ಳಾರಿ ಜಿಲ್ಲಾಧಿಕಾರಿಗಳು ೧೯೭೨ರ ಜನವರಿ ಇಪತ್ತಾರರಂದು (ಗಣರಾಜ್ಯೋತ್ಸವದ ದಿನ) ಶ್ರೀ ರಾಮಮೂರ್ತಿಯವರನ್ನು ಭೇಟಿ ಮಾಡಿ ತಮ್ಮ ಮೆಚ್ಚಿಕೆಯನ್ನು ವ್ಯಕ್ತಪಡಿಸಿದರು. ಅದೇ ದಿನ ಬಳ್ಳಾರಿಯ ಪುರಸಭೆಯವರು ಸನ್ಮಾನ ಸಭೆಯೊಂದನ್ನು ಏರ್ಪಡಿಸಿ ಶ್ರೀ ರಾಮಮೂರ್ತಿಯವರಿಗೆ ಸುವರ್ಣ ಪದಕವನ್ನಿತ್ತು ಗೌರವಿಸಿದರು.

ಶ್ರೀ ರಾಮಮೂರ್ತಿಯವರು ೧೯೪೩ರ ನವೆಂಬರ್ ೨೭ರಂದು ಬಳ್ಳಾರಿ ಜಿಲ್ಲೆಯ ಹೊಸಪೇಟೆಯಲ್ಲಿ ಜನಿಸಿದರು. ಇವರ ತಂದೆ ರಾಯದುರ್ಗದ ಅನಂತಾಚಾರ್ಯರು ಪ್ರಾಥಮಿಕ ಶಾಲಾಧ್ಯಾಪಕರಾಗಿ ಜನಾನುರಾಗಿಗಳಾಗಿದ್ದರು. ತಾಯಿ ಶ್ರೀಮತಿ ಯಮುನಾಬಾಯಿಯವರು. ಇವರ ಪ್ರಾಥಮಿಕ ಶಿಕ್ಷಣ ಹೊಸಪೇಟೆಯ ಮುನಿಸಿಪಲ್ ಮಾಡಲ್ ಶಾಲೆಯಲ್ಲಾಯಿತು. ಅನಂತರ ಮುನಿಸಿಪಲ್ ಹೈಸ್ಕೂಲ್‌ನಲ್ಲಿ ಇವರ ವ್ಯಾಸಂಗ ಮುಂದುವರೆಯಿತು. ೧೯೫೯ರಲ್ಲಿ ಇವರು ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಅನಂತರ ಬಳ್ಳಾರಿಯಲ್ಲಿರುವ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಸಿವಿಲ್ ಡಿಪ್ಲೊಮ ಪಡೆದರು. ಅನಂತರ ವೀರಶೈವ ಕಾಲೇಜಿಗೆ ಸೇರಿ ಪಿ.ಯು.ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾದರು. ಈ ಸಂದರ್ಭದಲ್ಲಿಯೇ ಇವರ ಭವಿಷ್ಯ ಜೀವನ ರೂಪುಗೊಳ್ಳುವ ಸಂದರ್ಭ ಒದಗಿತು. ವಿದ್ಯಾರ್ಥಿ ದೆಶೆಯಲ್ಲಿ ಎನ್.ಸಿ.ಸಿ. ದಳಕ್ಕೆ ಸೇರಿಕೊಂಡರು. ಬಂದೂಕದಿಂದ ಗುರಿಯಿಟ್ಟು ಹೊಡೆಯುವುದರಲ್ಲಿ ಇವರದು ಮೇಲುಗೈಯಾಗಿತ್ತು. ಇವರ ಈ ಸಾಧನೆಯೇ ಮೇಲ್ಪಟ್ಟ ಅಧಿಕಾರಿಗಳ ಗಮನವನ್ನು ಸೆಳೆದು ಒಲವು ಮೂಡಿಸಿತು.

ಇವರು ಸೈನ್ಯಕ್ಕೆ ಸೇರುವುದಾಗಿ ತಿಳಿಸಿದ ಕೂಡಲೇ ಯಾವ ಅಭ್ಯಂತರವೂ ಇಲ್ಲದೆ ಅನುಮತಿ ದೊರಕಿತು. ಅನಂತರ ಇವರು ಬೆಂಗಳೂರಿನ ಮಿಲಿಟರಿ ಇಂಜನಿಯರಿಂಗ್ಸ್‌ನಲ್ಲಿ ಶಿಕ್ಷಣ ಪಡೆದು ಬಳಿಕ ಕಲ್ಕತ್ತೆಯಲ್ಲಿ ಜೂನಿಯರ್ ಕಮಿಷನ್ ಆಫೀ

ಸರ್ ಆಗಿ ನೇಮಕಗೊಂಡರು. ಅಲ್ಲಿಂದ ಇವರನ್ನು ಅಂಡಮಾನ್ ದ್ವೀಪಕ್ಕೆ ವರ್ಗಾಯಿಸಲಾಯಿತು. ೧೯೬೬ರಿಂದ ೧೯೬೭ರ ವರೆಗೆ ಒಂದು ವರ್ಷದ ಕಾಲ ಅಲ್ಲಿದ್ದು ಪುನಃ ಕಲ್ಕತ್ತೆಗೆ ಮರಳಿದರು. ಆಗ ಇವರನ್ನು ಒಂದು ದುಃಖದ ಸುದ್ದಿ ಸ್ವಾಗತಿಸಿತು. ಅವರ ತಂದೆ ರಾಯದುರ್ಗ ಅನಂತಾಚಾರ್ಯರು ವೈಕುಂಠವಾಸಿಗಳಾಗಿದ್ದರು. ಆದರೂ ಎದೆಗುಂದದೆ ರಾಮಮೂರ್ತಿಯವರು ಆ ಭರಿಸಲಾರದ ದುಃಖವನ್ನು ಅಡಗಿಸಿಕೊಂಡು ಎಂದಿನಂತೆ ತಮ್ಮ ಕರ್ತವ್ಯದಲ್ಲಿ ನಿರತರಾದರು.

ಅನಂತರ ಇವರು ಮದ್ರಾಸ್‌ನಲ್ಲಿರುವ ಒ.ಟಿ.ಎಸ್. ಟ್ರೈನಿಂಗ್ ಸ್ಕೂಲ್‌ನಲ್ಲಿ ಶಿಕ್ಷಣ ಪಡೆದು, ಪೂನಾದ ಬಳಿಯಿರುವ ಕರ್ಕಿ ಎಂಬಲ್ಲಿ ಮತ್ತೆ ಆರು ತಿಂಗಳ ತರಬೇತಿ ಪಡೆದರು. ಈ ಶಿಕ್ಷಣ ಪಡೆದ ಬಳಿಕ ಇವರು ಬಿಹಾರ ಪ್ರಾಂತದ ಫೈಜಾಬಾದ್‌ನಲ್ಲಿ 2nd ಲೆಫ್ಟಿನೆಂಟ್ ಆಗಿ ನೇಮಿಸಲ್ಪಟ್ಟರು. ಇಲ್ಲಿಂದಲೇ ಇವರ ಯಶಸ್ಸು ಆರಂಭವಾಯಿತೆನ್ನಬಹುದು. ಕಮಿಷನ್ಡ್ ಅಧಿಕಾರ ಪಟ್ಟ ದೊರಕಿದ ಕೆಲವೇ ದಿನಗಳಲ್ಲಿ ಕುಮಾರಿ ಇಂದಿರಾರವರೊಡನೆ ಇವರ ವಿವಾಹವಾಯಿತು. ಈಗ ಇವರು ಆದರ್ಶ ಗೃಹಸ್ಥರಾಗಿದ್ದಾರೆ.

ಲೆಫ್ಟಿನೆಂಟ್ ಪದವಿ ಗಳಿಸಿದ ಶ್ರೀ ರಾಮಮೂರ್ತಿಯವರು ಯುದ್ಧದಲ್ಲಿ ಜಯಗಳಿಸಿ ಕನ್ನಡ ನಾಡಿಗೆ ಕೀರ್ತಿಯನ್ನು ತಂದಿದ್ದಾರೆ. ಇವರ ಮೂಲಕ ಕನ್ನಡ ನಾಡಿನ ಯಶಸ್ಸು ರಣರಂಗದಲ್ಲಿಯೂ ಹಬ್ಬಿದಂತಾಗಿದೆ. ಉಜ್ವಲ ಭವಿಷ್ಯ ಪಡೆದಿರುವ ಇವರಿಗೆ ಭಗವಂತನ ಕೃಪೆ ಸದಾ ಇರಲಿ.

ಹುತಾತ್ಮ ಹವಾಲ್ದಾರ ಮನೋಹರ ಬಾಬಾಸಾಹೇಬ ರಾಣೆ

ಇತ್ತೀಚಿನ ಭಾರತ-ಪಾಕ್ ಸಮರದಲ್ಲಿ ಹುತಾತ್ಮರಾದ ಹಲವಾರು ಯೋಧರಲ್ಲಿ ಕನ್ನಡನಾಡಿನ ವೀರಯೋಧ ಹವಾಲ್ದಾರ್ ಮನೋಹರ ಬಾಬಾಸಾಹೇಬ ರಾಣೆಯವರೂ ಒಬ್ಬರು.

ಬೆಳಗಾವಿ ಜಿಲ್ಲೆಯ ಈ ಯೋಧ ತನ್ನ ಅಮೋಘ ಪೌರುಷಕ್ಕಾಗಿ ತನ್ನ ಬಲಿದಾನದ ನಂತರ ಶೌರ್ಯಪ್ರಶಸ್ತಿಯಾದ “ಸೇನಾಪದಕವನ್ನು” ಪಡೆದಿರುವರು.

ಇವರು ಬೆಳಗಾವಿ ಜಿಲ್ಲೆಯ ಸಾಮಂತವಾಡಿ ತಾಲ್ಲೂಕಿನ ಸಾಟ್ಲೆ ಗ್ರಾಮದಲ್ಲಿ ಜನಿಸಿದರು. ಇವರ ಮನೆತನವೇ ಯೋಧರ ಮನೆತನವಾಗಿದೆ. ಇವರ ಅಣ್ಣ ಶ್ರೀ ದತ್ತಾತ್ರರಾಮ್ ಬಿ. ರಾಣೆ ಅವರು ಈಗಲೂ ಮರಾಠಾ ಲೈಟ್ ಇನ್‌ಫೆಂಟ್ರಿ ಡಿವಿಜನ್‌ನಲ್ಲಿ ಜೆ. ಸಿ. ಒ. ಆಗಿ ಸೇವೆ ಸಲ್ಲಿಸುತ್ತಿರುವರು. ದಿವಂಗತ ಮನೋಹರ ರಾಣೆಯವರು ೧೯೬೩ರಲ್ಲಿ ಬೆಳಗಾಂವ ಮರಾಠಾ ರೆಜಿಮೆಂಟ್ ಸೆಂಟರಿನಲ್ಲಿ ಸಿಪಾಯಿಯಾಗಿ

ಸೇರಿದರು. ೧೯೬೯ರಲ್ಲಿ ಅವರಿಗೆ ಹವಾಲ್ದಾರ್ ಹುದ್ದೆಗೆ ಬಡ್ತಿ ದೊರಕಿತು.

ಸಮರದಲ್ಲಿ ಹೋರಾಡುತ್ತಿದ್ದ ಅವರು ಬಂಗ್ಲಾದೇಶದ ಜಿನಾಪುರ ಜಿಲ್ಲೆಯ ಪಚಗ್ಡದಲ್ಲಿ ವೀರಮರಣವನ್ನಪ್ಪಿದರು. ಶ್ರೀ ರಾನೆಯವರ ಮರಣದ ನಂತರ ಅವರ ಕಂಪೆನಿ ಕಮ್ಯಾಂಡರ್ ಮೇಜರ್ ಡಿ. ಆರ್. ಜಾದವ್‌ರವರು ದತ್ತಾರಾಮ್ ಬಿ. ರಾನೆಯವರಿಗೆ ಬರೆದಿರುವ ಪತ್ರದಲ್ಲಿ—"ನಾನು ಆತನ ಬಗ್ಗೆ ಯೋಚಿಸಲೂ ಸಾಧ್ಯವಿಲ್ಲದಂಥವನಾಗಿದ್ದೇನೆ. ಆತನ ಶಿಸ್ತು, ಸಂಯಮ, ನಡೆವಳಿಕೆಗಳು ಅನು ಕರಣೀಯವಾದುದು" ಎಂದು ಬರೆದು ತಮ್ಮ ಮೆಚ್ಚುಗೆಯನ್ನು ಸೂಚಿಸುವರು.

೧೯೭೨ರ ಜನವರಿ ೧೯ ರಂದು ಹುತಾತ್ಮ ರಾನೆಯವರ ಧರ್ಮಪತ್ನಿ ಶ್ರೀಮತಿ ಸುನೀತಾ ರಾನೆಯವರು ತಮ್ಮ ಪ್ರಥಮ ಶಿಶುವಿಗೆ ಜನ್ಮವಿತ್ತರು. ಪರಾಕ್ರಮಿ ಯಾಗಿದ್ದ ತನ್ನ ತಂದೆಯ ಮುಖ ಕಾಣುವ ಯೋಗ ಆ ಶಿಶುವಿಗೆ ಇಲ್ಲದಂತಾ ದರೂ, ತನ್ನ ತಂದೆ ರಾಷ್ಟ್ರಕ್ಕಾಗಿ ತನ್ನನ್ನೇ ಬಲಿದಾನವಾಗಿತ್ತ ವೀರ ಯೋಧನೆಂದು ಎದೆತಟ್ಟಿ ಹೇಳುವ ಭಾಗ್ಯವಾದರೂ ಇದೆ.

ಜಿಲ್ಲಾ ಸೈನಿಕ, ನಾವಿಕ ಮತ್ತು ವೈಮಾನಿಕರ ಮಂಡಳಿಯು ಈ ಮಹಾ ಯೋಧನಿಗೆ ಶ್ರದ್ಧಾಂಜಲಿ ಅರ್ಪಿಸಲು ಸಭೆಯೊಂದನ್ನು ನಡೆಸಬೇಕೆಂಬ ಅಪೇಕ್ಷೆ ಯನ್ನು ಹೊಂದಿರುವುದಲ್ಲದೆ, ಆ ಸಭೆಯಲ್ಲಿ ಭಾಗವಹಿಸುವ ಶ್ರೀಮತಿ ರಾನೆಯವರಿಗೆ ೮,೫೦೦ ರೂ. ಗಳ ಪರಿಹಾರಧನ, ಒಂದು ಹೊಲಿಗೆಯ ಯಂತ್ರ ಮತ್ತು ಹೊಸ ದಾಗಿ ಕಟ್ಟಲಾದ ಒಂದು ಮನೆ ಇಷ್ಟನ್ನೂ ಸಲ್ಲಿಸಬೇಕೆಂಬ ಯೋಜನೆಯನ್ನೂ ಹಾಕಿಕೊಂಡಿದೆ.

●

ಸೆಕೆಂಡ್ ಲೆಫ್ಟಿನೆಂಟ್ ಜಿ. ಆರ್. ಗಾಂವ್‌ಕರ್

ಮೊನ್ನಿನ ಭಾರತ-ಪಾಕ್ ಯುದ್ಧದಲ್ಲಿ ಬಾಂಗ್ಲಾದೇಶದ ವಿಮೋಚನಾ ಕಾರ್ಯದಲ್ಲಿ ಪಾಲ್ಗೊಂಡು ತಮ್ಮ ಶೌರ್ಯವನ್ನು ಪ್ರದರ್ಶಿಸಿರುವುದಕ್ಕಾಗಿ ಸೆಕೆಂಡ್ ಲೆಫ್ಟಿನೆಂಟ್ ಜಿ. ಆರ್. ಗಾಂವ್‌ಕರ್‌ರವರಿಗೆ ಸೇನಾಪದಕವನ್ನು ನೀಡಲಾಗಿದೆ.

ಇವರು ಉತ್ತರ ಕನ್ನಡ ಜಿಲ್ಲೆಯವರು. ಕಾರವಾರದ ಬಳಿಯಿರುವ ಆಮಡಹಳ್ಳಿ ಇವರ ಊರು. ವಾರೆಂಟ್ ಆಫೀಸರ್ ಶ್ರೀ ಆರ್. ಜಿ. ಗಾಂವ್‌ಕರ್ ರವರ ಪುತ್ರರಿವರು. ಇವರ ಜನನ ೭-೮-೧೯೪೯ ರಲ್ಲಾಯಿತು.

ಈಗ ಇವರಿಗೆ ಕೇವಲ ಇಪ್ಪತ್ತನಾಲ್ಕು ವರ್ಷವಯಸ್ಸು. ಇವರು ಕಳೆದ ವರ್ಷವಷ್ಟೆ ಅಂದರೆ ೧೯೭೦ರಲ್ಲಿ ಭೂಸೇನೆಯಲ್ಲಿ ಸೇರಿಕೊಂಡರು. (ನಂ ೨೨ ಮೌಂಟೆನ್ ರೆಜಿಮೆಂಟ್) ೧೪-೩-೭೧ರಲ್ಲಿ ಕಮಿಷನ್ ಪಡೆದರು. ಇಷ್ಟು ಬೇಗ



ಸೇನಾಪದಕದ ಪ್ರಶಸ್ತಿಗಳಿಸಿರುವುದು ಶ್ಲಾಘನೀಯವೇ ಸರಿ. ತಮ್ಮ ಶಾಲೆಯ ಶಿಕ್ಷಣ ಮುಗಿದ ಬಳಿಕ ಇವರು ಬೆಳಗಾಂನಲ್ಲಿರುವ ಮಿಲಿಟರಿ ಶಾಲೆಗೆ ಸೇರಿ ಶಿಕ್ಷಣ ಪಡೆದರು. ನೌಕರಿಗೆ ಸೇರಿದ ಕೆಲವೇ ತಿಂಗಳುಗಳಲ್ಲಿ ಧೈರ್ಯದಿಂದ ಹೋರಾಡಿ ತಾವು ಓದಿದ ಶಾಲೆಗೂ, ಮಾತೃಭೂಮಿಯಾದ ಕನ್ನಡನಾಡಿಗೂ ಕೀರ್ತಿ ತಂದಿದ್ದಾರೆ.

ತಂದೆ–ಮಕ್ಕಳಿಬ್ಬರೂ ಭಾರತದ ಸೇನೆಯಲ್ಲಿ ಸೇರಿ ಸೇವೆ ಸಲ್ಲಿಸುತ್ತಿರುವುದು ಅತ್ಯಂತ ಸ್ತುತ್ಯರ್ಹವಾದ ಸಂಗತಿ.

●

ಲೆಫ್ಟಿನೆಂಟ್ ಜಾನ್ ಟಿ. ಡಿಸೌಜ

ಲೆಫ್ಟಿನೆಂಟ್ ಜಾನ್ ಟಿ. ಡಿಸೌಜರವರು ಬೆಂಗಳೂರಿನವರೇ ಆಗಿರುವರು. ಇವರು ಭೂಸೇನೆಯಲ್ಲಿ ಸೇರಿ ಇತ್ತೀಚಿನ ಭಾರತ-ಪಾಕ್ ಯುದ್ಧದಲ್ಲಿ ಅಪಾರ ಸೇವೆ ಸಲ್ಲಿಸಿರುವುದಕ್ಕಾಗಿ ರಾಷ್ಟ್ರಪತಿಯವರು ಇವರಿಗೆ "ಸೇನಾಪದಕ"ವನ್ನಿತ್ತು ಗೌರವಿಸಿದ್ದಾರೆ.

ಇವರ ತಂದೆ ಲೆಫ್ಟಿನೆಂಟ್ ಕರ್ನಲ್ ಟಿ. ಎಲ್. ಜೆ. ಡಿಸೌಜರವರು 'ಏಳನೆಯ ಲೈಟ್ ಕ್ಯಾವೆಲ್ರಿ'ಯ ಸೇನಾನಾಯಕರಾಗಿದ್ದರು. ಇವರ ಚಿಕ್ಕತಾತಂದಿರಾದ ಕರ್ನಲ್ ಎ. ಜೆ. ಡಿಸೌಜರವರು ಮೊದಲನೆಯ ಮಹಾಯುದ್ಧದಲ್ಲಿ ಭಾಗವಹಿಸಿ 'ಮಿಲಿಟರಿಕ್ರಾಸ್' ಪ್ರಶಸ್ತಿಯನ್ನು ಪಡೆದಿದ್ದರು. ಇನ್ನೊಬ್ಬ ತಾತಂದಿರಾದ ಶ್ರೀ ಪಿ. ಜಿ. ಡಿಸೌಜರವರು ಮೈಸೂರು ನ್ಯಾಯವಿಧಾಯಕ ಸಭೆಯ ಸದಸ್ಯರಾಗಿದ್ದರು.

ಲೆಫ್ಟಿನೆಂಟ್ ಜಾನ್ ಟಿ. ಡಿಸೌಜರವರ ವಿದ್ಯಾಭ್ಯಾಸವು ಅಲಹಾಬಾದಿನ ಸೆಂಟ್ ಜೋಸೆಫ್ ಕಾಲೇಜಿನಲ್ಲಿ ನಡೆಯಿತು. ಅನಂತರ ಇವರು ೧೯೬೪ರಲ್ಲಿ

ಡೆಹರಾಡೂನಿನ ಇಂಡಿಯನ್ ಮಿಲಿಟರಿ ಅಕ್ಯಾಡೆಮಿಯಲ್ಲಿ ಹೆಚ್ಚಿನ ಶಿಕ್ಷಣ ಪಡೆದು ಕಮಿಷನ್ಡ್ ಆಫೀಸರ್ ಆದರು.

'ಏಳನೆಯ ಲೈಟ್‌ಕ್ಯಾವೆಲ್ರಿ'ದಳವು ಭಾರತದ ಸೇನಾದಳಗಳಲ್ಲಿ ಅತ್ಯಂತ ಹಳೆಯ ದಳವೆಂದು ಪ್ರಖ್ಯಾತವಾಗಿದೆ. ಈ ದಳದಲ್ಲಿಯೇ ಜಾನ್ ಡಿಸೌಜ ರವರ ತಂದೆ ಸೇವೆಸಲ್ಲಿಸಿದ್ದರಷ್ಟೆ. ಅದೇ ದಳಕ್ಕೇ ಇವರನ್ನೂ ಸೇರಿಸಲಾಯಿತು. ತಂದೆ-ಮಗ ಒಂದೇ ದಳದಲ್ಲಿ ಹೀಗೆ ಸೇವೆ ಸಲ್ಲಿಸಿರುವುದು ಒಂದು ಅಪೂರ್ವ ಸಂಗತಿಯಾಗಿದೆ.

ಲೆಫ್ಟಿನೆಂಟ್ ಜಾನ್ ಡಿಸೌಜರವರು ಇನ್ನೂ ತರುಣರು. ವಂಶಪಾರಂಪರ್ಯ ವಾಗಿ ಬಂದಿರುವ ಶೌರ್ಯ ಪರಾಕ್ರಮಗಳು ಇವರಲ್ಲಿ ಅಡಗಿವೆ. ಇವರ ಭವಿಷ್ಯ ಉಜ್ವಲವಾಗಲೆಂದೇ ನಮ್ಮ ಹಾರೈಕೆ.

ಸ್ಕ್ವಾಡ್ರನ್ ಲೀಡರ್ ಎನ್. ಜೆ. ಡಿ. ಕಾನ್ಸಿಕಾವೋ

ಸ್ಕ್ವಾಡ್ರನ್ ಲೀಡರ್ ನೆಸ್ಟೋರ್ ಜೆ. ಡಿ. ಕಾನ್ಸಿಕಾವೋರವರು ೧೯೫೦ರಲ್ಲಿ ವಾಯುಪಡೆಗೆ ಸೇರಿದರು. ಇವರ ವಿದ್ಯಾಭ್ಯಾಸ ಬೆಂಗಳೂರಿನ ಸೈಂಟ್ ಜರ್ಮೈನ್ಸ್ ಹೈಸ್ಕೂಲ್ ಮತ್ತು ಸೈಂಟ್ ಜೋಸೆಫ್ ಕಾಲೇಜುಗಳಲ್ಲಿ ನಡೆಯಿತು.

೧೯೬೬ ರಿಂದ ೬೯ ರವರೆಗೆ ಇವರು ಜೋಧ್‌ಪುರ ಮತ್ತು ಯಲಹಂಕಗಳಲ್ಲಿ ಪೈಲಟ್ ಅಧಿಕಾರಿಗಳಿಗೆ ತರಬೇತಿ ನೀಡುವ ಅಧಿಕಾರಿಗಳಾಗಿದ್ದರು. ಈಗ ಇವರನ್ನು ವೆಲ್ಲಿಂಗ್ಟನ್‌ನಲ್ಲಿರುವ ರಕ್ಷಣಾಸೇವಾ ಕಾಲೇಜಿಗೆ ವರ್ಗಾಯಿಸಲಾಗಿದೆ.

ಇತ್ತೀಚಿನ ಯುದ್ಧದಲ್ಲಿ ಇವರು ತೋರಿರುವ ಸಾಹಸಕ್ಕಾಗಿ ರಾಷ್ಟ್ರಾಧ್ಯಕ್ಷರು ಇವರಿಗೆ ವಾಯು ಸೇನಾಪದಕವನ್ನಿತ್ತು ಗೌರವಿಸಿದ್ದಾರೆ.

ಮೇಜರ್ ಸಿ. ಕೆ. ಕರುಂಬಯ್ಯ

ಜನರಲ್ ಕೆ. ಎಂ. ಕಾರ್ಯಪ್ಪನವರ ಸಮೀಪದ ಬಂಧುಗಳಾದ ದಿ|| ಡಾ|| ಸಿ. ಬಿ. ಕಾರ್ಯಪ್ಪನವರ ಪುತ್ರರಾದ ಮೇಜರ್ ಸಿ. ಕೆ. ಕರುಂಬಯ್ಯನವರು ಮಡಿಕೇರಿ ಯಲ್ಲಿ ೧೯೩೭ರ ಡಿಸೆಂಬರ್ ಮೂರರಂದು ಜನಿಸಿದರು. ಡಾ|| ಕಾರ್ಯಪ್ಪನವರು

ಎರಡನೆಯ ಮಹಾಯುದ್ಧ ನಡೆದಾಗ ಬರ್ಮಾದಲ್ಲಿ ರಾಯಲ್ ಇಂಡಿಯನ್ ವೈದ್ಯಕೀಯ ದಳದಲ್ಲಿ ಮೇಜರ್ ಹುದ್ದೆಯಲ್ಲಿದ್ದು ಸೇವೆ ಸಲ್ಲಿಸಿದ್ದರು. ಇವರು ಹಳೆಯ

ಕೊಡಗು ರಾಜ್ಯದ ವೈದ್ಯಕೀಯ ಇಲಾಖೆಯಲ್ಲಿ ಮುಖ್ಯಾಧಿಕಾರಿಗಳೂ ಆಗಿದ್ದರು.

ಮೇಜರ್ ಸಿ. ಕೆ. ಕರುಂಬಯ್ಯನವರ ಶಿಕ್ಷಣವೆಲ್ಲ ಮಡಿಕೇರಿಯಲ್ಲಿಯೇ ನಡೆಯಿತು. ೧೯೫೭ರಲ್ಲಿ ಮಡಿಕೇರಿಯ ಸರ್ಕಾರಿ ಕಾಲೇಜಿನಲ್ಲಿಯೇ ಓದಿ ಪದವೀಧರರಾದರು. ತಮ್ಮ ವಿದ್ಯಾರ್ಥಿ ದೆಶೆಯಲ್ಲಿ ಅವರು ಸ್ಕೌಟ್, ಎನ್. ಸಿ. ಸಿ, ಮತ್ತು ಕ್ರೀಡೆಗಳಲ್ಲಿ ಹೆಚ್ಚು ಆಸಕ್ತಿಯುಳ್ಳವರಾಗಿದ್ದರು. ಕ್ರಿಕೆಟ್ ಮತ್ತು ಅಥ್ಲೆಟಿಕ್ಸ್‌ನಲ್ಲಿ ಕಾಲೇಜಿನ ಪ್ರತಿನಿಧಿಯಾಗಿ ಅನೇಕ ಸ್ಪರ್ಧೆಗಳಲ್ಲಿಯೂ ಭಾಗವಹಿಸಿದ್ದರು. ಶಿಕಾರಿಯಲ್ಲಿಯೂ, ಈಜುವುದರಲ್ಲಿಯೂ ಇವರು ನಿಸ್ಸೀಮರು.

೧೯೫೭ರ ಜನವರಿಯಲ್ಲಿ ಶ್ರೀ ಕರುಂಬಯ್ಯನವರು ಡೆಹರಾಡೂನಿನ ಮಿಲಿಟರಿ ಕಾಲೇಜಿಗೆ ಸೇರಿ ತರಬೇತಿ ಪಡೆದರು. ೧೯೫೮ರ ಡಿಸೆಂಬರ್ ೧೪ರಂದು ಕಮಿಷನ್ಡ್ ಆಫೀಸರ್ ಆಗಿ ನೇಮಕಗೊಂಡು ಮರಾಠಾ ಲೈಟ್ ಇನ್‌ಫೆಂಟ್ರಿಯ ಐದನೆಯ ಬೆಟಾಲಿಯನ್‌ಗೆ ಓರ್ವ ಅಧಿಕಾರಿಯಾಗಿ ಸೇರಿದರು.

ಅನಂತರ ಭಾರತದ ನಾನಾಗಡಿಗಳಲ್ಲಿ ಸೇವೆ ಸಲ್ಲಿಸುವ ಅವಕಾಶ ಇವರಿಗೆ ದೊರಕಿತು. ಈ ಅವಧಿಯಲ್ಲಿ ಇವರು ಹೆಚ್ಚುತೊಂದರೆಗೀಡಾದ ಪ್ರದೇಶಗಳಲ್ಲಿ ಮುಖ್ಯವಾಗಿ ನಾಗಾಲ್ಯಾಂಡ್, ನೇಫಾ, ರಾಜಾಸ್ತಾನ್, ಮಿಜೊ ಗುಡ್ಡಪ್ರದೇಶ ಮತ್ತು ತ್ರಿಪುರಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

೧೯೬೫ರಲ್ಲಿ ಪಾಕಿಸ್ತಾನದೊಡನೆ ನಡೆದ ಯುದ್ಧದಲ್ಲಿ ಸಿಂಧ್‌ವಲಯದಲ್ಲಿ ಶತ್ರುಗಳೊಡನೆ ಘರ್ಷಣೆ ನಡೆದಾಗ ಇವರಿಗೆ ತೀವ್ರ ಪೆಟ್ಟುಗಳಾಗಿ ಗಾಯಗಳಾಗಿದ್ದರೂ ಲೆಕ್ಕಿಸದೆ ತಮ್ಮ ಕೈಕೆಳಗಿನ ಪಡೆಗಳಿಗೆ ಸೂಕ್ತ ಮಾರ್ಗದರ್ಶನ ನೀಡಿ ಯಶಸ್ವಿಯಾದರು.

ಇತ್ತೀಚಿನ ಸಮರದಲ್ಲಿ ಇವರನ್ನು ಬಾಂಗ್ಲಾ ವಿಮೋಚನಾ ಹೋರಾಟದಲ್ಲಿ ಭಾಗವಹಿಸಲು ಕಳುಹಿಸಲಾಗಿತ್ತು. ಅಲ್ಲಿ ಇವರು ಒಂದು ಬೆಟಾಲಿಯನ್ನಿನ ಸೆಕೆಂಡ್-ಇನ್-ಕಮ್ಯಾಂಡ್ ಆಗಿದ್ದರು. ೧೯೭೧ ಡಿಸೆಂಬರ್ ನಾಲ್ಕರಂದು ಸೌದಿ

ಎಂಬಲ್ಲಿ ತೀವ್ರಕಾಳಗ ನಡೆದು ಪರಸ್ಪರ ಕೈ ಕೈ ಮಿಲಾಯಿಸುವ ಮಟ್ಟಕ್ಕೇರಿತ್ತು. ಆದರೂ ಇವರು ಎದೆಗುಂದಲಿಲ್ಲ. ಶತ್ರುಗಳ ಆರ್ಭಟಕ್ಕೆ ಅಂಜಲಿಲ್ಲ. ನಾಯಕತ್ವದ ಹಿರಿಮೆಯನ್ನು ಎತ್ತಿ ಹಿಡಿದು ತಾವೂ ಹೋರಾಡಿದರು. ಈ ಸಾಹಸಕ್ಕಾಗಿ ಕೇಂದ್ರಸರ್ಕಾರದವರು ಇವರಿಗೆ 'ಸೇನಾಪದಕ' ಪ್ರಶಸ್ತಿಯನ್ನಿತ್ತು ಗೌರವಿಸಿದ್ದಾರೆ. ಮುಂದೆ ಯುದ್ಧನಡೆಯುತ್ತಿದ್ದಾಗ ಇತರ ನಾಯಕರು ಮೃತಪಟ್ಟ ಎಷ್ಟೋ ಸಂದರ್ಭಗಳಲ್ಲಿ ಇವರೇ ನಾಯಕತ್ವವನ್ನು ವಹಿಸಿಕೊಂಡು ಕಾರ್ಯಾಚರಣೆಯನ್ನು ಮುಂದುವರೆಸುತ್ತಿದ್ದರು.

ಇವರ ನಾಯಕತ್ವದಲ್ಲಿ ಯೋಧರು ಸ್ಫೂರ್ತಿಗೊಂಡು ವೀರಾವೇಶದಿಂದ ಹೋರಾಡಿ ಜಯಶೀಲರಾದರು. ಇದನ್ನು ಕಂಡು ಹಿರಿಯ ಸೇನಾಧಿಕಾರಿಗಳು ಮೇಜರ್ ಕರುಂಬಯ್ಯನವರನ್ನು ಮುಕ್ತಕಂಠದಿಂದ ಶ್ಲಾಘಿಸಿರುವರು.

ಕ್ಯಾಪ್ಟನ್ ಎಂ. ಎ. ಕರಿಯಪ್ಪನವರು

ಕ್ಯಾಪ್ಟನ್ ಎಂ. ಎ. ಕರಿಯಪ್ಪನವರು ಹೆಸರಾಂತ ಶ್ರೀ ಮುಕ್ಕಾಟೀರ ಅಯ್ಯಪ್ಪನವರ ಹಿರಿಯ ಪುತ್ರರು. ಇವರ ಸ್ಥಳ ಕೊಡಗು ಜಿಲ್ಲೆಯ ಗೋಣಿಕೊಪ್ಪದ ಅರವತ್ತೊಕ್ಲು. ೧೯೩೯ರ ಫೆಬ್ರವರಿ ೨೨ ರಂದು ಇವರು ಜನಿಸಿದರು. ಪೊನ್ನಂಪೇಟೆಯ ಗೌರ್ನಮೆಂಟ್ ಹೈಯರ್ ಸೆಕೆಂಡೆರಿ ಶಾಲೆಯಲ್ಲಿ ಇವರ ವಿದ್ಯಾಭ್ಯಾಸ ನಡೆಯಿತು. ಆ ಶಾಲೆಯಿಂದ ಭಾರತೀಯ ಸೈನ್ಯದಳಕ್ಕೆ ಸೇರಿದ ಪ್ರಥಮ ವಿದ್ಯಾರ್ಥಿಯಿವರು.



ಬಾಲ್ಯದಿಂದಲೂ ಇವರಿಗೆ ಸೈನಿಕ ಜೀವನದಲ್ಲಿ ಹೆಚ್ಚಿನ ಆಸಕ್ತಿಯಿತ್ತು. ತಮ್ಮ ವಿದ್ಯಾರ್ಥಿ ಜೀವನದಲ್ಲಿ ಮೂರು ವರ್ಷಗಳ ಕಾಲ ಎನ್. ಸಿ. ಸಿ.ಯಲ್ಲಿ ತರಪೇತು ಪಡೆದರು. ಮೆಟ್ರಿಕ್ಯುಲೇಷನ್ ಪರೀಕ್ಷೆಯಾದ ನಂತರ ಇವರು ಮದ್ರಾಸ್ ಇಂಜನೀಯರ್ ಗ್ರೂಪ್‌ನಲ್ಲಿ ಗುಮಾಸ್ತೆಯಾಗಿ ಕೆಲಸಕ್ಕೆ ಸೇರಿದರು. ಇವರ ಶ್ರದ್ಧಾಸಕ್ತಿ ಮತ್ತು ಕಷ್ಟ ಸಹಿಷ್ಣತೆ

ಯನ್ನು ಕಂಡು ಇವರನ್ನು ಡೆಹ್ರಾಡೂನ್‌ನಲ್ಲಿರುವ ಭಾರತೀಯ ಸೇನಾ ಅಕಾಡೆಮಿ ಯಲ್ಲಿ ತರಬೇತಿ ಹೊಂದಲು ೧೯೬೨ರ ಆಗಸ್ಟ್‌ನಲ್ಲಿ ಚುನಾಯಿಸಲಾಯಿತು.

ಡೆಹ್ರಾಡೂನ್‌ನಲ್ಲಿ ಇವರ ಶಿಕ್ಷಣವು ಯಶಸ್ವಿಯಾದ ಮೇಲೆ ೨|೩ ಗೂರ್ಖಾ ರೈಫಲ್ಸ್‌ನಲ್ಲಿ ಖಾಯಂ ಕಮಿಷನ್ಡ್ ಅಧಿಕಾರಿಯಾಗಿ ೧೯೬೩ರ ಜೂನ್ ೩೦ರಂದು ನೇಮಕಗೊಂಡರು. ಅನಂತರ ಲಡಕ್‌ನಲ್ಲಿ ತಮ್ಮ ಬೆಟಾಲಿಯನ್‌ಗೆ ಸೇರಿಕೊಂಡರು. ೧೯೬೫ರಲ್ಲಿ ಪ್ಯಾರಾಚೂಟ್ ರೆಜಿಮೆಂಟಿಗೆ ಇವರನ್ನು ಸೇರಿಸಲಾಯಿತು. ಬಳಿಕ ಸೆಕೆಂಡ್ ಪ್ಯಾರಾ ಬೆಟಾಲಿಯನ್ ಪಡೆಗೆ ಇವರನ್ನು ವರ್ಗಾಯಿಸಿದರು. ಈ ವರ್ಗಾವಣೆಯು ಇವರಿಗೆ ಯುದ್ಧದಲ್ಲಿ ಭಾಗವಹಿಸುವ ಒಂದು ಸದವಕಾಶವನ್ನು ದೊರಕಿಸಿಕೊಟ್ಟಿತು. ೧೯೬೫ರ ಸಮರದಲ್ಲಿ ಭಾಗಿಗಳಾಗಿ ಇವರು ಹೆಚ್ಚಿನ ಅನುಭವ ವನ್ನು ಗಳಿಸಿದರು.

೧೯೭೧ರ ನವೆಂಬರ್ ತಿಂಗಳಿನಲ್ಲಿ ಇವರನ್ನು ೯ನೇ ಪ್ಯಾರಾ ಕಮ್ಯಾಂಡೋ ಬೆಟ್ಯಾಲಿಯನ್ ಪಡೆಗೆ ವರ್ಗಾಯಿಸಲಾಯಿತು. ಇದಕ್ಕೆ ಮುನ್ನ ಇವರು ಆಂಧ್ರ ದಲ್ಲಿರುವ (ಸ್ವತಂತ್ರ) ಸಬ್ ಏರಿಯಾ ಕೇಂದ್ರದ ಸಿಬ್ಬಂದಿ ವರ್ಗದಲ್ಲಿ ಕೆಲಸ ಮಾಡುತ್ತಿದ್ದರು. ಈ ಪಡೆಗೆ ವರ್ಗಾವಣೆಯಾದ ಒಂದು ತಿಂಗಳೊಳಗಾಗಿ ೧೯೭೧ರ ಭಾರತ-ಪಾಕ್ ಯುದ್ಧದಲ್ಲಿ (ಛಾಂಬ್ ವಲಯದಲ್ಲಿ) ಭಾಗವಹಿಸುವ ಸುಯೋಗ ಲಭಿಸಿತು.

ಈ ಸಮರದಲ್ಲಿ ಇವರು ಶತ್ರುಗಳ ಗುಂಡಿನೇಟಿನಿಂದ ಗಾಯಗೊಂಡರು. ಇವರ ಧೈರ್ಯ, ಉತ್ಸಾಹ, ಪರಾಕ್ರಮಗಳನ್ನು ಮೆಚ್ಚಿ ಇವರಿಗೆ 'ಸೇನಾಪದಕ' ಪ್ರಶಸ್ತಿ ಯನ್ನು ನೀಡಿ ಗೌರವಿಸಲಾಯಿತು. ಪ್ಯಾರಚೂಟ್ ರೆಜಿಮೆಂಟಿನಲ್ಲಿ ಪ್ರಶಸ್ತಿ ಪಡೆದ ಕೊಡಗಿನ ಅಧಿಕಾರಿಗಳಲ್ಲಿ ಇವರೇ ಮೊದಲಿಗರು.

ಮೇಜರ್ ಪ್ರಹ್ಲಾದ್ ತೋರೋ

ಬೆಳಗಾಂ ಜಿಲ್ಲೆಯಲ್ಲಿರುವ 'ಜುಗೂಳ' ಎಂಬ ಚಿಕ್ಕ ಹಳ್ಳಿಯಲ್ಲಿ ೧೯೩೨ರಲ್ಲಿ ಇವರು ಜನಿಸಿದರು. ತಾಯಿಯ ತವರೂರಾದ ಈ ಹಳ್ಳಿ ಮತ್ತು ಈ ಹಳ್ಳಿಯಿಂದ ಕೇವಲ ೧೨ ಮೈಲಿದೂರದಲ್ಲಿರುವ ಶ್ರೀ ತೋರೋ ಅವರ ಸ್ವಗ್ರಾಮ ಐನಾಪುರ-ಈ ಎರಡೂ ಕೃಷ್ಣಾನದಿಯ ದಂಡೆಯ ಮೇಲಿವೆ.

ಶ್ರೀ ತೋರೋ ಅವರದು ಶ್ರೋತ್ರಿಯ ಬ್ರಾಹ್ಮಣ ಮನೆತನ. ಹಿಂದಿನ ಹತ್ತಿ ಪ್ಪತ್ತು ತಲೆಮಾರುಗಳಿಂದ ಇವರ ವಂಶದಲ್ಲಿ ಸಂಸ್ಕೃತ ಹಾಗೂ ವೇದಾಭ್ಯಾಸಗಳ

ಸಾಧನೆಯು ಅಖಂಡವಾಗಿ ನಡೆದಿತ್ತು. ಶ್ರೀ ತೋರೋ ಅವರ ತಂದೆ ನ್ಯಾಯ ಶಾಸ್ತ್ರದಲ್ಲಿ ಪದವೀಧರರಾಗಿದ್ದು ವಕೀಲಿ ವೃತ್ತಿಯನ್ನು ಕೈಗೊಂಡಿದ್ದರು. ದುರ್ದೈ

ವದಿಂದಾಗಿ ಅವರು ತಮ್ಮ ಏಳು ಮಕ್ಕಳನ್ನು ಪತ್ನಿಯ ವಶಕ್ಕೊಪ್ಪಿಸಿ ೧೯೪೭ರಲ್ಲಿ ಕಾಲವಶರಾದರು.

ಶ್ರೀ ತೋರೋ ಅವರು ಕೇವಲ ಏಳೆಂಟು ವರ್ಷದ ಬಾಲಕನಾಗಿದ್ದಾಗ ತಂದೆಯ ಸುಖದಿಂದ ವಂಚಿತರಾದರು. ಮಕ್ಕಳಲ್ಲಿ ಎಲ್ಲರಿಗಿಂತ ಚಿಕ್ಕವರಾದ ಇವರಿಗೆ ತಾಯಿಯೇ ಮಾರ್ಗದರ್ಶಕರಾಗಬೇಕಾಯಿತು. ಇವರ ಪ್ರಾಥಮಿಕ ಶಿಕ್ಷಣವು ಜುಗೂಳಿ ಮತ್ತು ಅಥಣೀ ಗ್ರಾಮಗಳಲ್ಲಿ ನಡೆಯಿತು. ಮಾಧ್ಯಮಿಕ ಶಿಕ್ಷಣವು ಐನಾಪುರದ ಕರ್ನಾಟಕ ರೂರಲ್ ಎಜ್ಯುಕೇಷನ್ ಸೊಸೈಟಿಯ ಶಾಲೆಯಲ್ಲಿ ಆಯಿತು.

ಸ್ವಭಾವತಃ ಆಕರ್ಷಕ ವ್ಯಕ್ತಿತ್ವ ಮತ್ತು ಶರೀರದಾರ್ಢ್ಯವನ್ನು ಪಡೆದಿದ್ದ ಇವರಿಗೆ ಬಾಲ್ಯದಿಂದಲೂ ಕ್ರೀಡೆಗಳತ್ತಲೇ ಹೆಚ್ಚು ಆಸಕ್ತಿಯಿತ್ತು. ತತ್ಫಲವಾಗಿ ಇವರು ಕ್ರೀಡಾಕ್ಷೇತ್ರದಲ್ಲಿಯೇ ಹೆಚ್ಚಿನ ಪ್ರವೀಣತೆಯನ್ನು ಗಳಿಸಿದರು. ಐನಾಪುರದಲ್ಲಿದ್ದ 'ರಾಯಲ್ ಟೀಮ್' ಎಂಬ ಕ್ರೀಡಾ ಸಂಸ್ಥೆಯ ಪರವಾಗಿ ಇವರು ಬೇರೆ ಬೇರೆ ಊರುಗಳಿಗೆ ಹೋಗಿ ತಮ್ಮ ಕ್ರೀಡಾ ನೈಪುಣ್ಯವನ್ನು ಪ್ರದರ್ಶಿಸಿದರು. ಅತ್ಯಲ್ಪ ಕಾಲದಲ್ಲಿಯೇ ಆ ಭಾಗದಲ್ಲಿ ಇವರೊಬ್ಬ ಕ್ರೀಡಾಪಟುವೆಂದು ಪ್ರಸಿದ್ಧರಾದರು. ೧೯೫೪ರಲ್ಲಿ ರಾಜ್ಯದ ಕ್ರೀಡಾಮಹೋತ್ಸವಕ್ಕೆ ಅಂತಿಮ ಸ್ಪರ್ಧೆಗಾಗಿ ಜಿಲ್ಲೆಯ ಟೀಮ್ ಕ್ಯಾಪ್ಟನ್ ಆಗಿ ಮುಂಬಯಿಗೆ ಹೋಗಿ ಅಲ್ಲಿ ವೈಯಕ್ತಿಕ ಬಹುಮಾನವನ್ನು ಗಳಿಸಿ ತಮ್ಮ ಕ್ರೀಡಾ ಕೌಶಲ್ಯವನ್ನು ಪುನಃ ಪ್ರಕಟಿಸಿದರು.

ಮೆಟ್ರಿಕ್ ಪರೀಕ್ಷೆ ಪಾಸಾದನಂತರ ಇವರು ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಲು ಸಾಧ್ಯವಾಗಲಿಲ್ಲ. ಐನಾಪುರ ಚಿಕ್ಕ ಹಳ್ಳಿ. ಬೇರೆ ಕಡೆ ಹೋಗಲು ಆರ್ಥಿಕ ಅಡಚಣೆ ಮುಖ್ಯ ಕಾರಣವಾಯಿತು. ಇದರಿಂದಾಗಿ ಇವರು ನೌಕರಿಯ ಬೆನ್ನು ಹತ್ತುವುದು ಅನಿವಾರ್ಯವಾಯಿತು. ಆದರೆ ಇವರಿಗೆ ಸೇನೆಯಲ್ಲಿ ನೌಕರಿ ದೊರೆತುದು ಒಂದು ಸೋಜಿಗವೇ. ವೈದಿಕ ಪರಂಪರೆಯ ಕುಲದಲ್ಲಿ ಜನಿಸಿದ ಇವರು ಕ್ಷಾತ್ರ ಧರ್ಮವನ್ನು ಸ್ವೀಕರಿಸಿದುದು ಆಶ್ಚರ್ಯವೇ ಅಲ್ಲವೇ?

೧೯೫೩ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯ ಸಂದರ್ಭದಲ್ಲಿ ಇವರು ತಾಲ್ಲೂಕ ಕೇಂದ್ರವಾದ ಅಥಣಿಗೆ ಹೋಗಬೇಕಾದ ಪ್ರಸಂಗ ಬಂದಿತ್ತು. ಆಗ ಇವರ ವಯಸ್ಸು ಇಪ್ಪತ್ತು ಮಾತ್ರ. ಅಥಣಿಯಲ್ಲಿ ಭಾರತೀಯ ಸೇನೆಗೆ ಭರ್ತಿಯಾಗಲು ಸಾಲಾಗಿ ನಿಂತ ಉಮೇದುವಾರರನ್ನು ಇವರು ಕಂಡರು. ತಾವೂ ಆ ಸಾಲಿನಲ್ಲಿ ಹೋಗಿ ನಿಂತರು. ಸರದಿಯ ಪ್ರಕಾರ ಇವರ ವಿಚಾರಣೆಯಾಯಿತು. ಆಶ್ಚರ್ಯವೆಂದರೆ ಆಗಲೇ ಇವರನ್ನು ತೋಫಖಾನೆ ಭಾಗದಲ್ಲಿ ಆಯ್ಕೆಮಾಡಲಾಯಿತು. ಅನಂತರ ಟ್ರೈನಿಂಗ್‌ಗಾಗಿ ಇವರನ್ನು ನಾಸಿಕ್‌ರೋಡ್ ಕ್ಯಾಂಪ್‌ಗೆ ಕಳುಹಿಸಿಕೊಟ್ಟರು.

ಮುಂದೆ ಇವರನ್ನು ಪಂಜಾಬ್ ವಿಭಾಗದಲ್ಲಿ ನೇಮಿಸಲಾಯಿತು. ಶ್ರದ್ಧಾಸಕ್ತಿಗಳಿಂದ ಕರ್ತವ್ಯ ಪಾಲನೆಯಲ್ಲಿ ತೊಡಗಿರುತ್ತಿದ್ದ ಇವರು ಓದುವ ಹವ್ಯಾಸವನ್ನೂ ಬೆಳೆಸಿಕೊಂಡರು. ಕೆಲಸದಲ್ಲಿ ಇವರು ತೋರುತ್ತಿದ್ದ ಶ್ರದ್ಧಾಸಕ್ತಿಗಳ ಪ್ರತಿಫಲವಾಗಿ ತಮ್ಮ ೬ನೆಯ ವರ್ಷದಲ್ಲಿಯೇ ಆಫೀಸರ್ ದರ್ಜೆಗೇರಿದರು. ೧೯೬೦ರಲ್ಲಿ ಇವರನ್ನು ತರಬೇತಿಗಾಗಿ ಡೆಹ್ರಾಡೂನ್‌ನಲ್ಲಿರುವ ಇಂಡಿಯನ್ ಮಿಲಿಟರಿ ಅಕ್ಯಾಡೆಮಿಗೆ ಕಳುಹಿಸಲಾಯಿತು. ಈ ತರಬೇತಿಯಲ್ಲಿ ಯಶಸ್ಸುಗಳಿಸಿದ ಇವರು ಸೆಕೆಂಡ್ ಲೆಫ್ಟಿನೆಂಟ್ ಆಗಿ ಕಾಶ್ಮೀರ ವಿಭಾಗದಲ್ಲಿ ನೇಮಿಸಲ್ಪಟ್ಟರು.

ಮುಂದೆ ೧೯೬೫ರಲ್ಲಿ ಭಾರತ-ಪಾಕ್ ಸಮರದಲ್ಲಿ ಇವರು ಭಾಗವಹಿಸಿ, ಹಲವಾರು ಕಠಿಣ ಪ್ರಸಂಗಗಳನ್ನೆದುರಿಸಿ ಸುಖವಾಗಿ ಪಾರಾದರು. ಬಳಿಕ ಇವರಿಗೆ ಕ್ಯಾಪ್ಟನ್ ದರ್ಜೆಯ ಹುದ್ದೆ ದೊರೆತು ಅಂಬಾಲಕ್ಕೆ ವರ್ಗವಾಯಿತು. (ಈ ನಡುವೆ ಅಂದರೆ ೧೯೬೬ರಲ್ಲಿ ಬೆಳಗಾಂ ಜಿಲ್ಲೆಯ ಪ್ರಸಿದ್ಧ ಕ್ರಾಂತಿಕಾರರಾದ ಶ್ರೀ ನಾರಾಯಣರಾವ್ ದೇಶಪಾಂಡೆ (ಮಂಗಸೂಳಿಕರ) ಇವರ ಪುತ್ರಿಯೊಡನೆ ಇವರ ವಿವಾಹವಾಯಿತು. ಈಗ ಇವರಿಗೆ ಇಬ್ಬರು ಹೆಣ್ಣು ಮಕ್ಕಳಿರುವರು.)

ಅನಂತರ ಇವರಿಗೆ ಮೇಜರ್ ಹುದ್ದೆಯ ಬಡ್ತಿ ದೊರಕಿ, ಹೈದರಾಬಾದ್‌ಗೆ ವರ್ಗವಾಯಿತು. ಇಲ್ಲಿ ಇವರು ಇದ್ದ ಸಮಯದಲ್ಲಿಯೇ ೧೯೭೧ರ ಭಾರತ-ಪಾಕ್ ಸಮರದಲ್ಲಿ ಭಾಗವಹಿಸಲು ಕರೆ ಬಂದು, ಕಾಶ್ಮೀರದ ಗಡಿಯ 'ಶಕ್ಕರ್‌ಘರ್' ವಿಭಾಗಕ್ಕೆ ಹೋಗಬೇಕಾಯಿತು. ಕೂಡಲೇ ಇವರು ತಮ್ಮ ಪತ್ನಿ ಮತ್ತು ತಾಯಿಯವರಿಗೆ ಧೈರ್ಯ ಹೇಳಿ ಹೊರಟುಬಿಟ್ಟರು. ವೃತ್ತಪತ್ರಿಕೆಗಳಲ್ಲಿ ಪ್ರತಿದಿನವೂ, ಯುದ್ಧದ ವರ್ಣನೆ ತಪ್ಪದೆ ಬರುತ್ತಿತ್ತು. ನೆರೆಹೊರೆಯವರು ಇವರ ತಾಯಿಯ ಬಳಿಗೆ ಬಂದು ಸಹಾನುಭೂತಿಯನ್ನು ವ್ಯಕ್ತಪಡಿಸಿದಾಗ ಆಕೆ ಹೇಳಿದುದೇನು? "ದೇಶರಕ್ಷಣೆಯ ಹೊಣೆಯನ್ನು ಯಾರಾದರೂ ಹೊರಲೇ ಬೇಕು. ಆ ಸುಸಂಧಿ ನನ್ನ ಪುತ್ರನಿಗೆ ದೊರೆತುದು ನನಗೆ ಗೌರವದ ವಿಷಯ." ರಣರಂಗದಲ್ಲಿ ಹೋರಾಡುತ್ತಿದ ಒಬ್ಬ ಯೋಧನ ತಾಯಿಯ ಈ ಉದ್ಗಾರವನ್ನು ಕೇಳಿ ಎಂಥವರಾದರೂ ಬೆರಗಾಗಲೇಬೇಕು.

ಶ್ರೀ ತೋರೋ ಅವರನ್ನು ಶಕ್ಕರ್‌ಘರ್ ವಲಯದಲ್ಲಿ ಇನ್‌ಫೆಂಟ್ರಿ ಬೆಟಾಲಿಯನ್ನಿನ ಗನ್ನರ್ ಆಫೀಸರ್ ಆಗಿ ನೇಮಿಸಲಾಗಿತ್ತು. ಡಿಸೆಂಬರ್ ೧೫ರಂದು ಬಸಂತರ್ ನದಿಗೆ ಸೇತುವೆ ಕಟ್ಟಿ ಅಲ್ಲಿಯ ಎರಡು ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಹೊಣೆಯನ್ನು ಇವರ ಪಡೆಯವರು ವಹಿಸಿಕೊಂಡಿದ್ದರು. ಈ ಕಾರ್ಯವನ್ನು ರಾತ್ರಿಯೆಲ್ಲಾ ಮಾಡಿ ಮುಗಿಸಬೇಕಾಗಿತ್ತು. ಆದರೆ ಎದುರು ದಿಕ್ಕಿನಿಂದ ಶತ್ರುಗಳ ಷೆಲ್ ದಾಳಿ ನಡೆಯುತ್ತಲೇ ಇತ್ತು. ದಾಳಿ–ಪ್ರತಿದಾಳಿಗಳು ನಿರಂತರವಾಗಿ ಸಾಗಿತ್ತು. ಇಂಥ ಪರಿಸ್ಥಿತಿಯಲ್ಲಿ ಸೇತುವೆಯ ಕೆಲಸ ಸಾಗಬೇಕಾಗಿತ್ತು. ಮೇಜರ್ ತೋರೋರವರು ಶತ್ರುಗಳ ಷೆಲ್‌ದಾಳಿಗಾಗಲೀ, ಗುಂಡೇಟಿಗಾಗಲೀ ಸ್ವಲ್ಪವೂ ಅಂಜದೆ, ತಮ್ಮ ಸೈನಿಕರಿಗೆ ಹುರಿದುಂಬಿಸಿ ಸ್ಫೂರ್ತಿ ನೀಡಿದರು. ಈ ಘರ್ಷಣೆಯಲ್ಲಿ ಎಷ್ಟೋ ಮಂದಿ ಸೈನಿಕರು ಚೆಂಡುಗಳಂತೆ ತೂರಲ್ಪಟ್ಟರು. ಆದರೆ ಮೇಜರ್‌ರವರ ದೃಷ್ಟಿ ಅಥವಾ ಧ್ಯೇಯ —"ಮೊದಲು ನಮ್ಮ ದೇಶದ ರಕ್ಷಣೆ: ಅನಂತರ ನಮ್ಮ ರಕ್ಷಣೆ" ಎಂಬುದೇ ಆಗಿತ್ತು. ಈ ಧ್ಯೇಯವನ್ನೇ ಇತರರಿಗೂ ಬೋಧಿಸಿದರು. ಕೊನೆಗೊಮ್ಮೆ ಸೇತುವೆಯ ಕೆಲಸ ಪೂರ್ಣಗೊಂಡಿತು. ಅದರ ನೆರವಿನಿಂದ ಭಾರತದ ಪಡೆ ನಿರಾಯಾಸವಾಗಿ ಮುಂದೆ ಸಾಗಿತು. ಸಿಕ್ಕಿದಲ್ಲಿ ಶತ್ರುಗಳನ್ನು ಸದೆಬಡಿಯಿತು. ಅಳಿದುಳಿದ ಪಾಕ್ ಸೈನಿಕರು ಪಲಾಯನ ಸೂತ್ರ ಪಠಿಸಿದರು. ಈ ಘರ್ಷಣೆಯಲ್ಲಿ ೩೭ ಮಂದಿ ಶತ್ರು ಸೈನಿಕರು ಸೆರೆಸಿಕ್ಕಿದರು. ಅಸಂಖ್ಯಾತ ಶಸ್ತ್ರಾಸ್ತ್ರಗಳು ಭಾರತೀಯ ಪಡೆಗಳ ವಶವಾದವು. ಈ ಕಾರ್ಯವು ಮೇಜರ್ ತೋರೋ ಅವರ ದಿಟ್ಟತನದಿಂದಲೇ ಆಯಿತೆಂಬುದು ಸತ್ಯ ಸಂಗತಿ.

ಆದರೆ ಇಷ್ಟಕ್ಕೇ ಕಾರ್ಯ ಮುಗಿಯಲಿಲ್ಲ. ಮರುದಿನ ಶತ್ರುಗಳು ಪುನಃ ಬಂದರು. ಆಗಿನ ಅವರ ಸಂಖ್ಯೆ ಮೊದಲಿಗಿಂತ ಇಮ್ಮಡಿಯಾಗಿತ್ತು. ಕಾಳಗ ಬಿರುಸಾಯಿತು. ಭಾರತದ ಪಡೆ ಗೆದ್ದಿತೆಂದು ಸುಮ್ಮನೆ ಕೂಡುವಂತಿರಲಿಲ್ಲ. ಕೇವಲ ಇನ್ನೂರು ಗಜದ ಅಂತರದಲ್ಲಿ ಎರಡೂ ಪಡೆಗಳು ಸಂಧಿಸಿ ಹೋರಾಟ ನಡೆಸಿದುವು. ಈ ಬಾರಿಯೂ ಮೇಜರ್ ತೋರೋ ಅವರು ಎದೆಗುಂದಲಿಲ್ಲ. ತಮ್ಮ ಪಡೆಯವರಿಗೆ ಸೂಕ್ತ ಸಲಹೆಗಳನ್ನಿತ್ತು ನಾಲ್ಕೂ ದಿಕ್ಕುಗಳಿಂದ ಒಮ್ಮೆಲೇ ಧಾವಿಸಿ ಮುತ್ತಿಗೆ ಹಾಕಿದರು. ಶತ್ರುಗಳು ತಮಗುಳಿದಿದ್ದ ಒಂದೇ ಮಾರ್ಗವಾಗಿದ್ದ ಪಲಾಯನ ಮಾರ್ಗವನ್ನು ಹಿಡಿದು, ದೂರದಲ್ಲಿ ನಿಂತು ಅಲ್ಲಿಂದಲೇ ಷೆಲ್‌ದಾಳಿಯನ್ನಾರಂಭಿಸಿದರು.

ಈ ದಾಳಿಯು ಕದನ ವಿರಾಮದ ಘೋಷಣೆಯಾಗುವ ತನಕವೂ ನಡೆದೇ ಇತ್ತು. ಕೊನೆಗೆ ಷೆಲ್‌ದಾಳಿಯ ಜೊತೆಗೆ ಟ್ಯಾಂಕ್ ಸಮರವೂ ಆರಂಭವಾಯಿತು. ಈ ಸಮರದಲ್ಲಿ ಮೇಜರ್ ತೋರೋ ಅವರು ನೀಡಿದ ಮಾರ್ಗದರ್ಶನ ಶ್ರೇಷ್ಠ ದರ್ಜೆಯದಾಗಿತ್ತು. ಪರಿಣಾಮವಾಗಿ ಈ ಬಾರಿಯೂ ಶತ್ರುಗಳೇ ಸೋಲುವಂತಾಯಿತು.

ಮೇಜರ್ ತೋರೋರವರ ತುಪಾಕಿಗಳು ಸಾಕಷ್ಟು ಹಾವಳಿ ನಡೆಸಿದುವು. ತತ್ಪರಿಣಾಮವಾಗಿ ಶತ್ರುಗಳು ಹಗಲಿನಲ್ಲಿಯೇ ಸೋತು ಹಿಮ್ಮೆಟ್ಟುವಂತಾಯಿತು.

ಆದರೂ ಇವರ ಒಂದು ದುಃಖಕರ ಪ್ರಸಂಗವನ್ನು ಕಣ್ಣಾರೆ ಕಾಣಬೇಕಾಯಿತು. ವೈರ್‌ಲೆಸ್ ಮತ್ತು ಶಸ್ತ್ರಾಸ್ತ್ರಗಳನ್ನು ಹೊತ್ತು ತರುತ್ತಿದ್ದ ಭಾರತದ ಮಿಲಿಟರಿ ಟ್ರಕ್ ಡ್ರೈವರ್ ಪರಮೇಶ್ವರನ್ ಎಂಬಾತ ಶತ್ರುಗಳ ಷೆಲ್ ದಾಳಿಗೆ ತುತ್ತಾಗಿ ಪ್ರಾಣಾರ್ಪಣೆ ಮಾಡಿದ್ದ. ಮೇಜರ್ ತೋರೋ ಅವರಿಗೆ ದಿಕ್ಕು ತೋಚದಂತಾಯಿತು. ಆದರೂ ಧೃತಿಗೆಡದೆ ತಮ್ಮ ಬಳಿಯಲ್ಲಿದ್ದ ಆಪರೇಟರ್ ಒಬ್ಬನನ್ನು ಡ್ರೈವರ್ ಕೆಲಸಕ್ಕೆ ನೇಮಿಸಿ, ಕಾರ್ಯಾಚರಣೆಯನ್ನು ಮುಂದುವರಿಸಿದರು. ತಮ್ಮ ಬೆನ್ನಿನ ಮೇಲೆಯೇ ವೈರ್‌ಲೆಸ್ ಸೆಟ್ಟನ್ನು ಹೊತ್ತು ಹೋರಾಟ ನಡೆಸಿದರು. ಜೊತೆಗೆ 'ಆರ್ಟಿಲರಿ ಫೈರ್' ದಳದ ಮೇಲ್ವಿಚಾರಣೆಯನ್ನೂ ತಾವೇ ವಹಿಸಿಕೊಂಡರು.

ಡಿಸೆಂಬರ್ ೧೭ರಂದು ಒಂದು ಬೆಟಾಲಿಯನ್‌ನಷ್ಟು ಶತ್ರುಪಡೆ ಮುತ್ತಿಗೆ ಯನ್ನಾರಂಭಿಸಿ, 'ಮೀಡಿಯಂ ಆರ್ಟಿಲರಿ' ನೆರವಿನಿಂದ ಮುನ್ನುಗ್ಗಿದುವು. ಷೆಲ್ ದಾಳಿಗಳನ್ನೂ, ಟ್ಯಾಂಕ್ ಫೈರ್‌ಗಳನ್ನೂ ಲೆಕ್ಕಿಸದೆ ಮೇಜರ್ ತೋರೋ ಅವರು ತಮ್ಮ ಪಡೆಯೊಡನೆ ಧೈರ್ಯದಿಂದ ಧಾವಿಸಿದರು. ಶತ್ರುಗಳ ಮೇಲೆ ಇವರ ಷೆಲ್ ದಾಳಿ ನಿರಂತರವಾಗಿ ನಡೆಯಿತು. ಶತ್ರುಗಳ ಸಾಹಸ ಇವರ ಮುಂದೆ ಸಾಗಲಿಲ್ಲ. ಶತ್ರುಗಳ ಆ ಒಂದು ಬೆಟಾಲಿಯನ್ ಸೈನ್ಯ ತತ್ತರಿಸಿ, ಗಾಳಿಯಲ್ಲಿ ತೂರಿಹೋಯಿತು. ಆಗ ಶತ್ರುಗಳಿಗೆ ಭಾರತದ 'ಗನ್ನರ್' ಮತ್ತು ಸೈನಿಕರ ಶಕ್ತಿಯ ಅರಿವಾಯಿತು.

ಕದನ ವಿರಾಮದ ಬಳಿಕ ಡಿಸೆಂಬರ್ ೧೮ರಂದು ಪರಿಶೀಲನೆ ನಡೆಸಿದಾಗ ಈ ಕದನ ನಡೆದ ಪ್ರದೇಶಕ್ಕೆ ಸುಮಾರು ಇನ್ನೂರು ಗಜಗಳ ದೂರದಲ್ಲಿ ೮೭ ಮಂದಿ ಪಾಕ್ ಸೈನಿಕರು ಸತ್ತು ಬಿದ್ದಿದ್ದುದು ಗೋಚರಿಸಿತು.

ಹೀಗೆ ಮೊನ್ನಿನ ಸಮರದಲ್ಲಿ ಮೇಜರ್ ತೋರೋ ಅವರು ತೋರಿದ ಸಾಹಸ ಅತ್ಯದ್ಭುತವಾದುದು. ಅವರ ಈ ಸಾಹಸವನ್ನು ಗುರುತಿಸಿ ಅವರಿಗೆ ಸರ್ಕಾರದವರು "ಸೇನಾ ಪದಕ"ವನ್ನಿತ್ತು ಗೌರವಿಸಿರುವುದು ತುಂಬಾ ಶ್ಲಾಘನೀಯವಾಗಿದೆ.

ಲೆಫ್ಟಿನೆಂಟ್ ಸಮೀರ್ ರಾಮಮೋಹನ್ ಚಂದಾವರ್ಕರ್

ಲೆಫ್ಟಿನೆಂಟ್ ಸಮೀರ್ ರಾಮಮೋಹನ್ ಚಂದಾವರ್ಕರ್ ಅವರು ಲೆಫ್ಟಿ ನೆಂಟ್ ಕರ್ನಲ್ ಆರ್. ಡಿ. ಚಂದಾವರ್ಕರ್ ಅವರ ಏಕಮಾತ್ರಪುತ್ರರು. ತಂದೆಯಂತೆ ಮಗ-ಎಂಬ ಗಾದೆಗೆ ಇವರು ಉತ್ತಮ ಉದಾಹರಣೆಯಾಗಿ ದ್ದಾರೆ. ತಂದೆ ಎರಡನೆಯ ಮಹಾಯುದ್ಧದಲ್ಲಿ ಭಾಗವಹಿಸಿ ಸಾಹಸ ಪ್ರದರ್ಶನ ಮಾಡಿ ಪ್ರಶಸ್ತಿ ದೊರಕಿಸಿಕೊಂಡಿದ್ದರು. ಮಗ ಇತ್ತೀಚಿನ ಭಾರತ-ಪಾಕ್

ಸಮರದಲ್ಲಿ ಹೋರಾಡಿ ಪ್ರಶಸ್ತಿಯನ್ನು ಗಳಿಸಿದ್ದಾರೆ. ಕೇವಲ ಇಪ್ಪತ್ತಮೂರು ವರ್ಷದ ಸೆಕೆಂಡ್ ಲೆಫ್ಟಿನೆಂಟ್ ಎಸ್. ಆರ್. ಚಂದಾವರ್ಕರ್ ಅವರು '೪೫ನೆಯ ಕ್ಯಾವಲ್ರಿ ಆರ್ಮರ್ಡ್ ಕೋರ್'ಗೆ ಸೇರಿ ತನ್ನ ದಿಟ್ಟತನವನ್ನೂ ಸಾಹಸವನ್ನೂ ಪ್ರದರ್ಶಿಸಿ, 'ಸೇನಾಪದಕ' ಪ್ರಶಸ್ತಿಯನ್ನು ಪಡೆದಿದ್ದಾರೆ.



ಶ್ರೀ ಚಂದಾವರ್ಕರ್ ಅವರು ಇತ್ತೀಚಿನ ಭಾರತ-ಪಾಕ್ ಸಮರದಲ್ಲಿ ಭಾಗವಹಿಸಿ ಪೂರ್ವವಲಯದಲ್ಲಿ ಹೋರಾಡುತ್ತಿದ್ದರು. ಹೋರಾಟ ನಡೆಸುತ್ತಿದ್ದಂತೆಯೇ ಶತ್ರುಗಳ ದಾಳಿಗೆ ಸಿಕ್ಕಿ ೧೯೭೧ರ ಡಿಸೆಂಬರ್ ಹತ್ತರಂದು ರಣರಂಗದಲ್ಲಿ ಪ್ರಾಣಾರ್ಪಣೆ ಮಾಡಿದರೆಂದು ಹಿರಿಯ ಅಧಿಕಾರಿಗಳು ಅವರ ಮನೆಗೆ ಪತ್ರ ಬರೆದರು. ಆ ಪತ್ರವನ್ನು ಕಂಡೊಡನೆ ಚಂದಾವರ್ಕರ್ ಅವರ ತಾಯಿ ಶ್ರೀಮತಿ ಉಮಾ ಚಂದಾವರ್ಕರ್ ಅವರು ಪುತ್ರಶೋಕದಿಂದ ಕಂಗೆಟ್ಟು ಕಂಗಾಲಾದರು. ಕೇವಲ ಕೆಲವು ವರ್ಷಗಳ ಹಿಂದಷ್ಟೆ ಪತಿಯನ್ನು ಕಳೆದುಕೊಂಡಿದ್ದ ಅವರಿಗೆ ಅನಿರೀಕ್ಷಿತವಾಗಿ ಬಂದೊದಗಿದ ಈ ಪುತ್ರವಿಯೋಗ ದಿಗ್ಭ್ರಮಣೆಯನ್ನೇ ಉಂಟುಮಾಡಿತು. ಅವರಿಗೆ ಇದು ಭರಿಸಲಾಗದ ನಷ್ಟವೇ ಆಗಿದೆ. ಶ್ರೀ ಎಸ್. ಆರ್. ಚಂದಾವರ್ಕರ್ ಅವರು ತಾಯಿ ಮತ್ತು ಸೋದರಿಯೊಬ್ಬಳನ್ನು ಅಗಲಿ ಹೋಗಿದ್ದಾರೆ.

ಶ್ರೀ ಚಂದಾವರ್ಕರ್ ಅವರು ಧಾರವಾಡದವರಾದರೂ ಅವರು ಬೆಳೆದುದು ವಿದ್ಯಾಭ್ಯಾಸ ಎಲ್ಲವೂ ಉತ್ತರ ಭಾರತದಲ್ಲಿಯೇ ಆಯಿತು. ಅವರ ವಿದ್ಯಾಭ್ಯಾಸ ಗ್ವಾಲಿಯರ್‌ನ ಸಿಂಧಿಯಾ ಶಾಲೆಯಲ್ಲಿಯೂ, ಅನಂತರ ಆಗ್ರಾದ ಸೆಂಟ್ ಜಾನ್ ಮತ್ತು ಮುಂಬಯಿಯ ಕೀರ್ತಿ ಕಾಲೇಜುಗಳಲ್ಲಿಯೂ ನಡೆಯಿತು.

ಭಾರತದ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿ, ಜನರಲ್ ಮಣೆಕ್ ಷಾ, ಲೆ|| ಕ|| ಡಿ. ಎಸ್. ಜಮ್‌ವಾಲ್, ಲೆ|| ಜ|| ಎಚ್. ಕೆ. ಸೈಬಾಲ್, ಮೇ|| ಜ|| ವೀರೇಂದ್ರಸಿಂಗ್, ಮೇ|| ಪಿ. ಕೆ. ಭಾತ್ರ, ಲೆ|| ಜ|| ಜಗಜೀತ್ ಸಿಂಗ್ ಅರೋರಾ, ಮೇ|| ಐ. ಎಸ್. ಭೋರೆ ಮೊದಲಾದ ಹಿರಿಯ ಸೇನಾಧಿಕಾರಿಗಳು ಈ ವೀರಯೋಧನ ಶೌರ್ಯವನ್ನು ಕೊಂಡಾಡಿ, ಇವರ ಅಕಾಲ ಮರಣಕ್ಕೆ ಸಂತಾಪವನ್ನು ಸೂಚಿಸಿ ಪತ್ರ ಬರೆದಿದ್ದಾರೆ.

ಚಂದಾವರ್ಕರ್ ಅವರ ಮೇಲ್ಪಟ್ಟ ಹಿರಿಯ ಸೇನಾನಿ ಲೆ|| ಜ|| ಜಗಜೀತ್

ಸಿಂಗ್ ಅರೋರಾ ಅವರು ಶ್ರೀಮತಿ ಉಮಾಚಂದಾವರ್ಕರ್ ಅವರಿಗೆ ಬರೆದಿರುವ ತಮ್ಮ ಪತ್ರದಲ್ಲಿ—"ನಿಮ್ಮ ಮಗ ಸೆಕೆಂಡ್ ಲೆಫ್ಟಿನೆಂಟ್ ಸಮೀರ್ ರಾಮ ಮೋಹನ್ ಅವರು ವಾಸ್ತವವಾಗಿಯೂ ವೀರಯೋಧನೇ ಹೌದು. ಆತನ ಮರಣವು ವೀರ ಮರಣವಾಗಿದೆ. ಆತನ ಅಕಾಲಮರಣಕ್ಕಾಗಿ ನನಗೆ ಬಹಳ ದುಃಖವಾಗಿದೆ" ಎಂದು ಬರೆದಿದ್ದಾರೆ.

•

ಕ್ಯಾಪ್ಟನ್ ಎಂ. ಎಸ್. ಗದಗ್‌ಕರ್

ಕ್ಯಾಪ್ಟನ್ ಮದನ್‌ಮೋಹನ್ ಶ್ಯಾಮರಾವ್ ಗದಗ್‌ಕರ್ ಅವರು ೧೯೪೪ರ ಸೆಪ್ಟೆಂಬರ್ ೧೭ ರಂದು ಬೆಳಗಾಂನಲ್ಲಿ ಜನಿಸಿದರು. ಬೆಳಗಾಂನ ಬಿ. ಕೆ. ಮಾಡೆಲ್ ಹೈಸ್ಕೂಲಿನಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಯನ್ನು ಮುಗಿಸಿಕೊಂಡ ನಂತರ ಇವರು ೧೯೬೧ರ ಅಕ್ಟೋಬರ್ ತಿಂಗಳಲ್ಲಿ ಸೈನ್ಯಕ್ಕೆ ಸೇರಿದರು. ಬಾಲ್ಯದಿಂದಲೂ ದಿಟ್ಟತನಕ್ಕೆ ಹೆಸರಾಗಿದ್ದ ಇವರ ಸ್ವಭಾವಕ್ಕೆ ಸಹಜವಾದ ವೃತ್ತಿಯೇ ದೊರಕಿತು.

ಸಾಧಾರಣ ಎತ್ತರದ ನಿಲುವನ್ನುಳ್ಳ ಇವರು ಉತ್ತಮ ಮೈಕಟ್ಟನ್ನೂ ಹೊಂದಿರುವರು. ಅವರ ಅನೇಕ ಹವ್ಯಾಸಗಳಲ್ಲಿ ಮುಖ್ಯವಾದುದೆಂದರೆ ಛಾಯಾ ಚಿತ್ರಗ್ರಹಣ. ಗಗನಯಾನದಲ್ಲಿ ವಿಶೇಷ ಆಸಕ್ತಿಯುಳ್ಳ ಇವರು ಇಷ್ಟರಲ್ಲಿಯೆ ಆ ಕಾರ್ಯವನ್ನು ಕೈಗೊಳ್ಳಲಿದ್ದಾರೆ.

ಸೇನೆಗೆ ಸೇರಿದೊಡನೆ ಇವರು ಆರ್ಟಿಲರಿಯಲ್ಲಿ ಟೆಕ್ನಿಕಲ್ ಅಸಿಸ್ಟೆಂಟ್ ಆಗಿ ನೇಮಕವಾದರು. ನಾಸಿಕ್‌ರೋಡ್ ಸೈನಿಕಶಿಕ್ಷಣ ಶಿಬಿರದ ಆರ್ಟಿಲರಿ ಸೆಂಟರ್‌ನಲ್ಲಿ ಪ್ರಾಥಮಿಕ ತರಬೇತಿಯನ್ನು ಮುಗಿಸಿಕೊಂಡಮೇಲೆ ಇವರನ್ನು ಪೂರ್ವವಲಯದ ಯೂನಿಟ್ ಒಂದರಲ್ಲಿ ನೇಮಿಸಲಾಯಿತು. ಶ್ರದ್ಧೆ ಮತ್ತು ನಿಷ್ಠೆಯಿಂದ ಕೂಡಿದ ಕಾರ್ಯಸಾಧನೆಯಿಂದ ಇವರು ತಮ್ಮ ವೃತ್ತಿಯನ್ನು

ಸಾಧಿಸಿದರು. ೧೯೬೪ರಲ್ಲಿ ಇವರನ್ನು ಖಾಯಂಗೊಳಿಸಿ ಕಮಿಷನ್ನಿಗೆ ಆರಿಸಲಾಯಿತು.

ಪುಣೆಯ ಆರ್ಮಿ ಕ್ಯಾಡೆಟ್ ಕಾಲೇಜಿನಲ್ಲಿ ಇವರು ಮೊದಲು ಸರ್ವಿಸ್ ಕ್ಯಾಡೆಟ್ ಆಗಿ ತರಪೇತಿ ಪಡೆದು ಅನಂತರ ಡೆಹ್ರಾಡೂನ್‌ನಲ್ಲಿರುವ ಇಂಡಿಯನ್ ಮಿಲಿಟರಿ ಅಕ್ಯಾಡೆಮಿಯಲ್ಲಿ ಹೆಚ್ಚಿನ ಶಿಕ್ಷಣ ಪಡೆದರು.

೧೯೬೭ರ ಡಿಸೆಂಬರ್ ೧೬ ರಂದು ಇವರನ್ನು ರೆಜಿಮೆಂಟ್ ಆಫ್ ಆರ್ಟಿಲರಿಯಲ್ಲಿ ಕಮಿಷನ್ ದರ್ಜೆಗೆ ಸೇರಿಸಿಕೊಳ್ಳಲಾಯಿತು. ದೇವ್‌ಲಾಲಿಯ ಸ್ಕೂಲ್ ಆಫ್ ಆರ್ಟಿಲರಿಯಲ್ಲಿ ಇವರು ಮೂಲಶಿಕ್ಷಣವನ್ನು ಅಭ್ಯಾಸಮಾಡಿದರು. ಅನಂತರ ಇವರನ್ನು ಒಂದು ಫೀಲ್ಡ್ ರೆಜಿಮೆಂಟಿಗೆ ನೇಮಿಸಲಾಯಿತು. ಅದೇ ಯೂನಿಟ್‌ನಲ್ಲಿಯೇ ಅವರೀಗ ಸೇವೆ ಸಲ್ಲಿಸುತ್ತಿದ್ದಾರೆ.

ಇತ್ತೀಚಿನ ಸಮರದಲ್ಲಿ—ಅಂದರೆ ೧೯೭೧ ರಲ್ಲಿ ನಡೆದ ಭಾರತ-ಪಾಕ್ ಮಿಲಿಟರಿ ಕಾರ್ಯಾಚರಣೆಯಲ್ಲಿ ಇವರು ಫೈರ್ ಕಂಟ್ರೋಲ್ ಆಫೀಸರ್ ಆಗಿದ್ದರು. ಗಡಿಕಾವಲುಗಳ ಪಡೆಗಳಲ್ಲಿದ್ದು ಅಂತರ್‌ರಾಷ್ಟ್ರೀಯ ಗಡಿಗಳನ್ನು ದಾಟಿದ ಮೊದಲ ಸೈನಿಕರಲ್ಲಿ ಇವರೂ ಒಬ್ಬರು. ೧೯೭೧ರ ಡಿಸೆಂಬರ್ ಹತ್ತರಂದು ಇವರು ಮತ್ತೊಂದು ಮುತ್ತಿಗೆಯಲ್ಲಿ ಪಾಲ್ಗೊಂಡಿದ್ದರು. ಆಯಕಟ್ಟಿನ ಸ್ಥಳದಲ್ಲಿ ಸುಭದ್ರವಾಗಿದ್ದ ಶತ್ರು ಠಾಣ್ಯವೊಂದರ ಮೇಲೆ ಇವರು ಮುತ್ತಿಗೆ ಹಾಕಿದರು. ಇವರ ಹೋರಾಟದ ಫಲವಾಗಿ ಆ ಠಾಣ್ಯ ಬಹಳ ಬೇಗ ಭಾರತೀಯ ಪಡೆಗಳ ಕೈವಶವಾಯಿತು. ಆ ಠಾಣ್ಯವನ್ನು ಪುನಃ ಪಡೆಯಲು ಶತ್ರು ಪಡೆಗಳು ಮತ್ತೆ ಮತ್ತೆ ದಾಳಿ ನಡೆಸಿದುವು. ರಾತ್ರಿ ವೇಳೆಯಲ್ಲಿ ಟ್ಯಾಂಕ್‌ಗಳ ನೆರವಿನಿಂದ ಶತ್ರುಗಳು ನಾಲ್ಕು ಬಾರಿ ದಾಳಿ ನಡೆಸಿದರು. ಆದರೆ ಶ್ರೀ ಗಡಗ್‌ಕರ್ ಅವರ ಅಸಾಧಾರಣ ಧೈರ್ಯ ಮತ್ತು ಸ್ಥೈರ್ಯಗಳಿಂದಾಗಿ ಅಂದಿನ ಪರಿಸ್ಥಿತಿ ಹತೋಟಿಗೆ ಬಂದಿತು. ಏಕೆಂದರೆ ಇಡೀ ರಾತ್ರಿಯೆಲ್ಲ ಎಚ್ಚರದಿಂದಿದ್ದು ಸೂಕ್ತ ಸಮಯಕ್ಕೆ ಸರಿಯಾಗಿ ಅಗ್ನಿದಳವನ್ನು ಕರೆಸಿಕೊಂಡರು. ಇದರಿಂದಾಗಿ ಶತ್ರುಗಳ ಆಟ ಸಾಗದೆ, ಅವರ ಪ್ರಯತ್ನವೆಲ್ಲ ನಿಷ್ಫಲವಾಯಿತು.

ಶ್ರೀ ಗಡಗ್‌ಕರ್‌ರವರ ಈ ಸಾಹಸಕಾರ್ಯಕ್ಕೆ ತಕ್ಕ ಪ್ರತಿಫಲವೆಂಬಂತೆ ಭಾರತದ ರಾಷ್ಟ್ರಪತಿಗಳಿಂದ ಇವರಿಗೆ 'ಸೇನಾಪದಕ' ಪ್ರಶಸ್ತಿ ಲಭಿಸಿತು. ಇವರ ಸೇವೆ ಇನ್ನೂ ಹೆಚ್ಚು ಹೆಚ್ಚಾಗಿ ದೇಶಕ್ಕೆ ಸಲ್ಲುವಂತಾಗಲಿ. ಇನ್ನೂ ಹೆಚ್ಚಿನ ಪದವಿ ಪ್ರಶಸ್ತಿಗಳು ಲಭಿಸಲಿ—ಎಂಬುದೇ ನಮ್ಮ ಹಾರೈಕೆ.

ಮೇಜರ್ ವಿ. ಎ. ಮಿಸಲ್

ಮೇಜರ್ ವಿ. ಎ. ಮಿಸಲ್ ಅವರು ೧೯೪೫ರ ನವೆಂಬರ್ ೨೬ ರಂದು ಬೆಳಗಾಂನಲ್ಲಿ ಜನಿಸಿದರು. ಬೆಳಗಾಂನ ಕಿಂಗ್ ಜಾರ್ಜ್ ಶಾಲೆಯಲ್ಲಿ ಶಿಕ್ಷಣ

ಪಡೆದ ಬಳಿಕ ಇವರು ಅದೇ ಪಟ್ಟಣದ ಲಿಂಗರಾಜ ಕಾಲೇಜಿನಲ್ಲಿ ತಮ್ಮ ವ್ಯಾಸಂಗವನ್ನು ಮುಂದುವರೆಸಿದರು.

೧೯೬೭ರಲ್ಲಿ ಸೇನೆಗೆ ಸೇರಿದ ಇವರು ಮದ್ರಾಸ್‌ನ ಒ. ಟಿ. ಎಸ್. (O.T.S) ನಲ್ಲಿ ತರಬೇತಿ ಪಡೆದ ಮೇಲೆ ಮರಾಠಾ ರೆಜಿಮೆಂಟ್‌ನಲ್ಲಿ ಸೆಕೆಂಡ್ ಲೆಫ್ಟಿನೆಂಟ್ ಆಗಿ ನೇಮಕಗೊಂಡು ತಮ್ಮ ಸೈನಿಕ ವೃತ್ತಿಯನ್ನಾರಂಭಿಸಿದರು.

ಇತ್ತೀಚಿನ ಭಾರತ-ಪಾಕ್ ಸಮರದಲ್ಲಿ ಇವರು ಭಾಗವಹಿಸಿದರು. 'ತಿತ್ವಾಲ್'ವಲಯದಲ್ಲಿ ಕೆಲವು ಶತ್ರುಪ್ರದೇಶಗಳನ್ನು ವಶಪಡಿಸಿಕೊಳ್ಳಬೇಕೆಂದು ಮೇಜರ್ ವಿ. ಎ. ಮಿಸಲ್ ಮತ್ತು ಅವರ ಸಂಗಡಿಗರಿಗೆ ಮೇಲಧಿಕಾರಿಗಳಿಂದ ಆದೇಶ ಬಂದಿತು. ಇವರು ಸಿಬ್ಬಂದಿಯೊಡನೆ ಆ ಪ್ರದೇಶಗಳತ್ತ ಮುಂದುವರೆದಂತೆ ಶತ್ರುದಾಳಿಗೆ ಮತ್ತು ಅವರ ಗುಂಡಿನ ಮಳೆಗೆ ತುತ್ತಾಗಬೇಕಾಯಿತು. ಈ ಸಂದರ್ಭದಲ್ಲಿ ಮೂರು ಮಂದಿ ಸೈನಿಕರು ಮೃತಪಟ್ಟರು. ಈ ಸಮಯದಲ್ಲಿ ಇವರಿಗೆ ಆರ್ಟಿಲರಿ ಮತ್ತು 'ಮಾರ್ಟರ್ ಫೈರ್ ಸಪೋರ್ಟ್' ಇರಲಿಲ್ಲವಾದರೂ ಎದೆಗುಂದದೆ ಇವರು ತಮ್ಮ ಸೈನಿಕರನ್ನು ಹುರಿದುಂಬಿಸಿ, ಶತ್ರು ಪ್ರದೇಶದ ಪ್ರಬಲ ನೆಲೆಗಳಮೇಲೆ ಗುಂಡಿನ ಮಳೆಗರೆಯಬೇಕೆಂದು ನಿರ್ದೇಶನವಿತ್ತರು. ಈ ದಾಳಿಯಿಂದ ಶತ್ರುಪಡೆಯಲ್ಲಿ ಹೆಚ್ಚಿನ ಸಾವು ನೋವುಗಳುಂಟಾದವು. ಇವರ ಮತ್ತು ಇವರ ಸೈನಿಕರ ಧೈರ್ಯಗಳನ್ನು ಕಂಡು ಶತ್ರುಪಡೆಗಳು ಪ್ರತಿದಾಳಿಯನ್ನಾರಂಭಿಸುವ ಸಾಹಸಕ್ಕೆ ಕೈ ಹಾಕದೆ, ಸುರಕ್ಷಿತ ಪ್ರದೇಶಗಳತ್ತ ಹಿಮ್ಮೆಟ್ಟಿ ಓಡಿದುವು. ಈ ದಿಸೆಯಲ್ಲಿ ಮೇಜರ್ ಮಿಸಲ್ ಅವರು ತೋರಿರುವ ಕರ್ತವ್ಯನಿಷ್ಠೆ, ಧೈರ್ಯ ಸಾಹಸಗಳು ಶ್ಲಾಘನೀಯವಾಗಿವೆ.

ಇವರ ಈ ಅಪ್ರತಿಮ ಸಾಹಸಕ್ಕಾಗಿ ಇವರಿಗೆ ರಾಷ್ಟ್ರಪತಿಯವರು ಸೇನಾ ಪದಕವನ್ನಿತ್ತು ಗೌರವಿಸಿರುವರು.

ಸುಬೇದಾರ್ ವಿಕ್ಟರ್ ಸೆಕ್ವೇರಾ

ಸುಬೇದಾರ್ ವಿಕ್ಟರ್ ಸೆಕ್ವೇರಾರವರು ೧೯೩೪ರ ಜನವರಿ ೧೮ರಂದು ಮಂಗಳೂರು ಜಿಲ್ಲೆಯ 'ಪಡುಪೆರಂ' ಗ್ರಾಮದಲ್ಲಿ ಜನಿಸಿದರು. ಕರಾವಳಿಗೆ

ಆರು ಮೈಲಿಗಳ ದೂರದಲ್ಲಿರುವ ಬಡ ರೈತನೊಬ್ಬನ ಮನೆಯಲ್ಲಿ ಇವರು ಬೆಳೆದರು. ತಂದೆ ಮತ್ತು ಸೋದರ ನೊಂದಿಗೆ ಇವರು ಆಗಾಗ ವ್ಯವಸಾಯ ದಲ್ಲಿ ಭಾಗಿಯಾಗುತ್ತಿದ್ದರು. ಇವರಿಗೆ ಒಬ್ಬ ಸೋದರ ಮತ್ತು ಸೋದರಿ ಇರುವರು. ಬಡತನದ ಫಲವಾಗಿ ಕಷ್ಟ ಸಹಿಷ್ಣುತೆ, ದುಡಿಮೆ ಹಾಗೂ ತಾಳ್ಮೆ—ಇವುಗಳು ಇವರಲ್ಲಿ ಚಿಕ್ಕಂದಿನಿಂದಲೂ ಮನೆಮಾಡಿದ್ದುವು. ಇವರು ರೈತ ಕುಟುಂಬಕ್ಕೆ ಸೇರಿದವರು.

ಇವರಿಗೆ ಪ್ರಾಥಮಿಕ ವಿದ್ಯಾಭ್ಯಾಸ ಸ್ಥಳೀಯ ಪ್ರಾಥಮಿಕ ಶಾಲೆಯಲ್ಲಿ ಕನ್ನಡದಲ್ಲಿಯೇ ಲಭಿಸಿತು. ಬಡತನದಿಂದಾಗಿ ಇವರ ವಿದ್ಯಾಭ್ಯಾಸ ಐದನೆಯ ತರಗತಿಗೇ ಮುಕ್ತಾಯಗೊಂಡಿತು. ಮುಂದೆ ನಾಲ್ಕೈದು ವರ್ಷಗಳ ಕಾಲ ತಂದೆಯೊಡನೆ ಬೇಸಾಯದಲ್ಲಿ ತೊಡಗಿದರು. ಜೀವನೋಪಾಯಕ್ಕಾಗಿ ಈ ಕುಟುಂಬಕ್ಕಿದ್ದುದು ಒಂದು ತುಂಡು ಭೂಮಿ ಮಾತ್ರ. ಈ ಕಾರಣದಿಂದಾಗಿ ಸೆಕ್ವೇರಾ ಅವರ ಮನಸ್ಸು ಉದ್ಯೋಗಾನ್ವೇಷಣೆಯತ್ತ ಗಮನವನ್ನು ಹರಿಸಿತು. ಉದ್ಯೋಗವನ್ನರಸುತ್ತ ಮುಂಬಯಿಗೆ ಹೋದ ಇವರು ಅಲ್ಲಿನ ದಿನಸಿ ಅಂಗಡಿಯೊಂದರಲ್ಲಿ ನೌಕರಿ ದೊರಕಿಸಿಕೊಂಡರು. ಆದರೆ ಈ ನೌಕರಿಯಿಂದ ಬಡತನದ ಬೇಗೆ ಹಿಂಗಲಿಲ್ಲ.

ಈ ವೇಳೆಯಲ್ಲಿಯೇ ಇವರು ಸೈನ್ಯಕ್ಕೆ ಸೇರಿದರು. ಮುಂಬಯಿಯ ರಿಕ್ರೂಟಿಂಗ್ ಆಫೀಸಿನಲ್ಲಿ ಇವರು ಸೇನೆಗೆ ದಾಖಲಾದುದು ೧೯೫೫ರ ಜನವರಿ ೧೮ರಂದು.

ಸೈನ್ಯಕ್ಕೆ ಸೇರಿದ ಬಳಿಕ ಇವರು ಮದ್ರಾಸಿನಲ್ಲಿ ವೆಲ್ಲಿಂಗ್‌ಟನ್‌ನಲ್ಲಿರುವ 'ರೆಜಿಮೆಂಟ್ ಟ್ರೈನಿಂಗ್ ಸೆಂಟರ್'ಗೆ ಸೇರಿ ಅಲ್ಲಿ ತರಬೇತಿಯನ್ನು ಪಡೆದರು. ಅನಂತರ ಎಂಟನೆಯ ಮದ್ರಾಸ್ ರೆಜಿಮೆಂಟಿನಲ್ಲಿ ಇವರನ್ನು ನೇಮಿಸಲಾಯಿತು. ಈ ವಿಭಾಗದಲ್ಲಿ ಇವರು ಏಳು ವರ್ಷಗಳ ಕಾಲ ಸೇವೆ ಸಲ್ಲಿಸಿದ ಮೇಲೆ, ಸ್ವಇಚ್ಛೆಯಿಂದ ಪ್ಯಾರಾಟ್ರೂಪರ್ ಆಗಲು ಬಯಸಿ, ತರಬೇತಿಗಾಗಿ ಎರಡನೆಯ ಪ್ಯಾರಾಗೆ

ಹೋದರು. ಅಲ್ಲಿ ತರಬೇತಿ ಮುಗಿಸಿಕೊಂಡು, ಪ್ರಾರಂಭಿಕ ವೈಮಾನಿಕ ಹಾರಾಟಗಳನ್ನು ನಡೆಸುವುದರಲ್ಲಿ ಯಶಸ್ವಿಯಾದರು. ಅಲ್ಲಿಂದ ಮುಂದೆ ಇವರು ಅದೇ ವಿಭಾಗದಲ್ಲಿಯೇ ಸೇವೆ ಸಲ್ಲಿಸುತ್ತ ಬಂದಿದ್ದಾರೆ. ಜಮ್ಮು, ಕಾಶ್ಮೀರ, ನೇಫಾಗಡಿ ಪ್ರದೇಶಗಳಲ್ಲಿ ಇವರು ಸೇವೆ ಸಲ್ಲಿಸಿರುವರು. ಗೋವಾ ಕಾರ್ಯಾಚರಣೆಯೊಂದರ ಹೊರತಾಗಿ ಭಾರತವು ಸ್ವಾತಂತ್ರ್ಯಪಡೆದ ಬಳಿಕ ಘೋಷಿಸಿದ ಎಲ್ಲ ಕಾರ್ಯಾಚರಣೆಗಳಲ್ಲಿಯೂ ಇವರು ಭಾಗವಹಿಸಿದ್ದಾರೆ.

'ಡಿ.ಜಡ್' ಎಂದು ಗುರುತಿಸಲಾಗಿದ್ದ ಪ್ರದೇಶಕ್ಕೆ ಸುಮಾರು ೧೫ ಕಿ. ಮೀ. ಗಳ ದೂರದಲ್ಲಿ ೧೯೭೧ರ ಡಿಸೆಂಬರ್ ೧೧ರಂದು ಸಂಜೆ ನಾಲ್ಕೂವರೆ ಘಂಟೆಯ ವೇಳೆಯಲ್ಲಿ ವಿಕ್ಟರ್ ಸೆಕ್ವೇರಾ ಅವರನ್ನು ಇತರ ೧೮ ಮಂದಿ ಪ್ಯಾರಾಟ್ರೂಪರ್‌ಗಳೊಂದಿಗೆ ಇಳಿಸಲಾಯಿತು. ಇವರು ಇಳಿದಿದ್ದ ಪ್ರದೇಶದಲ್ಲಿ ಶತ್ರು ಪಡೆಯ ಕಾರ್ಯಾಚರಣೆ ಬಹಳ ರಭಸದಿಂದ ಸಾಗಿತ್ತು. ಇವರು ಇಳಿದುದೇ ತಡ, ಶತ್ರುಗಳು ಗುಂಡಿನ ಮಳೆಗರೆಯಲಾರಂಭಿಸಿದರು. ಅಲ್ಲಿದ್ದವರ ಪೈಕಿ ಸೆಕ್ವೇರಾ ಅವರೇ ಹಿರಿಯರು. ಇವರು ಕೂಡಲೇ ತಮ್ಮ ಸಿಬ್ಬಂದಿ ವರ್ಗದವರನ್ನು ಒಂದೆಡೆ ಕಲೆಹಾಕತೊಡಗಿದರು. ಅವರೆಲ್ಲರನ್ನೂ ಹುರಿದುಂಬಿಸಿ, ಶತ್ರುಗಳ ಮೇಲೆ ಪ್ರತಿದಾಳಿ ನಡೆಸಲು ಸಿದ್ಧರಾದರು. ಇವರ ಸಮರ್ಥನಾಯಕತ್ವದ ಫಲವಾಗಿ ಶತ್ರುಗಳು ಇವರ ದಾಳಿಯನ್ನೆದುರಿಸಲಾಗದೆ ಹಿಮ್ಮೆಟ್ಟಿದರು.

ಇಷ್ಟಾದೊಡನೆ ವಿಕ್ಟರ್ ಸೆಕ್ವೇರಾ ಅವರು ತಮ್ಮ ಸೈನಿಕರೊಡಗೂಡಿ ಗುರಿ ಸಾಧಿಸಲು ಮುಂದಾದರು. ಮಾರ್ಗಮಧ್ಯದಲ್ಲಿ ಇವರು ಎರಡುಬಾರಿ ಶತ್ರುಗಳನ್ನೆದುರಿಸಬೇಕಾಯಿತು. ಆದರೂ ಎದೆಗುಂದದೆ ಶತ್ರುಗಳನ್ನು ಸದೆಬಡಿಯುವ ಕಾರ್ಯದಲ್ಲಿ ಯಶಸ್ವಿಯಾದರು. ಡಿಸೆಂಬರ್ ೧೩ರಂದು ಸಿದ್ದಿಕಿ ಪಡೆಗಳ ಸಂಪರ್ಕ ಇವರಿಗೆ ದೊರಕಿತು. ತಮ್ಮ ಸಿಬ್ಬಂದಿ ಜನರೊಡನೆ ಸುರಕ್ಷಿತ ಪ್ರದೇಶವನ್ನು ತಲುಪಿದರು.

ಇವರ ನಾಯಕತ್ವದ ವೈಶಿಷ್ಟ್ಯ ಮತ್ತು ನಿಯಂತ್ರಣದಿಂದಾಗಿ ಸಿಬ್ಬಂದಿ ವರ್ಗದ ಹದಿನೆಂಟು ಮಂದಿಯ ಪ್ರಾಣ ಉಳಿಯಿತು. ಇವರ ಈ ರೀತಿಯ ಅದ್ವಿತೀಯ ನಾಯಕತ್ವ, ಸಾಹಸ, ಪರಾಕ್ರಮ ಮತ್ತು ವೈಯಕ್ತಿಕ ಧೈರ್ಯ ಶೌರ್ಯಗಳನ್ನು ಗುರುತಿಸಿ, ಭಾರತದ ರಾಷ್ಟ್ರಪತಿಯವರು ಇವರಿಗೆ 'ಸೇನಾಪದಕ'ವನ್ನಿತ್ತು ಗೌರವಿಸಿರುವರು.

ಕಮ್ಯಾಂಡರ್ ಬಿ. ಆರ್. ವಸಂತ್

ಐ.ಎನ್.ಎಸ್. ವಿಕ್ರಾಂತ್ ನೌಕೆಯು ಭಾರತದ ನೌಕಾಪಡೆಯಲ್ಲಿ ಅತ್ಯಂತ ಮಹತ್ವಪಡೆದ ವಿಮಾನ ವಾಹಕ ನೌಕೆ. ಮೊನ್ನಿನ ಭಾರತ-ಪಾಕ್ ಯುದ್ಧದಲ್ಲಿ ಈ ವಿಮಾನವಾಹಕನೌಕೆ ವಹಿಸಿದ ಪಾತ್ರ ಅದ್ವಿತೀಯ : ಚಿರ ಸ್ಮರಣೀಯ. ಈ ಪ್ರಮುಖ ನೌಕೆಯನ್ನು ಹೇಗಾದರೂ ಮಾಡಿ ನಾಶಪಡಿಸಬೇಕೆಂದು ಶತ್ರುಗಳು ಹವಣಿಸಿದರು. ಈ ಉದ್ದೇಶದಿಂದಲೇ 'ಘಾಜಿ' ಎಂಬ ಪಾಕ್ ಜಲಾಂತರ್ಗಾಮಿ ನೌಕೆ ಭರದಿಂದ ಹೊರಟು ಬಂಗಾಳಾ ಕೊಲ್ಲಿಗೆ ಬಂದು ವಿಶಾಖಪಟ್ಟಣದ ಸಮೀಪದಲ್ಲಿಯೇ ನೀರಿನಲ್ಲಿ ಅಡಗಿಕುಳಿತಿತ್ತು. ಅದು ಅವಿತುಕುಳಿತಿದ್ದರೇನು ? ಅದರ ಸುಳಿವನ್ನು ನಮ್ಮ ಸೈನಿಕ ಗೂಢಚಾರರು ಹೇಗೋ ಪತ್ತೆಹಚ್ಚಿದರು. ಭಾರತದ 'ರಾಜ್‌ಪುಟ್' ಎಂಬ ನೌಕೆ 'ಘಾಜಿ'ಯ ಕಥೆಯನ್ನು ಪೂರೈಸಿತು.

ಐ. ಎನ್. ಎಸ್. ವಿಕ್ರಾಂತ್ ಒಂದು ಬಲಿಷ್ಠವಾದ ಮಹಾನೌಕೆ. ಅನೇಕ ಹೆಲಿಕ್ಯಾಪ್ಟರ್‌ಗಳನ್ನೊಳಗೊಂಡಿದ್ದ ಈ ಮಹಾನೌಕೆ ಶತ್ರುಗಳಿಗೆ ಸಿಂಹಸ್ವಪ್ನವಾಗಿತ್ತು. ಈ ಸಲ ನಡೆದ ಯುದ್ಧದಲ್ಲಿ ಭಾರತದ ಕಡೆ ವಿಮಾನ ಹಾಗೂ ಹೆಲಿಕ್ಯಾಪ್ಟರ್‌ಗಳು ನಷ್ಟವಾಗದೇ ಇರುವುದು ಸಂತಸದ ಸಂಗತಿ. ಇದಕ್ಕೆ ಕಾರಣ ಸ್ಪಷ್ಟವಾಗಿಯೇ ಇದೆ. 'ವಿಕ್ರಾಂತ'ದಲ್ಲಿ ಇನ್ನೂರು ಮಂದಿ ಅಧಿಕಾರಿಗಳೂ, ಸಾವಿರದ ಎಂಟುನೂರು ಮಂದಿ ನಾವಿಕರೂ ಕೆಲಸಮಾಡುತ್ತಿದ್ದರು. ಇಷ್ಟು ಮಂದಿಯೂ ಯುದ್ಧದ ಸಮಯದಲ್ಲಿ ಹಗಲೆನ್ನದೆ, ರಾತ್ರಿಯೆನ್ನದೆ ಮೈಯೆಲ್ಲ ಕಣ್ಣಾಗಿ ಎಚ್ಚರದಿಂದಿರುತ್ತಿದ್ದರು. ನಿದ್ರೆಯನ್ನು ಬದಿಗೊತ್ತಿ ಇವರೆಲ್ಲ ಹದ್ದಿನಂತೆ ಕಾಯುತ್ತಿದ್ದರು. ನಮಗೆ ಲಭಿಸಿದ ದಿಗ್ವಿಜಯಕ್ಕೆ ಈ ನೌಕಾಸೇನೆಯ ನಿಸ್ವಾರ್ಥ ಸೇವೆಯೇ ಮುಖ್ಯಕಾರಣ. ನವೆಂಬರ್ ೧೩ರಿಂದ ಡಿಸೆಂಬರ್ ೧೭ರವರೆಗೆ ಈ ಮಂದಿಗೆ 'ವಿಶ್ರಾಂತಿ'ಯೆಂಬುದು ಸ್ವಪ್ನದಲ್ಲಿಯೂ ಲಭಿಸಲಿಲ್ಲ. ಹೀಗೆ ಅವಿಶ್ರಾಂತ ದುಡಿಮೆಯಿಂದ ಸರ್ವಕಾವಲಿದ್ದು ಭಾರತದ ಜಯಭೇರಿಗೆ ಮುಖ್ಯಕಾರಣರಾದ ವೀರಯೋಧರಲ್ಲಿ ೩೯ ವರ್ಷ ವಯಸ್ಸಿನ ಕಮ್ಯಾಂಡರ್ ಬಿ. ಆರ್. ವಸಂತ್‌ರವರ

ಪಾತ್ರ ಬಹಳ ಪ್ರಮುಖವಾದುದು. ಇವರು 'ವಿಕ್ರಾಂತ' ನೌಕೆಯ ದ್ವಿತೀಯ ನಾಯಕರು.

ಕಮ್ಯಾಂಡರ್ ಬಿ. ಆರ್. ವಸಂತ್‌ರವರು ೧೯೩೨ರ ಏಪ್ರಿಲ್ ತಿಂಗಳ ೨೭ನೇ ದಿನಾಂಕದಂದು ಮಂಗಳೂರಿನಲ್ಲಿ ಜನಿಸಿದರು. ಇವರ ತಂದೆ ದಿ|| ಬಿ. ವಿಠಲರಾಯರು ಬೆಂಗಳೂರಿನ ಇಂಡಿಯನ್ ಬ್ಯಾಂಕ್‌ನಲ್ಲಿ ನೌಕರರಾಗಿದ್ದರು. ಇವರ ತಾಯಿ ಶ್ರೀಮತಿ ಬಿ. ಪದ್ಮಾವತಿಬಾಯಿ ವಿಠಲರಾವ್‌ರವರು ಬೆಂಗಳೂರು ಸಿಟಿ ಕಾರ್ಪೊರೇಷನ್‌ನಲ್ಲಿ ಶಿಕ್ಷಣ ಶಾಖೆಯ ಮುಖ್ಯಾಧಿಕಾರಿಗಳಾಗಿದ್ದಾರೆ.

ಶ್ರೀ ವಸಂತ್‌ರವರ ಚಿಕ್ಕಂದಿನ ಶಿಕ್ಷಣ ಮಂಗಳೂರಿನ ಸೈಂಟ್‌ಸೆಬಾಸ್ಟೀನ್ ಹೈಯರ್ ಎಲಿಮೆಂಟರಿ ಸ್ಕೂಲ್‌ನಲ್ಲಿ ನಡೆಯಿತು. ಮಂಗಳೂರಿನಲ್ಲಿಯೇ ಎಸ್. ಎಸ್. ಎಲ್. ಸಿ. ಪರೀಕ್ಷೆಯನ್ನು ಮುಗಿಸಿಕೊಂಡು ಬಳಿಕ ಶ್ರೀ ವಸಂತ್‌ರವರು ಬೆಂಗಳೂರಿನ ಸೈಂಟ್ ಜೋಸೆಫ್ ಕಾಲೇಜಿಗೆ ಸೇರಿದರು. ಅಲ್ಲಿ ಇಂಟರ್‌ಮೀಡಿಯೆಟ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಮುಂದೆ ಅಣ್ಣಾಮಲೆ ವಿಶ್ವವಿದ್ಯಾನಿಲಯದಲ್ಲಿ ಇಂಜಿನೀಯರಿಂಗ್ ಶಿಕ್ಷಣ ಪಡೆದರು. ಬಿ. ಇ. (ಆನರ್ಸ್) ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದರು. ಪುನಃ ಬೆಂಗಳೂರಿಗೆ ಬಂದು ತಾತಾ ವಿಜ್ಞಾನ ಮಂದಿರದಲ್ಲಿ ವಿದ್ಯುಚ್ಛಕ್ತಿ ಇಂಜನಿಯರಿಂಗ್ ಶಾಖೆಯಲ್ಲಿ ಸಂಶೋಧನಾ ಕಾರ್ಯವನ್ನು ಕೈಗೊಂಡರು. ಎರಡು ತಿಂಗಳುಗಳೊಳಗಾಗಿ ಸಂಶೋಧನ ವೇತನವೂ ದೊರಕಿತು. ಎಂಟು ತಿಂಗಳುಗಳ ಅವಧಿಯಲ್ಲಿ "ಡಬಲ್ .ಸ್ಕ್ವಿರ್ಲ್ ಕೇಜ್ ಇಂಡಕ್ಷನ್ ಮೋಟಾರ್" ಎಂಬ ಯಂತ್ರವನ್ನು ನಿರ್ಮಿಸಿದುದಲ್ಲದೆ ಇನ್ನೂ ಅನೇಕ ಸಂಶೋಧನೆಗಳನ್ನು ಮಾಡಿ ಕೀರ್ತಿ ಪಡೆದರು.

ಅನಂತರ ೮-೩-೫೪ರಂದು ನೌಕಾಸೇನೆಗೆ ಸೇರಿ ಆಕ್ಟಿಂಗ್ ಸಬ್ ಲೆಫ್ಟಿನೆಂಟ್ ಆದರು. ೮-೩-೫೫ರಂದು ಈ ವೃತ್ತಿ ಖಾಯಂ ಆಯಿತು. ೮-೯-೫೫ರಂದು ಲೆಫ್ಟಿನೆಂಟ್ ಪದವಿ ದೊರಕಿತು. ೮-೯-೬೩ರಂದು ಲೆಫ್ಟಿನೆಂಟ್ ಕಮ್ಯಾಂಡರ್ ಆಗಿ ಬಡ್ತಿ ಪಡೆದರು. ३೦-೬-೬೭ರಿಂದ ಕಮ್ಯಾಂಡರ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ.

ಇವರ ವಿಶೇಷ ಕಾರ್ಯಕಲಾಪಗಳ ಅಥವಾ ಚಟುವಟಿಕೆಗಳ ಬಗ್ಗೆ ಸ್ವಲ್ಪ ವಿವರಣೆ ನೀಡುವುದು ಅಗತ್ಯ.

ಎಲೆಕ್ಟ್ರಾನಿಕ್ಸ್, ಕಂಪ್ಯೂಟರ್ಸ್, ರಾಡಾರ್ ಮೊದಲಾದ ವಿಷಯಗಳಲ್ಲಿ ವಿಶೇಷ ಆಸಕ್ತಿ. ೧೯೫೭ರ ಮಾರ್ಚ್ ತಿಂಗಳಿನಿಂದ ಡಿಸೆಂಬರ್‌ವರೆಗೆ ಈ ಬಗ್ಗೆ ಹೆಚ್ಚು ವ್ಯಾಸಂಗ ಮಾಡಿರುತ್ತಾರೆ.

ಶತ್ರು ವಿಮಾನಗಳನ್ನೆದುರಿಸುವ 'ಐ.ಎನ್.ಎಸ್. ಬ್ಯಾಸ್' ಎಂಬ ನೌಕೆಯ ನಿರ್ಮಾಣ ಕಾರ್ಯಕ್ಕಾಗಿ ಇಂಗ್ಲೆಂಡಿನಲ್ಲಿ ಮಾರ್ಚ್ ೧೯೫೯ರಿಂದ ಜೂನ್ ೬೦ರ

ವರೆಗೆ ವಿಶೇಷ ಕಾರ್ಯಗಳಲ್ಲಿ ನಿರತರಾಗಿದ್ದರು. ಹಡಗು ಕಾರ್ಯಾಚರಣೆಗೆ ಸಿದ್ಧವಾದ ಬಳಿಕ ಅಲ್ಲಿಯೇ ೧೯೬೧ರ ಜನವರಿಯ ವರೆಗೂ ವಿದ್ಯುತ್ ಅಧಿಕಾರಿ ಯಾಗಿ ಕೆಲಸ ಮಾಡಿದರು.

ಮಾರ್ಚ್ ೧೯೬೨ರಿಂದ ಸುಮಾರು ಒಂದೂವರೆ ವರ್ಷಗಳಕಾಲ ರಕ್ಷಣಾ ಉತ್ಪಾದನಾ ಶಾಖೆಗೆ ವಿದ್ಯುತ್ ಸಾಧನ ಸಲಕರಣೆಗಳ ಪ್ರಯೋಗಗಳಲ್ಲಿ ಪ್ರಾವೀಣ್ಯತೆಯನ್ನು ಪಡೆಯಲು ಇವರನ್ನು ಎರವಲಾಗಿ ಕಳುಹಿಸಲಾಗಿದ್ದಿತು. ದೇಶೀಯ ವಸ್ತುಗಳ ಬಳಕೆಯನ್ನು ಇವರ ನೇತೃತ್ವದಲ್ಲಿ ಅಧಿಕಗೊಳಿಸಲಾಯಿತು. ಅಲ್ಲದೆ ೧೯೬೨ರಲ್ಲಿ ಆವರೆಗೂ ಇಲ್ಲವಾಗಿದ್ದ ಅನೇಕ ಹೊಸಹೊಸ ವಿದ್ಯುತ್ ಸಲಕರಣೆಗಳನ್ನು ಉತ್ಪಾದಿಸಲು ಇವರು ನೆರವಾದರು. ಹೀಗಾಗಿ ಉತ್ಪಾದನಾ ವ್ಯವಸ್ಥೆಯು ಒಂದು ರೂಪವನ್ನು ತಾಳಿತು.

ಸೆಪ್ಟೆಂಬರ್ ೧೯೬೩ರಿಂದ ೧೯೬೪ರ ಡಿಸೆಂಬರ್‌ವರೆಗೆ ಐ. ಎನ್. ಎಸ್. ತ್ರಿಶೂಲ್‌ನಲ್ಲಿ ವಿಶೇಷ ವಿದ್ಯುತ್ ಅಧಿಕಾರಿಗಳಾಗಿ ಸೇವೆ ಸಲ್ಲಿಸಿದರು. ಹಾಗೂ ಹದಿನೈದನೆಯ ಫ್ರಿಗೇಟ್ ಸ್ಕ್ವಾಡ್ರನ್‌ನಲ್ಲಿ ವಿದ್ಯುತ್ ಇಂಜಿನಿಯರ್ ಆಗಿ ಸೇವೆ ಸಲ್ಲಿಸಿದರು.

೧೯೬೫ರ ಜನವರಿಯಿಂದ ೧೯೬೬ರ ಜೂನ್‌ವರೆಗೆ ನಿರ್ವಾಹಕ ಕಮ್ಯಾಂಡರ್ ಆಗಿಯೂ ಅನಂತರ ಜಾಂ ನಗರದ ಐ.ಎನ್.ಎಸ್. 'ವಲ್ಸುರಾ'ದಲ್ಲಿ ಟ್ರೈನಿಂಗ್ ಕಮ್ಯಾಂಡರ್ ಆಗಿಯೂ ಸೇವೆಸಲ್ಲಿಸಿ ಅನೇಕ ವಿದ್ಯುತ್ ಇಲಾಖೆ ಶಾಖಾಧಿಕಾರಿ ಗಳಿಗೂ, ಹಡಗಿನ ನಾವಿಕರುಗಳಿಗೂ ಶಿಕ್ಷಣ ಕೊಟ್ಟಿದ್ದಾರೆ.

೧೯೬೬ರ ಜೂನಿಂದ ೧೯೬೭ರ ಜೂನ್‌ವರೆಗೆ ನವದೆಹಲಿಯಲ್ಲಿರುವ ನೌಕಾ ಕೇಂದ್ರ ಕಛೇರಿಯಲ್ಲಿ ಶಸ್ತ್ರಾಸ್ತ್ರಗಳನ್ನು ಸಜ್ಜುಗೊಳಿಸುವ ಶಾಖೆಯ ಡೆಪ್ಯುಟಿ ಡೈರೆಕ್ಟರ್ ಆಗಿ ಕೆಲಸಮಾಡಿ ದಕ್ಷ ಅಧಿಕಾರಿಗಳೆಂದು ಕೀರ್ತಿಗಳಿಸಿದ್ದಾರೆ.

೧೯೬೭ರ ಜೂನಿಂದ ೧೯೭೦ರ ಸೆಪ್ಟೆಂಬರ್ ವರೆಗೆ ಘಾನಾ ಸರ್ಕಾರಕ್ಕೆ ನೌಕಾಸಲಹೆಗಾರರಾಗಿ ಡೆಪ್ಯುಟೇಷನ್ ಆಗಿ ಹೋಗಿ ಬಂದರು. ಬಳಿಕ ಇವರಿಗೆ ರಾಷ್ಟ್ರಪತಿಯವರು 'ವಿಶಿಷ್ಟ ಸೇವಾ ಪದಕ'ವನ್ನಿತ್ತು ಗೌರವಿಸಿದರು.

೧೯೭೦ರ ಸೆಪ್ಟೆಂಬರ್‌ನಿಂದ ೧೯೭೧ರ ನವೆಂಬರ್‌ವರೆಗೆ ನೌಕಾದಳದ ವಿಶೇಷ ವ್ಯಾಸಂಗಮಾಡಿ ನೌಕಾಪಡೆಯ ಸರಬರಾಜು ಕೇಂದ್ರಗಳ ಸುಧಾರಣೆ ನಡೆಸಿದ್ದಾರೆ.

೧೯೭೧ರ ನವೆಂಬರ್‌ನಿಂದ ಭಾರತ-ಪಾಕ್ ಯುದ್ಧ ಮುಗಿಯುವವರೆಗೆ ಐ. ಎನ್. ಎಸ್. ವಿಕ್ರಾಂತ್‌ನಲ್ಲಿ ವಿಶೇಷ ಕಾರ್ಯಗಳಲ್ಲಿ ಮಗ್ನರಾಗಿದ್ದರು. ವಿದ್ಯುತ್ ಸಾಧನಗಳ ಮೇಲ್ವಿಚಾರಣೆ, ರಾಡಾರ್, ವೈರ್‌ಲೆಸ್, ಕಂಪ್ಯೂಟರ್ಸ್, ಆಯುಧಗಳ ತನಿಖೆ ಮೊದಲಾದ ವ್ಯವಸ್ಥೆಗಳಿಗೆಲ್ಲಾ ಇವರೇ ಜವಾಬ್ದಾರರಾಗಿ

ದ್ದರು. ಇಂತಹ ಶಿಸ್ತಿನ ಹಾಗೂ ದಕ್ಷತೆಯ ಅಧಿಕಾರಿಗಳನ್ನು ಪಡೆದಿದ್ದುದರಿಂದಲೆ ಐ. ಎನ್. ಎಸ್. ವಿಕ್ರಾಂತ್ ಅಖಂಡ ಕೀರ್ತಿಗಳಿಸಿತು. ತತ್ಪರಿಣಾಮವಾ ಇಡೀ ನೌಕಾಸೇನೆಯೇ ಯಶಸ್ಸು ಗಳಿಸಿತು.

* * *

ಶ್ರೀ ಬಿ. ಆರ್. ವಸಂತ್ ಅವರು ಆದರ್ಶ ಗೃಹಸ್ಥರೂ ಹೌದು. ಆಂಧ್ರ ಪ್ರದೇಶದ ಮುಖ್ಯ ನ್ಯಾಯಾಧೀಶರಾಗಿದ್ದ ಶ್ರೀ ಎನ್. ಡಿ. ಕೃಷ್ಣರಾಯರ ಮಗಳೆ ಇವರ ಪತ್ನಿ. ಮುದ್ದಾದ ಮೂರು ಮಕ್ಕಳನ್ನು ಹೊಂದಿರುವ ಮಾದರಿ ಕುಟುಂಬ ಇವರದು. ಉಜ್ವಲ ಭವಿಷ್ಯವನ್ನು ಹೊಂದಿರುವ ಶ್ರೀ ವಸಂತ್‌ರವರಂತಹ ಯೋಧರು ಇನ್ನೂ ಹೆಚ್ಚಾಗಬೇಕು. ಇಂಥವರಿಂದಲೇ ಭಾರತಕ್ಕೆ ಕೀರ್ತಿ.

●

ಮೇಜರ್ ಹೆನ್ರಿ ಪಿಂಟೋ

ಇತ್ತೀಚಿನ ಭಾರತ-ಪಾಕ್ ಯುದ್ಧದಲ್ಲಿ ಮೇಜರ್ ಹೆನ್ರಿ ಪಿಂಟೋರವರು ತೋರಿರುವ ಸಾಹಸಕ್ಕಾಗಿ ಇವರಿಗೆ 'ವಿಶಿಷ್ಟಸೇವಾಪದಕ'ವನ್ನು ನೀಡಲಾಗಿದೆ.

೪೬ ವರ್ಷ ವಯಸ್ಸಿನ ಶ್ರೀ ಪಿಂಟೋರವರು ಶ್ರೇಷ್ಠ ಯೋಧರೆನಿಸಿದ್ದಾರೆ. ಯೋಧರೆನ್ನುವುದಕ್ಕಿಂತ ಇವರು ವಿದ್ಯುತ್ ಮತ್ತು ಮೆಕ್ಯಾನಿಕಲ್ ಇಂಜಿನಿಯರುಗಳ ಸಂಸ್ಥೆಯ ಪ್ರತಿನಿಧಿಯೆಂದರೇ ಹೆಚ್ಚಾಗಿ ಒಪ್ಪುತ್ತದೆ. ಇವರು ಎರಡನೆಯ ಮಹಾ ಯುದ್ಧದಲ್ಲಿಯೂ ಭಾಗವಹಿಸಿ ಸೇವೆಸಲ್ಲಿಸಿದ್ದರು. ೧೯೬೫ರಲ್ಲಿ ನಡೆದ ಯುದ್ಧದಲ್ಲಿ ಪ್ರತ್ಯಕ್ಷದರ್ಶಿಯಾಗಿದ್ದರು.

ಮಂಗಳೂರಿನಲ್ಲಿ ತಮ್ಮ ಶಿಕ್ಷಣವನ್ನು ಮುಗಿಸಿಕೊಂಡ ಶ್ರೀ ಪಿಂಟೋರವರು ಬಹಳ ಚಿಕ್ಕ ವಯಸ್ಸಿನಲ್ಲಿಯೇ ಸೈನ್ಯಕ್ಕೆ ಸೇರಿಕೊಂಡರು. ಟ್ಯಾಂಕ್‌ಗಳ ಬಗ್ಗೆ ಹೆಚ್ಚಿನ ವ್ಯಾಸಂಗ ಮಾಡಿರುವುದೇ ಇವರ ವೈಶಿಷ್ಟ್ಯ. ಮುಂಚೂಣಿ ಪ್ರದೇಶಗಳಲ್ಲಿ ಇವರು ಕಾರ್ಯಾಚರಣೆ ನಡೆಸುತ್ತಿದ್ದರು. ಇವರು ಪಶ್ಚಿಮ ವಲಯಗಳಲ್ಲಿ ಟ್ಯಾಂಕ್ ಚಲನವಲನಗಳ ಮೇಲೆ ಸರ್ಪಕಾವಲಿದ್ದು ಶತ್ರುಗಳ ದಮನಕ್ಕಾಗಿ ಬಹುವಾಗಿ ಶ್ರಮಿಸಿದ್ದಾರೆ. ಉತ್ತಮ ಭವಿಷ್ಯಪಡೆದಿರುವ ಇವರು ಇನ್ನೂ ಉನ್ನತ ಪದವಿಗಳಿಗೇರಿ ನಮ್ಮ ನಾಡಿಗೆ ಹೆಚ್ಚಿನ ಕೀರ್ತಿ ತರಲೆಂದು ನಮ್ಮ ಹಾರೈಕೆ.

●

ಲೆಫ್ಟಿನೆಂಟ್ ಕರ್ನಲ್ ಜಿ. ಎಂ. ಶಿವಮಲ್ಲಪ್ಪ

ಬಾಂಗ್ಲಾದೇಶದ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದ ಇಂಜಿನಿಯರಿಂಗ್ ಪಡೆಯ ಲೆಫ್ಟಿನೆಂಟ್ ಕರ್ನಲ್ ಗೂಳಿಪುರ ಮಹಂತದೇವರು ಶಿವಮಲ್ಲಪ್ಪ ಅವರಿಗೆ 'ವಿಶಿಷ್ಟ ಸೇವಾಪದಕ' ದೊರಕಿದೆ. ಇವರು ಮೈಸೂರು ಜಿಲ್ಲೆಯ ಚಾಮರಾಜನಗರ ತಾಲ್ಲೂಕಿನವರು. ೧೯೫೨ರಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಪದವಿ ಪಡೆದ ಬಳಿಕ ಸೈನ್ಯಕ್ಕೆ ಸೇರಿದರು. ೧೯೬೫ ರಲ್ಲಿ ಪಾಕಿಸ್ತಾನದೊಡನೆ ನಡೆದ ಯುದ್ಧದಲ್ಲಿಯೂ ಇವರು ಭಾಗವಹಿಸಿದ್ದರು.

ಆವಡಿ ಟ್ಯಾಂಕ್ ತಯಾರಿಕಾ ಕಾರ್ಖಾನೆ ಹಾಗೂ ಜಬ್ಬಲ್ಪುರದ ವಾಹನ ತಯಾರಿಕಾ ಕಾರ್ಖಾನೆಗಳಂಥ ನಿರ್ಮಾಣ ಯೋಜನೆಗಳಲ್ಲಿಯೂ ಭಾಗವಹಿಸಿದ್ದರು. ಪ್ರಸ್ತುತ ಇವರು ಗಡಿ ರಸ್ತೆಗಳ ಕಾರ್ಯದಳದ ಕಮ್ಯಾಂಡರ್ ಆಗಿದ್ದಾರೆ.

●

ಕ್ಯಾಪ್ಟನ್ ಕೃಷ್ಣಪ್ರಸಾದ್ ಶೇಷಾದ್ರಿ

"ಮೊನ್ನಿನ ಭಾರತ-ಪಾಕ್ ಸಮರದಲ್ಲಿ ತೋರಿದ ಅಪ್ರತಿಮ ಸಾಹಸಕ್ಕಾಗಿ ಕ್ಯಾಪ್ಟನ್ ಕೆ. ಪಿ. ಶೇಷಾದ್ರಿಯವರಿಗೆ ರಾಷ್ಟ್ರಪತಿಯವರು ಒಂದು ಸಾಂಕೇತಿಕ ಗೌರವವನ್ನು ನೀಡಿದ್ದಾರೆ." ಎಂಬುದಾಗಿ ಪತ್ರಿಕೆಗಳಲ್ಲಿ ಸುದ್ದಿ ಹರಡಿತು. ಈ ವೀರಯೋಧ ಮತ್ತಾರೂ ಅಲ್ಲ. ನಮ್ಮ ಕನ್ನಡನಾಡಿನವರೇ. ನಮ್ಮ ಕಾರ್ಪೊರೇಷನ್ ಕಮಿಷನರ್ ಆಗಿದ್ದು ಈಗ ಮೈಸೂರು ರಾಜ್ಯದ ಫೈನಾನ್ಷಿಯಲ್ ಕಾರ್ಪೊರೇಷನ್ನಿನ ಮ್ಯಾನೇಜಿಂಗ್ ಡೈರೆಕ್ಟರ್ ಆಗಿರುವ ಶ್ರೀ ಸಿ. ಎಸ್. ಶೇಷಾದ್ರಿ (ಐ. ಎ. ಎಸ್.) ರವರು ಕ್ಯಾ|| ಕೆ. ಪಿ. ಶೇಷಾದ್ರಿಅವರ ತಂದೆ. ವಿಶಾಖ ಪಟ್ಟಣದ ರೇವು ಆಡಳಿತ ಅಧಿಕಾರಿಗಳೂ ಮುಖ್ಯ ಇಂಜಿನಿಯರ್‌ರವರೂ ಆಗಿದ್ದ ದಿ|| ಎಸ್. ನಂಜುಂಡಯ್ಯ ನವರ ಪುತ್ರಿಯವರಾದ ಶ್ರೀಮತಿ ಲಲಿತ ಶೇಷಾದ್ರಿಯವರು ಕ್ಯಾ|| ಕೃಷ್ಣಪ್ರಸಾದ್ ಶೇಷಾದ್ರಿಯವರ ತಾಯಿ. ಈ ದಂಪತಿಗಳ ಸುಪುತ್ರರಾದ ಕ್ಯಾ|| ಕೃಷ್ಣಪ್ರಸಾದ್ ಯುದ್ಧದಲ್ಲಿ ಭಾಗವಹಿಸಿ ವೀರಾಗ್ರಣಿಯೆನಿಸಿಕೊಂಡು ತಾಯಿತಂದೆಗಳಿಗೂ, ಕನ್ನಡ ನಾಡಿಗೂ ಕೀರ್ತಿತಂದಿದ್ದಾರೆ.

ಬಾಂಗ್ಲಾದೇಶದ ಹೋರಾಟದಲ್ಲಿ ನಮ್ಮ ಸೈನಿಕರ ಪಾತ್ರ ಅತ್ಯಂತ ಮಹತ್ವವುಳ್ಳದ್ದಾಗಿತ್ತು. ಪೂರ್ವವಲಯದ "ಹಿಲ್ಲಿ" ಎಂಬ ವಿಭಾಗದಲ್ಲಿ ಶತ್ರುಗಳ ಕಾರ್ಯಚಟುವಟಿಕೆ ಬಿರುಸಾಗಿ ಸಾಗಿತ್ತು. ಆ ಪ್ರದೇಶದಲ್ಲಿ-ಮೇಲೆ ಭಾರತ ವಿಮಾನ ಪಡೆ

ಕೆಳಗೆ ಸೈನಿಕರ ಮುನ್ನಡೆ. ಶತ್ರುಠಾಣ್ಯಗಳನ್ನು ಪತ್ತೆಹಚ್ಚಿ ವಿಮಾನಗಳು ಗುಂಡು ಹಾರಿಸಿ ಅವುಗಳನ್ನು ನಾಶಪಡಿಸುತ್ತ ಮುಂದುವರೆಯುತ್ತಿದ್ದಂತೆ ಕೆಳಗೆ ಭೂಸೇನೆಯೂ

ಮುಂದೆ ಸಾಗುತ್ತಿತ್ತು. ಈ ದಾಳಿಗೆ ಸಿಕ್ಕಿ ತತ್ತರಿಸಿದ ಹಲವಾರು ಪಾಕ್ ಸೈನಿಕರು ಭಯಭೀತರಾಗಿ ಎಲ್ಲಿದ್ದ ಸಾಮಾನನ್ನು ಅಲ್ಲಿಯೇ ಬಿಟ್ಟು ಕಾಲಿಗೆ ಬುದ್ಧಿ ಹೇಳಿ ಪರಾರಿಯಾದರು. ಹಾಗೆ ಹೋಗುವಾಗಲೂ ಸುಮ್ಮನೆ ಹೋಗಲಿಲ್ಲ. ತಾವಿದ್ದ ಗುಪ್ತಸ್ಥಳಗಳಲ್ಲಿ ಸಿಡಿಮದ್ದುಗಳನ್ನಿಟ್ಟು ಹೋಗಿದ್ದರು. ಈ ಸಿಡಿಮದ್ದುಗಳು ಸಿಡಿದು ಅನೇಕರಿಗೆ ಸಾವು ನೋವುಗಳಾದುವು. ಇಷ್ಟೇ ಅಲ್ಲದೆ ಎಷ್ಟೋ ಕಡೆಗಳಲ್ಲಿ ಪರಸ್ಪರ ದ್ವಂದ್ವಯುದ್ಧವೂ ನಡೆದು ಹಲವರಿಗೆ ಗಾಯಗಳಾದುವು. ಈ ರಹಸ್ಯ ಸಿಡಿಬಾಂಬುಗಳ ಮಧ್ಯೆ ನುಗ್ಗಿ ಶತ್ರುನೆಲೆಗಳನ್ನು ಧ್ವಂಸಗೊಳಿಸುವುದಂತೂ ಬಹಳ ಕಷ್ಟದ ಕೆಲಸವೇ ಆಗಿತ್ತು. ಕುಹಕಿಗಳಾದ ಪಾಕ್ ಸೈನಿಕರು ಅಡಗಿಸಿಟ್ಟಿದ್ದ ಸಿಡಿ ಬಾಂಬುಗಳಿಂದ ನಮ್ಮ ಸೈನಿಕರು ಅನೇಕ ಕಷ್ಟ ನಷ್ಟಗಳನ್ನನುಭವಿಸಬೇಕಾಯಿತು. ಈ ಸಂದರ್ಭದಲ್ಲಿ ಗಾಯಗೊಂಡವರಲ್ಲಿ ಶ್ರೀ ಕೃಷ್ಣ ಪ್ರಸಾದ್ ಶೇಷಾದ್ರಿಯವರೂ ಒಬ್ಬರು.

ಶ್ರೀ ವಿ. ವೆಂಕಟೇಶ್ವರನ್ ಎಂಬ ಲೇಖಕರು ಪುಣೆಯ ಮಿಲಿಟರಿ ಆಸ್ಪತ್ರೆಗೆ ಭೇಟಿಯಿತ್ತು ಅನೇಕ ವೀರಯೋಧರನ್ನು ಕಂಡು ಯೋಗಕ್ಷೇಮ ವಿಚಾರಿಸಿದ್ದರು. ಆಗ ಅವರು ಶ್ರೀ ಕೆ. ಪಿ. ಶೇಷಾದ್ರಿಯವರನ್ನೂ ಕಂಡಿದ್ದರು. ಆಗ ವೆಂಕಟೇಶ್ವರನ್‌ರವರು ತಾವು ಶ್ರೀ ಕೆ. ಪಿ. ಶೇಷಾದ್ರಿಯವರಿಂದ ಕೇಳಿ ತಿಳಿದ ವಿಚಾರಗಳನ್ನು ಬಹಳ ಸ್ವಾರಸ್ಯವಾಗಿ ಬರೆದು ಪ್ರಸಿದ್ಧ ಇಂಗ್ಲಿಷ್ ಪತ್ರಿಕೆಯಾದ 'ಹಿಂದೂ' ಪತ್ರಿಕೆಯಲ್ಲಿ (ತಾ|| ೪-೧-೭೨) "Valiant Hearts in Maimed Bodies" ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸಿದ್ದಾರೆ.

ಶ್ರೀ ಕೃಷ್ಣಪ್ರಸಾದ್‌ರವರ ಅಪ್ರತಿಮ ಸಾಹಸ ಮತ್ತು ಧೈರ್ಯಗಳ ಪ್ರದರ್ಶನಕ್ಕಾಗಿ ರಾಷ್ಟ್ರಪತಿಯವರು ಗೌರವಿಸಿರುವುದು ಸರಿಯಷ್ಟೆ. ಆ ಸಂದರ್ಭದಲ್ಲಿ ಶ್ರೀ ಕೃಷ್ಣ ಪ್ರಸಾದ್ ಶೇಷಾದ್ರಿಯವರ ಮೇಲಧಿಕಾರಿಗಳಾದ ಕಮ್ಯಾಂಡಿಂಗ್ ಆಫೀಸರ್-ನಂ. ೫ ಗರ್‌ವಾಲ್ ರೈಫಲ್ಸ್ ರವರು ಪ್ರಶಂಶಿಸಿ, ಅವರ ತಂದೆಯವರಿಗೆ ಹೀಗೆ ಪತ್ರ ಬರೆದಿರುವರು.

"ನಿಮ್ಮ ಕುಮಾರ ಕ್ಯಾಪ್ಟನ್ ಕೆ. ಪಿ. ಶೇಷಾದ್ರಿಯವರು ರಣರಂಗದಲ್ಲಿ ಧೈರ್ಯಸಾಹಸಗಳನ್ನು ಅತ್ಯುನ್ನತ ಮಟ್ಟದಲ್ಲಿ ಪ್ರದರ್ಶಿಸಿದ್ದಾರೆಂದು ತಿಳಿಸಲು ನನಗೆ ತುಂಬಾ ಹೆಮ್ಮೆಯಾಗುತ್ತದೆ. ಪೂರ್ವಪಾಕಿಸ್ತಾನದ ಬಸುದೀಪುರ್ ಗಡಿಯಲ್ಲಿ (ಹಿಲ್ಲಿ ಸೆಕ್ಟರ್) ಶತ್ರುಗಳೊಡನೆ ಪರಸ್ಪರ ಹೋರಾಟದಲ್ಲಿ ಅವರು ಮಗ್ನರಾಗಿದ್ದರು. ಆಗ ಶತ್ರುಗಳು ಮೇಲೆರಗಿ ತೀವ್ರ ಘರ್ಷಣೆಯುಂಟಾಯಿತು. ಈ ಹೋರಾಟದಲ್ಲಿ ಅವರ ಮೊಣಕಾಲಿಗೆ ಪೆಟ್ಟು ಬಿದ್ದು ಮುರಿದು ತುಂಬಾ ನೋವುಂಟಾಯಿತು. ಆದ್ದರಿಂದ ಅವರನ್ನು ಆಸ್ಪತ್ರೆಗೆ ಸೇರಿಸಿದ್ದೇವೆ. ಈ ದುಃಖವನ್ನು ತಾವು ಸಹಿಸಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ."

(ಈ ಯುದ್ಧದಲ್ಲಿ ಘರ್‌ವಾಲಿ ಪಡೆಯುವರು 'ಕುಕ್ರಿ' ಎಂಬ ಆಯುಧವನ್ನು ಉಪಯೋಗಿಸಿದ್ದರು. ಇದು ಉಕ್ಕಿನಿಂದ ತಯಾರಾದ ಹಾಗೂ ಹರಿತವಾದ ಆಯುಧ. ಇದನ್ನು ಘೂರ್ಖಾಗಳು ಸಾಮಾನ್ಯವಾಗಿ ಆತ್ಮರಕ್ಷಣೆಗಾಗಿ ಉಪಯೋಗಿಸುವುದುಂಟು. ಕೆಲವೊಮ್ಮೆ ದ್ವಂದ್ವಯುದ್ಧಗಳಲ್ಲಿಯೂ ಈ ಆಯುಧವನ್ನು ಬಳಸುವರು.

ಮರಾಠಾ ಸೈನಿಕರು ಸಾಮಾನ್ಯವಾಗಿ ಸನೀನನ್ನು (ಬಯೊನೆಟ್) ಉಪಯೋಗಿಸುತ್ತಾರೆ. ಎರಡನೆಯ ಮಹಾಯುದ್ಧದಲ್ಲಿ ಜರ್ಮನ್ ಸೈನಿಕರು ಥಳಥಳನೆ ಹೊಳೆಯುವ ಉಕ್ಕಿನ ಹರಿತವಾದ ಈ ಆಯುಧಗಳನ್ನು ಕಂಡೊಡನೆಯೇ ಪಲಾಯನ ಮಾಡುತ್ತಿದ್ದರು. ಅಲ್ಲದೆ ಭಾರತೀಯ ಸೈನಿಕರು ಯುದ್ಧಸಮಯದಲ್ಲಿ ಕೂಗುತ್ತಿದ್ದ ಜೈಕಾರಗಳನ್ನು ಕೇಳಿ ತತ್ತರಿಸಿ ಹೋಗುತ್ತಿದ್ದರು.)

ಲೆಫ್ಟಿನೆಂಟ್ ಕರ್ನಲ್ ಕೆ. ಕೆ. ಮಲ್ಹೋತ್ರರವರು (ಇಂಜಿನಿಯರ್ ರೆಜಿಮೆಂಟ್‌ನ ಕಮ್ಯಾಂಡಿಂಗ್ ಆಫೀಸರ್‌ರವರು.) ಕ್ಯಾಪ್ಟನ್ ಶೇಷಾದ್ರಿಯವರಿಗೆ ಹೀಗೆ ಬರೆದಿದ್ದಾರೆ. "ಬಾಂಗ್ಲಾದೇಶದ ಸಮರದಲ್ಲಿ ನೀವು ಶಕ್ತಿಸಾಹಸಗಳಿಂದ ಹೋರಾಡಿದ್ದೀರೆಂದು ಕೇಳಿ ನನಗೆ ಸಂತೋಷವಾಗಿದೆ. ನಾನು ಭೇಟಿಯಾದ ಅನೇಕ ಅಧಿಕಾರಿಗಳು ನಿಮ್ಮ ಧೈರ್ಯ-ಸ್ಥೈರ್ಯಗಳನ್ನು ಪ್ರಶಂಸೆ ಮಾಡುತ್ತಿದ್ದುದು ನನಗೆ ತಿಳಿದು ಬಂದಿದೆ. ನಿಮ್ಮಲ್ಲಿ ಕರ್ತವ್ಯ ಪಾರಾಯಣತೆ ಹಾಗೂ ಮುಂದಾಳುತನ ಎದ್ದುಕಾಣುತ್ತಿದೆಯೆಂದು ತಿಳಿಸಲು ಹೆಮ್ಮೆಪಡುತ್ತೇನೆ. ಶತ್ರುವಿರುದ್ಧ ಹೋರಾಟದಲ್ಲಿ ನಿಮಗೆ ತೀವ್ರಗಾಯವುಂಟಾಗಿದೆಯೆಂದು ಕೇಳಿ ತಿಳಿದು ಬಹಳ ದುಃಖವಾಯಿತು. ಇದು ನೀವು ನಿಮ್ಮ ದೇಶಕ್ಕಾಗಿ ತೋರಿದ ತ್ಯಾಗವೆಂದೇ ಭಾವಿಸಿದ್ದೇನೆ. ಭಾರತದ ಸೈನಿಕರ ಸಂಪ್ರದಾಯಕ್ಕನುಗುಣವಾಗಿ ನೀವು ನಿಮ್ಮ ಸಾಹಸವನ್ನು ಮೆರೆಸಿದ್ದೀರಿ.

* * * * *

ಮೇಲ್ಕಂಡ ಎರಡು ಪತ್ರಗಳಿಂದ ನಾವು ಕ್ಯಾಪ್ಟನ್ ಕೆ. ಪಿ. ಶೇಷಾದ್ರಿಯ

ವರ ಬಗೆಗೆ ಒಂದು ಆದರ್ಶ ಅಭಿಪ್ರಾಯವನ್ನು ಕಲ್ಪಿಸಿಕೊಳ್ಳಬಹುದು. ಶ್ರೀ ಕೃಷ್ಣಪ್ರಸಾದ್ ಶೇಷಾದ್ರಿಯವರು ವಿಶಾಖಪಟ್ಟಣದ ಸೆಂಟ್ ಅಲೋಷಿಯಸ್ ಸ್ಕೂಲ್‌ನಲ್ಲಿ ಬಾಲ್ಯಶಿಕ್ಷಣವನ್ನು ಪಡೆದರು. ಅನಂತರ ಪಾಂಡಿಚೆರಿಯಲ್ಲಿರುವ ಸೆಂಟ್ ಜೆನಿಸ್ ಕಾನ್ವೆಂಟ್‌ನಲ್ಲಿ ಮಾಧ್ಯಮಿಕ ಶಾಲೆಯ ವ್ಯಾಸಂಗವನ್ನು ಮುಂದು ವರೆಸಿದರು. ಹೈಸ್ಕೂಲ್ ಶಿಕ್ಷಣವು ಬೆಳಗಾಂನ ಕಿಂಗ್ ಜಾರ್ಜ್‌ಸ್ಕೂಲ್‌ನಲ್ಲಿಯೂ ಬೆಂಗಳೂರಿನ ಮಿಲಿಟರಿ ಸ್ಕೂಲ್‌ನಲ್ಲಿಯೂ ನಡೆಯಿತು. ಅನಂತರ ೧೯೬೪ರಲ್ಲಿ ಸೀನಿಯರ್ ಕೇಂಬ್ರಿಡ್ಜ್ ಪರೀಕ್ಷೆಯಲ್ಲಿ ಇವರು ಉನ್ನತ ದರ್ಜೆಯಲ್ಲಿ ಉತ್ತೀರ್ಣ ರಾದರು.

ಹೀಗೆ ವಿದ್ಯಾಭ್ಯಾಸ ಮುಗಿದ ಬಳಿಕ ಇವರು ಖಡಕ್‌ವಾಸ್ಲಾದಲ್ಲಿರುವ ನ್ಯಾಷನಲ್ ಡಿಫೆನ್ಸ್ ಅಕ್ಯಾಡೆಮಿಗೆ ಸೇರಿಕೊಂಡರು. ಅಲ್ಲಿಯ ಪರೀಕ್ಷೆಗಳಲ್ಲಿ ಜಯಗಳಿಸಿ, ಡೆಹರಾಡೂನ್‌ನಲ್ಲಿರುವ ಇಂಡಿಯನ್ ಮಿಲಿಟರಿ ಅಕ್ಯಾಡೆಮಿಗೆ ಸೇರಿದರು. ಡೆಹರಾಡೂನ್‌ನಲ್ಲಿ ಐ. ಎಮ್. ಎ. (I. M. A.) ಪರೀಕ್ಷೆಯಲ್ಲಿ ಜಯಗಳಿಸಿ, ೧೯೬೮ರ ಜೂನ್ ತಿಂಗಳಿನಲ್ಲಿ ಭಾರತದ ಭೂಸೈನ್ಯಕ್ಕೆ ಸೇರಿ 'ಕಮಿಷನ್' ಪದವಿಯನ್ನು ಗಳಿಸಿದರು. ಹಿಮಾಚಲ ಪ್ರದೇಶದಲ್ಲಿರುವ ಧರ್ಮಶಾಲೆಯೊಂದರಲ್ಲಿ ಸ್ಥಾಪಿಸಿದ್ದ ರೆಜಿಮೆಂಟಲ್ ಕೇಂದ್ರದಲ್ಲಿ ೫ನೇ ಗರ್‌ವಾಲ್ ರೈಫಲ್ಸ್ ಶಾಖೆಯಲ್ಲಿ ಇವರಿಗೆ ಅಧಿಕಾರ ಕೊಡಲಾಯಿತು. ಬಳಿಕ ನೇಫಾದಲ್ಲಿಯೂ ಸ್ವಲ್ಪ ಕಾಲ ಕೆಲಸಮಾಡಿ ಸೇವೆ ಸಲ್ಲಿಸಿದರು. ಇತ್ತೀಚಿನ ಸಮರದಲ್ಲಿ 'ಹಿಲ್ಲಿ' ಸೆಕ್ಟರ್‌ನಲ್ಲಿ ಹೋರಾಡುತ್ತಿದ್ದಾಗ ಎದುರಾಳಿಯ ಹೊಡೆತಕ್ಕೆ ಸಿಕ್ಕಿ ಇವರ ಮೊಣಕಾಲು ಮುರಿಯಿತು. ತಕ್ಷಣವೇ ಇವರನ್ನು ಪುಣೆಯ 'ಕಮ್ಯಾಂಡ್ ಹಾಸ್ಪಿಟಲ್'ನಲ್ಲಿ ಚಿಕಿತ್ಸೆಗಾಗಿ ಸೇರಿಸಲಾಯಿತು. ಅಲ್ಲಿ ಕೆಲವು ದಿನಗಳು ಚಿಕಿತ್ಸೆ ಪಡೆದು, ಈಗ ಬೆಂಗಳೂರಿನ ಮಿಲಿಟರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಶ್ರೀ ಕೃಷ್ಣಪ್ರಸಾದ್ ಶೇಷಾದ್ರಿಯವರಿಗೆ ಚಿಕ್ಕಂದಿನಿಂದಲೂ ಯುದ್ಧವೆಂದರೆ ಬಹಳ ಆಸಕ್ತಿ. ಜೊತೆಗೆ ತಾವು ಯುದ್ಧದಲ್ಲಿ ಭಾಗವಹಿಸಿ ಶೌರ್ಯಪ್ರದರ್ಶಿಸ ಬೇಕೆಂಬ ಹಂಬಲು. ಅವರ ಒಂಭತ್ತನೇ ವಯಸ್ಸಿನಲ್ಲಿಯೇ ಸೈನ್ಯಕ್ಕೆ ಸೇರುವ ಆಸಕ್ತಿಯಿತ್ತೆಂದು ಅವರ ತಾಯಿತಂದೆಗಳ ಮೂಲಕ ತಿಳಿದಾಗ ನನಗಂತೂ ಅವರ ದೇಶಾಭಿಮಾನವನ್ನು ಕಂಡು ಅತ್ಯಂತ ಹೆಮ್ಮೆಯುಂಟಾಯಿತು.

ಶ್ರೀ ಕೃಷ್ಣಪ್ರಸಾದ್ ಶೇಷಾದ್ರಿಯವರಿಗೆ ಶೂರನಾದ ಒಬ್ಬ ತಮ್ಮನೂ ಇರು ವರು. ಅವರೂ ಸಹ ತಮ್ಮ ಅಣ್ಣನ ಮೇಲ್ಪಂಕ್ತಿಯನ್ನೇ ಅನುಸರಿಸಿ, ಅಣ್ಣನು ಓದಿದ ಶಾಲೆಗಳಲ್ಲಿಯೇ ವ್ಯಾಸಂಗ ಮಾಡಿದ್ದಾರೆ. ಆದರೆ ಅವರು ಭೂಸೈನ್ಯಕ್ಕೆ ಸೇರದೆ ನೌಕಾಪಡೆಗೆ ಸೇರಿ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಹೆಸರು ಸಬ್ ಲೆಫ್ಟಿ ನೆಂಟ್ ಶ್ರೀನಿವಾಸ ಶೇಷಾದ್ರಿ ಎಂದು. ಐ. ಎನ್. ಎಸ್. ವಿಕ್ರಾಂತ್ ಮೊದ

ಲಾದ ಹಡಗುಗಳಲ್ಲಿ ಅವರು ಕೆಲಸ ಮಾಡಿ ಅಪಾರ ಅನುಭವ ಪಡೆದಿದ್ದಾರೆ. ೧೯೬೯ರಲ್ಲಿ ಇವರಿಗೆ ಕಮಿಷನ್ ಪದವಿ ದೊರಕಿತು.

ಶ್ರೀ ಕೃಷ್ಣಪ್ರಸಾದ್‌ರವರ ಚಿಕ್ಕಪ್ಪನವರಾದ ಬ್ರಿಗೇಡಿಯರ್ ಸಿ. ಎಸ್. ಕೃಷ್ಣಮೂರ್ತಿಯವರೂ ಸಹ ಭೂಸೇನೆಯಲ್ಲಿ ಸೇವೆಸಲ್ಲಿಸಿ ಇತ್ತೀಚೆಗೆ ವಿಶ್ರಾಂತಿ ಪಡೆದಿದ್ದಾರೆ. ಮತ್ತೊಬ್ಬ ಬಂಧುಗಳಾದ ಫ್ಲೈಟ್ ಲೆಫ್ಟಿನೆಂಟ್ ಎನ್. ಎಸ್. ಮೂರ್ತಿಯವರು ವಾಯುಪಡೆಯಲ್ಲಿ ಈಗಲೂ ಸೇವೆ ಸಲ್ಲಿಸುತ್ತಿದ್ದಾರೆ. ಇಂತಹ ವಾತಾವರಣದಲ್ಲಿ ಬೆಳೆದ ಶ್ರೀ ಕೆ. ಪಿ. ಶೇಷಾದ್ರಿಯವರಿಗೆ ಶೌರ್ಯ, ಧೈರ್ಯ, ಸಾಹಸಗಳು ಜನ್ಮತಃ ಲಭ್ಯವಾಗಿರುವುದರಲ್ಲಿ ಆಶ್ಚರ್ಯವೇನು? ಆದಷ್ಟು ಕೂಡಲೆ ಕ್ಯಾಪ್ಟನ್ ಶೇಷಾದ್ರಿಯವರು ಗುಣಮುಖರಾಗಲೆಂದು ಭಗವಂತನಲ್ಲಿ ನಮ್ಮ ಪ್ರಾರ್ಥನೆ.

ಲೆಫ್ಟಿನೆಂಟ್ ಸತೀಶ್‌ಚಂದ್ರ ಸುರೇಶ್ ಬಂಗಾರ

ಲೆಫ್ಟಿನೆಂಟ್ ಸತೀಶ್‌ಚಂದ್ರ ಸುರೇಶ್ ಬಂಗಾರರವರು ವಾಸ್ತವವಾಗಿ ಹೆಸರಿಗೆ ತಕ್ಕಂತೆ ಬಂಗಾರದಂತಹ ಯುವಕರೇ ಹೌದು. ಒಳ್ಳೆಯ ಹುಡುಗನನ್ನು ಸಾಮಾನ್ಯವಾಗಿ "ಬಂಗಾರದಂಥ ಹುಡುಗ" ಎಂದು ಹೇಳುವುದು ವಾಡಿಕೆ. ಹಾಗೆಯೇ ಈ ಸುರೇಶ್ ಬಂಗಾರರವರೂ ಕೂಡ ಅವರ ತಾಯಿತಂದೆಗಳ ದೃಷ್ಟಿಯಲ್ಲಿ ಬಂಗಾರವೇ ಆಗಿದ್ದಾರೆ. ಬಹುಶಃ ಈ ಪೀಳಿಗೆಯ ಹಿಂದಿನ ತಲೆಮಾರಿನವರು ಬಂಗಾರದ ಗಣಿಗಳಲ್ಲಿಯೋ ಬಂಗಾರದ ವಹಿವಾಟುಗಳಲ್ಲಿಯೋ ನಿರತರಾಗಿದ್ದಿರಬೇಕು. ಆ ಕಾರಣದಿಂದಲೇ ಈ ವಂಶದವರಿಗೆ 'ಬಂಗಾರ'ವೆಂಬ ಹೆಸರು ರೂಢಿಗೆ ಬಂದಿರಬೇಕು.

ಶ್ರೀ ಸುರೇಶ್ ಬಂಗಾರರವರು ೧೯೪೬ರ ಜುಲೈ ೨೪ರಂದು ಚಿಕ್ಕಮಗಳೂರಿನಲ್ಲಿ ಜನಿಸಿದರು. ಆಗ ಇವರ ತಂದೆ ಶ್ರೀ ಸತೀಶ್‌ಚಂದ್ರ ಬಂಗಾರರವರು ನೌಕರಿಯ ನಿಮಿತ್ತವಾಗಿ ಚಿಕ್ಕಮಗಳೂರಿನಲ್ಲಿದ್ದರು. ಶ್ರೀ ಸುರೇಶ್‌ರವರ ಪ್ರಾಥಮಿಕ ಶಿಕ್ಷಣ ಚಿಕ್ಕಮಗಳೂರಿನಲ್ಲಿಯೇ ಆಯಿತು. ಅಲ್ಲಿಂದ ತಂದೆಯ ಜೊತೆಯಲ್ಲಿ ಮಧುರೆ ಮತ್ತು ಕೊಯಮತ್ತೂರುಗಳಿಗೆ ಹೋಗಿ ಅಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸಿದರು.

ಇವರಿಗೆ ಚಿಕ್ಕಂದಿನಿಂದಲೂ ಸೈನ್ಯಕ್ಕೆ ಸೇರಿ ಸಾಹಸಿಯಾಗಬೇಕೆಂಬ ಅಪೇಕ್ಷೆ. ಹೈಸ್ಕೂಲಿನ ವಿದ್ಯಾರ್ಥಿಯಾಗಿದ್ದಾಗ ಎನ್.ಸಿ.ಸಿ.ದಳಕ್ಕೆ ಸೇರಿ ಜೂನಿಯರ್ ಏರ್ ವಿಂಗ್‌ನಲ್ಲಿ ಶಿಕ್ಷಣ ಪಡೆದರು. ೧೯೬೩ರಲ್ಲಿ ದೆಹಲಿಯಲ್ಲಿ ನಡೆದ ಗಣರಾಜ್ಯೋತ್ಸವದ ಪೆರೇಡ್‌ನಲ್ಲಿ ಇವರು ನಂ.೨೪. ಮದ್ರಾಸ್ ಏರ್‌ಸ್ಕ್ವಾರ್ಡನ್ ಎನ್.ಸಿ.ಸಿ. ಪರವಾಗಿ ಭಾಗವಹಿಸಿದ್ದರು. ಆಗ ದಿ|| ನೆಹರೂರವರಿಂದ ಬಹುಮಾನವನ್ನು ಪಡೆದರು.

ಮದ್ರಾಸ್‌ನಲ್ಲಿರುವ ಲಯೋಲಾ ಕಾಲೇಜಿನಲ್ಲಿ ಪಿ.ಯು.ಸಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಇವರು, ಮುಂದೆ ಬೆಂಗಳೂರಿಗೆ ಬಂದು ಸೆಂಟ್ ಜೋಸೆಫ್ ಕಾಲೇಜಿನಲ್ಲಿ ತಮ್ಮ ವ್ಯಾಸಂಗವನ್ನು ಮುಂದುವರೆಸಿದರು. ಇಲ್ಲಿಯೇ ಇವರು ಪದವೀಧರರಾದರು.

೧೯೬೪ರಲ್ಲಿ ಕಾಲೇಜು ವಿದ್ಯಾರ್ಥಿಯಾಗಿದ್ದಾಗಲೇ ಇವರು ಕಾಶ್ಮೀರದಲ್ಲಿ ನಡೆದ ಸೇನಾನಾಯಕರ ಶಿಕ್ಷಣ ಶಿಬಿರಕ್ಕೆ ಸೇರಿ ಜಯಭೇರಿ ಹೊಡೆದರು. ಸಿಂಗಪುರದಲ್ಲಿ ನಡೆದ 'ಮಲಯಾ ವಾಯುಸೇನೆಯ ವಾರ್ಷಿಕೋತ್ಸವ'ದಲ್ಲಿ ಭಾಗವಹಿಸಲು ಶ್ರೀ ಸುರೇಶ್‌ಬಂಗಾರವರನ್ನೇ ಆಯ್ಕೆ ಮಾಡಲಾಯಿತು.

೧೯೬೫-೬೬ರಲ್ಲಿ 'ಮೈಸೂರು ರಾಜ್ಯದ ಶ್ರೇಷ್ಠಯೋಧ'ನೆಂಬ ಪ್ರಶಸ್ತಿ ಇವರಿಗೆ ದೊರಕಿತು. ವಿದ್ಯಾರ್ಥಿದೆಶೆಯಲ್ಲಿಯೇ ವೈಮಾನಿಕ ಶಿಕ್ಷಣದಲ್ಲಿಯೂ ತರಬೇತಿ ಪಡೆದು, ವಿಮಾನ ನಡೆಸುವ ಪೈಲಟ್ ಲೈಸೆನ್ಸ್‌ನ್ನು ಸಹ ಇವರು ಪಡೆದಿದ್ದರು.

ಇತ್ತೀಚಿನ ಯುದ್ಧದಲ್ಲಿ ಇವರು ಸಾಹಸದಿಂದ ಹೋರಾಡಿ ಪಾಕ್ ಸೈನಿಕರಿಗೆ ಸಾಕಷ್ಟು ಕಿರುಕುಳವನ್ನು ಕೊಟ್ಟಿದ್ದಾರೆ. ಮೊನ್ನಿನ ಯುದ್ಧದಲ್ಲಿ ಭಾರತವು ಜಯಗಳಿಸಿತಷ್ಟೇ. ಈ ಯಶಸ್ಸಿಗೆ ಕಾರಣಕರ್ತರಾದವರಲ್ಲಿ ಇವರೂ ಒಬ್ಬರು. ಇದಕ್ಕಾಗಿ ರಾಷ್ಟ್ರಪತಿಯವರು ಗೌರವದ ಸಂಕೇತವನ್ನಿತ್ತು ಪ್ರಶಸ್ತಿ ನೀಡಿ, ಶ್ರೀ ಬಂಗಾರರವರನ್ನು ಪ್ರಶಂಶಿಸಿದ್ದಾರೆ.

ಇವರು ಮಂಗಳೂರಿನ ಬಂಗಾರ ಮನೆತನಕ್ಕೆ ಸೇರಿದವರಾಗಿದ್ದು, ದಕ್ಷಿಣ ಕನ್ನಡ ಜಿಲ್ಲೆಗೂ, ಕನ್ನಡ ನಾಡಿಗೂ, ಇಡೀ ಭರತಖಂಡಕ್ಕೂ ಕೀರ್ತಿ ತಂದಿರುವರು. ಇವರ ತಂದೆಯವರೀಗ ಬೆಂಗಳೂರಿನ ಕಾಫಿಬೋರ್ಡ್‌ನಲ್ಲಿ 'ಡೆವಲಪ್‌ಮೆಂಟ್ ಆಫೀಸರ್' ಆಗಿದ್ದು ದಕ್ಷ ಅಧಿಕಾರಿಗಳೆಂದು ಹೆಸರು ಗಳಿಸಿದ್ದಾರೆ. ತಂದೆ

ಯಂತೆ ಮಗನೂ ದಕ್ಷಯೋಧನೆಂದು ಹೆಸರು ಗಳಿಸಿರುವುದು ಸಹಜವಾಗಿಯೇ ಇದೆ.

ತರುಣ ಶ್ರೀ ಸುರೇಶ್‌ರವರ ಭವಿಷ್ಯವು ಉಜ್ವಲವಾಗುವುದರೆಂಬುದರಲ್ಲಿ ಸಂದೇಹವಿಲ್ಲ.

●

ಲೆಫ್ಟಿನೆಂಟ್ ಕನರಾಡಿ ಮಾಧವರಾವ್

ದಕ್ಷಿಣ ಕನ್ನಡ ಜಿಲ್ಲೆಯ ಕನರಾಡಿ ಗ್ರಾಮದಲ್ಲಿ ಸರಳಾಯ ಮನೆತನದ ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬವೊಂದಿದೆ. ಈ ಕುಟುಂಬದವರು ಬಡವ

ರಾದರೂ ಆಚಾರಶೀಲರೆಂದು ಖ್ಯಾತಿ ಪಡೆದಿದ್ದರು. ಇವರಲ್ಲಿ ಶ್ರೀ ಗೋಪಾಲ ಕೃಷ್ಣ ಸರಳಾಯ ಎಂಬುವರು ಜೀವ ನೋಪಾಯಕ್ಕಾಗಿ ಸ್ವಗ್ರಾಮವನ್ನು ಬಿಟ್ಟು ಬಳ್ಳಾರಿಗೆ ಹೋಗಿ ನೆಲೆಸಿದರು. ೧೯೫೦ರಲ್ಲಿ ಅವರ ಸಂಸಾರದವರೆಲ್ಲರೂ ಬಳ್ಳಾರಿಗೇ ಹೋದರು. ಹೀಗೆ ಬಳ್ಳಾ ರಿಯೇ ಅವರ ವಾಸಸ್ಥಳವಾಯಿತು. ಮೇಲ್ಕಂಡ ಗೋಪಾಲಕೃಷ್ಣ ಸರಳಾ ಯರೇ ಲೆ|| ಕನರಾಡಿ ಮಾಧವರಾವ್ ಅವರ ತಂದೆ.

ಮಾಧವರಾಯರ ಪ್ರಾಥಮಿಕ ಶಿಕ್ಷಣ, ಪ್ರೌಢಶಾಲಾ ಶಿಕ್ಷಣಗಳು ಬಳ್ಳಾರಿಯಲ್ಲಿಯೇ ಆಯಿತು. ಇವರು ವಾರ್ಡ್‌ಲಾ ಹೈಸ್ಕೂಲಿನ ವಿದ್ಯಾರ್ಥಿಯಾಗಿ ೧೯೬೦ರಲ್ಲಿ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಇವರು ಕೇವಲ ಹದಿನಾಲ್ಕು ವರ್ಷದ ಬಾಲಕರಾಗಿದ್ದಾಗಲೇ ತಾಯಿ ತೀರಿಹೋದರು. ಇದು ಅವರ ಎಳೆಯ ಮನಸ್ಸಿನ ಮೇಲೆ ಭಾರಿ ಪರಿಣಾಮವನ್ನೇ ಉಂಟುಮಾಡಿತು. ಇದರ ಪರಿಣಾಮವಾಗಿ ಅವರ ಭವಿಷ್ಯ ಜೀವನವೇ ಮಾರ್ಪಾಟಾಯಿತು. ಮುಂದೆ ಬಳ್ಳಾ ರಿಯ ವೀರಶೈವ ಕಾಲೇಜಿನಲ್ಲಿ ಇವರ ವ್ಯಾಸಂಗ ಮುಂದುವರೆಯಿತು. ಅಲ್ಲಿಯೇ ಪದವೀಧರರೂ ಆದರು. ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗ ಇವರು ಆಟಪಾಠ ಗಳಲ್ಲಿ ಭಾಗವಹಿಸುತ್ತಿದ್ದರಲ್ಲದೆ ಎನ್. ಸಿ. ಸಿ. ವಿಭಾಗಕ್ಕೂ ಸೇರಿಕೊಂಡರು. ಎನ್. ಸಿ. ಸಿ. ಯ ಒಂದು ಕ್ಯಾಂಪ್‌ನಲ್ಲಿ ಸೀನಿಯರ್ ಆಫೀಸರ್ ಆಗಿ ಕೆಲಸ

ಮಾಡುವ ಸುಯೋಗ ಇವರಿಗೆ ಲಭಿಸಿತು. ಹೀಗೆ ವಿದ್ಯಾರ್ಥಿದೆಶೆಯಿಂದಲೂ ಇವರಿಗೆ ಸೈನ್ಯಕ್ಕೆ ಸೇರಬೇಕೆಂಬುದೇ ಹೆಬ್ಬಯಕೆಯಾಗಿತ್ತು. ಆದರೆ ಇದಕ್ಕೆ ಮನೆಯವರ ಬೆಂಬಲವಿರಲಿಲ್ಲ. ಆದರೂ ಮಾಧವರಾವ್‌ರವರು ತಮ್ಮ ಹಠವನ್ನು ಸಾಧಿಸುವುದರಲ್ಲಿ ಯಶಸ್ವಿಯಾದರು.

೧೯೬೫ರಲ್ಲಿ ಇವರು ಸೈನಿಕ ಸಮಿತಿಯವರಿಂದ ಆಯ್ಕೆಗೊಂಡರೂ ಕಾರಣಾಂತರಗಳಿಂದ ಸೈನಕ್ಕೆ ಸೇರಲು ಸಾಧ್ಯವಾಗಲಿಲ್ಲ. ಪದವೀಧರರಾದ ಮೇಲೆ ಐದು ವರ್ಷ ಕಾಲ ಅನೇಕ ಹುದ್ದೆಗಳಲ್ಲಿ ಕೆಲಸ ಮಾಡಿದರು. ಆದರೆ ಅದೊಂದೂ ಇವರಿಗೆ ರುಚಿಸಲಿಲ್ಲ. ಮನಸ್ಸಿಗೆ ಸಮಾಧಾನ ನೀಡಲಿಲ್ಲ. ಕೊನೆಗೆ ೧೯೬೬ರ ಡಿಸೆಂಬರ್ ತಿಂಗಳಿನಲ್ಲಿ ನೌಕಾ ಪಡೆಯಲ್ಲಿ ಇವರಿಗೊಂದು ಉದ್ಯೋಗ ದೊರಕಿತು. ೧೯೬೭ರ ಫೆಬ್ರವರಿಯಲ್ಲಿ ಹೆಚ್ಚಿನ ಶಿಕ್ಷಣಕ್ಕಾಗಿ ಆಯ್ಕೆಯಾದರು.

೧೯೬೭ರ ಮಾರ್ಚ್ ೩ನೇ ದಿನಾಂಕ ಇವರ ಜೀವನದಲ್ಲಿ ಒಂದು ಮಹತ್ತರವಾದ ದಿನ. ಅಂದು ಇವರು ತಮ್ಮ ಪೂಜ್ಯ ತಂದೆಯವರ ಆಶೀರ್ವಾದವನ್ನು ಪಡೆದು ಸೈನ್ಯದ ಶಿಬಿರಕ್ಕೆ ಹೊರಟರು. ಈ ಶಿಕ್ಷಣ ಶಿಬಿರದಲ್ಲಿ ವ್ಯಾಸಂಗ ಮುಗಿದ ಬಳಿಕ ಸಬ್ ಲೆಫ್ಟಿನೆಂಟ್ ಆಗಿ ೧೯೬೭ರ ಮಾರ್ಚಿ ೬ರಂದು ಕಮಿಷನ್ ಪಡೆದು ನೌಕಾದಳದ ಓರ್ವ ಅಧಿಕಾರಿಯೆನಿಸಿಕೊಂಡರು.

೧೯೬೭ರಲ್ಲಿ 'ಐ. ಎನ್. ಎಸ್. ದೆಹಲಿ'ಯಲ್ಲಿ ಇವರಿಗೆ ಶಿಕ್ಷಣ ದೊರಕಿತು. ಅನಂತರ ಕೊಚ್ಚಿನ್‌ನಲ್ಲಿರುವ 'ಐ. ಎನ್. ಎಸ್. ವೆಂಡುರತಿ' ಯಲ್ಲಿ ಇವರಿಗೆ ತರಬೇತಿಯೂ ದೊರಕಿತು.

೧೯೬೮ರಲ್ಲಿ 'ಐ.ಎನ್.ಎಸ್. ಕಾವೇರಿ'ಯಲ್ಲಿ ಪುನಃ ಮೂರು ತಿಂಗಳ ಶಿಕ್ಷಣ ಹಾಗೂ 'ಐ. ಎನ್. ಎಸ್. ರಣಜಿತ್' ಮತ್ತು 'ಐ. ಎನ್. ಎಸ್. ರಾಣಾ'ಗಳಲ್ಲಿ ಹೊಂಚು ಕಾಯುವ ತರಬೇತಿಯೂ ನಡೆಯಿತು.

೧೯೬೯ರಲ್ಲಿ 'ಐ. ಎನ್. ಎಸ್. ರಾಣಾ' ಮತ್ತು 'ಐ. ಎನ್. ಎಸ್. ಕಾರ್ವೋಡ'ಗಳಲ್ಲಿ ಅವರ ಕಾರ್ಯಾಚರಣೆ ಆರಂಭವಾಯಿತು, ೧೯೬೯ರಿಂದ ೧೯೭೦ರ ಆಗಸ್ಟ್‌ವರೆಗೆ ಪಾಶ್ಚಾತ್ಯದೇಶಗಳಲ್ಲಿ ಇವರು ವಿಶೇಷ ಶಿಕ್ಷಣದ ಪ್ರವಾಸ ಮಾಡಿದರು.

೧೯೭೧ರ ಭಾರತ-ಪಾಕ್ ಯುದ್ಧದಲ್ಲಿ ಇವರು ಸಕ್ರಿಯವಾಗಿ ಭಾಗವಹಿಸಿದರು. ೧೯೭೧ರ ಡಿಸೆಂಬರ್ ೪ ಮತ್ತು ೫ನೇ ದಿನಾಂಕಗಳಂದು ಶತ್ರು ಹಡಗುಗಳಾದ 'ಪಿ. ಎನ್. ಎಸ್. ಖೈಬರ್' ಮತ್ತು 'ಪಿ. ಎನ್. ಎಸ್. ಷಹಜಹಾನ್' ಹಡಗುಗಳನ್ನು ಮುಳುಗಿಸುವುದರಲ್ಲಿ ಇವರ ಸಾಹಸ ವ್ಯಕ್ತವಾಯಿತು. ಈ ಸಾಹಸವಂತೂ ಅತ್ಯಂತ ಶ್ಲಾಘನೀಯವಾದುದು. ಇಂತಹ ವೀರರನ್ನೊಳಗೊಂಡ ಭಾರತ ನೌಕಾಪಡೆಯನ್ನು ಕಂಡು ಶತ್ರುಗಳು ತಬ್ಬಿಬ್ಬಾದುದರಲ್ಲಿ ಆಶ್ಚರ್ಯವೇನು ? ಶತ್ರುಗಳ ಆ

ಬೃಹತ್ ಹಡಗುಗಳನ್ನು ಮುಳುಗಿಸುವಂಥ ದಿಟ್ಟತನದ ಸಾಹಸಕ್ಕೆ ಯಾವ ಬಹುಮಾನ ತಾನೇ ಸಾಟಿಯಾದೀತು ?

ಶ್ರೀ ಮಾಧವರಾಯರ ಕೀರ್ತಿ ಶೌರ್ಯಗಳು ರಾಷ್ಟ್ರಪತಿಯವರ ಕಿವಿಗಳಿಗೂ ಮುಟ್ಟಿತು. ತತ್ಫಲವಾಗಿ ಇವರಿಗೆ ರಾಷ್ಟ್ರಪತಿಯವರಿಂದ ಒಂದು ಸಾಂಕೇತಿಕ ಪ್ರಶಸ್ತಿಯು ಲಭಿಸಿತು. (Mention in Despatches)

ತರುಣರಾದ ಶ್ರೀ ಮಾಧವರಾಯರಿಗೆ ಉಜ್ವಲ ಭವಿಷ್ಯವಿದೆ. ಹೀಗೆಯೇ ಇವರು ಇನ್ನೂ ಹೆಚ್ಚಿನ ಪದವಿ, ಪ್ರಶಸ್ತಿಗಳನ್ನು ಗಳಿಸುವರೆಂಬ ನಂಬಿಕೆಯೂ ಇದೆ. ಇಂಥ ಸಾಹಸಿಗೆ ಪ್ರತಿಯೊಬ್ಬ ಭಾರತೀಯನೂ ಋಣಿಯಾಗಿರಲೇ ಬೇಕು.

●

ಸಾಹಸಿ ಎಂ. ಆರ್. ವಿ. ಸುಬ್ರಹ್ಮಣ್ಯಂ

ಶ್ರೀ ಎಂ. ಆರ್. ವಿ. ಸುಬ್ರಹ್ಮಣ್ಯಂರವರ ಸ್ಥಳ ಮಿಣಿಜೇನಹಳ್ಳಿ. ಇದು ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ಆವನಿ ಹೋಬಳಿಗೆ ಸೇರಿದ ಒಂದು ಗ್ರಾಮ. ಇವರ ತಂದೆ ಶ್ರೀ ರಾಮಚಂದ್ರ ಐಯ್ಯರ್‌ರವರು ; ಅಷ್ಟಗ್ರಾಮದ ಅಯ್ಯರ್‌ಗಳೆಂದು ಪ್ರಸಿದ್ಧಿ. ಇವರ ತಾಯಿ ಶ್ರೀಮತಿ ಸುಬ್ಬಮ್ಮನವರು. ಶ್ರೀರಾಮಚಂದ್ರ ಅಯ್ಯರ್‌ರವರಿಗೆ ಆರು ಜನ ಗಂಡು ಮಕ್ಕಳು ಮತ್ತು ಮೂವರು ಹೆಣ್ಣು ಮಕ್ಕಳು. ಶ್ರೀ ಸುಬ್ರಹ್ಮಣ್ಯಂರವರು ತೃತೀಯ ಪುತ್ರರು. ಇವರು ಜನಿಸಿದುದು ೧೯೪೩ರ ಏಪ್ರಿಲ್ ೧೮ರಂದು. ಇವರು ಚಿಕ್ಕ ಹುಡುಗನಾಗಿದ್ದಾಗ 'ತೀಟೆಯ ಹುಡುಗ'ನೆಂಬ ಬಿರುದು ಇವರಿಗೆ ಲಭಿಸಿತ್ತು. ಹಳ್ಳಿಯ ಶಾಲೆಯಲ್ಲಿಯೇ ಇವರ ಪ್ರಾಥಮಿಕ ವಿದ್ಯಾಭ್ಯಾಸವಾಯಿತು. ಆವನಿಯ ಮಾಧ್ಯಮಿಕ ಶಾಲೆಯಲ್ಲಿ ಇವರು ಎಲ್. ಎಸ್. ಪರೀಕ್ಷೆ ಮಾಡಿಕೊಂಡರು. ಅನಂತರ ಕೆ. ಜಿ. ಎಫ್. ಹೈಸ್ಕೂಲಿನಲ್ಲಿ ಎಸ್.ಎಸ್.ಎಲ್. ಸಿ. ಪರೀಕ್ಷೆ ಆಯಿತು.

ಮುಂದಿನ ಕತೆಯನ್ನು ಶ್ರೀ ಸುಬ್ರಹ್ಮಣ್ಯಂರವರ ಮಾತಿನಲ್ಲಿಯೇ ಕೇಳೋಣ ; "ವಿಶಾಖಪಟ್ಟಣದಲ್ಲಿದ್ದ ನಮ್ಮಣ್ಣನವರು ನನ್ನನ್ನು ಅಲ್ಲಿಗೆ ಬರಮಾಡಿಕೊಂಡು, "ನೀನು ಮಿಲಿಟರಿಗೆ ಬಿಟ್ಟು ಮತ್ತ್ಯಾವ ಕೆಲಸಕ್ಕೂ ಲಾಯಕ್ಕಿಲ್ಲ" ಎಂದು ಹೇಳಿ ನೇವಿಗೆ (ನೌಕಾದಳಕ್ಕೆ) ಸೇರಲು ಹೇಳಿದರು. ಆಗ ನನ್ನ ಬಾಳಿನ ಮುಂದಿನ ಜೀವನದ ಬಗ್ಗೆ ಒಂದು ತೀರ್ಮಾನಕ್ಕೆ ಬಂದು, ೧೯೬೦ರ ಅಕ್ಟೋಬರ್ ೯ರಂದು ನನ್ನ ಜೀವನಕ್ಕೆ ಇಂದಿನ ಕೀರ್ತಿಯನ್ನು ತಂದುಕೊಟ್ಟ ಭಾರತದ ನೌಕಾದಳಕ್ಕೆ ಸೇರಿದೆ.

"ನೇವಿಗೆ ಸೇರಿದ ನನಗೆ ಇಂಜನಿಯರಿಂಗ್ ಮೆಕ್ಯಾನಿಕಲ್ ಟ್ರೈನಿಂಗ್

ಕೊಟ್ಟರು. ಪ್ರತಿಯೊಂದು ಟೆಸ್ಟ್‌ಗಳಲ್ಲಿಯೂ ನನಗೆ ಮೊದಲನೆಯ ಅಥವಾ ಎರಡನೆಯ ಸ್ಥಾನ ದೊರಕುತ್ತಿತ್ತು. ನನ್ನ ಹಠ, ಒರಟು ಸ್ವಭಾವಗಳು ಹೇಗೆ ಮಾಯವಾಯಿತೆಂಬುದೇ ನನಗೆ ಗೊತ್ತಾಗಲಿಲ್ಲ. ನನ್ನಲ್ಲಿ ಹಠಾತ್ತನೆ ಅಷ್ಟು ಬದಲಾವಣೆಯಾಗಿಬಿಟ್ಟಿತು. ನೇವಿಗೆ ಸೇರಿದ ಮೇಲೆ ಅನೇಕ ಹೊರರಾಷ್ಟ್ರಗಳನ್ನು ಸಂದರ್ಶಿಸುವ ಅವಕಾಶ ನನಗೆ ಲಭಿಸಿತು. ಅವುಗಳಲ್ಲಿ ಮುಖ್ಯವಾದುದೆಂದರೆ ಜಪಾನ್, ಹಾಂಕ್‌ಕಾಂಗ್, ಫಿಲಿಫೈನ್ಸ್ ಮುಂತಾದುವು.

೧೯೬೧ರಲ್ಲಿ ನಡೆದ ಗೋವಾ ವಿಮೋಚನೆ, ೧೯೬೨ರಲ್ಲಿ ನಡೆದ ಚೀಣಾಯುದ್ಧ ೧೯೬೫ರಲ್ಲಿ ನಡೆದ ಪಾಕಿಸ್ತಾನದ ಯುದ್ಧಗಳಲ್ಲಿ ಪಾಲುಗೊಂಡು ದೇಶಕ್ಕೆ ಅಲ್ಪಸೇವೆ ಸಲ್ಲಿಸುವ ಅವಕಾಶ ನನಗೆ ಲಭಿಸಿತು. ಯುದ್ಧವೆಂದರೆ ಏನು? ಎಷ್ಟು ಕಷ್ಟನಷ್ಟಗಳುಂಟಾಗುತ್ತವೆ? ಎಂಬ ವಿಷಯಗಳನ್ನು ಈ ಯುದ್ಧಗಳು ನನಗೆ ತಿಳಿಸಿದುವು.

೧೯೭೧ನೆಯ ಇಸವಿ ನನ್ನ ಜೀವಮಾನದಲ್ಲಿಯೇ ಮರೆಯಲಾಗದಂತಹ ವರ್ಷ. ನಾನು ನೌಕಾದಳದ ರಾಜ್‌ಪುಟ್ ಹಡಗಿನಲ್ಲಿ ಚೀಫ್ ಪೆಟಿ ಆಫೀಸರ್ ಆಗಿ ಕೆಲಸ ಮಾಡುತ್ತಿದ್ದೆ. ಮಾರ್ಚ್ ತಿಂಗಳಿನಿಂದ ಪ್ರತಿದಿನದ ವರದಿಗಳನ್ನೂ ಆಲಿಸುತ್ತಿದ್ದು ಪ್ರತಿಯೊಂದು ಕ್ಷಣಕ್ಕೂ ಸಿದ್ಧವಾಗಿದ್ದ ಸಮಯ. ನಾವು ತಕ್ಷಣ ಸಿದ್ಧವಾಗಬೇಕೆಂದು ಅಕ್ಟೋಬರ್ ತಿಂಗಳಿನಲ್ಲಿ ಆದೇಶ ಬಂತು. ನಾವು ಹಗಲೂ ರಾತ್ರೆ ಕೆಲಸ ಮಾಡಿ ನಮ್ಮ ಹಡಗು ಸಂಚಾರಕ್ಕೆ ಯೋಗ್ಯವಾಗಿರುವಂತೆ ಮಾಡಿದೆವು. ಯುದ್ಧ ಪ್ರಾರಂಭವಾದ ತಕ್ಷಣ ಸಮುದ್ರದಲ್ಲಿ ಕಲ್ಕತ್ತೆಯ ಕಡೆಗೆ ಮುಂದುವರಿಯಲು ನಮಗೆ ಆದೇಶವಾಯಿತು. ಅದರಂತೆ ನಾವು ಸಿದ್ಧರಾದೆವು. ನಮ್ಮ ದಾರಿಯಲ್ಲಿ ನಮ್ಮ ನೌಕೆಯನ್ನು ಮುಳುಗಿಸಲು ಕಾದಿತ್ತು ಸಬ್‌ಮೇರಿನ್ 'ಘಾಜ಼ಿ'. ನಾವು ಶತ್ರುಗಳಿಗೆ ತಿಳಿಯದಂತೆ ಅದನ್ನು ಹೊಡೆದು ನಾಶಗೊಳಿಸಿದೆವು. ಇದು ಪಾಕಿಸ್ತಾನದವರಿಗೆ ದೊಡ್ಡ ಆಘಾತವಾದಂತಾಯಿತು. ಅಲ್ಲಿಂದ ಮುಂದಕ್ಕೆ ಪೂರ್ವ ಪಾಕಿಸ್ತಾನದ ಗಡಿಯಲ್ಲಿ ನಾವು ಕಾದು ನಿಂತೆವು. ಶತ್ರು ಸೈನ್ಯದ ಅನೇಕ ಹಡಗುಗಳು ನಮ್ಮ ಕೈವಶವಾದುವು. ಆ ಎಲ್ಲ ಶತ್ರು ಹಡಗುಗಳನ್ನೂ ಕಲ್ಕತ್ತಾ ಬಂದರಿಗೆ ಸೇರಿಸಿದೆವು.

ಡಿಸೆಂಬರ್ ಆರಂದು ರಾತ್ರೆ ಏಳು ಘಂಟೆಯ ಸಮಯ. ಚಾಲೆನಾ ಬಂದರಿನಲ್ಲಿ ಕಾಯುತ್ತಾ ಇದ್ದಾಗ ಪಾಕಿಸ್ತಾನದ ಹಡಗೊಂದು, ಅದರ ಹೆಸರು 'ಅನ್ವರ್'

ಬಕ್ಸ್' ಅಲ್ಲಿಂದ ತಪ್ಪಿಸಿಕೊಂಡು ಹೊರಡಲು ಪ್ರಯತ್ನಿಸಿತು. ನಾವು ತಕ್ಷಣ ಅಡ್ಡ ಬಂದು ಅದನ್ನು ಹಿಡಿದೆವು. ಹಡಗಿನ ಮೇಲೆ ಜಪಾನ್ ಬಾವುಟವಿದ್ದುದರಿಂದ ನಾವು ಜಪಾನ್ ದೇಶದ್ದೆಂದು ತಿಳಿದಿದ್ದೆವು. ಆದರೆ ಅದು ನಂತರ ಪಾಕಿಸ್ತಾನದ್ದೆಂದು ನಾವು ಕಂಡು ಹಿಡಿದೆವು. ನಾವು ೨೫ ಜನರು ಆ ಹಡಗನ್ನು ಪರೀಕ್ಷಿಸಲು ಚಿಕ್ಕ ಬೋಟ್ ಒಂದರಲ್ಲಿ ಆ ಹಡಗಿಗೆ ಹೋಗಿ ನೋಡಿದರೆ ಅದರಲ್ಲಿ ೭೨ ಜನ ಪಾಕಿಸ್ತಾನೀ ಸಿಪಾಯಿಗಳು ಮದ್ದುಗುಂಡುಗಳ ಸಮೇತ ಸಿದ್ಧವಾಗಿ ಅಡಗಿದ್ದರು. ನಾವು ಹಡಗನ್ನು ಪರಿಕ್ಷಿಸುತ್ತಿದ್ದಾಗ ಈ ಸೈನ್ಯ ಹಠಾತ್ತನೆ ನಮ್ಮ ಮೇಲೆ ದಾಳಿ ನಡೆಸಿತು. ಆದರೆ ನಾವು ಇದಕ್ಕೆ ತಯಾರಾಗಿಯೇ ಬಂದಿದ್ದೆವು, ಯಾಕೆಂದರೆ ಯುದ್ಧಭೂಮಿಯಲ್ಲಿ ನಾವು ಇಂತಹ ಅನಿರೀಕ್ಷಿತಗಳನ್ನು ಊಹಿಸಿರುತ್ತೇವೆ. ನಮ್ಮಲ್ಲಿ ಯಾರೊಬ್ಬರಿಗೂ ಒಂದು ಗಾಯವಾಗುವುದಕ್ಕೆ ಮೊದಲೇ ನಾವು ಅವರಲ್ಲಿ ೪೦ ಜನಗಳಿಗಾದರೂ ಗಾಯಗಳುಂಟುಮಾಡಿ ನೆಲಕ್ಕುರುಳಿಸಿದೆವು. ಕೊನೆಗೆ ಎಲ್ಲರನ್ನೂ ಸೆರೆ ಹಿಡಿದು ತಂದೆವು. ಒಂದೆರಡು ಕ್ಷಣಗಳಲ್ಲಿ ನಮ್ಮ ಪ್ರಾಣಗಳನ್ನು ಉಳಿಸಿಕೊಂಡದ್ದಲ್ಲದೆ ಮೋಸಗಾರ ಶತ್ರುವಿಗೆ ನೀರು ಕುಡಿಸಿದೆವು.

ಅನಂತರದ ಮುಖ್ಯವಾದ ಕೆಲಸ ನನ್ನ ಪಾಲಿಗೆಬಿತ್ತು. ಅದೇ ಹಡಗನ್ನು ನಮ್ಮ ಬಂದರಿಗೆ ಕೊಂಡೊಯ್ಯುವುದು. ನಾನು ಒಂದೇ ಗಂಟೆಯಲ್ಲಿ ಆ ಹಡಗಿನ ಪ್ರತಿಯೊಂದು ಯಂತ್ರದ ಗುಟ್ಟನ್ನೂ ತಿಳಿದುಕೊಂಡು ಬಂದೆ. ಒಂದು ಕಡೆ ಸೆರೆ ಸಿಕ್ಕಿದವರನ್ನು ನೋಡಿಕೊಳ್ಳುವುದು: ಮತ್ತೊಂದು ಕಡೆ ಹಡಗನ್ನು ನಡೆಸುವುದು. ನಮ್ಮ ಬಂದರನ್ನು ತಲುಪಲು ಹತ್ತು ದಿನಗಳು ಹಿಡಿದುವು. ಆ ಹತ್ತು ದಿವಸಗಳೂ ಹಗಲು ರಾತ್ರಿ ನಿದ್ರೆಯೇ ಇಲ್ಲದಂತಾಯಿತು: ಇದರ ಮಧ್ಯೆ ಯಂತ್ರದ ಅನೇಕ ತೊಂದರೆಗಳು. ನನ್ನ ಜೀವಮಾನದಲ್ಲೇ ಅತ್ಯಂತ ಚುರುಕಿನ ಕೆಲಸ ಹಾಗೂ ಬುದ್ಧಿಶಕ್ತಿಗಳು ಒಂದಾಗುವಿಕೆ ಈ ಹತ್ತುದಿನಗಳಲ್ಲಾಯಿತು. ಇದು ನಮ್ಮ ಆಫೀಸರ್‌ರವರಿಗೆ ಆಶ್ಚರ್ಯಕರವಾದ ವಿಷಯವಾಗಿತ್ತು.

ಡಿಸೆಂಬರ್ ೧೮ನೇ ತಾರೀಖು ನಮ್ಮ ಹಡಗಿಗೆ ಬಂದ ತಕ್ಷಣ ನನಗೆ ತಿಳಿದ ಸಂತಸದ ಸುದ್ದಿಯೆಂದರೆ ನನಗೆ ಪ್ರಶಸ್ತಿಕೊಡಲು ರಾಷ್ಟ್ರಾಧ್ಯಕ್ಷರನ್ನು ಪ್ರಾರ್ಥಿಸಿದ್ದ ವಿಚಾರ. ೧೯೭೨ರ ಜನವರಿ ೧೨ರಂದು ರಾಷ್ಟ್ರಾಧ್ಯಕ್ಷರು ನನಗೆ 'ಮೆನ್‌ಷನ್ಡ್ ಇನ್ ಡೆಸ್‌ಪ್ಯಾಚಸ್' ಪ್ರಶಸ್ತಿಯನ್ನು ಕರುಣಿಸಿದರು.

ಮೈಸೂರು ರಾಜ್ಯದವನಾಗಿ ಈ ಅಲ್ಪಸೇವೆಯನ್ನು ಭಾರತ ದೇಶಕ್ಕೆ ಸಲ್ಲಿಸುವ ಭಾಗ್ಯ ದೊರೆತುದಕ್ಕಾಗಿ ನನಗಾಗಿರುವ ಸಂತೋಷವನ್ನು ಬಾಯಲ್ಲಿ ಹೇಳಲಸಾಧ್ಯ. ಇನ್ನು ಕೇವಲ ಮೂರು ವರ್ಷಗಳ ಅವಧಿ ಮಾತ್ರ ಉಳಿದಿದ್ದರೂ ಮುಂದೆಯೂ ಇದೇ ರೀತಿ ಪ್ರಾಣವಿರುವವರೆಗೂ ನನ್ನ ತಾಯ್ನಾಡಿಗೆ ಸೇವೆಸಲ್ಲಿಸಬೇಕೆಂಬ ಬಯಕೆ ಇದೆ. ನಮ್ಮ ಕನ್ನಡ ಮಾತೆಯು ಇನ್ನೂ ಅನೇಕರನ್ನು ಭಾರತದ ಸೇವೆಗೆ ಮೀಸಲಾಗಿರಿಸಿ ತನ್ನ ಕೀರ್ತಿಯನ್ನು ಹೆಚ್ಚಿಸಿಕೊಳ್ಳಲಿ—ಎಂದು ಹಾರೈಸುವೆನು."

ಎಂ. ಗಣಪತಿ ಪ್ರಭು

ಶ್ರೀ ಗಣಪತಿ ಪ್ರಭುರವರು ಮುಡೆನೂರಿನವರು. ಇವರು ಇತ್ತೀಚೆಗೆ ನಡೆದ ಭಾರತ-ಪಾಕ್ ಸಮರದಲ್ಲಿ ತೋರಿದ ಶೌರ್ಯಸಾಹಸಗಳಿಗಾಗಿ "ಮೆನ್ಷನ್



ಇನ್ ಡಿಸ್ಪ್ಯಾಚಸ್" ಪ್ರಶಸ್ತಿಯನ್ನು ಗಳಿಸಿರುವರು.

ಶ್ರೀ ಮುಡೆನೂರ್ ನಾರಾಯಣಪ್ರಭು ಮತ್ತು ಶ್ರೀಮತಿ ಕೃಷ್ಣಾ ಬಾಯಿ ದಂಪತಿಗಳ ಪುತ್ರರಿವರು. ಬಡತನದ ದೆಸೆಯಿಂದಾಗಿ ಇವರ ವಿದ್ಯಾಭ್ಯಾಸ ಹತ್ತನೆಯ ತರಗತಿಯ ವರೆಗೆ ಮಾತ್ರ ಆಯಿತು. ಅನಂತರ ಇವರು ವಿದ್ಯಾಭ್ಯಾಸವನ್ನು ಅಷ್ಟಕ್ಕೇ ನಿಲ್ಲಿಸಿ ಭಾರತೀಯ ನೌಕಾದಳದಲ್ಲಿ ಕೆಲಸಕ್ಕೆ ಸೇರಿಕೊಂಡರು.

ಕೆಲಸಕ್ಕೆ ಸೇರಿದೊಡನೆ ಇವರು ಟ್ರೈನಿಂಗ್‌ಗಾಗಿ ವಿಶಾಖಪಟ್ಟಣಕ್ಕೆ ಹೋಗಬೇಕಾಯಿತು. ಶಿಕ್ಷಣ ಮುಗಿದ ಮೇಲೆ ಇವರನ್ನು ಸಾರಿಗೆ ಇಲಾಖೆ (Communication Branch) ಯಲ್ಲಿ ನೇಮಿಸಲಾಯಿತು. ಇದರಲ್ಲಿ ಹೆಚ್ಚಿನ ಅನುಭವ ಪಡೆಯಲು ಇವರು ಕೊಚ್ಚಿನ್‌ಗೆ ಹೋದರು. ಅಲ್ಲಿಂದ "ಕಾರ್ಡಿನೆರಿ ಟೆಲಿಗ್ರಾಫಿಸ್ಟ್" ಆಗಿ ನೇಮಕಗೊಂಡು, ಭಾರತೀಯ ನೌಕಾದಳದ ಕೃಪಾನಲ್ಲಿ ಸೇರಿದರು.

ಐ.ಎನ್.ಎಸ್. ಕೃಪಾನಲ್ಲಿ ಒಂಭತ್ತು ತಿಂಗಳ ಅವಧಿಯ ಸಮುದ್ರ ಅಭ್ಯಾಸ ಮುಗಿದಮೇಲೆ ಇವರಿಗೆ ಐ.ಎನ್.ಎಸ್. ಆಂಗ್ರೆಗೆ ವರ್ಗವಾಯಿತು. ಅಲ್ಲಿ ನಾಲ್ಕು ತಿಂಗಳ ಕಾಲ ಕೆಲಸಮಾಡಿದರು. ಅನಂತರ ಸ್ವಯಂಸೇವಕರಾಗಿ 'ನೇವಲ್ ಗ್ಯಾರಿಸನ್'ಗೆ ಸೇರಿದರು. ಈ ಸ್ವಯಂಸೇವಕ ವೃತ್ತಿಯ ಶಿಕ್ಷಣ ಒಂದೂವರೆ ವರ್ಷದ ವರೆಗೆ 'ಪೋರ್ಟ್‌ಬ್ಲೇರ್'ನಲ್ಲಾಯಿತು. ಅನಂತರ ಇವರು 'ಲೀಡಿಂಗ್ ಟೆಲಿಗ್ರಾಫಿಸ್ಟ್' ಕೆಲಸದ ಟ್ರೈನಿಂಗ್‌ಗಾಗಿ ಕೊಚ್ಚಿನ್‌ಗೆ ಬಂದರು. ಟ್ರೈನಿಂಗ್ ಮುಗಿದ ನಂತರ ಬಡ್ತಿ ದೊರೆತು ಈಗ ಇವರು ಕೊಚ್ಚಿನ್‌ನಲ್ಲಿಯೇ 'ಲೀಡಿಂಗ್ ಟೆಲಿಗ್ರಾಫಿಸ್ಟ್' ಆಗಿ ಸೇವೆ ಸಲ್ಲಿಸುತ್ತಿರುವರು.

ಇತ್ತೀಚಿನ ಯುದ್ಧದಲ್ಲಿ ಇವರ ಹಡಗು ಅತ್ಯಂತ ಪ್ರಮುಖ ಪಾತ್ರ ವಹಿಸಿತ್ತು. ಅದೆಂದರೆ ಪಶ್ಚಿಮ ಕರಾವಳಿಯ ರಕ್ಷಣೆಯ ಜವಾಬ್ದಾರಿ ಈ ಹಡಗಿನದೇ ಆಗಿದ್ದುದು. ಐ.ಎನ್.ಎಸ್. ಖುಕ್ರಿಯೊಡನೆ ಇವರ ಹಡಗೂ ಹೊರಟು ಪಾಕಿ

ಸ್ಥಾನದ ಜಲಾಂತರ್ಗಾಮಿ ನೌಕೆಯ ಬೇಟೆಯಾಡಲು ಸಿದ್ಧತೆ ನಡೆಸಿತ್ತು. ಈ ಸಂದರ್ಭದಲ್ಲಿ ಶ್ರೀ ಪ್ರಭುರವರು 'ಎಲೆಕ್ಟ್ರಾನಿಕ್ ವಾರ್‌ಫೇರ್ ಆಪರೇಟರ್' ಆಗಿದ್ದು ತಮ್ಮ ಕರ್ತವ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದರು. ಸಂಬಂಧಪಟ್ಟ ಅಧಿಕಾರಿಗಳಿಗೆ ಅನೇಕ ಮುಖ್ಯ ಸಂದೇಶಗಳನ್ನು ತಲುಪಿಸಿ, ತಮ್ಮ ಕಾರ್ಯತತ್ಪರತೆಯನ್ನು ಎತ್ತಿ ತೋರಿಸಿದರು. ಇಂಥ ದಕ್ಷ ಕೆಲಸಗಾರರಿಗೆ, ಅವರ ಸ್ವಾರ್ಥತ್ಯಾಗವನ್ನು ಗಮನಿಸಿ ಸರ್ಕಾರವು ಪ್ರಶಸ್ತಿ ನೀಡಿರುವುದು ಸೂಕ್ತವೇ ಆಗಿದೆ. ಶ್ರೀ ಪ್ರಭುರವರು ವಿದ್ಯಾರ್ಥಿದೆಶೆಯಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸದಸ್ಯರಾಗಿದ್ದರು. ರಾಷ್ಟ್ರ ಪ್ರೇಮ ಇವರಲ್ಲಿ ಅಂಕುರಿಸಲು ಈ ಸಂಘವೇ ಮುಖ್ಯ ಕಾರಣವೆನ್ನಬಹುದು.

ಫ್ಲೈಟ್ ಲೆಫ್ಟಿನೆಂಟ್ ಶಾಮಣ್ಣ ಸುಬ್ಬರಾವ್ ಕುರುಪಾಡ್

ಫ್ಲೈಟ್ ಲೆಫ್ಟಿನೆಂಟ್ ಎಸ್. ಎಸ್. ಕುರುಪಾಡ್‌ರವರು ಚೀಫ್ ಟೆಕ್ನಿಕಲ್ ಆಫೀಸರ್ ಆಗಿ ಮೊನ್ನಿನ ಭಾರತ-ಪಾಕ್ ಯುದ್ಧದಲ್ಲಿ ತಮ್ಮ ಸಾಹಸ ಪ್ರದರ್ಶನವನ್ನು ಮಾಡಿದ್ದಾರೆ. ಶತ್ರುಗಳು ನಿರಂತರವಾಗಿ ಬಾಂಬ್ ದಾಳಿ ನಡೆಸುತ್ತಿದ್ದರೂ ಸಹ ಇವರು ಎದೆಗುಂದದೆ ತಾವಿದ್ದಲ್ಲಿಯೇ ಕಾರ್ಯಾಚರಣೆಗಳನ್ನು ನಡೆಸಿ ಯಶಸ್ವಿಯಾಗಿದ್ದಾರೆ. ಕಾರ್ಯತತ್ಪರತೆಗೆ ಹೆಸರಾದ ಅವರನ್ನು ಉನ್ನತ ಸೇನಾಧಿಕಾರಿಗಳು ಗೌರವಿಸಿ, 'ಮೆನ್ಷನ್ ಇನ್ ಡೆಸ್‌ಪ್ಯಾಚಸ್' ಪ್ರಶಸ್ತಿಯನ್ನು ನೀಡಿದ್ದಾರೆ.

ಕೇಂದ್ರ ಸರ್ಕಾರದಲ್ಲಿ ಕಬ್ಬು ಬೆಳವಣಿಗೆಯ ಇಲಾಖೆಯ ಮುಖ್ಯಾಧಿಕಾರಿಗಳಾಗಿದ್ದು ಈಗ ವಿಶ್ರಾಂತರಾಗಿ ಬೆಂಗಳೂರಿನಲ್ಲಿ ನೆಲೆಸಿರುವ ಶ್ರೀ ಜಿ. ಎಸ್. ಸುಬ್ಬರಾವ್‌ರವರು ಇವರ ತಂದೆ. ಶ್ರೀ ಜಿ. ಎಸ್. ಸುಬ್ಬರಾಯರ ತಂದೆ ಶ್ರೀ ಕೆ. ಜಿ. ಶಾಮಣ್ಣನವರು ಬೆಂಗಳೂರಿನಲ್ಲಿ ಪ್ರಖ್ಯಾತ ವಕೀಲರಾಗಿದ್ದರು. ಮೈಸೂರು ಸರ್ಕಾರದ ರೆವಿನ್ಯೂ ಕಮಿಷನರ್ ಆಗಿದ್ದು ಈಗ ವಿಶ್ರಾಂತಿ ಪಡೆಯುತ್ತಿರುವ ಶ್ರೀ ಎಸ್. ನಾರಾಯಣರಾಯರು ಕೆ. ಜಿ. ಶಾಮಣ್ಣನವರ ಮಕ್ಕಳಲ್ಲೊಬ್ಬರು. ಹೀಗೆ ಹೆಸರಾಂತ ಮನೆತನಕ್ಕೆ ಸೇರಿದ ಶ್ರೀ ಶಾಮಣ್ಣ ಸುಬ್ಬರಾವ್ ಕುರುಪಾಡ್‌ರವರು ಸಮರದಲ್ಲಿ ತಮ್ಮ ಧೈರ್ಯ ಸ್ಥೈರ್ಯಗಳ ಪ್ರದರ್ಶನ ಮಾಡಿ ಕನ್ನಡ ನಾಡಿಗೆ ಕೀರ್ತಿ ತಂದಿರುವರು. ಇದು ತುಂಬಾ ಹರ್ಷದಾಯಕವಾದ ಸಮಾಚಾರವಾಗಿದೆ.

ಲೆಫ್ಟಿನೆಂಟ್ ಎಸ್. ಆರ್. ಧಾರೇಶ್ವರ್

ವಿಟ್ಲ ಗ್ರಾಮವು ಮಂಗಳೂರಿನ ಬಳಿಯಲ್ಲಿದೆ. ಕರ್ನಲ್ ಡಿ. ರಮೇಶ ರಾಯರು ಈ ಊರಿನವವರು. ಇವರ ಏಕಮಾತ್ರ ಪುತ್ರರೇ ಲೆಫ್ಟಿನೆಂಟ್ ಎಸ್. ಆರ್. ಧಾರೇಶ್ವರ್‌ರವರು. ಇವರು ೧೯೪೫ರ ಜುಲೈ ೨೯ರಂದು ಜನಿಸಿದರು. ಆಗ ತರುಣರಾಗಿದ್ದ ಶ್ರೀ ಡಿ. ರಮೇಶರಾಯರು ಇನ್ನೂ ಲೆಫ್ಟಿನೆಂಟ್ ಪದವಿ ಯಲ್ಲಿಯೇ ಇದ್ದರು. ತಂದೆಯಂತೆ ಮಗ-ಎಂಬ ನಾಣ್ಣುಡಿಗೆ ಈ ತಂದೆ ಮಕ್ಕಳು ಸೂಕ್ತ ಉದಾಹರಣೆಯಾಗಿರುವರು. ತಂದೆಯೂ ಸೇನಾಧಿಕಾರಿ: ಮಗನೂ ಸೇನಾಧಿಕಾರಿ.

ತಂದೆ ಸೇನಾಧಿಕಾರಿಯೆಂದ ಮೇಲೆ ಕೇಳಬೇಕೇ? ಮಗನಿಗೆ ಸೈನಿಕರ ನಿತ್ಯ ಜೀವನದ ಹೊಸ ಪರಿಚಯವೇನೂ ಆಗಬೇಕಾಗಿಲ್ಲ. ಶ್ರೀ ಧಾರೇಶ್ವರ್‌ರವರು ಚಿಕ್ಕ ಬಾಲಕರಾಗಿದ್ದಾಗ ತಂದೆಯೊಡನೆ ಪೂನಾದಲ್ಲಿದ್ದರು. (ದಂಡು ಪ್ರದೇಶದಲ್ಲಿ) ಸೈನಿಕರ ಶಿಸ್ತಿನ ಜೀವನ ಅವರ ಕಣ್ಣಿಗೆ ಕಟ್ಟಿದಂತಿರುತ್ತಿತ್ತು. ತಾವೂ ಒಂದು ದಿನ ಹಾಗೆಯೇ ಸೈನಿಕ ಅಥವಾ ಸೇನಾಧಿಕಾರಿಯಾಗಬೇಕೆಂಬ ಬಯಕೆ ಆ ಬಾಲಕನ ಪುಟ್ಟ ಮನಸ್ಸಿನಲ್ಲಿಯೇ ಅಚ್ಚಳಿಯದಂತೆ ಮೂಡಿತು. ಕೊನೆಗೊಮ್ಮೆ ಅವರ ಆಸೆ ಕೈಗೂಡುವ ಕಾಲ ಸನ್ನಿಹಿತವಾಯಿತು.

ಶ್ರೀ ರಮೇಶರಾಯರು ಪುಣೆಯನ್ನು ಬಿಟ್ಟು ಮುಂಬಯಿಗೆ ಹೋಗಿ ಅಲ್ಲಿ ನೌಕಾದಳದ ಅಧಿಕಾರಿಯಾದರು. ಯುವಕ ಧಾರೇಶ್ವರ್ ಮುಂಬಯಿಯ ಸೈಂಟ್ ಕ್ಸೇವಿಯರ್ ಸ್ಕೂಲ್‌ನಲ್ಲಿ ವ್ಯಾಸಂಗ ಮುಂದುವರೆಸಿದರು. ಖಡಕವಾಸ್ಲಾ ದಲ್ಲಿರುವ ರಾಷ್ಟ್ರೀಯ ರಕ್ಷಣಾ ಅಕ್ಯಾಡೆಮಿಗೆ ಭೇಟಿ ನೀಡುವ ಸುವರ್ಣಾವಕಾಶ ವೊಂದು ಒಮ್ಮೆ ಧಾರೇಶ್ವರ್‌ರವರಿಗೆ ದೊರಕಿತು. ಅಲ್ಲಿನ ಕಾರ್ಯಕಲಾಪಗಳನ್ನು ಕಂಡು ಅವರು ಮುಗ್ಧರಾದರು. ಮುಂದೆ ತಾವೂ ಒಬ್ಬ ಶ್ರೇಷ್ಠದರ್ಜೆಯ ನೌಕಾ ದಳದ ಅಧಿಕಾರಿಯಾಗಬೇಕೆಂದು ಆ ಕೂಡಲೇ ಇವರು ಮನಸ್ಸು ಮಾಡಿದರು. ಅದಕ್ಕೆ ತಕ್ಕಂತೆ ಹಲವಾರು ಬಾರಿ ಯುದ್ಧದ ಹಡಗುಗಳಲ್ಲಿ ಸಂಚರಿಸುವ ಅವಕಾಶವೂ ಇವರಿಗೆ ದೊರಕಿತು. ಹೀಗೆ ಹಡಗುಗಳ ವಿಚಾರ ಹೆಚ್ಚು ತಿಳಿಯುವ ಸಂದರ್ಭ ತಾನಾಗಿ ಲಭಿಸಿತು.

೧೯೬೩ರಲ್ಲಿ ಇವರು ನ್ಯಾಷನಲ್ ಡಿಫೆನ್ಸ್ ಅಕ್ಯಾಡೆಮಿಗೆ ಸೇರಿ, ಮುಂದೆ ನೌಕಾಬಲದಲ್ಲಿ ಇಂಜನಿಯರಿಂಗ್ ಶಾಖೆಗೆ ಆಯ್ಕೆಯಾದರು. ೧೯೬೫ರಲ್ಲಿ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿ, ಆರುತಿಂಗಳ ಕಾಲ ಹಡಗೊಂದರಲ್ಲಿ ಶಿಕ್ಷಣ ವನ್ನು ಪಡೆದರು. ೧೯೬೬ರ ಜುಲೈನಲ್ಲಿ ಭಾರತೀಯ ನೌಕಾಬಲದ ನೇವಲ್ ಇಂಜನಿಯರಿಂಗ್ ಕಾಲೇಜಿಗೆ ಸೇರಿದರು. ಈ ನೌಕಾಬಲದ ಕಾಲೇಜಿನಲ್ಲಿ

ತೇರ್ಗಡೆಯಾದ ಬಳಿಕ ೧೯೬೯ರಲ್ಲಿ ಅತ್ಯಂತ ನವೀನವಾದ ಜಲಾಂತರ್ಗಾಮಿ ಕಾವಲು ಹಡಗಿನಲ್ಲಿ ವಸ್ತುವಿಮಾನ ನಿರೋಧಕ ನೌಕೆಯಲ್ಲಿ ಕೆಲಸಮಾಡುವ ಅವಕಾಶ ಇವರಿಗೆ ದೊರಕಿತು. ಅನಂತರ ೧೯೭೦ರಲ್ಲಿ ನೌಕಾ ಇಂಜಿನಿಯರಿಂಗ್ ಕಾಲೇಜಿನಲ್ಲಿ ಇವರಿಗೆ ವಿಶೇಷ ಶಿಕ್ಷಣ ಕೊಡಲಾಯಿತು. ಈ ಶಿಕ್ಷಣದ ಅವಧಿ ಮುಗಿದ ಬಳಿಕ ೧೯೭೧ರಲ್ಲಿ ಜಲಾಂತರ್ಗಾಮಿ ಕಾವಲು ಪಡೆಯಲ್ಲಿ ಕೆಲಸ ಮಾಡಲು ಇವರನ್ನು ಕಳುಹಿಸಲಾಯಿತು. ಇತ್ತೀಚಿನ ಸಮರ ನಡೆದಾಗ ಇವರು ಕಾವಲು ಪಡೆಯ ಹಡಗಿನಲ್ಲಿಯೇ ಸೀನಿಯರ್ ಇಂಜನಿಯರ್ ಆಗಿ ಕೆಲಸ ಮಾಡುತ್ತಿದ್ದರು.

ಶತ್ರುಗಳ ದಾಳಿ ಆರಂಭವಾದೊಡನೆಯೇ ಇವರೂ ತಮ್ಮ ನೌಕೆಯನ್ನು ಪ್ರತಿದಾಳಿಗೆ ಸಿದ್ಧಗೊಳಿಸಿ, ಸಮರಸನ್ನಾಹಕಾರ್ಯದಲ್ಲಿ ತೊಡಗಿದರು. ಅನ್ನಾಹಾರಗಳನ್ನು ತೊರೆದು ಹಗಲಿರುಳೆನ್ನದೆ ಇವರು ಎಷ್ಟೋ ದಿನಗಳು ಹದ್ದಿನಂತೆ ಕಾಯುತ್ತ ಕುಳಿತಿರಬೇಕಾಗಿತ್ತು. ೧೯೭೧ರ ನವೆಂಬರ್ ತಿಂಗಳಿನಲ್ಲಿ ಕರಾಚಿಯವರೆಗೂ ಸಂಚರಿಸಿ ಇಡೀ ಅರಬ್ಬೀ ಸಮುದ್ರದ ಸಂಪೂರ್ಣ ಹತೋಟಿ ಪಡೆಯಲು ಬಹಳ ಸಾಹಸಪಟ್ಟರು.

ತಮ್ಮ ಹಡಗಿನಲ್ಲಿಯೇ ಅನೇಕ ವಿಧವಾದ ತೊಂದರೆಗಳಿದ್ದರೂ ಅದನ್ನು ಲೆಕ್ಕಿಸದೆ, ಮೇಲ್ಪಟ್ಟ ಅಧಿಕಾರಿಗಳು ಮತ್ತೊಂದು ಕೆಲಸದಲ್ಲಿ ಮಗ್ನರಾಗಿದ್ದರೂ ಸಹ ಶ್ರೀ ಧಾರೇಶ್ವರ್‌ರವರೇ ಆ ಹಡಗಿನ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತು ನಾಲ್ಕು ದಿನಗಳ ಮುನ್ನವೇ ಸಮರಕ್ಕೆ ಸಿದ್ಧರಾದರು. ಕರಾಚಿ ಬಂದರಿನ ಮೇಲೆ ದಾಳಿ ನಡೆಸಿ ಅಲ್ಲಿದ್ದ ಶತ್ರುಗಳ ವ್ಯಾಪಾರೀ ಹಡಗುಗಳನ್ನು ಭೂತಳಕ್ಕೆ ಅಟ್ಟಿದರು. ಯಂತ್ರ ಸ್ಥಾಪನೆಗಳ ನಿರ್ಮೂಲನ ಮಾಡಿದರು : ತೈಲಾಗಾರಗಳನ್ನು ಅಗ್ನಿದೇವನಿಗೆ ಆಹುತಿಯಿತ್ತರು. ಇವರ ದಾಳಿಯಿಂದ ಕರಾಚಿ ಬಂದರಿನಲ್ಲಿದ್ದ ಶತ್ರು ಹಡಗುಗಳು ತತ್ತರಿಸುವಂತಾಯಿತು. ಹೀಗೆ ಜೀವದ ಮೇಲಿನ ಹಂಗು ತೊರೆದು ಶ್ರೀ ಧಾರೇಶ್ವರ್‌ರವರು ತಮ್ಮ ಪಾಲಿಗೆ ಬಂದ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದರು.

ಇವರ ನಿಸ್ವಾರ್ಥ ಸೇವೆಯನ್ನು ಗಮನಿಸಿ ಕೇಂದ್ರ ಸರ್ಕಾರದವರು ಇವರಿಗೆ 'ಮೆನ್‌ಷನ್ ಇನ್ ಡೆಸ್‌ಪ್ಯಾಚಸ್' ಪದವಿಯನ್ನಿತ್ತು ಗೌರವಿಸಿದ್ದಾರೆ.

ಶ್ರೀ ಸುಬ್ರಹ್ಮಣ್ಯ ಶಂಕರ್

ಶ್ರೀ ಸುಬ್ರಹ್ಮಣ್ಯ ಶಂಕರ್‌ರವರು ೧೯೪೪ರ ಅಕ್ಟೋಬರ್ ೧೭ರಂದು ಪಾಟ್ನಾದಲ್ಲಿ ಜನಿಸಿದರು. ಆಗ ಇವರ ತಂದೆ ಪ್ರೊ|| ಕೆ. ಎಸ್. ಅಯ್ಯರ್ ಅವರು

ಪಾಟ್ನಾ ಟೆಲಿಫೋನ್ ವ್ಯವಸ್ಥೆಯ ಸರ್ಕಾರೀ ಟೆಲಿಫೋನ್ ಇಂಜನಿಯರ್ ಆಗಿದ್ದರು. ಬಾಲ್ಯ ಕಾಲದಲ್ಲಿ ಶ್ರೀ ಸುಬ್ರಹ್ಮಣ್ಯ ಶಂಕರ್ ಅವರು ತುಂಬಾ ಚಟುವಟಿಕೆಯಿಂದ ಇರುತ್ತಿದ್ದರು. ಮುಂದೆ ಸಮರ್ಥ ಯೋಧರಾಗುವ ಕುರುಹು ಆಗಲೇ ಇವರಲ್ಲಿ ಕಂಡುಬರುತ್ತಿದ್ದುವು. ಇವರು ಉತ್ತಮ ಸಹಪಾಠಿಗಳನ್ನು ಪಡೆದಿದ್ದರಲ್ಲದೆ ಅವರಿಗೆಲ್ಲ ಇವರೇ ನಾಯಕರಾಗಿರುತ್ತಿದ್ದರು. ವಿದ್ಯಾರ್ಥಿದೆಶೆಯಲ್ಲಿ ಇವರು ಉತ್ತಮ ಕ್ರೀಡಾಪಟುಗಳೂ ಆಗಿದ್ದರು. ಕ್ರಿಕೆಟ್, ಕೇರಂ, ಟೇಬಲ್ ಟೆನ್ನಿಸ್ ಮೊದಲಾದ ಆಟಗಳಲ್ಲಿ ಇವರದು ಪಳಗಿದ ಕೈ. ಅನೇಕ ಸ್ಪರ್ಧೆಗಳಲ್ಲಿ ಇವರು ಬಹುಮಾನಗಳನ್ನೂ ಗಳಿಸಿದ್ದರು.

ಇವರ ಪ್ರಾಥಮಿಕ ಶಿಕ್ಷಣ ತಮಿಳು ನಾಡಿನ ಕಾರೈಕುಡಿಯಲ್ಲಿ ಆಯಿತು. ಅನಂತರ ಬೆಂಗಳೂರಿನ ಸೆಂಟ್ ಜೋಸೆಫ್ ಹೈಸ್ಕೂಲು ಮತ್ತು ಕಾಲೇಜುಗಳಲ್ಲಿ ಓದಿ ಪದವೀಧರರಾದರು. ಮೊದಲಿನಿಂದಲೂ ಇವರು ಶಿಸ್ತು ಮತ್ತು ನಿಯಮಗಳಿಗೆ ಕಟ್ಟು ಬಿದ್ದವರು. ಈಗಂತೂ ಸೈನಿಕರಾಗಿರುವುದರಿಂದ ಆ ಶಿಸ್ತು ಪರಿಪಾಲನೆ ನಿರಂತರವಾಗಿ ಸಾಗಿದೆ.

ತಾಯ್ನಾಡಿನ ಸೇವೆ ಸಲ್ಲಿಸಬೇಕೆಂಬ ಉತ್ಕಟೇಚ್ಛೆಯಿಂದ ಕಾರ್ಯೋನ್ಮುಖರಾಗಬೇಕೆಂದು ಶ್ರೀ ಸುಬ್ರಹ್ಮಣ್ಯ ಶಂಕರ್ ನಿರ್ಧರಿಸಿದುದು ೧೯೬೭ರ ಜನವರಿಯಲ್ಲಿ. ಈ ತಿಂಗಳಲ್ಲಿಯೇ ಇವರು ಭಾರತೀಯ ನೌಕಾದಳದ ಇಂಜನಿಯರಿಂಗ್ ಶಾಖೆಗೆ ಆಯ್ಕೆಯೂ ಆದರು. ಇವರ ಈ ಆಯ್ಕೆ ಬೆಂಗಳೂರಿನಲ್ಲಿಯೇ ಆಯಿತು. ಅನಂತರ ಇವರನ್ನು ಲೊನಾವ್ಲಾದಲ್ಲಿ ನಡೆಸಲಾದ ಅಖಿಲ ಭಾರತ ಮಟ್ಟದ ಆಯ್ಕೆಗೆ ಆಹ್ವಾನಿಸಲಾಯಿತು. ಅಲ್ಲಿಯೂ ಇವರು ಜಯಗಳಿಸಿದರು. ಅನಂತರ ಲೊನಾವ್ಲಾದಲ್ಲಿ 'ಐ.ಎನ್.ಎಸ್. ಶಿವಾಜಿ' ಹಡಗಿನಲ್ಲಿ ಇವರಿಗೆ ವಿಶೇಷ ಶಿಕ್ಷಣ ನೀಡಲಾಯಿತು. ಅತ್ಯಾಧುನಿಕ ಪ್ರಯೋಗಾಲಯ ಮತ್ತು ಕಾರ್ಯಾಗಾರ

ಗಳಿಂದ ಕೂಡಿರುವ 'ಐ.ಎನ್. ಎಸ್. ಶಿವಾಜಿ' ಅತ್ಯುತ್ತಮ ಇಂಜನಿಯರಿಂಗ್ ಶಿಕ್ಷಣ ನೀಡುವ ಹಡಗೆಂದು ಇಡೀ ಭಾರತದಲ್ಲಿಯೇ ಹೆಸರು ವಾಸಿಯಾಗಿದೆ.

ನಾಲ್ಕು ವರ್ಷಗಳ ಈ ತರಬೇತಿ ಪಡೆದನಂತರ ಶ್ರೀ ಶಂಕರ್ ಅವರನ್ನು ಐ.ಎನ್.ಎಸ್. ಗೋಮತಿಯಲ್ಲಿ 'ಇ. ಆರ್. ಎ. 5 (E.R.A. 5) ಆಗಿ ನೇಮಿಸಲಾಯಿತು. ಅನಂತರ ಇವರನ್ನು ಈ ವರ್ಗದಲ್ಲಿಯೇ ಮುಂದುವರೆಸಿ 'ಐ.ಎನ್. ಎಸ್. ಗಂಗಾ' ಹಡಗಿಗೆ ವರ್ಗಾಯಿಸಲಾಯಿತು. ೧೯೭೧ರ ಸಮರ ಆರಂಭವಾದಾಗ ಶ್ರೀ ಶಂಕರ್ ಐ.ಎನ್.ಎಸ್. ಗಂಗಾ ಹಡಗನ್ನು ಸೇರಿ ಕೇವಲ ಎಂಟು ತಿಂಗಳುಗಳಾಗಿದ್ದುವು. ಆಗ ಈ ಹಡಗಿನ ನೆಲೆ ಕೊಚ್ಚಿನ್‌ನಲ್ಲಿತ್ತು. ಉಳಿದ ಅನೇಕ ಹಡಗುಗಳಂತೆ 'ಐ.ಎನ್.ಎಸ್. ಗಂಗಾ' ಹಡಗು ಕೂಡಾ ಹದಿನಾಲ್ಕು ದಿನಗಳ ಭಾರತ-ಪಾಕ್ ಯುದ್ಧದ ಕಾರ್ಯಾಚರಣೆಯಲ್ಲಿ ಭಾಗ ವಹಿಸಿತು.

ಈ ಕಾರ್ಯಾಚರಣೆಯಲ್ಲಿ ಬಿರುಸಾದ ನೌಕಾಕಾಳಗವೇ ನಡೆಯಿತು. ಆಗ ಹಡಗಿನಲ್ಲಿ ಸಣ್ಣ ರಂಧ್ರವೊಂದು ಕಾಣಿಸಿಕೊಂಡಿತು. ಇದನ್ನು ಶಂಕರ್ ಅವರು ಗಮನಿಸಿದರು. ಧೈರ್ಯಗೆಡದೆ ಮನಸ್ಥೈರ್ಯದಿಂದ ತಕ್ಷಣವೇ ಇವರು ತಾವು ಕರ್ತವ್ಯ ನಿರ್ವಹಿಸುತ್ತಿದ್ದ ಗೇರ್‌ರೂಂ ಕಂಪಾರ್ಟ್‌ಮೆಂಟ್‌ನಲ್ಲಿ ನುಗ್ಗಿ ಬರುತ್ತಿದ್ದ ಪ್ರವಾಹವನ್ನು ತಡೆಗಟ್ಟಿ ಹಡಗನ್ನು ಅಪಾಯದಿಂದ ಪಾರು ಮಾಡಿದರು. ಈ ಸಮಯದಲ್ಲಿ ಶಂಕರ್ ಅವರು ತೋರಿರುವ ಧೈರ್ಯ ಅಸಾಮಾನ್ಯವಾದುದು.

ಈ ವಿರೋಚಿತ ಸಾಹಸಕ್ಕಾಗಿ ಶ್ರೀ ಶಂಕರ್ ಅವರ ಹೆಸರನ್ನು ರಾಷ್ಟ್ರಪತಿಯವರ ಪ್ರಶಸ್ತಿ ಪಟ್ಟಿಯಲ್ಲಿ ನಮೂದಿಸಲಾಯಿತು. ಇವರಿಗೆ "ಮೆನ್‌ಷನ್ ಇನ್ ಡೆಸ್‌ಪ್ಯಾಚಸ್" ಪ್ರಶಸ್ತಿ ದೊರಕಿತು.

ಕೂಡಲೇ ನೌಕಾದಳದ ಮುಖ್ಯಾಧಿಕಾರಿಗಳಾದ ಅಡ್ಮಿರಲ್ ನಂದಾ ಅವರಿಂದ ಇವರಿಗೆ ಒಂದು ಅಭಿನಂದನಾ ಪತ್ರ ಬಂದಿತು.

"ಶತ್ರುವಿನ ವಿರುದ್ಧದ ಕಾರ್ಯಾಚರಣೆಯಲ್ಲಿ ತೋರಿದ ಸಾಹಸಕ್ಕಾಗಿ ನೀವು "ಮೆನ್‌ಷನ್ ಇನ್ ಡೆಸ್‌ಪ್ಯಾಚಸ್" ಪ್ರಶಸ್ತಿಯನ್ನು ಗಳಿಸಿರುವಿರಿ. ಈ ಗೌರವ ಪಡೆದಿರುವುದಕ್ಕಾಗಿ ನಿಮಗೆ ಅತ್ಯಂತ ಸಂತೋಷದಿಂದ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

ಶುಭಾಶಯಗಳೊಂದಿಗೆ,

(ಸಹಿ) ಅಡ್ಮಿರಲ್ ಎಸ್.ಎಂ. ನಂದಾ.

ಶ್ರೀ ಶಂಕರ್ ಅವರು ತಮ್ಮ ಈ ಶೌರ್ಯಕ್ಕಾಗಿ ಹೆಚ್ಚಿನ ಅಭಿಮಾನವನ್ನೇನೂ ವ್ಯಕ್ತಪಡಿಸುವುದಿಲ್ಲ. ಅದರ ಬಗ್ಗೆ ಹೆಚ್ಚಿಗೆ ಹೇಳಿಕೊಳ್ಳಲೂ ಅವರು ಬಯಸುವು

ದಿಲ್ಲ. "ನನ್ನ ಕರ್ತವ್ಯವನ್ನಷ್ಟೆ ನಾನು ಮಾಡಿದೆ" ಎಂದು ಹರ್ಷ ಪಡುತ್ತಾರೆ. ಅವರಿಗೆ ನೀಡಿರುವ ಪ್ರಶಸ್ತಿಪತ್ರದಲ್ಲಿ ಹೀಗೆ ಹೇಳಲಾಗಿದೆ.

"ಐ.ಎನ್.ಎಸ್. ಹಡಗಿನ ಗೇರ್‌ರೂಂ ಕಂಪಾರ್ಟ್‌ಮೆಂಟ್‌ನಲ್ಲಿ ರಂಧ್ರ ವಾಗಿ ನೀರು ನುಗ್ಗುತ್ತಿದ್ದುದನ್ನು ಕಂಡು ಬಹಳ ಚಮತ್ಕಾರದಿಂದ ತಡೆಗಟ್ಟಿದರು. ಬೊಬ್ಬೆ ಬರುವಷ್ಟು ತೀಕ್ಷ್ಣ ಉಷ್ಣತೆಯಿದ್ದ ಇವಾಪರೇಟರ್‌ನ ಶಾಖವನ್ನೂ ಅವರು ಲೆಕ್ಕಿಸಲಿಲ್ಲ. ಆದರಿಂದಾಗಿ ತಮಗುಂಟಾದ ತೀವ್ರಸುಟ್ಟ ಗಾಯಗಳನ್ನೂ ಅವರು ಗಮನಿಸಲಿಲ್ಲ."

೧೯೭೨ರ ಜನವರಿಯಲ್ಲಿ ಶ್ರೀ ಶಂಕರ್ ಅವರಿಗೆ ಮುಂದಿನ ಶ್ರೇಣಿಗೆ ಎ. ಜಿ. ಇ. ಆರ್. ಎ. 4 (A.G.E.R.A. 4) ಲಭಿಸಿತು. ಇವರು ಈಗಲೂ ಐ.ಎನ್.ಎಸ್. ಗಂಗಾ ಹಡಗಿನಲ್ಲಿಯೇ ಸೇವೆ ಸಲ್ಲಿಸುತ್ತಿದ್ದಾರೆ.

ಇವರ ತಂದೆಯವರಾದ ಪ್ರೊ|| ಕೆ. ಎಸ್. ಅಯ್ಯರ್ ಅವರು ಪ್ರಸ್ತುತ ಇಂಜನಿಯರಿಂಗ್ ಅಧ್ಯಾಪಕರಾಗಿದ್ದಾರೆ. ನವದೆಹಲಿಯ 'ಇನ್‌ಸ್ಟಿಟ್ಯೂಷನ್ ಆಫ್ ಟೆಲಿಕಮ್ಯುನಿಕೇಷನ್ ಇಂಜನಿಯರ್ಸ್' ಸಂಸ್ಥೆಯೊಡನೆ ಇವರು ನಿಕಟ ಸಂಪರ್ಕವಿಟ್ಟುಕೊಂಡಿರುವುದಷ್ಟೇ ಅಲ್ಲದೆ, ಈ ಸಂಸ್ಥೆಗೆ ಮೈಸೂರು ರಾಜ್ಯದ ಪರವಾಗಿ ಸದಸ್ಯರೂ ಆಗಿದ್ದಾರೆ. ಅವರು ಭಾರತದ ಕಂಪ್ಯೂಟರ್ ಸೊಸೈಟಿಯ ಸದಸ್ಯರೂ ಹೌದು.

ವಿದೇಶೀ ಪ್ರವಾಸಕ್ಕೆಂದು ಆರಿಸಲಾಗಿದ್ದ ತಜ್ಞರ ಸಮಿತಿಯಲ್ಲಿ ಭಾರತ ಸರ್ಕಾರವೂ ಇವರ ಹೆಸರನ್ನೂ ನಮೂದಿಸಿತ್ತು. ಇವರು ಅನೇಕ ಇಂಜನಿಯ ರಿಂಗ್ ಗ್ರಂಥಗಳನ್ನೂ ರಚಿಸಿದ್ದಾರೆ.

ಇಂಥವರ ಪುತ್ರರಾದ ಶ್ರೀ ಸುಬ್ರಹ್ಮಣ್ಯ ಶಂಕರ್ ಅವರು ಇಂಜನಿಯರಿಂಗ್ ವಿಷಯದಲ್ಲಿ ಹೆಚ್ಚಿನ ಆಸಕ್ತಿಯಿಂದ ಮುಂದುವರೆಯುತ್ತಿರುವುದು ಸಹಜವಾಗಿಯೇ ಇದೆ. ಇವರು ಇನ್ನೂ ಹೆಚ್ಚಿನ ಪದವಿ ಪ್ರಶಸ್ತಿಗಳನ್ನು ಗಳಿಸಿ ಅಭಿವೃದ್ಧಿಹೊಂದ ಲೆಂದೇ ನಮ್ಮ ಹಾರೈಕೆ.

ಸ್ಕ್ವಾಡ್ರನ್ ಲೀಡರ್ ಎಚ್. ಎಸ್. ರಘುನಾಥ್

ಇತ್ತೀಚೆಗೆ ನಡೆದ ಭಾರತ-ಪಾಕ್ ಯುದ್ಧದಲ್ಲಿ ವಾಯುದಳವು ಹೆಚ್ಚಿನ ಯಶಸ್ಸು ಪಡೆದು ಹೆಚ್ಚು ಗೌರವವನ್ನು ಪಡೆದಿರುವುದು ಸರಿಯಷ್ಟೆ. ಈ ವಾಯು ದಳಕ್ಕೆ ಸೇರಿದ ಸ್ಕ್ವಾಡ್ರನ್ ಲೀಡರ್ ಎಚ್. ಎಸ್. ರಘುನಾಥ್‌ರವರು ಭಾರತೀಯ ರಕ್ಷಣಾದಳದ ತಾಂತ್ರಿಕ ವಿಭಾಗದ ಕಮಿಷನ್ಡ್ ಆಫೀಸರ್ ಆಗಿದ್ದಾರೆ. ರಕ್ಷಣಾದಳಗಳಲ್ಲಿ ಸೇವೆ ಸಲ್ಲಿಸುವುದೆಂದರೆ ಅದೊಂದು ಹೆಮ್ಮೆಯ ವಿಚಾರ. ಇಂಥ ಸೇವೆಯನ್ನು ಸಲ್ಲಿಸುತ್ತಿರುವ ಶ್ರೀ ರಘುನಾಥ್‌ರವರು ನಿಜವಾಗಿಯೂ ಅಭಿನಂದನಾರ್ಹರು.

ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಆರ್ಗ್ಯಾನಿಕ್ ಕೆಮಿಸ್ಟ್ರಿಯ ಪ್ರಾಧ್ಯಾಪಕರಾಗಿಯೂ, ಮೈಸೂರಿನ ಮೊದಲನೆಯ ದರ್ಜೆ ಕಾಲೇಜಿನ ಪ್ರಿನ್ಸಿಪಾಲರಾಗಿಯೂ ಸೇವೆಸಲ್ಲಿಸಿ ಕೀರ್ತಿಶೇಷರಾದ ಎಚ್. ಸುಬ್ಬಾಜೋಯಿಸ್‌ರವರೇ ಶ್ರೀ ರಘುನಾಥ್‌ರವರ ತಂದೆ. ಶ್ರೀ ರಘುನಾಥ್‌ರವರ ತಾತಂದಿರಾದ ದಿ|| ಬಿ. ಅಪ್ಪೂರಾಯರು ಈಗ್ಗೆ ಮೂರು ನಾಲ್ಕು ದಶಕಗಳ ಹಿಂದಿನ ಸುಪ್ರಸಿದ್ಧ ವಕೀಲರಾಗಿದ್ದುದಲ್ಲದೆ ಉತ್ಕಟ ಸಾಹಿತ್ಯಾಭಿಮಾನಿಯೂ ಆಗಿದ್ದರು. ಇವರು ಕನ್ನಡ ಸಾಹಿತ್ಯ ಪರಿಷತ್ತಿಗೆ ಆಜೀವ ಸದಸ್ಯರಾಗಿದ್ದುದೇ ಇದಕ್ಕೆ ಸಾಕ್ಷಿ. ಇವರು ಜನಾನುರಾಗಿಗಳೂ ಆಗಿದ್ದರೆಂಬುದಕ್ಕೆ ಚಾಮರಾಜಪೇಟೆಯ ಒಂದು ಮುಖ್ಯ ರಸ್ತೆಗೆ ಇಂದಿಗೂ ಇವರ ಹೆಸರು ಉಳಿದುಕೊಂಡು ಬಂದಿರುವುದು ಒಂದು ನಿದರ್ಶನ.

ಶ್ರೀ ರಘುನಾಥ್‌ರವರು ೧೯೩೫ರ ನವೆಂಬರ್ ೧೮ರಂದು ಬೆಂಗಳೂರಿನಲ್ಲಿ ಜನಿಸಿದರು. ಇವರ ಪ್ರಾಥಮಿಕ, ಮಾಧ್ಯಮಿಕ ಪ್ರೌಢ ಹಾಗೂ ಕಾಲೇಜು ಶಿಕ್ಷಣಗಳು ಬೆಂಗಳೂರಿನಲ್ಲಿಯೇ ನಡೆದವು. ಆರ್ಯವಿದ್ಯಾಶಾಲೆ, ಶೇಷಾದ್ರಿಪುರ ಹೈಸ್ಕೂಲ್, ಆಚಾರ್ಯಪಾಠಶಾಲೆ, ನ್ಯಾಷನಲ್ ಕಾಲೇಜ್, ಬಿ. ಎಂ. ಎಸ್. ಇಂಜಿನಿಯರಿಂಗ್ ಕಾಲೇಜ್, ಭಾರತೀಯ ವಿಜ್ಞಾನ ಮಂದಿರ, ಟಾಟಾ ಇನ್‌ಸ್ಟಿಟ್ಯೂಟ್, ಮೊದಲಾದ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗಮಾಡಿ ಆ ಸಂಸ್ಥೆಗಳಿಗೆಲ್ಲಾ ಇವರು ಕೀರ್ತಿಯನ್ನು ತಂದಿದ್ದಾರೆ. ಹಾಗೆಯೇ ಮೈಸೂರಿನ ಶಾರದವಿಲಾಸ

ಕಾಲೇಜಿನಲ್ಲಿಯೂ, ದಾವಣಗೆರೆಯ ಬಿ. ಡಿ. ಟಿ. ಇಂಜಿನಿಯರಿಂಗ್ ಕಾಲೇಜಿನಲ್ಲಿಯೂ ಸ್ವಲ್ಪಕಾಲ ವ್ಯಾಸಂಗ ಮಾಡಿ ಅವುಗಳಿಗೂ ಒಳ್ಳೆಯ ಹೆಸರನ್ನು ತಂದಿದ್ದಾರೆ. ೧೯೫೭ರಲ್ಲಿ ಶ್ರೀ ರಘುನಾಥ್‌ರವರು ಎಲೆಕ್ಟ್ರಿಕಲ್ ಬಿ. ಇ. ಡಿಗ್ರಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಪದವೀಧರರಾದರು. ೧೯೫೯ರಲ್ಲಿ ಟಾಟಾ ವಿಜ್ಞಾನಮಂದಿರದಲ್ಲಿ ಮಾಸ್ಟರ್ ಡಿಗ್ರಿಗಾಗಿ ವ್ಯಾಸಂಗ ಮಾಡಿ ಎಂ. ಇ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಮಾಸ್ಟರ್ ಪದವಿಯನ್ನೂ ಗಿಟ್ಟಿಸಿದರು. ಈಗ ಇವರು "ಇನ್‌ಸ್ಟಿಟ್ಯೂಟ್ ಆಫ್ ಇಂಜನಿಯರ್ಸ್" ಎಂಬ ಸಂಸ್ಥೆಯ ಗೌರವಸದಸ್ಯರಾಗಿರುವರು.

ಬಾಲ್ಯಕಾಲದಲ್ಲಿಯೇ ಇವರು ಸ್ಕೌಟ್ ಸಂಸ್ಥೆಯಲ್ಲಿ ಭಾಗವಹಿಸುತ್ತಿದ್ದು ಬಹಳ ಚಟುವಟಿಕೆಯಿಂದಿರುತ್ತಿದ್ದರು. ಉತ್ಸಾಹೀ ಬಾಲಕರೆನಿಸಿಕೊಂಡು ಹಿರಿಯರ ಮತ್ತು ಉಪಾಧ್ಯಾಯರ ವಿಶ್ವಾಸಕ್ಕೆ ಪಾತ್ರರಾಗಿದ್ದರು. ಕಾಲೇಜಿಗೆ ಸೇರಿದಮೇಲೆ ಎನ್. ಸಿ. ಸಿ. ಯಲ್ಲಿ ಮುಖ್ಯ ಪಾತ್ರವಹಿಸಿ ಅಲ್ಲಿಯೂ ಯಶಸ್ಸುಗಳಿಸಿದರು. ಇತರ ಸಂಘ ಸಂಸ್ಥೆಗಳಲ್ಲಿಯೂ ಇವರು ಮುಖ್ಯ ಪಾತ್ರ ವಹಿಸುತ್ತಿದ್ದರು.

೧೯೭೧ರ ಡಿಸೆಂಬರ್ ನಲ್ಲಿ ನಡೆದ ಭಾರತ-ಪಾಕ್ ಯುದ್ಧನಡೆದಾಗ ಅನೇಕ ವಿಧವಾದ ತಾಂತ್ರಿಕ ಸಮಸ್ಯೆಗಳು ಉದ್ಭವಿಸಿದುವು. ವಾಯುದಳದಲ್ಲಿ ಎಷ್ಟೋ ಸುಧಾರಣೆಗಳೂ ಆಚರಣೆಗೆ ಬಂದುವು. ಈ ಕಾರ್ಯಗಳನ್ನು ಕೈಗೊಳ್ಳುವಾಗ ಒಮ್ಮೊಮ್ಮೆ ಪ್ರಾಣಾಪಾಯದ ಭೀತಿಯೂ ಇರುವುದು ಸಹಜ. ಅಂಥ ಸಂದರ್ಭಗಳಲ್ಲಿ ತಮ್ಮ ಪ್ರಾಣದ ಮೇಲಿನ ಆಸೆಯನ್ನು ತೊರೆದು ಶ್ರೀ ರಘುನಾಥ್‌ರವರು ಭಾರತದ ವಾಯುದಳದವರಿಗೆ ಅತ್ಯವಶ್ಯಕವಾಗಿದ್ದ ಒಂದು ಪ್ರಧಾನ ಕರ್ತವ್ಯವನ್ನು ಯಶಸ್ವಿಕರವಾಗಿ ನಡೆಸಿಕೊಟ್ಟರು

ಹೀಗೆ ಸಾಹಸದ ಕಾರ್ಯಗಳನ್ನು ನಿರ್ವಹಿಸಿದುದಕ್ಕಾಗಿಯೂ ಮಿಲಿಟರಿ ಕಾರ್ಯಾಚರಣೆಯಲ್ಲಿ ನಿಷ್ಠೆಯನ್ನು ತೋರಿ, ತಮ್ಮ ಜಾಣ್ಮೆಯನ್ನು ವ್ಯಕ್ತಪಡಿಸಿ ಕಾರ್ಯವನ್ನು ಯಶಸ್ವಿಗೊಳಿಸಿದುದಕ್ಕಾಗಿಯೂ ಭಾರತ ಸರ್ಕಾರದವರು ಇವರ ಅಮೋಘಸೇವೆಯನ್ನು ಗುರುತಿಸಿ ಶ್ಲಾಘನೆ ಮಾಡಿ ಗೌರವಿಸಿದ್ದಾರೆ. ಇವರಿಗೆ 'ಮೆನ್‌ಷನ್ ಇನ್‌ಡೆಸ್‌ಪ್ಯಾಚಸ್' Mention in Despatches ಪ್ರಶಸ್ತಿ ದೊರಕಿದೆ.

ಕ್ಯಾಪ್ಟನ್ ಮೂವೇರ ಚಿಣ್ಣಪ್ಪನಂಜಪ್ಪ

ಕೊಡಗು ಜಿಲ್ಲಾ ನಾಪೊಕ್ಲು ಸಮೀಪದ ಬಲ್ಲಮಾವಟಿ ಗ್ರಾಮದ ಮೂವೇರ ಮನೆತನಕ್ಕೆ ಸೇರಿದ ಶ್ರೀ ಚಿಕ್ಕಣ್ಣಪ್ಪ ಮತ್ತು ಶ್ರೀಮತಿ ಬೊಳ್ಳವ್ವ ಇವರ ಸಪುತ್ರರಾದ ನಂಜಪ್ಪ ಅವರು ೧೯೪೫ನೆಯ ಇಸವಿ ಜುಲೈ ೩ರಂದು ಜನಿಸಿದರು. ಇವರ ಬಾಲ್ಯದ ವಿದ್ಯಾಭ್ಯಾಸವು ನಲಜಿ ಪ್ರಾಥಮಿಕ ಶಾಲೆಯಲ್ಲೂ, ಪ್ರೌಢಶಾಲೆಯ ವಿದ್ಯಾಭ್ಯಾಸವು ನಾಪೊಕ್ಲು ಪ್ರೌಢಶಾಲೆಯಲ್ಲೂ, ಕಾಲೇಜು ವಿದ್ಯಾಭ್ಯಾಸವು ಮಡಿಕೇರಿಯ ಸರ್ಕಾರಿಕಾಲೇಜಿನಲ್ಲೂ B.Sc. (ಅಗ್ರಿ) ಡಿಗ್ರಿ ದೊರಕಿತು. ಶಾಲಾಕಾಲೇಜುಗಳಲ್ಲಿ ಇದ್ದಾಗ ಎನ್.ಸಿ.ಸಿ. (N.C.C.) ಯಲ್ಲಿ ಉತ್ತಮವಾದ ತರಬೇತಿಯು ದೊರೆತುದರ ಪರಿಣಾಮವಾಗಿ ೧೯೬೫ನೆಯ ಜನವರಿಯಂದು ದೆಹಲಿಯಲ್ಲಿ ನಡೆದ ಗಣರಾಜ್ಯೋತ್ಸವದ ಪೆರೇಡಿನಲ್ಲಿ ಕೊಡಗಿನ ಪ್ರತಿನಿಧಿಯಾಗಿ ಇವರು ಭಾಗವಹಿಸಿದ್ದರು. ಕಾಲೇಜಿನಲ್ಲಿದ್ದಾಗ ಕಾಲೇಜು ಸಂಘದ ಸಹಕಾರ್ಯದರ್ಶಿಯಾಗಿಯೂ ಸೇವೆಸಲ್ಲಿಸಿರುವರು.

ಚಿಕ್ಕಂದಿನಿಂದಲೂ ಇವರಿಗೆ ಸೇನೆಗೆ ಸೇರಬೇಕೆಂಬ ಅಭಿಲಾಷೆಯು ಬಹಳವಾಗಿ ಇದ್ದಿತು. ಅದರಂತೆ ೧೯೬೬ರಲ್ಲಿ ಮದ್ರಾಸಿನಲ್ಲಿರುವ ಅಧಿಕಾರಿಗಳ ತರಬೇತಿ ಕೇಂದ್ರವನ್ನು ಸೇರಿ ೧೯೬೭ರಲ್ಲಿ ಕಮಿಷನ್ ಪಡೆದು ೪ನೇ ರಾಜ್‌ಪುಟ್ ರೆಜಿಮೆಂಟನ್ನು ಸೇರಿದರು. ೧೯೭೦ರಲ್ಲಿ ಕ್ಯಾಪ್ಟನ್ ಆಗಿ ಬಡ್ತಿ ದೊರೆಯಿತು. ಲಡಕ್, ರಾಜಾಸ್ಥಾನದ ಮರುಭೂಮಿ ಮೊದಲಾದ ಕಡೆಗಳಲ್ಲಿ ಸೇನೆಯ ಅಧಿಕಾರಿಗಳಾಗಿ ಸೇವೆ ಸಲ್ಲಿಸಿದ್ದಾರೆ. ಕಳೆದ ಡಿಸೆಂಬರ್‌ನಲ್ಲಿ ನಡೆದ ಭಾರತ-ಪಾಕಿಸ್ತಾನಯುದ್ಧದಲ್ಲಿ ಬಂಗ್ಲಾದೇಶದ ಆಖೌರಾ ಗಡಿಯಲ್ಲಿ ಶತ್ರುಗಳೊಡನೆ ವೀರಾವೇಶದಿಂದ ಹೊರಾಡಿ ಶತ್ರುಗಳ ಟ್ಯಾಂಕುಗಳನ್ನು ಧ್ವಂಸ ಮಾಡಿ ಅವರಿಗೆ ಅಪಾರವಾದ ನಷ್ಟಮಾಡಿದುದರ ಪರಿಣಾಮವಾಗಿ ಸರ್ಕಾರದವರು ಇವರ ಶೌರ್ಯವನ್ನು ಮೆಚ್ಚಿ "Mention in Despatches" ಎಂಬ ಪ್ರಶಸ್ತಿಯನ್ನು ದಯಪಾಲಿಸಿದರು.

ವಾರೆಂಟ್ ಆಫೀಸರ್ ಹರೇಕಲ್ ಲಕ್ಷ್ಮಣ

ವಾರೆಂಟ್ ಆಫೀಸರ್ ಲಕ್ಷ್ಮಣ ಅವರು ದಕ್ಷಿಣ ಕನ್ನಡ ಜಿಲ್ಲೆಯ ಹರೇಕಲ್ ನಾರಾಯಣ ಪೂಜಾರಿ ಎಂಬುವವರ ಪುತ್ರರು. ಇವರು ಮಂಗಳೂರು ಬಳಿಯ

ಕೋಟೆಕಾರ ಎಂಬ ಗ್ರಾಮದಲ್ಲಿ ೧೯೩೪ರ ಜನವರಿ ೨೯ರಂದು ಜನಿಸಿದರು. ಪ್ರೌಢಶಾಲೆಯ ವ್ಯಾಸಂಗದಲ್ಲಿ ನಿರತರಾಗಿದ್ದಾಗಲೇ ಇವರು ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಸಮಾನವಾದ ಏರ್‌ಕ್ರಾಫ್ಟ್‌ಮನ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು.

ಶಾಲೆಯಲ್ಲಿದ್ದಾಗ ಇವರು ಕ್ರೀಡೆ ಮತ್ತಿತರ ಕಾರ್ಯಚಟುವಟಿಕೆಗಳಲ್ಲಿಯೂ ಮುಂದಾಳಾಗಿದ್ದರು. ಶಾಲೆ ಬಿಟ್ಟಮೇಲೆ ಒಂದೆರಡು ಕಡೆ ಖಾಸಗಿ ನೌಕರಿಗಳಲ್ಲಿ ತೊಡಗಿದ್ದ ಇವರು ಅನಂತರ ತಿರುಚನಾಪಳ್ಳಿಯ ರಿಕ್ರೂಟಿಂಗ್ ಆಫೀಸ್‌ನಲ್ಲಿ ಆಯ್ಕೆಗೊಂಡು ೧೯೫೫ರ ಜನವರಿ ೨೬ರಂದು ಏರ್‌ಕ್ರಾಫ್ಟ್‌ಮನ್ ಕೆಲಸಕ್ಕೆ ಸೇರಿದರು.

ಅನಂತರ 'ಆರ್ಮಮೆಂಟ್ ಇಂಜಿನಿಯರಿಂಗ್' ವಿಭಾಗದಲ್ಲಿ 'ಆರ್ಮರರ್' ಆಗಿ ತರಬೇತಿ ಪಡೆದು, ವ್ಯಾಂಪೈರ್, ಹಂಟರ್, ನ್ಯಾಟ್‌ಗಳ ಫೈಟರ್ ಸ್ಕ್ವಾಡ್ರನ್‌ಗಳಲ್ಲಿಯೂ ಮತ್ತು ಎಕ್ಸ್‌ಪ್ಲೋಸೀವ್ ಸ್ಟೋರೇಜ್ ಡಿಪೊದಲ್ಲಿ ಎಕ್ಸ್‌ಪ್ಲೊಸಿವ್ ಇನ್ಸ್‌ಪೆಕ್ಟರ್ ಆಗಿಯೂ ಈತ ಸೇವೆ ಸಲ್ಲಿಸಿದ್ದಾರೆ. ತಮ್ಮ ಇಡೀ ಉದ್ಯೋಗದ ಅವಧಿಯಲ್ಲಿ ಇವರು ದಕ್ಷ ಕಾರ್ಯಕರ್ತರೆಂದೂ, ಶ್ರೇಷ್ಠ ಸೂಪರ್‌ವೈಸರ್ ಎಂದೂ ಹೆಸರುಗಳಿಸಿದ್ದಾರೆ.

ಇತ್ತೀಚಿನ ಹದಿನಾಲ್ಕು ದಿನಗಳ ಭಾರತ-ಪಾಕ್ ಸಮರದಲ್ಲಿ ಶ್ರೀ ಲಕ್ಷ್ಮಣ ಅವರು ಪೂರ್ವವಲಯದ ಫೈಟರ್ ಸ್ಕ್ವಾಡ್ರನ್‌ನ ಆರ್ಮಮೆಂಟ್ ಸೆಕ್ಷನ್‌ನಲ್ಲಿ ಅಧಿಕಾರಿಗಳಾಗಿದ್ದರು. ಅಂದಿನ ವಾಯು ಕಾರ್ಯಾಚರಣೆಯಲ್ಲಿ ಆರ್ಮರರ್‌ಗಳು ಧೀರ್ಘಕಾಲದವರೆಗೆ ಸಂಘಟಿತವಾಗಿ ಕೆಲಸ ಮಾಡುವುದು ಬಹಳ ಮಟ್ಟಿಗೆ ಅಗತ್ಯವಾಗಿತ್ತು. ಆಗ ಶ್ರೀ ಲಕ್ಷ್ಮಣ ಅವರು ತಮ್ಮ ಅವಿಶ್ರಾಂತ ದುಡಿಮೆ, ತಾಂತ್ರಿಕ ಕೈಚಳಕ ಮತ್ತು ಕರ್ತವ್ಯ ನಿಷ್ಠೆಗಳಿಂದಾಗಿ ತಮ್ಮ ಸಿಬ್ಬಂದಿವರ್ಗದವರಿಗೆ ಆದರ್ಶವಾಗಿದ್ದರು. ಸಿಬ್ಬಂದಿ ವರ್ಗವು ದೇಹಶ್ರಮವನ್ನೂ ಲೆಕ್ಕಿಸದೆ ಅಹ

ರ್ಗಿಶಿ ದುಡಿದುದಕ್ಕೆ ಬಹುಮಟ್ಟಿಗೆ ಇವರೇ ಕಾರಣರೆನ್ನಬಹುದು. ಇವರು ನಿರಂತರವೂ ತಮ್ಮ ಜೊತೆಗಾರರೊಂದಿಗೇ ಇದ್ದು ಸೂಕ್ತ ಮಾರ್ಗದರ್ಶನ ಮಾಡುತ್ತಿದ್ದುದರಿಂದ ಇವರ ವಿಭಾಗದ ಜನರೆಲ್ಲ ಒಟ್ಟಾಗಿ ಸಂಘಟಿತರಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಯಿತು.

ತಮ್ಮ ಕರ್ತವ್ಯನಿಷ್ಠೆ, ಅವಿಶ್ರಾಂತ ದುಡಿಮೆ, ತಾಂತ್ರಿಕ ನಿಪುಣತೆ ಇವುಗಳಿಂದಾಗಿ ಇವರು ಈ ಮೊದಲೇ ಭಾರತೀಯ ಸ್ವಾತಂತ್ರ್ಯಪದಕ, ರಕ್ಷಾಪದಕಗಳನ್ನು ಪಡೆದಿದ್ದರು. ಇವೇ ಸದ್ಗುಣಗಳಿಂದಾಗಿ ಇತ್ತೀಚಿನ ಸಮರದಲ್ಲಿಯೂ ಇವರು ತಮ್ಮ ಮೇಲಧಿಕಾರಿಗಳ ಮೆಚ್ಚುಗೆಯನ್ನು ಗಳಿಸಿ, ಮೆನ್ಷನ್-ಇನ್ ಡೆಸ್ಪಾಚಸ್ ಪ್ರಶಸ್ತಿಯನ್ನು ಗಳಿಸಿದ್ದಾರೆ. ಇವರಿಂದ ಇನ್ನೂ ಹೆಚ್ಚಿನ ಸೇವೆ ನಿರೀಕ್ಷಿಸಬಹುದಲ್ಲವೆ?

ಕ್ಯಾಪ್ಟನ್ ಶೇಷಗಿರಿರಾವ್ ಪ್ರಕಾಶ್

ಕ್ಯಾಪ್ಟನ್ ಎಸ್. ಪ್ರಕಾಶ್‌ರವರು ೧೯೪೫ರ ಜನವರಿ ಮೂರರಂದು ಮೈಸೂರಿನಲ್ಲಿ ಜನಿಸಿದರು. ಶ್ರೀಮತಿ ಸುಬ್ಬಲಕ್ಷಮ್ಮ ಮತ್ತು ಶ್ರೀ ಕಾನಕಾನಹಳ್ಳಿ ಶೇಷಗಿರಿರಾಯರು ಇವರ ತಾಯಿತಂದೆಗಳು.

ಪ್ರಾಥಮಿಕ ವಿದ್ಯಾಭ್ಯಾಸದಿಂದ ಪದವಿ ಪರೀಕ್ಷೆಯವರೆಗೂ ಇವರ ವಿದ್ಯಾಭ್ಯಾಸ ಬೆಂಗಳೂರಿನ ಆಚಾರ್ಯ ಪಾಠಶಾಲೆಯಲ್ಲಿಯೇ ನಡೆಯಿತು. ೧೯೬೫ರಲ್ಲಿ ಇವರು ಬಿ. ಕಾಂ. ಪದವೀಧರರಾದರು.

ಕಾಲೇಜು ವಿದ್ಯಾರ್ಥಿಯಾಗಿದ್ದಾಗ ಇವರು ಎನ್. ಸಿ. ಸಿ. ವಿಭಾಗದಲ್ಲಿ ಶ್ರದ್ಧೆವಹಿಸಿ ಸೀನಿಯರ್ ಅಂಡರ್ ಆಫೀಸರ್ ಪದವಿಯನ್ನು ಪ್ರಭಾವಶಾಲಿಯಾಗಿ ನಿರ್ವಹಿಸಿದರು. ಈ ಅವಧಿಯಲ್ಲಿ ಅನೇಕ ಶಿಬಿರಗಳಲ್ಲಿ ಭಾಗವಹಿಸಿದರು. ಫುಟ್‌ಬಾಲ್ ಮತ್ತು ಬ್ಯಾಸ್ಕೆಟ್‌ಬಾಲ್ ಕ್ರೀಡೆಗಳಲ್ಲಿ ಇವರು ತಮ್ಮ ಕಾಲೇಜನ್ನು ಅನೇಕ ಬಾರಿ ಪ್ರತಿನಿಧಿಸಿದ್ದರು.

ಕ್ಯಾ|| ಪ್ರಕಾಶ್ ಮದ್ರಾಸಿನಲ್ಲಿರುವ ಸೈನ್ಯಾಧಿಕಾರಿ ಶಿಕ್ಷಣ ಶಾಲೆಯಲ್ಲಿ ತರಬೇತಿ ಪಡೆದರು. ೧೯೫೭ರಲ್ಲಿ 'ಕಮಿಷನ್' ಆದನಂತರ 'ಗ್ರೆನೇಡಿಯರ್ಸ್' ರೆಜಿಮೆಂಟ್‌ನಲ್ಲಿ ಸೇವೆ ಆರಂಭಿಸಿದರು.



೧೯೭೧ರ ಭಾರತ-ಪಾಕ್ ಸಮರ ಪ್ರಾರಂಭವಾದಾಗ ವಾರ್ಷಿಕ ರಜೆಗಾಗಿ ಬೆಂಗಳೂರಿಗೆ ಬಂದಿದ್ದ ಇವರು ರಜೆ ಮುಗಿಯುವ ಮುನ್ನವೇ ಕರ್ತವ್ಯದ ಕರೆಗೆ ಓಗೊಟ್ಟು ಹಿಂದಿರುಗಿದರು. ಇವರ ಬೆಟಾಲಿಯನ್ ಈಗಿನ ಬಾಂಗ್ಲಾದೇಶದ ಪಶ್ಚಿಮ ವಲಯದಲ್ಲಿ ಕಾರ್ಯಾಚರಣೆಯಲ್ಲಿ ತೊಡಗಿತು. 'ಹಿಲ್ಲಿ' ವಿಭಾಗದಲ್ಲಿ ಪಾಕ್ ಸೈನಿಕರು ವಿಪುಲವಾಗಿದ್ದ ಶತ್ರುಠಾಣ್ಯವನ್ನು ವಶಪಡಿಸಿಕೊಳ್ಳಲು ಇವರಿಗೆ ಆದೇಶ ನೀಡಲಾಗಿತ್ತು. ಇವರು ತಮ್ಮ ತುಕಡಿಯ ಸಹಾಯದಿಂದ ಸುಮಾರು ೩೨ ಘಂಟೆಗಳಷ್ಟು ಕಾಲ ಭಯಂಕರ ದಾಳಿ ನಡೆಸಿದರು. ಈ ಸಮಯದಲ್ಲಿ ಶತ್ರುಗಳ 'ಷೆಲ್' ಹೊಡೆತದಿಂದ ಇವರ ಕಾಲಿಗೆ ಪೆಟ್ಟಾಯಿತು. ಆದರೂ ಇವರು ಎದೆಗುಂದದೆ ತಮ್ಮ ಸೈನಿಕರೊಡನೆ ತಮ್ಮ ಗುರಿಯನ್ನು ಸಾಧಿಸುವುದರಲ್ಲಿ ಜಯಶಾಲಿಗಳಾದರು. ಇವರ ದಾಳಿಗೆ ತುತ್ತಾದ ತಮ್ಮ ಶತ್ರುಗಳು ಠಾಣ್ಯವನ್ನು ಬಿಟ್ಟು ಪಲಾಯನ ಮಾಡಿದರು.

ಮೇಲ್ಕಂಡ ಕಾರ್ಯಾಚರಣೆಯಲ್ಲಿ ಕ್ಯಾ|| ಪ್ರಕಾಶ್ ಅವರ ಕೆಚ್ಚಿನ ಮುಂದಾಳುತನವು ಮೇಲಧಿಕಾರಿಗಳ ಗಮನಕ್ಕೆ ಬಂದುದರ ಫಲವಾಗಿ ಇವರಿಗೆ 'ಚೀಫ್ ಆಫ್ ಆರ್ಮಿ ಸ್ಟಾಫ್ ಕಮೆಂಡೇಷನ್ ಕಾರ್ಡ್' ಸನ್ಮಾನವು ದೊರಕಿತು. ಸೂಕ್ತ ಚಿಕಿತ್ಸೆ ದೊರೆತು ಈಗ ಕ್ಯಾ|| ಪ್ರಕಾಶ್ ಅವರು ತಮ್ಮ ಅಧಿಕಾರವನ್ನು ವಹಿಸಿಕೊಂಡಿರುವರು. ಈ ಕೆಚ್ಚೆದೆಯ ಕನ್ನಡ ತರುಣ ಪ್ರಕಾಶ್ ಅವರು ಭಾರತಕ್ಕೆ ದೊರೆತ ಅಂತಿಮ ವಿಜಯದ ಬಗ್ಗೆ ಅತೀವ ಅಭಿಮಾನಿಗಳಾಗಿರುವರು.

ಕ್ಯಾಪ್ಟನ್ ಪಿ. ಕೆ. ಅಪ್ಪಯ್ಯ

ಕ್ಯಾಪ್ಟನ್ ಪಿ. ಕೆ. ಅಪ್ಪಯ್ಯನವರು ಕೊಡಗಿನ ಜನಾಂಗಕ್ಕೆ ಸೇರಿದವರು. ಕೊಡಗು ಜಿಲ್ಲೆಯ ವೀರರಾಜಪೇಟೆ ತಾಲ್ಲೂಕಿನ ಕದನೂರು ಗ್ರಾಮದ ಶ್ರೀ



ಪೆಮ್ಮಂಡ ಕುಶಾಲಪ್ಪ ಮತ್ತು ಶ್ರೀಮತಿ ಮುತ್ತಮ್ಮನವರ ದ್ವಿತೀಯ ಪುತ್ರರು. ಇವರು ೧೯೪೧ನೆಯ ಇಸವಿಯಲ್ಲಿ ಜನಿಸಿದರು.

ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ೧೯೬೩ರಲ್ಲಿ ಇವರು ಬಿ. ಎಸ್‌ಸಿ. ಪದವೀಧರರೂ. ಎನ್. ಸಿ. ಸಿ. ಯಲ್ಲಿ ತರಬೇತಿ ಹೊಂದಿ ಅದೇ ಕಾಲೇಜಿನಿಂದ 'ಸಿ' ಸರ್ಟಿಫಿಕೇಟನ್ನೂ ಪಡೆದರು. ಅದೇ ವರ್ಷದ ಅಕ್ಟೋಬರ್ ತಿಂಗಳಿನಲ್ಲಿ ಆರ್ಮಿ ಎಮರ್ಜೆನ್ಸಿ ಕಮಿಷನ್ನಿಗೆ ಆಯ್ಕೆಯಾದರು. ಅನಂತರ ಡೆಹ್ರಾಡೂನಿನ ಮಿಲಿಟರಿ ಅಕ್ಯಾಡೆಮಿಯಲ್ಲಿ ಆರುತಿಂಗಳ ಕಾಲ ತರಬೇತಿ ಪಡೆದರು. ಇಷ್ಟಾದ ಮೇಲೆ ಕಮಿಷನ್ಡ್ ಆಫೀಸರ್ ಹುದ್ದೆಗೇರುವ ಅರ್ಹತೆ ಅವರಿಗೆ ಬಂದಿತು. ಇಷ್ಟೇ ಅಲ್ಲದೆ ಅವರು ಭೂಸೇನೆಯ ಬೇರೆ ಬೇರೆ ವಿಭಾಗದಲ್ಲಿಯೂ ತರಬೇತಿಯನ್ನು ಪಡೆದು ೧೯೬೯ನೆಯ ಡಿಸೆಂಬರ್‌ನಲ್ಲಿ 'ಪರ್ಮನೆಂಟ್ ಕಮಿಷನ್'ಗೆ ಆಯ್ಕೆಯಾದರು.

೧೯೭೦ರಲ್ಲಿ ಶ್ರೀ ಅಪ್ಪಯ್ಯ ಅವರನ್ನು ಪುಣೆಯಲ್ಲಿರುವ ಮಿಲಿಟರಿ ಇಂಜನಿಯರಿಂಗ್ ಕಾಲೇಜಿಗೆ ಶಿಕ್ಷಣ ಪಡೆಯಲು ಕಳಿಸಿದರು. ಇದು ಮೂರು ವರ್ಷದ ಇಂಜನಿಯರಿಂಗ್ ಪದವಿ ಪರೀಕ್ಷೆಯಾಗಿತ್ತು. ಶ್ರೀ ಅಪ್ಪಯ್ಯನವರು ಇಲ್ಲಿ ವ್ಯಾಸಂಗ ಮಾಡುತ್ತಿದ್ದಾಗಲೇ, ಅಂದರೆ ೧೯೭೧ರಲ್ಲಿ ನಡೆದ ಭಾರತ–ಪಾಕ್ ಸಮರದಲ್ಲಿ ಭಾಗವಹಿಸಲು ಇವರನ್ನು ಛಂಬ್ ವಿಭಾಗಕ್ಕೆ ಕಳುಹಿಸಲಾಯಿತು.

ಇವರು ಪಾಕ್ ವಿರುದ್ಧ ಹೋರಾಡುತ್ತಿದ್ದಾಗ ಡಿಸೆಂಬರ್ ಆರರಂದು ಇವರ ಹೊಟ್ಟೆಗೆ ಗುಂಡಿನೇಟು ಬಿದ್ದಿತು. ಕೂಡಲೇ ಇವರನ್ನು ದೆಹಲಿಯಲ್ಲಿರುವ ಸೈನಿಕರ ಆಸ್ಪತ್ರೆಗೆ ಚಿಕಿತ್ಸೆಗಾಗಿ ಸೇರಿಸಲಾಯಿತು. ಅಲ್ಲಿ ಅವರು ಐದುತಿಂಗಳ ಕಾಲ ಚಿಕಿತ್ಸೆ ಪಡೆದು ಗುಣಮುಖರಾದರು. ಅನಂತರ ಇವರನ್ನು ವ್ಯಾಸಂಗ ಮುಂದುವರಿಸಲೆಂದು ಪುಣೆಗೆ ಕಳುಹಿಸಲಾಯಿತು. ಈಗ ಇವರು ಪುಣೆಯಲ್ಲಿ ತಮ್ಮ ಇಂಜನಿಯರಿಂಗ್ ವ್ಯಾಸಂಗವನ್ನು ಮುಂದುವರೆಸುತ್ತಿದ್ದಾರೆ.

ಸಿಪಾಯಿ ವೆಂಕಟರಮಣಪ್ಪ

ಇವರು ಕೋಲಾರ ಜಿಲ್ಲೆಯ ಚಿಕ್ಕಬಳ್ಳಾಪುರದಲ್ಲಿ ೧೯೪೦ನೆಯ ಇಸವಿಯಲ್ಲಿ ಜನಿಸಿದರು. ಅದೇ ಊರಿನ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಆರನೆಯ ತರಗತಿಯವರೆಗೆ ಇವರ ವಿದ್ಯಾಭ್ಯಾಸ ನಡೆಯಿತು. ಇವರು ೧೯೬೨ರಲ್ಲಿ ಸೈನಿಕ ವೃತ್ತಿಗೆ ಸೇರಿದರು. ಮೊನ್ನಿನ ಸಮರದಲ್ಲಿ ಭಾಗವಹಿಸಿದ್ದ ಇವರು ಸಿಯಾಲ್ ಕೋಟ್ ವಲಯದಲ್ಲಿ ಹೋರಾಡುತ್ತಿದ್ದಾಗ ತೀವ್ರವಾಗಿ ಗಾಯಗೊಂಡರು. ಸರ್ಕಾರದವರು ಇವರ ಪತ್ನಿ ವೆಂಕಟಮ್ಮನವರಿಗೆ ಪರಿಹಾರಧನದ ರೂಪವಾಗಿ ಸಾವಿರ ರೂ.ಗಳ ಚೆಕ್ ಒಂದನ್ನು ನೀಡಿರುವರು.

ಸಿಪಾಯಿ ಕೋಲಾರ ವೆಂಕಟ

ಇವರು ಕೋಲಾರ ಜಿಲ್ಲೆಯವರು. ಇದೇ ಜಿಲ್ಲೆಯ ಬಂಗಾರುಪೇಟೆ ತಾಲ್ಲೂಕಿನ ಕೀರಮಂಡೆ ಗ್ರಾಮದಲ್ಲಿ ಇವರು ೧೯೪೬ರಲ್ಲಿ ಜನಿಸಿದರು. ಇವರು ೧೯೬೧ರ ಡಿಸೆಂಬರ್ ಒಂಭತ್ತರಂದು ತಮ್ಮ ಹತ್ತೊಂಭತ್ತನೆಯ ವಯಸ್ಸಿನಲ್ಲಿ ಸೈನಿಕ ವೃತ್ತಿಗೆ ಸೇರಿದರು. ಮೊನ್ನಿನ ಸಮರದಲ್ಲಿ ಹೋರಾಡುತ್ತಿದ್ದ ಇವರು ತೀವ್ರವಾಗಿ ಗಾಯಗೊಂಡರು. ಸರ್ಕಾರದವರು ಪರಿಹಾರಧನದ ರೂಪವಾಗಿ ಇವರ ತಾಯಿ ಶ್ರೀಮತಿ ವೆಂಕಟಮ್ಮನವರಿಗೆ ಸಾವಿರ ರೂ.ಗಳ ಚೆಕ್ ಒಂದನ್ನು ನೀಡಿರುವರು.

ಶ್ರೀ ಶಿವರಾಮನ್

ಇವರು ಕೋಲಾರದ ಕೆ.ಜಿ.ಎಫ್.ನಲ್ಲಿ ೧೯೫೦ರ ಏಪ್ರಿಲ್ ಎಂಟರಂದು ಜನಿಸಿದರು. ಆಂಡರ್‌ಸನ್‌ಪೇಟೆಯ ಪೆರುಮಾಳ್ ಹೈಯರ್ ಸೆಕೆಂಡರಿ ಶಾಲೆ

ಯಲ್ಲಿ ಇವರು ಒಂಭತ್ತನೆಯ ತರಗತಿಯ ವರೆಗೆ ಓದಿದರು. ಇವರು ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದಾಗ ಫುಟ್ ಬಾಲ್ ಕ್ರೀಡೆಯಲ್ಲಿ ಒಳ್ಳೆಯ ಆಟಗಾರರಾಗಿದ್ದರು. ಇವರು ತಮ್ಮ ಹದಿನಾರನೆಯ ವರ್ಷದಲ್ಲಿಯೇ ಸೈನಿಕ ವೃತ್ತಿಗೆ ಸೇರಿದರು. ಮೊನ್ನಿನ ಭಾರತ-ಪಾಕ್ ಸಮರದಲ್ಲಿ ಭಾಗವಹಿಸಿದ್ದ ಇವರು ಹೋರಾಟದಲ್ಲಿ ಮಗ್ನರಾಗಿದ್ದಾಗ ತೀವ್ರವಾಗಿ ಗಾಯಗೊಂಡರು. ಇವರ ತಂದೆ 'ಕೋಲಾರ್ ಗೋಲ್ಡ್ ಮೈನ್ಸ್' ಯೂನಿಟ್‌ನಲ್ಲಿ ವಾಚ್‌ಮನ್ ಕೆಲಸದಲ್ಲಿರುವರು. ಈ ಬಡಕುಟುಂಬಕ್ಕೆ ಸರ್ಕಾರದವರು ಪರಿಹಾರ ಧನದ ರೂಪವಾಗಿ ಸಾವಿರ ರೂ.ಗಳ ಚೆಕ್ ಒಂದನ್ನು ಯೋಧನ ತಾಯಿ ಶ್ರೀಮತಿ ಅಮರಾವತಿಯವರಿಗೆ ಕೊಟ್ಟಿರುವರು.

●

ಯೋಧ ಪಿ. ಪಿ. ಭೀಮಯ್ಯ

ಕೊಡಗಿನ ಹಲವಾರು ವೀರರು ರಣರಂಗದಲ್ಲಿ ಕೆಚ್ಚೆದೆಯಿಂದ ಕಾದಾಡಿ ಪದವಿ ಪ್ರಶಸ್ತಿಗಳನ್ನು ಪಡೆದಿರುವುದು ಸರಿಯಷ್ಟೆ. ಈ ಪರಂಪರೆಯಲ್ಲಿ ಬಂದಿರುವವರಲ್ಲಿ ಶ್ರೀ ಭೀಮಯ್ಯನವರೂ ಒಬ್ಬರು. ಇವರ ತಂದೆ ಮತ್ತು ಸೋದರರೂ ಸೈನಿಕ ವೃತ್ತಿಯಲ್ಲಿಯೇ ಸೇವೆ ಸಲ್ಲಿಸಿರುವರು.

ಲೆ|| ಕರ್ನಲ್ ವಿ.ಪಿ. ಫೈ ಅವರ ನಾಯಕತ್ವದಲ್ಲಿ ಮದ್ರಾಸ್ ರೆಜಿಮೆಂಟಿನ ೧೬ನೆಯ ಪಡೆಯಲ್ಲಿ ಸೇರಿ ಶ್ರೀ ಭೀಮಯ್ಯನವರು ಹೋರಾಡಿದರು. ಈ ಪಡೆಯ ಹೋರಾಟ ಕಾಶ್ಮೀರದ ಕ್ಷೇತ್ರದಲ್ಲಿ ನಡೆಯಿತು. ಡಿಸೆಂಬರ್ ೩ರಿಂದ ಡಿಸೆಂಬರ್ ೧೭ರವರೆಗೂ ಈ ಘರ್ಷಣೆ ನಡೆಯಿತು. "ಕದನ ವಿರಾಮದ ಘೋಷಣೆ

ಮಾಡದೇ ಹೋಗಿದ್ದರೆ ಇನ್ನೂ ಮುಂದುವರೆಯಬಹುದಾಗಿತ್ತು" ಎಂಬುದು ಶ್ರೀ ಭೀಮಯ್ಯನವರ ಅಭಿಪ್ರಾಯ. ಈ ಭೀಕರ ಘರ್ಷಣೆಯಲ್ಲಿ ಇವರ ನಾಯಕ

ರಾದ ಲೆ|| ಕ|| ಫೈರವರು ವೀರ ಸ್ವರ್ಗವನ್ನೇರಿದರು. ಶ್ರೀ ಭೀಮಯ್ಯ ನವರಿಗೆ ಬಾಂಬ್ ಸಿಡಿತದಿಂದಾಗಿ ಎದೆಗೆ ಏಟು ಬಿದ್ದು ಗಾಯಗಳಾದುವು. ಲೆ|| ಕ|| ಫೈರವರಿಗೆ 'ವೀರಚಕ್ರ' ಪ್ರಶಸ್ತಿಯನ್ನಿತ್ತು (ಮರಣೋತ್ತರ) ಗೌರವಿಸಲಾಯಿತು. ಡಿಸೆಂಬರ್ ೧೭ ರಂದು ಭೀಮಯ್ಯನವರು ಗಾಯಾಳು ಗಳನ್ನು ಆಸ್ಪತ್ರೆಗೆ ಸೇರಿಸುವ ಕಾರ್ಯ ದಲ್ಲಿ ನಿರತರಾಗಿರುವಾಗ ಗಾಯ ಗೊಂಡರು. ಜ್ಞಾನ ತಪ್ಪಿ ಬಿದ್ದ ಇವ ರನ್ನು ಕೂಡಲೇ ಪಠಾಣ್‌ಕೋಟ್ ಆಸ್ಪತ್ರೆಗೆ ಸೇರಿಸಲಾಯಿತು. ಕೆಲವು ದಿನಗಳ ಬಳಿಕ ಗುಣಮುಖರಾಗಿ ಇವರು ಆಸ್ಪತ್ರೆಯಿಂದ ಹೊರಬಂದರು. ಇವರ ದಳದಲ್ಲಿ ಇವರಂತೆಯೇ ಇನ್ನೂ ೧೨೦ ಮಂದಿಗೆ ಗಾಯಗಳಾದುವು. ಶ್ರೀ ಭೀಮಯ್ಯನವರ ಧೈರ್ಯಸಾಹಸಗಳನ್ನು ಮೆಚ್ಚಿ ಮೇಲ್ಪಟ್ಟ ಅಧಿಕಾರಿಗಳು ಪ್ರಶಂಸೆ ಮಾಡಿದ್ದಾರೆ.

●

ಸಿಪಾಯಿ ಮುನಿಸ್ವಾಮಿ

ಬೆಂಗಳೂರು ದಕ್ಷಿಣ ತಾಲ್ಲೂಕ್ ವರ್ತೂರು ಗ್ರಾಮದ ಶ್ರೀ ಎ. ಮುನಿ ಸ್ವಾಮಿಯವರು ಸೈನ್ಯಕ್ಕೆ ಸೇರಿ ತಮ್ಮ ಶೌರ್ಯವನ್ನು ಪ್ರದರ್ಶಿಸಿದ್ದಾರೆ. ಇವರ ತಂದೆ ಬಡವರಾದುದರಿಂದ ಮಗನನ್ನು ಹೆಚ್ಚು ಓದಿಸಲು ಸಾಧ್ಯವಾಗಲಿಲ್ಲ.

ಬಾಂಗ್ಲಾ ವಿಮೋಚನೆಗಾಗಿ ನಡೆದ ಸಮರದಲ್ಲಿ ಭಾಗವಹಿಸಲು ಹೋದ ಯೋಧರಲ್ಲಿ ಶ್ರೀ ಮುನಿಸ್ವಾಮಿಯವರೂ ಒಬ್ಬರು. ಅಲ್ಲಿ ನಡೆದ ಘರ್ಷಣೆಯಲ್ಲಿ ಮುನಿಸ್ವಾಮಿಯವರಿಗೆ ಗುಂಡಿನೇಟು ಬಿದ್ದು ಕೈಗೆ ತೀವ್ರ ಗಾಯವಾಯಿತು. ಅಂಗೈಯಲ್ಲಿ ಒಂದು ಬುಲೆಟ್ ಹೊಕ್ಕಿತ್ತು. ಕೂಡಲೇ ಇವರನ್ನು ಆಸ್ಪತ್ರೆಗೆ ಸೇರಿಸ ಲಾಯಿತು. ಅಲ್ಲಿ ಆಪರೇಷನ್ ಮಾಡಿ ಬುಲೆಟ್ಟನ್ನು ಹೊರತೆಗೆಯಲಾಯಿತು.

ಹೀಗೆ ಗಾಯಗೊಂಡ ಮುನಿಸ್ವಾಮಿಯವರಿಗೆ ಮೈಸೂರು ಸರ್ಕಾರದವರು ಒಂದು ಸಾವಿರ ರೂ.ಗಳ ಸಹಾಯ ಧನವನ್ನು ನೀಡಿರುವರು, ಈ ಮೊಬಲಗನ್ನು ಶ್ರೀ ಮುನಿಸ್ವಾಮಿಯವರ ತಂದೆ ಶ್ರೀ ಅಬ್ಬಯ್ಯನವರು ಸ್ವೀಕರಿಸಿದರು. ಶ್ರೀ ಮುನಿಸ್ವಾಮಿಯವರು ಗುಣಮುಖರಾಗಿ ಆಸ್ಪತ್ರೆಯಿಂದ ಹೊರಬರುವ ವೇಳೆಗೆ ಸಮರವು ಅಂತ್ಯವಾಗಿತ್ತು.

●

ಸಿಪಾಯಿ ನಂಜುಂಡ

ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕಿನ ಬೈತರಹೊಸಹಳ್ಳಿ ಗ್ರಾಮಕ್ಕೆ ಸೇರಿದ ಶ್ರೀ ಜವರೇಗೌಡರ ಮಗ ಶ್ರೀ ನಂಜುಂಡ ಎಂಬುವವರು

೧೯೪೬ರ ನವೆಂಬರ್ ೧೬ರಂದು ಜನಿಸಿದರು. ೧೯೬೨ರ ಡಿಸೆಂಬರ್ ೧೬ರಂದು ಇವರು ಭಾರತದ ಭೂಸೇನೆಯಲ್ಲಿ ಸೈನಿಕರಾಗಿ ಸೇರಿದರು. ಇತ್ತೀಚಿನ ಸಮರದಲ್ಲಿ ಇವರು ಭಾಗವಹಿಸಿ ಹೋರಾಡುತ್ತಿದ್ದಾಗ ೧೯೭೧ರ ಡಿಸೆಂಬರ್ ೧೬ರಂದು ರಾತ್ರೆ ೮-೩೦ ಘಂಟೆಯ ವೇಳೆಯಲ್ಲಿ ಗುಂಡಿನೇಟು ಬಿದ್ದು, ಇವರ ಮೊಣಕಾಲಿನಲ್ಲಿ ಮತ್ತು ಮೀನಖಂಡದಲ್ಲಿ ಮೂರು ಬುಲೆಟ್‌ಗಳು ಒಳಹೊಕ್ಕವು. ಕೂಡಲೇ ವಿಲ್ಲಿಂಗ್‌ಡನ್ ಆಸ್ಪತ್ರೆಗೆ ಇವರನ್ನು ಸೇರಿಸಲಾಯಿತು. ಅಲ್ಲಿ ಆಪರೇಷನ್‌ಮಾಡಿ ಬುಲೆಟ್‌ಗಳನ್ನು ಹೊರಕ್ಕೆ ತೆಗೆಯಲಾಯಿತು. ಇವರು ಗುಣಮುಖರಾಗಲು ಹಲವಾರು ದಿನಗಳು ಬೇಕಾ

ದುವು. ಗುಂಡಿನೇಟಿನಿಂದ ಗಾಯಗೊಂಡ ಇವರಿಗೆ ಮೈಸೂರು ಸರ್ಕಾರದವರು ಒಂದು ಸಾವಿರ ರೂ.ಗಳ ಸಹಾಯಧನವನ್ನು ನೀಡಿದರು. ಈ ಮೊಬಲಗನ್ನು ಶ್ರೀ ನಂಜುಂಡ ಅವರ ತಾಯಿ ಶ್ರೀಮತಿ ಕೆಂಪಮ್ಮನವರಿಗೆ ಕೊಡಲಾಯಿತು.

ಯೋಧ ಕ್ಯಾಪ್ಟನ್ ಟಿ. ಜಿ. ಥಾಮಸ್

ಬೆಂಗಳೂರಿನವರಾದ ಕ್ಯಾಪ್ಟನ್ ಟಿ. ಜಿ. ಥಾಮಸ್ ಅವರು ಇತ್ತೀಚಿನ ಭಾರತ-ಪಾಕ್ ಯುದ್ಧದಲ್ಲಿ ಭಾಗವಹಿಸಿ ಅಖ್ನೌರಾ ವಲಯದಲ್ಲಿ ಹೋರಾಡು

ತ್ತಿದ್ದರು. ಇವರ ಹೋರಾಟ ನಡೆಯುತ್ತಿದ್ದಂತೆಯೇ ಶತ್ರು ದಾಳಿಗೆ ಸಿಕ್ಕಿ ಗಾಯಗೊಂಡರು. ಕೂಡಲೇ ಇವರನ್ನು ಆಸ್ಪತ್ರೆಗೆ ಸೇರಿಸಲಾಯಿತು.

ಮೈಸೂರು ಸರ್ಕಾರದವರು ಪರಿಹಾರಾರ್ಥವಾಗಿ ಶ್ರೀ ಟಿ.ಜಿ. ಥಾಮಸ್ ಅವರು ತಾಯಿ ಶ್ರೀಮತಿ ಕೆ. ಕೆ. ಥಾಮಸ್ ಅವರಿಗೆ ಸಾವಿರ ರೂ.ಗಳನ್ನು ಮಂಜೂರು ಮಾಡಿದರು. ಬೆಂಗಳೂರು ಜಿಲ್ಲಾಧಿಕಾರಿಗಳಾದ ಶ್ರೀ ಅಹಮದ್ ಸಿದ್ದಿಕಿ ಅವರು ಸರ್ಕಾರದ ಪರವಾಗಿ ಆ ಚೆಕ್ಕನ್ನು ಶ್ರೀಮತಿ ಕೆ. ಕೆ. ಥಾಮಸ್ ಅವರಿಗೆ ೧೯೭೨ರ ಜನವರಿ ೧೧ ರಂದು ನೀಡಿದರು.

ಮೇಜರ್ ಪಟ್ಟಡ ಚೆಟ್ಟಿಯಪ್ಪ ಉತ್ತಪ್ಪ

ಕೊಡಗು ಜಿಲ್ಲೆಯ ವೀರರಾಜಪೇಟೆಯ ಸಮೀಪದಲ್ಲಿರುವ ಆರ್ಜಿಗ್ರಾಮವು ಶ್ರೀ ಉತ್ತಪ್ಪನವರ ಸ್ವಗ್ರಾಮ. ಈ ಗ್ರಾಮದ ಪಟ್ಟಡ ಕುಟುಂಬದಲ್ಲಿ ಇವರು

೧೯೪೪ರಲ್ಲಿ ಜನಿಸಿದರು. ಇವರ ತಂದೆಯವರೂ ಸಹ ಸೇನೆಗೆ ಸೇರಿ ಮಹಾ ಯುದ್ಧದಲ್ಲಿ ಭಾಗವಹಿಸಿದ್ದರು. ಇವರ ಬಾಲ್ಯದ ವಿದ್ಯಾಭ್ಯಾಸವು ಬೆಂಗಳೂರಿನ ಇಂಡಿಯನ್ ಹೈಸ್ಕೂಲಿನಲ್ಲಿ ನಡೆಯಿತು. ಅನಂತರ ಕಾಲೇಜು ವ್ಯಾಸಂಗವು ಕಲ್ಕತ್ತೆಯಲ್ಲಿ ಆಯಿತು. ಕಾಲೇಜು ವಿದ್ಯಾರ್ಥಿಯಾಗಿದ್ದಾಗಲೇ ಇವರು ರಾಷ್ಟ್ರೀಯ ರಕ್ಷಣಾ ಕೇಂದ್ರವನ್ನು (ಎನ್.ಡಿ ಎ.) ಸೇರಿ, ೧೯೬೪ರಲ್ಲಿ ಕಮಿಷನ್ ಪಡೆದರು. ಒಂದನೆಯ ಘೂರ್ಖ ರೆಜಿಮೆಂಟ್‌ನಲ್ಲಿ ಇವರಿಗೆ ಸೆಕೆಂಡ್ ಲೆಫ್ಟಿನೆಂಟ್ ಪದವಿ ದೊರಕಿತು. ೧೯೬೫ರ ಯುದ್ಧದಲ್ಲಿಯೂ ಇವರು ಭಾಗವಹಿಸಿ ಸಿಯಾಲ್ ಕೋಟ್ ವಿಭಾಗದಲ್ಲಿ ಹೋರಾಡಿದರು.

ಇತ್ತೀಚಿನ ಭಾರತ-ಪಾಕ್ ಸಮರದಲ್ಲಿಯೂ ಇವರು ಇದೇ ಸಿಯಾಲ್ ಕೋಟ್ ವಿಭಾಗದಲ್ಲಿಯೇ ಹೋರಾಡುತ್ತ, ೧೯೭೧ರ ಡಿಸೆಂಬರ್ ೯ರಂದು ರಾತ್ರೆ ಶತ್ರುಗಳ ಷೆಲ್‌ದಾಳಿಗೆ ಸಿಕ್ಕಿ ಗಾಯಗೊಂಡರು. ತಕ್ಷಣವೇ ದೆಹಲಿಯ ಆಸ್ಪತ್ರೆಗೆ ಸೇರಿಸಲಾಯಿತು. ಅಲ್ಪ ಸ್ವಲ್ಪಕಾಲ ಚಿಕಿತ್ಸೆ ಪಡೆದು, ಅನಂತರ ಬೆಂಗಳೂರಿನ ಮಿಲಿಟರಿ ಆಸ್ಪತ್ರೆಗೆ ಬಂದು ಸೇರಿದರು. ಇಲ್ಲಿ ಚಿಕಿತ್ಸೆ ಪಡೆದು ದೇವರ ದಯೆ ಯಿಂದ ಗುಣಮುಖರಾಗಿ ಪುನಃ ಸೇನೆಗೆ ಹಿಂತಿರುಗಿರುವರು.

ಇವರ ತಂದೆ ಲೆಫ್ಟಿನೆಂಟ್ ಕರ್ನಲ್ ಪಿ. ಎಸ್. ಚಿಟ್ಟಿಯಪ್ಪನವರು. ೨೮ ವರ್ಷ ವಯಸ್ಸಿನ ಶ್ರೀ ಉತ್ತಪ್ಪನವರು ಇನ್ನೂ ಅವಿವಾಹಿತರು. ಇವರು ಚಿಟ್ಟಿ ಯಪ್ಪನವರ ಪ್ರಥಮ ಪುತ್ರರು.

ಮೇಜರ್ ಕೆ. ಸುಂದರವತನನ್

ಮೇಜರ್ ಕುಪ್ಪಸ್ವಾಮಿ ಸುಂದರವತನನ್ ಅವರು ಕೊಯಮುತ್ತೂರು ಜಿಲ್ಲೆಯ 'ಕೊಡುಮುಡಿ'ಯಲ್ಲಿ ೧೯೪೦ರ ಸೆಪ್ಟೆಂಬರ್ ೨೮ರಂದು ಜನಿಸಿದರು. ಬೆಂಗಳೂರಿನ ಆರ್.ಬಿ.ಎ.ಎನ್.ಎಮ್. ಹೈಸ್ಕೂಲಿನಲ್ಲಿ ಒಂಭತ್ತನೆಯ ಸ್ಟಾಂಡರ್ಡ್ ವರೆಗೂ ವ್ಯಾಸಂಗಮಾಡಿ ಅನಂತರ ಕೊಡುಮುಡಿಯ ಎಸ್.ಎಸ್.ವಿ. ಹೈಸ್ಕೂಲಿ ನಲ್ಲಿ ವ್ಯಾಸಂಗವನ್ನು ಮುಂದುವರೆಸಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾದರು.

೧೯೬೦ರ ಮಾರ್ಚ್ ೧೭ರಂದು ಇವರು ಬೆಂಗಳೂರಿನ 'ಎಮ್.ಇ.ಜಿ.'ಯಲ್ಲಿ ಸಿಪಾಯಿ (ಗುಮಾಸ್ತೆ)ಯಾಗಿ ನೌಕರಿಗೆ ಸೇರಿದರು. ಅನಂತರ ಕಮಿಷನ್ ಪಡೆದು ೧೯೬೩ರ ಜೂನ್ ೩೦ರಂದು ಖಾಯಂಗೊಳಿಸಲ್ಪಟ್ಟು ರೆಜಿಮೆಂಟ್ ಆರ್ಟಿ

ಲರಿಯಲ್ಲಿ ಸೆಕೆಂಡ್ ಲೆಫ್ಟಿನೆಂಟ್ ಆಗಿ ನೇಮಕಗೊಂಡರು. ಈಗ ಇವರಿಗೆ ಮೇಜರ್ ಪದವಿಗೆ ಬಡ್ತಿ ದೊರಕಿದೆ.

ಇವರು ೧೯೬೫ರ ಸಮರದಲ್ಲಿಯೂ ಭಾಗವಹಿಸಿದ್ದರಲ್ಲದೆ, ಇತ್ತೀಚಿನ ಭಾರತ-ಪಾಕ್ ಸಮರದಲ್ಲಿಯೂ ಭಾಗವಹಿಸಿದ್ದರು. ಜಮ್ಮು ಮತ್ತು ಕಾಶ್ಮೀರ, ಲಡಕ್, ಭೂತಾನ್‌ಗಳಲ್ಲಿ ಇವರು ಕಾರ್ಯಾಚರಣೆ ನಡೆಸಿದ್ದರು. ಇತ್ತೀಚಿನ ಯುದ್ಧದಲ್ಲಿ ಇವರು ಪೂರ್ವವಲಯದ ಸಮರದಲ್ಲಿ ಭಾಗಿಯಾಗಿದ್ದರು. ಹೋರಾಟ ನಡೆಸುತ್ತಿದ್ದಂತೆಯೇ ಶತ್ರುದಾಳಿಗೆ ಸಿಕ್ಕಿ ಗಾಯಗೊಂಡರು. ಕೂಡಲೇ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಗುಣಮುಖರಾದರು.

ಸಮರದ ಗಾಯಾಳುಗಳಿಗೆ ಮೈಸೂರು ಸರ್ಕಾರವು ಪರಿಹಾರರೂಪವಾಗಿ ನೀಡುತ್ತಿರುವ ಸಾವಿರ ರೂ.ಗಳನ್ನು ಇವರಿಗೂ ಕೊಡಲಾಗಿದೆ. ಈಗ ಇವರು ರಾಜಾಸ್ಥಾನದ ಗಡಿ ಪ್ರದೇಶದಲ್ಲಿ ಸೇವೆಸಲ್ಲಿಸುತ್ತಿದ್ದಾರೆ.

ಸಿಪಾಯಿ ಪುರುಷೋತ್ತಮನ್

ಸಿಪಾಯಿ ಪುರುಷೋತ್ತಮನ್‌ರವರು ೧೯೪೪ರಲ್ಲಿ ಕೋಲಾರದ ಕೆ.ಜಿ.ಎಫ್.ನಲ್ಲಿ ಜನಿಸಿದರು. ಕೆ.ಜಿ.ಎಫ್.ನ ಸರ್ಕಾರಿ ಮಾಧ್ಯಮಿಕ ಶಾಲೆಯಲ್ಲಿ ಎಂಟನೆಯ ತರಗತಿಯವರೆಗೆ ಓದಿದರು. ೧೯೬೫ನೆಯ ಇಸವಿಯಲ್ಲಿ ಇವರು ಸೈನಿಕ ವೃತ್ತಿಗೆ ಸೇರಿದರು. ಇತ್ತೀಚಿನ ಭಾರತ-ಪಾಕ್ ಯುದ್ಧದಲ್ಲಿ ಭಾಗವಹಿಸಿ ಹೋರಾಡಿದ್ದ ಇವರೀಗ ಸಮರ ಖೈದಿಯಾಗಿ ಪಾಕಿಸ್ತಾನದಲ್ಲಿದ್ದಾರೆ. ಪರಿಹಾರಧನವಾಗಿ ಐದು ಸಾವಿರ ರೂ.ಗಳ ಒಂದು ಚೆಕ್ಕನ್ನು ಸರ್ಕಾರದವರು ಪುರುಷೋತ್ತಮನ್‌ರವರ ತಾಯಿ ಶ್ರೀಮತಿ ರಾಧಮ್ಮನವರಿಗೆ ನೀಡಿರುವರು. ಸಿಪಾಯಿ ಪುರುಷೋತ್ತಮನ್‌ರವರು ಸತ್ತುಹೋದರೆಂದು ಮೊದಲು ಸುದ್ದಿ ಬಂದಿದ್ದು ತರುವಾಯ ಬದುಕಿದ್ದಾರೆಂದು ತಿಳಿದು ಬಂದಿತು.

ಹುತಾತ್ಮ ಮೇಜರ್ ಪಿ. ಎಂ. ಮಧು

ಭಾರತದ ಸೇನೆಗೆ ಕೊಡಗು ಜಿಲ್ಲೆಯಿಂದ ಸಂದಿದ್ದ ಮತ್ತೊಂದು ಅಪೂರ್ವ ಕೊಡುಗೆ ಮೇಜರ್ ಪಿ. ಎಂ. ಮಧು. ಕೊಡವ ಸಂಪ್ರದಾಯಾನುಸಾರ ಇವರಿಗೆ

ನಾಮಕರಣವಾಗಿದ್ದುದು ಪೂವಯ್ಯ ನೆಂದು. ಆದರೆ ತಂದೆ ತಾಯಿ ಗಳಾದ ಶ್ರೀ ಪೆಮ್ಮಂಡ ಮಾಚಯ್ಯ ಮತ್ತು ಶ್ರೀಮತಿ ಸೀತಮ್ಮ ಇವರುಗಳಿಗೆ ಪೂವಯ್ಯ ಪ್ರೀತಿಯ ಮಧುವಾಗಿದ್ದರು. ಈ ದಂಪತಿಗಳಿಗೆ ಮಧು ನಾಲ್ಕನೆಯ ಮಗು.

ಶ್ರೀ ಮಾಚಯ್ಯನವರು ಅಂಚೆ ಇಲಾಖೆಯಲ್ಲಿ ನೌಕರಿಗೆ ಸೇರಿ ಗೆಜೆಟೆಡ್ ಪೋಸ್ಟ್‌ಮಾಸ್ಟರ್ ಪದವಿಯ ವರೆಗೂ ಮೇಲೇರಿ ನಿವೃತ್ತರಾದವರು. ಮಧು ಚಿಕ್ಕ ಮಗುವಾಗಿದ್ದಾಗ ಇವರು ಹಾಸನದಲ್ಲಿದ್ದರು. ಹಲವಾರು ಊರುಗಳನ್ನು ಸುತ್ತಬೇಕಾದ ಪ್ರಮೇಯ ಇವರಿಗೊದಗುತ್ತಿತ್ತು. ಕೊನೆಗೊಮ್ಮೆ ಮಕ್ಕಳ ವಿದ್ಯಾಭ್ಯಾಸದ ಸಲುವಾಗಿ ೧೯೪೭ರಿಂದೀಚೆಗೆ ಇವರು ಮೈಸೂರಿನಲ್ಲಿಯೇ ನೆಲೆಸಿದರು.

ಮಧುರವರ ವಿದ್ಯಾಭ್ಯಾಸ ಮೈಸೂರಿನ ಹಿತಕರ ವಾತಾವರಣದಲ್ಲಿ ಆರಂಭವಾಯಿತು. ಸೆಂಟ್ ಫಿಲೋಮಿನಾ ಹೈಸ್ಕೂಲಿನಲ್ಲಿ ವ್ಯಾಸಂಗಕ್ಕೆ ತೊಡಗಿದ ಇವರು ೧೯೬೨ರಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತಮ ಶ್ರೇಣಿಯಲ್ಲಿ ತೇರ್ಗಡೆಯಾದರು. ಹಿರಿಯ ಮಗನಂತೆ ಮಧು ಸಹ ಇಂಜನಿಯರಿಂಗ್ ಓದಲೆಂದು ತಂದೆತಾಯಿಗಳ ಆಸೆ. ಆದರೆ ಇದು ಮಧುರವರಿಗೆ ಇಷ್ಟವಿರಲಿಲ್ಲ. ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ—ಈ ವಿಷಯಗಳನ್ನು ಐಚ್ಛಿಕ ವಿಷಯಗಳನ್ನಾಗಿ ತೆಗೆದುಕೊಂಡು ಶಾರದಾವಿಲಾಸ ಕಾಲೇಜಿಗೆ ಸೇರಿದರು. ಇದೇ ಸುಮಾರಿನಲ್ಲಿ ನಡೆದ ೧೯೬೨ರ ಮತ್ತು ೧೯೬೫ರಲ್ಲಿ ನಡೆದ ಯುದ್ಧಗಳು ಮಧುರವರ ಮನಸ್ಸಿನ ಮೇಲೆ ವಿಶೇಷ ಪರಿಣಾಮವನ್ನೇ ಬೀರಿದುವು. ತತ್ಫಲವಾಗಿ ಸೈನ್ಯಕ್ಕೆ ಸೇರಿ ಸಾಹಸಕಾರ್ಯಗಳನ್ನು ಮಾಡಬೇಕೆಂಬ ಹಂಬಲು ಮಧುರವರ ಮನಸ್ಸಿನಲ್ಲಿ ಮೂಡಿ ದಿನೇದಿನೇ ಅಭಿವೃದ್ಧಿಯಾಗತೊಡಗಿತು. ಈ ಹಂಬಲು ಮಧು ಅವರ ಮನಸ್ಸಿನಲ್ಲಿ ಮೂಡಿದುದರಲ್ಲಿ ಆಶ್ಚರ್ಯವೇನಿಲ್ಲ. ಎಷ್ಟಾಗಲೀ

ಮಧು ಅವರ ತಾಯಿ: ಸೀತಮ್ಮನವರು ಸ್ವತಂತ್ರ ಭಾರತಕ್ಕೆ ಇಬ್ಬರು ಸುಪ್ರಸಿದ್ಧ ಮಹಾದಂಡನಾಯಕರುಗಳನ್ನು (ಜನರಲ್ ಕೆ.ಎಂ. ಕಾರಿಯಪ್ಪ ಮತ್ತು ಜನರಲ್ ಕೆ.ಎಸ್. ತಿಮ್ಮಯ್ಯ) ಕೊಡುಗೆಯಾಗಿತ್ತ ಕೊಡಂದೇರ ಮನೆತನದ ಹೆಣ್ಣು ಮಗಳು. ಮಧು ಅವರಿಗೆ ಶೌರ್ಯ, ಸಾಹಸಗಳು ರಕ್ತದಿಂದಲೇ ದತ್ತವಾಗಿದ್ದುವು. ಮಧುರವರು ಈ ದಿಶೆಯಲ್ಲಿ ಸರ್ವಸಿದ್ಧತೆಗಳನ್ನು ಮಾಡಿಕೊಳ್ಳತೊಡಗಿ ಎನ್.ಸಿ.ಸಿ. ಕ್ರೀಡಾಚಟುವಟಿಕೆ, ದೈಹಿಕ ಧಾರ್ಢ್ಯ, ಮಿಲಿಟರಿ ಜ್ಞಾನಸಂಪಾದನೆ ಇತ್ಯಾದಿಗಳತ್ತ ಹೆಚ್ಚಿನ ಗಮನ ಹರಿಸತೊಡಗಿದರು.

ಮಧುರವರು ತಮ್ಮ ಹತ್ತೊಂಭತ್ತನೆಯ ವಯಸ್ಸಿನಲ್ಲಿ ಅಂದರೆ ೧೯೬೬ರಲ್ಲಿ ಬಿ.ಎಸ್‌ಸಿ. ಕೊನೆಯ ವರ್ಷದ ತರಗತಿಯಲ್ಲಿದ್ದರು. ಆಗ ಭೂಸೇನೆಯ ಅಲ್ಪಾವಧಿ ಕಮಿಷನ್‌ಗೆ ಸಂಬಂಧಿಸಿದ ಪ್ರವೇಶಪರೀಕ್ಷೆಗೆ ಕುಳಿತು ಇವರು ತೇರ್ಗಡೆಯಾದರು. ಇಲ್ಲಿಗೆ ಮೊದಲನೆಯ ಅಡಚಣೆ ದಾಟಿದಂತಾಯಿತು. ಅನಂತರ ಅಂತಿಮ ಆಯ್ಕೆಯ ಪರೀಕ್ಷೆ ಮೀರತ್‌ನಲ್ಲಿ ನಡೆಯಿತು. ಅಲ್ಲಿ ಇವರ ಆಯ್ಕೆ ಎಷ್ಟು ಸುಗಮವಾಗಿ ಆಯಿತೆಂದರೆ-ಈ ಯುವಕ ಈ ಹುದ್ದೆಗಾಗಿಯೇ ಜನ್ಮತಳೆದಿರುವನೋ ಎಂಬಂತೆ ಇತ್ತು. ಕೂಡಲೇ ಮಧು ಅವರು ಕಾಲೇಜು ಶಿಕ್ಷಣಕ್ಕೆ ಶರಣು ಹೊಡೆದು ಮದರಾಸು ನಗರದಲ್ಲಿದ್ದ ಸೈನ್ಯ ಶಿಕ್ಷಣ ಕೇಂದ್ರವನ್ನು ತಲುಪಿದರು. ಸೈನ್ಯದ ಭೂಸೇನೆಯ ವಿಭಾಗದಲ್ಲಿ ಮಧುರವರು ಕಮಿಷನ್ ಪಡೆದು ೧೯೬೮ರಲ್ಲಿ ಸೆಕೆಂಡ್ ಲೆಫ್ಟಿನೆಂಟ್ ಪದವಿಯಿಂದ ಆರ್ಮಿ ಅಧಿಕಾರಿಯಾದರು. ಭವ್ಯ ಪರಂಪರೆ ಪಡೆದಿರುವ ೧೯ನೆಯ ಮರಾಠಾ ಲೈಟ್ ಇನ್‌ಫೆಂಟ್ರಿಗೆ ಇವರನ್ನು ವರ್ಗಾಯಿಸಲಾಯಿತು.

"ನಿಮಗೆ ಶಾಂತಿ ಬೇಕಿದ್ದರೆ ಸದಾ ಯುದ್ಧ ಸನ್ನದ್ಧರಾಗಿರಿ" ಎಂಬುದೊಂದು ಹಳೆಯ ಹೇಳಿಕೆ. ಇದರ ಅರ್ಥ ನಾವು ನೆರೆಯವರೊಡನೆ ಕಾಲ್ಕೆರೆದು ಕದನವನ್ನು ಆಹ್ವಾನಿಸಬೇಕು—ಎಂದಲ್ಲ: ಪ್ರತಿಯೊಂದು ಕ್ಷಣದಲ್ಲಿಯೂ ಜಾಗೃತರಾಗಿದ್ದುಕೊಂಡು ನಮ್ಮ ಎಚ್ಚರಿಕೆಯಲ್ಲಿ ನಾವಿರಬೇಕು—ಎಂದು. ಆದ್ದರಿಂದಲೇ ಸ್ವಾತಂತ್ರ್ಯವು ನಿರಂತರವೂ ಜಾಗರೂಕತೆಯನ್ನೂ, ಅವಿಚ್ಛಿನ್ನ ಕ್ರಿಯಾಶೀಲತೆಯನ್ನೂ ಬಯಸಿಕೋರುತ್ತದೆ. ಭಾರತದಂತಹ ಮಹಾಪ್ರಜಾಪ್ರಭುತ್ವದಲ್ಲಿ ಸೈನ್ಯದ ಹೊಣೆಗಾರಿಕೆ ಬಹುಮುಖವಾದುದು. ಗಡಿರಕ್ಷಣೆ ಇದರ ಒಂದು ಅಂಗವೆನ್ನಬಹುದು. ಅಷ್ಟೇ ಪ್ರಧಾನವಾದದ್ದು ಹಾಗೂ ಆಂತರಿಕ ಭದ್ರತೆಯನ್ನು ಕಾಪಾಡಿಕೊಳ್ಳುವುದು ಕೂಡಾ. ಅಂತಿಮವಾಗಿ ಸೈನ್ಯಬಲಗಳು ಒಂದು ರಾಷ್ಟ್ರದ ಆಂತರಿಕ ಸಾಮರ್ಥ್ಯದ ಪ್ರತೀಕ. ರಾಷ್ಟ್ರ ದುರ್ಬಲವಾದಾಗ ಸೈನ್ಯ ಆಮ್ಲಜನಕದ ಕೊರತೆಯನ್ನು ಅನುಭವಿಸುವ ಮನುಷ್ಯನಂತಾಗುತ್ತದೆ. ಅಂತರ ರಾಜ್ಯ ವಿವಾದಗಳೆಲ್ಲ ಕೋಮುವಾರು ಕಲಹಗಳೇ; ರಾಜಕೀಯ ಕ್ಷೋಭೆಗಳೇ; ಮಹಾಚುನಾವಣೆಗಳಲ್ಲಿ ತಲೆದೋರುವ ಛಿದ್ರಕಾರಕ ಪ್ರವೃತ್ತಿಗಳೇ; ರಾಜಕೀಯ

ಅಸಂತೃಪ್ತರ ವಾಮನೀತಿಗಳೇ. ಇವು ಒಂದೊಂದೂ ರಾಷ್ಟ್ರದ ಪ್ರಾಚೀನ ಸಂಸ್ಕೃತಿಯ ತಳಪಾಯವನ್ನೇ ಅಲುಗಿಸುವಂಥ ದುಷ್ಟಬಲಗಳು. ಇಂತಹ ಸಂದರ್ಭಗಳಲ್ಲಿ ಅಂತರರಾಷ್ಟ್ರೀಯ ಶಾಂತಿ ಇದ್ದರೂ ಸಹ ಸೈನ್ಯಬಲಗಳಿಗೆ ಬಿಡುವೆಂಬುದೇ ಇರುವುದಿಲ್ಲ. ಈ ತರಹದ ಸಂಕೀರ್ಣ ವ್ಯವಸ್ಥೆಯಲ್ಲಿ ಮಧುರವರು ಹೊತ್ತ ಹೊಣೆಗಾರಿಕೆಗಳು ಒಂದಲ್ಲ ಎರಡಲ್ಲ ಹಲವಾರು.

ಮುಖ್ಯವಾಗಿ ೧೯೭೦-೭೧ರಲ್ಲಿ ಮಧುರವರ ಸೇನೆಯ ಕಾರ್ಯಕ್ಷೇತ್ರವು ಅಶಾಂತಿಯ ತರುಣರೆನಿಸಿದ್ದ ಪೂರ್ವ ಗಡಿಯಾಗಿತ್ತು. ನೇಫಾ ಪ್ರಾಂತದ ಚುನಾವಣೆಯಲ್ಲಿ ಶಾಂತಿಯನ್ನು ಪಾಲಿಸುವ ಕಾರ್ಯದಲ್ಲಿ ಇವರ ಸೈನಿಕರು ದಕ್ಷ ಕಾರ್ಯವನ್ನು ನಿರ್ವಹಿಸಿದರು. ಅಲ್ಲಿಂದ ಮುಂದೆ ಅಂದರೆ ೧೯೭೧ರಲ್ಲಿ ಕಲ್ಕತ್ತೆಯ ಶೋಭೆಯ ಸಾಗರದಲ್ಲಿ ಶಾಂತಿಪಾಲನೆ ಮಾಡಲು ನಿಯೋಗಗೊಂಡು ಹೊರಟ ಹಲವಾರು ತುಕ್ಕಡಿಗಳಲ್ಲಿ ಮಧು ಅವರ ತುಕ್ಕಡಿಯೂ ಒಂದು. ನಿರಾಶ್ರಿತರ ನಿರಂತರ ಪ್ರವಾಹ ಹೊತ್ತು ತಂದ ದುಃಖ ಪ್ರವಾಹದಿಂದ ಬಹಳವಾಗಿ ನೊಂದ ಮಧು ಅವರು ಆ ಬಗ್ಗೆ ತಾಯಿಗೆ ಪತ್ರ ಬರೆದಿದ್ದರು. ಇಲ್ಲಿ ಜನಕ್ಷೋಭೆಯ ನಾನಾ ವಿದ್ಯಮಾನಗಳ ಪ್ರತ್ಯಕ್ಷ ಅನುಭವ ಮಧು ಅವರಿಗಾಯಿತು. ಅವರ ಪ್ರತಿಯೊಂದು ಕಾರ್ಯಗಳಲ್ಲಿಯೂ ಸೈನ್ಯದ ಉಚ್ಚಪರಂಪರೆ, ರಾಷ್ಟ್ರದ ಹಿತಪ್ರಧಾನ ಬೆಂಬಲಿಗರ ಹಿತ ಇವುಗಳೇ ಎದ್ದು ಕಾಣುತ್ತಿದ್ದುವು: ಅನಂತರ ಅವರ ಸ್ವಂತ ಹಿತದ ಬಗ್ಗೆ ಆಲೋಚನೆ.

೧೯೭೧ರ ಆಗಸ್ಟ್ ತಿಂಗಳಿನಲ್ಲಿ ಶ್ರೀ ಮಾಚಯ್ಯನವರು ತಮ್ಮ ನೂತನ ಗೃಹಪ್ರವೇಶೋತ್ಸವಕ್ಕೆ ಸಕಲ ಸಿದ್ಧತೆಗಳನ್ನೂ ನಡೆಸಿದ್ದರು. ಈ ಸಮಾರಂಭಕ್ಕೆ ಮಧು ಅವರ ಆಗಮನ ಅನುಮಾನವೇ ಆಗಿತ್ತು. ಆದರೆ ಈ ಸಮಾರಂಭಕ್ಕೆ ಮುನ್ನವೇ ಅಂದರೆ ಜುಲೈ ೧೭ರಂದು ಮೈಸೂರಿಗೆ ಮಧು ಅವರ ಆಗಮನವಾಯಿತು. ತಂದೆತಾಯಿಗಳಂತು ಹರ್ಷದ ಕಡಲಿನಲ್ಲಿ ತೇಲಿಹೋದರು. ಸಂಭ್ರಮ ಸಡಗರಗಳಿಂದ ದಿನಗಳು ಕ್ಷಣದಂತೆ ಕಳೆದುವು. ಸೆಪ್ಟೆಂಬರ್ ನಾಲ್ಕರಂದು ಮಧು ಅವರು ಸೈನ್ಯಕ್ಕೆ ಮರಳಿದರು. ಮುಂದೆ ಪ್ರತಿವಾರವೂ ಅವರ ಯೋಗಕ್ಷೇಮದ ಪತ್ರ ತಾಯಿ ತಂದೆಗಳಿಗೆ ಬರುತ್ತಿತ್ತು.

ಮಧು ಅವರ ದಳವಿದ್ದುದ್ದು ಪೂರ್ವಗಡಿಯಲ್ಲಿ. ಬಂಗ್ಲಾದೇಶವನ್ನು ಪ್ರವೇಶ ಮಾಡಿದ ಮೊತ್ತಮೊದಲ ಭಾರತೀಯ ದಳಗಳಲ್ಲಿ ಮಧು ಅವರ ನಾಯಕತ್ವದಲ್ಲಿದ್ದ ದಳವೂ ಒಂದು.

ಡಿಸೆಂಬರ್ ಒಂಭತ್ತರಂದು ಯುದ್ಧರಂಗದ ಮುಂಚೂಣಿ ಪ್ರದೇಶದಿಂದ ಮಧು ಅವರು ತಾಯಿಗೆ ಪತ್ರ ಬರೆದಿದ್ದರು—"ಇಲ್ಲಿ ನಾನು ಚೆನ್ನಾಗಿದ್ದೇನೆ. ಜೆಸ್ಸೂರಿನಲ್ಲಿ ನಮಗೆ ಒಳ್ಳೆಯ ಸಂತೋಷದ ಕಾಲ ಒದಗಿ ಬಂದಿದೆ. ನಾವು ಈ ಸ್ಥಳವನ್ನು ತಲುಪಿದ್ದು-ಅಲ್ಲ ಇಲ್ಲಿಗೆ ವಿಜಯಯಾತ್ರೆ ಮಾಡಿ ಬಂದದ್ದು ಡಿಸೆಂಬರ್

ಏಳರಂದು. ಬೆಳಗಿನ ೧೧-೩೦ ಘಂಟೆಗೆ. ಇಲ್ಲಿನ ನಾಗರಿಕರಿಗೆಲ್ಲ ಬಹಳ ಸಂತೋಷ. ನಮ್ಮನ್ನು ಸ್ವಾಗತಿಸಲು ಅವರಿಗೆ ಸಂಭ್ರಮವೇ ಸಂಭ್ರಮ."

ಬಂಗ್ಲಾ ದೇಶದಲ್ಲಿದ್ದ ಪಶ್ಚಿಮ ಪಾಕ್‌ಸೇನೆಗಳು ಡಿಸೆಂಬರ್ ೧೬ರಂದು ಭಾರತದ ಸೇನೆಗಳಿಗೆ ಶರಣು ಬಂದ ವಾರ್ತೆ ಭಾರತದಾದ್ಯಂತ ಹಬ್ಬಿತು. ಶ್ರೀ ಮಾಚಯ್ಯನವರ ಮನೆಯಲ್ಲಿ ಎಲ್ಲರೂ ಮಧು ಅವರಿಗೆ ಶುಭಕೋರಿ ದೇವರಿಗೆ ಹೂಮಾಲೆ ಹಾಕಿ ಕೈಮುಗಿದರು. ಆದರೆ?

ಮೈಸೂರಿನ ಜಯನಗರದಲ್ಲಿ ಶ್ರೀ ಮಾಚಯ್ಯನವರು ಮೊದಲಿದ್ದ ಮನೆಗೆ ಅವರ ನೆಂಟರೇ ಮುಂದೆ ಬಾಡಿಗೆಗೆ ಬಂದಿದ್ದರು. ಡಿಸೆಂಬರ್ ೧೯ರಂದು ಭಾನುವಾರ; ಅಂದು ಈ ಮಹನೀಯರು, ಅವರ ಕುಟುಂಬ, ಇನ್ನೆರಡು ಕೊಡವ ಸಂಸಾರಗಳು ಒಟ್ಟು ಆರೆಂಟು ಜನ ಒಟ್ಟಾಗಿ ಆ ಮುಂಜಾನೆಯ ಒಂಭತ್ತು ಘಂಟೆಯ ಸುಮಾರಿಗೆ ಮಾಚಯ್ಯನವರ ಮನೆಗೆ ಮೆಲು ನಡೆಯಿಂದ, ಮೂಕ ಗಂಭೀರರಾಗಿ ಬಂದರು. ಅವರನ್ನು ಕಂಡೊಡನೆ ಮಾಚಯ್ಯ ದಂಪತಿಗಳು ಕಳವಳದಿಂದ ತಳಮಳಿಸಿದರು. ಬಂದಿದ್ದವರು ಒಂದು ತಂತಿ ಸಂದೇಶವನ್ನು ಶ್ರೀ ಮಾಚಯ್ಯನವರ ಕೈಗಿತ್ತರು. ಡಿಸೆಂಬರ್ ೧೩ರಂದು ಮಧು ಅವರು ಯುದ್ಧ ರಂಗದಲ್ಲಿ ಮಡಿದ ಕಠೋರ ವಾರ್ತೆಯನ್ನು ಆ ತಂತಿ ಹೊತ್ತು ತಂದಿತ್ತು. ಹಿಂದಿನ ರಾತ್ರೆ ಮಾಚಯ್ಯನವರ ಜಯನಗರದ ಮಾಜಿ ವಿಳಾಸಕ್ಕೆ ಅದು ಬಂದಿತ್ತು.

*　　*　　*

ಮಧು ಅವರ ನಿಧನವನ್ನು ಕುರಿತು ಅವರ ಕಮ್ಯಾಂಡಿಂಗ್ ಆಫೀಸರ್ ಲೆಫ್ಟಿನೆಂಟ್ ಕರ್ನಲ್ ಶಂಶೇರ್‌ಸಿಂಗ್ ಅವರು ಡಿಸೆಂಬರ್ ೧೮ರಂದು ಶ್ರೀ ಮಾಚಯ್ಯನವರಿಗೆ ಬರೆದ ಸಂತಾಪಸೂಚಕ ಪತ್ರ ಹೀಗಿತ್ತು :—

ಪ್ರಿಯ ಶ್ರೀ ಮಾಚಯ್ಯನವರೇ,

ನಿಮ್ಮ ಮಗ ಮೇಜರ್ ಪಿ.ಎಂ. ಮಧು ಅವರು ೧೯೭೧ರ ಡಿಸೆಂಬರ್ ೧೩ ರಂದು ಮುಂಜಾನೆ ೬–೩೦ ಘಂಟೆಗೆ ಶತ್ರುಗಳ ಗುಂಡಿನೇಟಿಗೆ ಆಹುತಿಯಾಗಿ ಮಡಿದರು ಎಂದು ತಿಳಿಸಲು ನನಗೆ ಅತಿ ದುಃಖವಾಗುತ್ತದೆ. ನನ್ನ ಹಾಗೂ ಈ ಬೆಟಾಲಿಯನ್ನಿನ ಎಲ್ಲ ವರ್ಗದವರ ಹಾರ್ದಿಕ ಅನುಕಂಪವನ್ನೂ ಸಹಾನುಭೂತಿಯನ್ನು ಸೂಚಿಸಲು ಈ ಪತ್ರವನ್ನು ಬರೆಯುತ್ತಿದ್ದೇನೆ.

೧೯೭೧ರ ಡಿಸೆಂಬರ್ ೧೩ರಂದು ಮುಂಜಾನೆ ಆರು ಘಂಟೆಯವರೆಗೂ ಮೇಜರ್ ಪಿ. ಎಂ. ಮಧು ಅವರ ಆರೋಗ್ಯ ಉತ್ತಮವಾಗಿತ್ತು. ಅವರು ತಮ್ಮ ಕಂಪೆನಿಯನ್ನು ದಿಗ್ದರ್ಶಿಸುತ್ತ ಶತ್ರುವನ್ನು ಹಿಮ್ಮೆಟ್ಟಿಸುತ್ತ ಮುಂದೆ ಮುಂದೆ ಸಾಗುತ್ತಿದ್ದರು. ಹೀಗೆ ಮುಂದುವರೆಯುತ್ತಿದ್ದಾಗ ಹಠಾತ್ತಾಗಿ ಶತ್ರುಗಳು ಮೀಡಿಯಂ ಮೆಷಿನ್‌ಗನ್‌ಗಳಿಂದ ಗುಂಡುಗಳ ಮಳೆಯನ್ನೇ ತೀರ ಸಮೀಪದಿಂದ

ಕರೆಯ ತೊಡಗಿದರು. ಒಂದು ಗುಂಡು ನಿಮ್ಮ ಮಗನ ತಲೆಗೆ ನೇರವಾಗಿ ಬಡಿಯಿತು. ಇದರ ಪರಿಣಾಮವಾಗಿ ಅವರು ಆ ಕ್ಷಣವೇ ಅಸುನೀಗಿದರು.

ಮೇಜರ್ ಪಿ.ಎಂ. ಮಧು ಬಹಳ ಯೋಗ್ಯ ಅಧಿಕಾರಿಗಳಾಗಿದ್ದರು. ಅವರ ಶಿಸ್ತು, ವಿಧೇಯತೆ ಮತ್ತು ಧೈರ್ಯ ಅದ್ವಿತೀಯವಾಗಿದ್ದುವು. ಅವರ ನಿಧನದಿಂದ ಉಂಟಾಗಿರುವ ಕೊರತೆಯನ್ನು ತುಂಬುವುದು ಕಷ್ಟ.

ತೆರಳಿದ ಜೀವಕ್ಕೆ ಭಗವಂತ ಶಾಂತಿಯನ್ನು ದಯಪಾಲಿಸಲಿ. ಹಾಗೂ ತುಂಬಲಾಗದ ಈ ನಷ್ಟವನ್ನು ಸಹಿಸಿಕೊಳ್ಳಲು ನಿಮಗೆ ಶಕ್ತಿಯನ್ನು ಅನುಗ್ರಹಿಸಲಿ.

ಆತ್ಮೀಯಗೌರವಗಳೊಡನೆ.

ತಮ್ಮ ವಿಶ್ವಾಸಿ,
ಶಂಶೇರ್‌ಸಿಂಗ್
ಲೆಫ್ಟಿನೆಂಟ್ ಕರ್ನಲ್ ಆಫೀಸರ್ ಕಮ್ಯಾಂಡಿಂಗ್

ಮೇಜರ್ ಕೆ. ಕೆ. ರಾವ್

ಮೇಜರ್ ಕಲ್ಯಾಣಪುರ ಕೃಷ್ಣೋಜಿರಾವ್‌ರವರು ಮರಾಠಾ ಕುಟುಂಬಕ್ಕೆ ಸೇರಿದವರು. ಅಪ್ಪೋಜಿರಾವ್ ಮೋರೆ ಮತ್ತು ಸುಂದರೀಬಾಯಿ ಮೋರೆಯವರ ಪುತ್ರರಿವರು. ೧೯೩೯ರ ಸೆಪ್ಟೆಂಬರ್ ಆರರಂದು ಇವರು ಜನಿಸಿದರು. ಹಿಂದಿನಿಂದಲೂ ಇವರು ಬಡಕುಟುಂಬಕ್ಕೆ ಸೇರಿದವರು. ಶ್ರೀಯುತರಿಗೆ ಮೂರು ಮಂದಿ ಸಹೋದರಿಯರೂ ಒಬ್ಬ ತಮ್ಮನೂ ಇರುವರು.

ಕಲ್ಯಾಣಪುರದಲ್ಲಿ ಎಸ್.ಎಸ್.ಎಲ್.ಸಿ.ವರೆಗೆ ಇವರ ವಿದ್ಯಾಭ್ಯಾಸ ನಡೆಯಿತು. ಕಾಲೇಜು ಶಿಕ್ಷಣ ಪಡೆಯಲು ಅನುಕೂಲವಿರಲಿಲ್ಲವಾದ್ದರಿಂದ ವಿದ್ಯಾಭ್ಯಾಸ ಅಲ್ಲಿಗೇ ನಿಂತುಹೋಯಿತು. ಅನಂತರ ಹಲವಾರು ಖಾಸಗೀ ಕಂಪೆನಿಗಳಲ್ಲಿ ನೌಕರಿ ಮಾಡಿಕೊಂಡಿದ್ದರು.

ಇವರು ೧೯೫೮ ಭಾರತೀಯ ಸೈನ್ಯಕ್ಕೆ ಸೇರಿದರು. ಆರ್ಮಿ ಕ್ಯಾಡೆಟ್ ಕಾಲೇಜಿನಲ್ಲಿ (Poona) ಎರಡು ವರ್ಷಗಳ ಕಾಲ ತರಬೇತಿ ಪಡೆದು, ಡೆಹರಾಡೂನಿನ ಸೈನ್ಯಾಧಿಕಾರಿಗಳ ಕಾಲೇಜಿನಲ್ಲಿ ಶಿಕ್ಷಣ ಪಡೆಯಲು ಅರ್ಹತೆ ಗಳಿಸಿದರು. ೧೯೬೦ ರಲ್ಲಿ ಪೂನಾಕ್ಕೆ ಬಂದರು. ಜಬ್ಬಲ್‌ಪುರದಲ್ಲಿ ಸೈನಿಕ ಸಮಿತಿಯವರಿಂದ ೧೯೬೧ ರಲ್ಲಿ ಆಯ್ಕೆಯಾಗಿ ಆರ್ಮಿಕ್ಯಾಡೆಟ್‌ಕಾಲೇಜಿನಲ್ಲಿ ಎರಡು ವರ್ಷಗಳ ಕಾಲ ಹೆಚ್ಚಿನ

ಶಿಕ್ಷಣ ಪಡೆದರು. ಮುಂದೆ ೧೯೬೨ರಲ್ಲಿ ಅಧಿಕಾರಿ ಶ್ರೇಣಿ ಸೇರಿ ಡೆಹರಾಡೂನಿನ ಆರ್ಮಿ ಆಫೀಸರ್ಸ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿದರು. ೧೯೬೨ರಲ್ಲಿ ಚೀಣಾದೊಡನೆ ಸಂಭವಿಸಿದ ಯುದ್ಧದಲ್ಲಿ ಇವರೂ ಭಾಗಿಗಳಾಗಿದ್ದರು.

೧೯೬೩ರಲ್ಲಿ ಇವರು ಸೆಕೆಂಡ್ ಲೆಫ್ಟಿನೆಂಟ್ ಆಗಿ ನೇಮಕಗೊಂಡರು. ಇದಾದ ಕೆಲವೇ ವರ್ಷಗಳಲ್ಲಿ ಇವರು ಕಮಿಷನ್ಡ್ ಆಫೀಸರ್ ಆದರು. ೧೯೬೪ರಲ್ಲಿ ಲೆಫ್ಟಿನೆಂಟ್ ಆಗಿ ಬಡ್ತಿ ದೊರೆಯಿತು. ೧೯೬೫ರಲ್ಲಿ ಕ್ಯಾಪ್ಟನ್ ಪದವಿಗೇರಿದರು. ಅನಂತರ ಬಹು ಶೀಘ್ರದಲ್ಲಿಯೇ ಇವರು ಮೇಜರ್ ಪದವಿಗೆ ಬಂದು ೧೯೬೮ರಲ್ಲಿ ಕುಚ್‌ಬಿಹಾರ್‌ಗೆ ಹೋದರು. ೧೯೬೯ರಲ್ಲಿ ನಾಗಾಲ್ಯಾಂಡ್‌ಗೆ ಹೋಗಿ ಅಲ್ಲಿಯ ಜನತೆಯ ವಿಶ್ವಾಸವನ್ನು ಗಳಿಸಿದುದಲ್ಲದೆ ನಾಗಾಭಾಷೆಯನ್ನೂ ಕಲಿತರು. ಎರಡು ವರ್ಷಗಳ ಕಾಲ ಅಲ್ಲಿದ್ದು ನಾಗಾಜನಗಳ ಉಪಟಳವನ್ನು ಸಂಪೂರ್ಣವಾಗಿ ನಿಲ್ಲಿಸಿದರು. ೧೯೭೧ರಲ್ಲಿ ಮೇಘಾಲಯದಲ್ಲಿ ಸೈನಿಕ ಶಿಕ್ಷಕರಾಗಿ ಕೆಲಸ ಮಾಡಿದರು.

೧೯೭೧ರ ಮೇ ತಿಂಗಳಿನಲ್ಲಿ ತಮ್ಮ ತಂಗಿಯ ಮದುವೆಗಾಗಿ ಸ್ವಗ್ರಾಮಕ್ಕೆ ಬಂದಿದ್ದರು. ಅದೇ ಅವರ ಕಡೆಯ ಭೇಟಿಯಾಯಿತು.

೧೯೭೧ರ ಅಕ್ಟೋಬರ್ ತಿಂಗಳಿನಲ್ಲಿ ಇವರು ಯುದ್ಧದಲ್ಲಿ ಪಾಲ್ಗೊಳ್ಳಲು ಗಡಿಪ್ರದೇಶಕ್ಕೆ ಹೊರಟರು. ನವೆಂಬರ್‌ವರೆಗೂ ಅವರು ಪೂರ್ವವಲಯದ ಗಡಿ ಪ್ರದೇಶಗಳಲ್ಲಿಯೇ ಸಮರದ ಸನ್ನಾಹ ನಡೆಸುತ್ತಿದ್ದರು. ಬೋರಾಘಾಟ್ ಮೋರಾಪುರ ಮತ್ತು ನವಾಪಾರ ಪ್ರದೇಶಗಳಿಗೆ ಮುತ್ತಿಗೆ ಹಾಕಿದರು. ಮೇಜರ್ ಕೆ. ಕೆ. ರಾವ್‌ರವರೇ ನಾಯಕತ್ವವಹಿಸಿ, ಸೈನಿಕರನ್ನು ಹುರಿದುಂಬಿಸುತ್ತ ಹೋರಾಡುತ್ತಿದ್ದರು. ಸ್ವಲ್ಪವೂ ಧೈರ್ಯಗೆಡದೆ ದೇಶಾಭಿಮಾನದಿಂದ ಕೂಡಿದ ಇವರ ಮಿಲಿಟರಿ ಕಾರ್ಯಾಚರಣೆ ಸಾಗಿತ್ತು. ಶತ್ರುಗಳ ಪ್ರತಿಭಟನೆಯೂ ಸಾಕಷ್ಟಿತ್ತು. ಕಾಳಗ ಜೋರಾಯಿತು. ಅಲ್ಲಿ ರಕ್ಷಣೆ ಪಡೆಯಲು ಯಾವ ಸೌಕರ್ಯಗಳೂ ಇರಲಿಲ್ಲ. ಹೊಲ ಗದ್ದೆಗಳಲ್ಲಿ ಅಡಗಿಕೊಳ್ಳುವುದು ಹೇಗೆ ತಾನೇ ಸಾಧ್ಯವಾದೀತು ? ಶತ್ರುಗಳ ಗುಂಡಿನೇಟು ಅವ್ಯಾಹತವಾಗಿ ಸಾಗಿತ್ತು. ಇಂಥ ಸಂದಿಗ್ಧ ವೇಳೆಯಲ್ಲಿ ನವೆಂಬರ್ ೨೪ರಂದು ನಾಲ್ಕೂವರೆ ಘಂಟೆಯ ಸಮಯದಲ್ಲಿ ಮೇಜರ್ ರಾವ್‌ರವರು ಮೆಷಿನ್‌ಗನ್ ಹೊಡೆತಕ್ಕೆ ಸಿಕ್ಕಿ ವೀರಮರಣವನ್ನಪ್ಪಿದರು.

ಇವರ ಸಂಸ್ಕಾರವು 'ಹಿಲ್ಲಿ' ಎಂಬಲ್ಲಿ ಮಿಲಿಟರಿ ಗೌರವಗಳ ಸಮೇತ ನಡೆಯಿತು.

ಸರ್ಕಾರದ ಪರವಾಗಿ ಜಿಲ್ಲಾಧಿಕಾರಿಗಳು ದಿವಂಗತರ ಕುಟುಂಬಕ್ಕೆ ಐದು ಸಾವಿರ ರೂ.ಗಳನ್ನು ನೀಡಿದರು.

ಹುತಾತ್ಮ ಲೆಫ್ಟಿನೆಂಟ್ ಅಶೋಕ್ ಮುಲ್ಲೀಕರ್

ಇತ್ತೀಚಿನ ಭಾರತ-ಪಾಕ್ ಯುದ್ಧದಲ್ಲಿ ಲೆಫ್ಟಿನೆಂಟ್ ಅಶೋಕ್ ಪಿ. ಮುಲ್ಲೀಕರ್‌ರವರು ಮಡಿದು ವೀರ ಸ್ವರ್ಗವನ್ನು ಸೇರಿರುವರು. ಮೈಸೂರು ನಗರದ ರೈಲ್ವೆ ಕಾಲೋನಿಯಲ್ಲಿರುವ ಶ್ರೀ ಪಿ. ಎನ್. ಮುಲ್ಲೀಕರ್‌ರವರ ಪುತ್ರರಿವರು.

ಅಶೋಕ್‌ರವರ ನಿಧನದ ಸುದ್ದಿಯನ್ನು ಕೇಳಿದ ಕೂಡಲೇ (ಆಗ) ಮೈಸೂರು ರಾಜ್ಯದ ರಾಜ್ಯಪಾಲರಾಗಿದ್ದ ಶ್ರೀ ಧರ್ಮವೀರರವರು ಒಂದು ಸಂತಾಪ ಸೂಚಕ ಸಂದೇಶವನ್ನು ಕಳುಹಿಸಿ ದಿವಂಗತ ವೀರಯೋಧರನ್ನು ಮುಕ್ತಕಂಠದಿಂದ ಪ್ರಶಂಶಿಸಿದರು.

ಮೈಸೂರು ಜಿಲ್ಲೆಯ ಜಿಲ್ಲಾಧಿಕಾರಿಗಳಾದ ಶ್ರೀ ಡಿ. ಬಾಲಗೋಪಾಲನ್‌ರವರು ೧೯೭೨ರ ಜನವರಿ ೨೨ರಂದು ಮೃತರ ತಂದೆಯ ಮನೆಗೆ ಹೋಗಿ, ರಾಜ್ಯ ಸರ್ಕಾರದ ಪರವಾಗಿ ಐದುಸಾವಿರ ರೂ.ಗಳನ್ನು ಕೊಟ್ಟು ತಮ್ಮ ಸಂತಾಪವನ್ನು ವ್ಯಕ್ತಪಡಿಸಿ, ಬಂಧುವರ್ಗದವರಿಗೆ ಸಮಾಧಾನ ಹೇಳಿಬಂದರು.

ಭಾರತದ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರೂ ಸಹ ತಮ್ಮ ಸಂತಾಪವನ್ನು ವ್ಯಕ್ತಪಡಿಸಿ, ಮೃತಯೋಧರ ತಂದೆಗೆ ಒಂದು ಪತ್ರ ಬರೆದಿರುವರು. ಆ ಪತ್ರ ಹೀಗಿದೆ—

"ನಾನು ಭಾರತದ ಜನತೆ ಹಾಗೂ ನನ್ನ ಪರವಾಗಿ ಈ ವಿಷಾದಕರ ಸಂದೇಶವನ್ನು ಕಳುಹಿಸುತ್ತಿದ್ದೇನೆ. ನಿಮಗಾಗಿರುವ ಅಪಾರ ನಷ್ಟದಲ್ಲಿಯೂ, ದುಃಖದಲ್ಲಿಯೂ ಇಡೀ ದೇಶವೇ ಪಾಲುಗೊಂಡಿದೆ. ಕೋಟ್ಯಾನುಕೋಟಿ ಸೋದರ ಸೋದರಿಯರು ನಿಮ್ಮ ಮಗನ ಅಮೂಲ್ಯ ಸೇವೆಗಾಗಿ ಕೃತಜ್ಞರಾಗಿದ್ದಾರೆ. ಈ ದುಃಖವನ್ನು ಸಹಿಸುವ ಧೈರ್ಯವನ್ನೂ ಮನಶ್ಶಾಂತಿಯನ್ನೂ ದೇವರು ನಿಮಗೆ ಕೊಡಲೆಂದು ಪ್ರಾರ್ಥಿಸುತ್ತೇನೆ."

ಇದೇ ವಿಧವಾದ ಒಂದು ಸಂದೇಶವನ್ನು ಜನರಲ್ ಮಣೆಕ್ ಷಾರವರೂ ಕಳುಹಿಸಿದ್ದಾರೆ.

ಆದರೆ ಕಮ್ಯಾಂಡಿಂಗ್ ಆಫೀಸರ್ ಆಗಿರುವ ಲೆಫ್ಟಿನೆಂಟ್ ಕರ್ನಲ್ ಶ್ರೀ ಎಂ. ಕೆ. ಮೆನನ್‌ರವರು ಸೆಕೆಂಡ್ ಲೆಫ್ಟಿನೆಂಟ್ ಅಶೋಕ್‌ರವರ ಸಾಹಸವನ್ನು ಕುರಿತು ಕಳುಹಿಸಿರುವ ಸಂದೇಶ ಗಮನಾರ್ಹವಾಗಿದೆ.

"ದಿನಾಂಕ ೬-೧೨-೭೧ರಂದು ಮೂರು ಘಂಟೆ ಹತ್ತು ನಿಮಿಷದಲ್ಲಿ ನಂ. ೧ ಪ್ಲಟೂನ್ ಕಮ್ಯಾಂಡರ್ ಆಗಿದ್ದ ನಿಮ್ಮ ಮಗ ಲೆ|| ಅಶೋಕ್‌ರವರು ಶತ್ರುವಲಯದೊಳಕ್ಕೆ ನುಗ್ಗಿದಾಗ ನಾನು ಅವರೊಡನೆಯೇ ಇದ್ದೆ. ನಾವಿಬ್ಬರೂ ಶತ್ರುವಲಯವನ್ನು ಭೇದಿಸಿಕೊಂಡು ಹೊರಟೆವು. ಆಗ ಶತ್ರುಗಳ ವಿಮಾನ ದಾಳಿಯು ಆರಂಭವಾಯಿತು. ಅದೇ ಸಮಯದಲ್ಲಿ ಭೂಸೇನೆಯೂ ನುಗ್ಗಿಬಂತು. ನಿಮ್ಮ ಮಗ ಎದೆಗುಂದದೆ ಎಡೆಬಿಡದೆ ಗುಂಡುಗಳನ್ನು ಹಾರಿಸಿ, ಬಡಪಟ್ಟಿಗೆ ನೆಲೆಯನ್ನು ಬಿಟ್ಟುಕೊಡದೆ ಹೋರಾಡಿದರು. ಅವರು ಭಯವನ್ನು ತೋರಲಿಲ್ಲ. ಶಾಂತಚಿತ್ತರಾಗಿದ್ದು ಹಸನ್ಮುಖಿಯಾಗಿಯೇ ಇದ್ದರು. ಇದು ಅವರ ಕಾರ್ಯತತ್ಪರತೆಗೆ ಶ್ರೇಷ್ಠ ಉದಾಹರಣೆಯಾಗಿದೆ. ಗಾಯಗೊಂಡರೂ ಸಹ ಅವರು ಸ್ವಲ್ಪವೂ ಕದಲಲಿಲ್ಲ ಮತ್ತು ಧೃತಿಗೆಡಲಿಲ್ಲ. ಕಡೆಯ ತನಕ ಹೋರಾಡುತ್ತಲೇ ಬಾಂಬ್‌ದಾಳಿಗೆ ತುತ್ತಾಗಿ ಪ್ರಾಣವನ್ನು ತೆತ್ತರು. ಭರಿಸಲಾಗದ ಈ ನಷ್ಟ ಮತ್ತು ದುಃಖಗಳಲ್ಲಿ ನಾವೆಲ್ಲರೂ ಭಾಗಿಗಳಾಗಿದ್ದೇವೆ. ನನಗಂತೂ ಅಪಾರ ದುಃಖವಾಗಿದೆ. ಮತ್ತು ಅವರ ನೆರವಿಲ್ಲದಿರುವುದೂ ನನಗೀಗ ಒಂದು ಕೊರತೆಯಾಗಿದೆ. ಅಶೋಕ್‌ರವರನ್ನು ಕಂಡರೆ ನನಗೆ ತುಂಬಾ ಹೆಮ್ಮೆ. ಇವರ ಸಾಹಸದಿಂದಾಗಿ ಶತ್ರುಗಳ ದಮನಕ್ಕೆ ಬಹಳ ನೆರವು ಸಿಕ್ಕಿತು. ಇದು ಇತರರಿಗೆ ಅನುಕರಣೀಯವಾಗಿದೆ.

ನಿಮ್ಮ ಪುತ್ರರ ಶವಸಂಸ್ಕಾರವನ್ನು ಸಕಲ ಗೌರವಗಳಿಂದ ನೆರವೇರಿಸಲಾಯಿತು. ಮಿಲಿಟರಿ ಗೌರವ ಅವರಿಗೆ ಅಂತ್ಯದವರೆಗೂ ದೊರಕಿದೆ. ಜಮ್ಮು ಕಾಶ್ಮೀರಕ್ಕೆ ಸೇರಿದ "ಗಜಾನ್ಸು' ಎಂಬಲ್ಲಿ ಒಂದು ನದಿಯ ದಡದಲ್ಲಿ ಹಾಗೂ ದೇವಾಲಯದ ಸಮೀಪದಲ್ಲಿ ಶವಸಂಸ್ಕಾರ ನಡೆಯಿತು. ಈ ಸ್ಥಳದಲ್ಲಿ ಮುಂದೆ ಅಮೃತಶಿಲೆಯ ಸ್ಮಾರಕವೊಂದನ್ನು ನಿರ್ಮಿಸಲಾಗುತ್ತದೆ.

ಮತ್ತೊಮ್ಮೆ ನಾನು ನನ್ನ ಸಂತಾಪವನ್ನು ವ್ಯಕ್ತಪಡಿಸುತ್ತಿದ್ದೇನೆ. ನೀವು ಅದನ್ನು ಸ್ವೀಕರಿಸಿ, ಧೈರ್ಯವನ್ನು ತಾಳಬೇಕೆಂದು ಕೋರುತ್ತೇನೆ."

●

ುತಾತ್ಮ ಫ್ಲೈಟ್ ಲೆಫ್ಟಿನೆಂಟ್ ಕೆ. ಕೆ. ಮೋಹನ್

ಇತ್ತೀಚಿನ ಭಾರತ–ಪಾಕ್ ಯುದ್ಧದಲ್ಲಿ ಕೆಲವರು ಗೆದ್ದು ಪ್ರಶಸ್ತಿಯನ್ನು ಪಡೆ ರು; ಇನ್ನು ಕೆಲವರು ಗೆದ್ದು ಗಾಯಗೊಂಡರು ; ಮತ್ತೆ ಕೆಲವರು ಗೆಲ್ಲುತ್ತಲೇ ೀರಮರಣವನ್ನಪ್ಪಿದರು. ಸೋಲೆಂಬುದು ಭಾರತೀಯ ಸೈನ್ಯದ ಇತಿಹಾಸದಲ್ಲಿಯೇ ಲ್ಲ. ಮೇಲ್ಕಂಡ ಕಡೆಯ ವರ್ಗಕ್ಕೆ ಸೇರಿದವರು ಫ್ಲೈಟ್ ಲೆಫ್ಟಿನೆಂಟ್ ಕೆ. ಕೆ. ೋಹನ್‌ರವರು. ಇವರು ಬೆಂಗಳೂರಿನ ವಿಶ್ರಾಂತ ಪೋಲೀಸ್ ಅಧಿಕಾರಿಗಳಾದ ೀ ಟಿ. ಎ. ಮೋಹನ್‌ರವರ ಪುತ್ರರು.

ರಣರಂಗದ ಪಶ್ಚಿಮವಲಯದ ಸಮರದಲ್ಲಿ ಇವರು ಭಾಗವಹಿಸಿದ್ದರು. ೊದಲು ಇವರು ಕಾಣೆಯಾಗಿರುವರೆಂದು ವರದಿಯಾಗಿತ್ತು. ಅನಂತರ ಮೃತ ಾದರೆಂದು ಖಚಿತವಾದ ಸುದ್ದಿ ಬಂದಿತು.

ಶ್ರೀ ಮೋಹನ್‌ರವರು ಬೆಂಗಳೂರಿನ ಸರ್ಕಾರಿ ಕಾಲೇಜಿನ ವಿದ್ಯಾರ್ಥಿಗಳು. ೬೪ರಲ್ಲಿ ಇವರು ಭಾರತ ವಿಮಾನದಳಕ್ಕೆ ಸೇರಿಕೊಂಡರು. 'ಜೆಟ್ ಫೈಟರ್ಸ್' ಮಾನದಲ್ಲಿ ವಿಶೇಷ ನೈಪುಣ್ಯತೆ ಪಡೆದು ಬರುವುದಕ್ಕಾಗಿ ಇವರನ್ನು ಅಮೆರಿಕಕ್ಕೆ ಳುಹಿಸಲಾಗಿತ್ತು. 'ಸ್ಕಿಪ್ ಬಾಂಬಿಂಗ್' ನಲ್ಲಿ ವಿಶೇಷ ನೈಪುಣ್ಯತೆ ಪಡೆದಿದ್ದ ವರು ಹಲವು ಪ್ರಶಸ್ತಿಗಳನ್ನೂ ಪಡೆದಿದ್ದರು. ಇನ್ನೂ ಪಡೆಯುವುದರಲ್ಲಿದ್ದರು. ದರೆ ವಿಧಿ ಸಂಕಲ್ಪ ಬೇರೆಯೇ ಆಗಿತ್ತು.

ಕರ್ನಾಟಕದ ವೀರಾಗ್ರಣಿಯೆನಿಸಿಕೊಂಡಿದ್ದ ಇವರು ಇನ್ನಿಲ್ಲವಾಗಿದ್ದಾರೆ. ವರ ನಿಧನದಿಂದ ಭಾರತದ ವಾಯುಪಡೆಗೆ ಭರಿಸಲಾಗದ ನಷ್ಟವಾಗಿದೆ.

ುತಾತ್ಮ ಕೆ. ಎಂ. ಮುಂದಣ್ಣ

೧೯೪೭ರ ಆಗಸ್ಟ್ ೧೫ ಭಾರತ ಸ್ವಾತಂತ್ರ್ಯಪಡೆದ ದಿನ. ಅಂದು ದೇಶದಲ್ಲೆಲ್ಲಾ ್ವಾತಂತ್ರ್ಯ ದಿನಾಚರಣೆ ವೈಭವದಿಂದ ನಡೆಯಿತು. ಜನರು ಸಂತೋಷ ಸಂಭ್ರಮ ಿಂದ ನಲಿದರು. ಅದೇ ದಿನ ಕೊಡಗಿನ ವೀರರಾಜಪೇಟೆ ತಾಲ್ಲೂಕಿನ ಕೊಟ್ಟೋಳಿ ್ರಾಮದ ಕೊನೈರಿಯಾದ ಮುತ್ತಣ್ಣ ಮಾಚಯ್ಯನವರ ಮನೆಯಲ್ಲಿ ಮತ್ತೂ ವಿಶೇ ದ ಸಂಭ್ರಮ. ಅಂದು ಅವರಿಗೆ ಪುತ್ರನೊಬ್ಬನು ಜನಿಸಿದುದೇ ಅದಕ್ಕೆ ಕಾರಣ ಾಗಿತ್ತು. ಸ್ವಾತಂತ್ರ್ಯೋತ್ಸವದ ದಿನದಂದು ಜನಿಸಿದ ಆ ಮಗುವೇ ಮುಂದಣ್ಣ.

ಕೆ. ಎಂ. ಮಂದಣ್ಣನವರ ಪ್ರಾಥಮಿಕ ಶಿಕ್ಷಣ ಕೊಡಗಿನಲ್ಲಿಯೇ ಆಯಿತು. ಅನಂತರ ಇವರು ಬೆಳಗಾಂವ ಲಿಂಗರಾಜ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಬಿ. ಎಸ್‌ಸಿ. ಪಧವೀಧರರಾದರು.

೧೯೭೦ರಲ್ಲಿ ಇವರು ಮದ್ರಾಸಿನ ಅಧಿಕಾರಿಗಳ ಶಿಕ್ಷಣ ಶಾಲೆಗೆ ಸೇರಿದರು. ೧೯೭೧ರಲ್ಲಿ ಸೆಕೆಂಡ್ ಲೆಫ್ಟಿನೆಂಟ್ ಪದವಿ ಪಡೆದು ಅಕ್ಟೋಬರ್‌ನಲ್ಲಿ ಗಡಿ ಕಾವಲಿಗಾಗಿ ನೇಮಿಸಲ್ಪಟ್ಟರು. ಇವರು ಇಂಜಿನಿಯರಿಂಗ್ ರೆಜಿಮೆಂಟಿನಲ್ಲಿ ಸೇರಿಕೊಂಡಿದ್ದು ಸಿಯಾಲ್‌ಕೋಟೆಯ ಪ್ರದೇಶದಲ್ಲಿ ನಡೆದ ಸಮರದಲ್ಲಿ ೧೯೭೧ರ ಡಿಸೆಂಬರ್ ೧೭ ರಂದು ವೀರ ಮರಣವನ್ನಪ್ಪಿದರು.

ಇವರು ತಂದೆ ತಾಯಿಗಳಿಗೆ ಏಕಮಾತ್ರ ಪುತ್ರರಾಗಿದ್ದರು. ಕೇವಲ ೨೫ ವರ್ಷ ವಯಸ್ಸಿನ ಮಂದಣ್ಣ ಜನಾನುರಾಗಿಗಳಾಗಿದ್ದರು. ಒಳ್ಳೆಯ ನಡತೆ, ಸರಳತೆ, ಶಿಸ್ತು ಸತ್ಸಂಪ್ರದಾಯಗಳಿಗೆ ಇವರು ಹೆಸರಾಗಿದ್ದರು. ರಣರಂಗದಲ್ಲಿ ಇವರ ದಿಟ್ಟತನದಸಾಹಸಪ್ರದರ್ಶನವಾಗಿತ್ತು. ಆದರೆ ವಿಧಿಸಂಕಲ್ಪ ಬೇರೆಯಾಗಿತ್ತು. ವೀರಾಗ್ರಣಿಯಾದ ಮಂದಣ್ಣನವರನ್ನು ಉಳಿಸಿಕೊಳ್ಳುವ ಭಾಗ್ಯ ನಮ್ಮ ನಾಡಿಗೆ ಇಲ್ಲವಾಯಿತು.

ಶ್ರೀ ಮಂದಣ್ಣನವರ ನೆನಪು ಅವರ ಒಡನಾಡಿಗಳಲ್ಲಿ ಎಂದೆಂದಿಗೂ ಹಸುರಾಗಿಯೇ ಉಳಿದಿರುವಂಥದ್ದು. ಇವರ ತಂದೆಯವರಿಗೆ ಮೈಸೂರು ಸರ್ಕಾರವು ಐದುಸಾವಿರ ರೂ.ಗಳನ್ನು ಪರಿಹಾರಧನವನ್ನಾಗಿತ್ತಿದೆ.

ಹುತಾತ್ಮ ಕ್ಯಾಪ್ಟನ್ ರಾಜಾ ಸ್ವಾಮಿಾಜಿ

ಭಾರತೀಯ ಪಡೆಯ ಕ್ಯಾಪ್ಟನ್ ರಾಜಾ ಸ್ವಾಮಿಾಜಿಯವರು ಡಿಸೆಂಬರ್ ನಾಲ್ಕರಂದು ತಮ್ಮ ತಾಯಿತಂದೆಗಳಿಗೆ ಒಂದು ಪತ್ರ ಬರೆದು –“ನಿಮ್ಮ ಅಭಿಮಾನ

ಮತ್ತು ಆಶೀರ್ವಾದಗಳಿಗೆ ಪಾತ್ರನಾಗಿ ಶತ್ರುಗಳನ್ನು ಬಡಿದಟ್ಟುತ್ತೇನೆ" ಎಂದು ಬರೆದಿದ್ದರು. ಆದರೆ ಅದೇ ಅವರ ಕಡೆಯ ಪತ್ರವಾಯಿತು.

ಫಜಲ್ಕಾ ವಲಯದಲ್ಲಿ ಶತ್ರುಗಳ ಗುಂಡಿನ ದಾಳಿಗೆ ತುತ್ತಾಗಿ ವೀರಸ್ವರ್ಗ ಪಡೆದ ಕನ್ನಡಿಗ ರಾಜಾ ಸ್ವಾಮಿಜಿ ರಾಜಪುತ್ ರೆಜಿಮೆಂಟಿನ ಹದಿನೈದನೆಯ ಬೆಟಾಲಿಯನ್‌ನಲ್ಲಿದ್ದರು. ಇವರು ನಗರದ ರೇಣುಕಾಚಾರ್ಯ ಕಾಲೇಜಿನ ಪದವೀಧರರು. ನಗರದ ಸೈನಿಕ ಶಾಲೆಯ ವಿದ್ಯಾರ್ಥಿಯೂ ಹೌದು. ಅನಂತರ ಇವರು ಮದ್ರಾಸಿನಲ್ಲಿ ಸೇನಾಧಿಕಾರಿಗಳ ತರಬೇತಿ ಶಾಲೆಗೆ ಸೇರಿದರು.

ಡಿಸೆಂಬರ್ ಏಳರಂದು ಫಜಿಲ್ಕಾ ವಲಯಕ್ಕೆ ತೆರಳಿದ ರಾಜಾ ಸ್ವಾಮಿಜಿ ಮರುದಿನ ತೀವ್ರವಾಗಿ ಗಾಯಗೊಂಡರು. ಡಿಸೆಂಬರ್ ಒಂಭತ್ತು ಅವರ ಜೀವನದಲ್ಲಿ ಅತ್ಯಂತ ಕರಾಳದಿನವಾಗಿತ್ತು. ಗಾಯಗಳ ನೋವಿನಿಂದ ಅಂದು ನರಳುತ್ತ ಮಲಗಿದ ಅವರು ಪುನಃ ಏಳಲಿಲ್ಲ. ಅಂದೇ ಅವರು ನಿಧನರಾದರು. ಕೂಡಲೇ ಅವರ ಬಂಧುಗಳಿಗೆ ತಂತಿಯ ಮೂಲಕ ವರ್ತಮಾನವನ್ನು ತಿಳಿಸಲಾಯಿತು. ಸುದ್ದಿ ತಿಳಿದೊಡನೆ ನೂರಾರು ಮಂದಿ ಬಂಧು ಮಿತ್ರರು ಶೋಕ ಸಂದೇಶಗಳನ್ನು ಕಳುಹಿಸಿ ಸಂತಾಪ ವ್ಯಕ್ತಪಡಿಸಿದರು.

ಅವರ ಬೆಟಾಲಿಯನ್ ಕಮ್ಯಾಂಡರ್ ಈ ರೀತಿ ಸಂದೇಶ ಕಳಿಸಿದ್ದಾರೆ. "ಆತನ ಏಕಾಗ್ರಚಿತ್ತ ಹಾಗೂ ಎದೆಗಾರಿಕೆ ಸಮರಾಂಗಣದಲ್ಲಿ ಉಳಿದವರಿಗೂ ಸ್ಫೂರ್ತಿ ಕೊಡುವಂತಿತ್ತು. ನಮ್ಮ ಪಡೆಯು ಸಾಹಸೀಯೋಧನೊಬ್ಬನ ನಷ್ಟಕ್ಕೆ ಗುರಿಯಾಯಿತು."

ಕೇವಲ ೨೧ ವರ್ಷ ವಯಸ್ಸಿನಲ್ಲಿಯೇ ಕ್ಯಾಪ್ಟನ್ ಪದವಿಗೇರಿದ್ದ ರಾಜಾ ಸ್ವಾಮಿಜಿ ಬದುಕಿದ್ದಿದ್ದರೆ ಮಹಾನಾಯಕರೇ ಆಗುತ್ತಿದ್ದರು. ಆದರೆ ಅಷ್ಟರಲ್ಲಿ ಅವರು ವಿಧಿಯ ಕ್ರೂರ ಹಿಡಿತಕ್ಕೆ ಪಕ್ಕಾಗಬೇಕಾಯಿತು. ಅವರ ಅಳಿವು ಭರಿಸಲಾಗದ ನಷ್ಟವೇ ಆಗಿದೆ. ಅಮರರಾದ ಆ ಯೋಧರನ್ನು ಯಾರೂ ಮರೆಯಲು ಸಾಧ್ಯವಿಲ್ಲ.

ಇವರ ಸೋದರರು ಪಶ್ಚಿಮ ವಲಯದಲ್ಲಿ ಮರಾಠಾ ರೆಜಿಮೆಂಟಿನಲ್ಲಿ ಕಾಪ್ಟನ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ.

ಹುತಾತ್ಮ ಹವಾಲ್ದಾರ್ ಸಂಗಣ್ಣಗೌಡ ಈರಣ್ಣಗೌಡ ಪಾಟೀಲ್



೧೯೩೬ರ ಮೇ ೨೦ರಂದು ಜನಿಸಿದ ಇವರು ಬಿಜಾಪುರ ಜಿಲ್ಲೆಯ ಮ್ಯೆಗೂರಿನವರು. ೧೯೫೭ರ ಮಾರ್ಚ್ ೧೯ರಂದು ಇವರು ಸೈನಿಕ ವೃತ್ತಿಗೆ ಸೇರಿ ಮುಂದೆ ಹವಾಲ್ದಾರ್ ಪದವಿಗೆ ಬಡ್ತಿ ಪಡೆದರು. ಮೊನ್ನಿನ ಸಮರದಲ್ಲಿ ಭಾಗವಹಿಸಿದ್ದ ಇವರು ೧೯೭೧ರ ಡಿಸೆಂಬರ್ ೫ರಂದು ಸಮರಾಂಗಣದಲ್ಲಿ ಸಾವನ್ನಪ್ಪಿದರು. ಇವರು ತಮ್ಮ ಪತ್ನಿ ಮತ್ತು ಮೂವರು ಮಕ್ಕಳನ್ನು ಅಗಲಿ ಹೋಗಿರುವರು.

ಹುತಾತ್ಮ ಹವಾಲ್ದಾರ್ ರಾಮಚಂದ್ರಪ್ಪ ಮಲ್ಲಪ್ಪ ಹಿಪ್ಪರಗಿ

ಇವರು ಬಿಜಾಪುರ ತಾಲ್ಲೂಕಿನ ಕೊಟ್ಯಾಲ್ ಗ್ರಾಮದವರು. ಮಲ್ಲಪ್ಪ ಮತ್ತು ಭಾಗವ್ವ ದಂಪತಿಗಳ ಪುತ್ರರು. ಇವರು ೧೯೪೪ರ ಫೆಬ್ರವರಿ ಒಂದರಂದು ಜನಿಸಿದರು. ಇವರ ವಿದ್ಯಾಭ್ಯಾಸ ಐದನೆಯ ತರಗತಿಯವರೆಗೆ ಆಯಿತು. ೧೯೬೧ರ ಅಕ್ಟೋಬರ್ ೧೧ರಂದು ಸೈನಿಕ ವೃತ್ತಿಗೆ ಸೇರಿ ಹತ್ತು ವರ್ಷಗಳ ಕಾಲ ಸೈನಿಕ ವೃತ್ತಿಯಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸಿದರು. ಮೊನ್ನಿನ ಸಮರದಲ್ಲಿ ಭಾಗವಹಿಸಿದ್ದು ಹೋರಾಡುತ್ತಲೇ ೧೯೭೧ರ ಡಿಸೆಂಬರ್ ೧೫ರಂದು

ಹುತಾತ್ಮರಾದರು. ಇವರು ಪತ್ನಿ ತಂದೆ, ತಾಯಿ, ಸಹೋದರ ಸಹೋದರಿಯರನ್ನು ಅಗಲಿ ಹೋಗಿರುವರು.

ಲೆಫ್ಟಿನೆಂಟ್ ವಿಜಯ ಸುಮಂತ

ವೀರಯೋಧರ ಜೀವನ ಗಂಗೆಯಂತೆ ಪವಿತ್ರವಾದುದು. ಅಳಿದರೆ ವೀರ ಸ್ವರ್ಗ: ಉಳಿದರೆ ಸತ್ಕೀರ್ತಿ. ದೇಶಕ್ಕಾಗಿ ತಮ್ಮ ಜೀವವನ್ನೇ ಒತ್ತೆಯಿಡುವ ಆ ಯೋಧರ ಜೀವನ ಅದೆಷ್ಟು ಪವಿತ್ರ! ಮೊನ್ನಿನ ಭಾರತ-ಪಾಕ್ ಸಮರದಲ್ಲಿ ಹೀಗೆ ವೀರಸ್ವರ್ಗವನ್ನು ಕಂಡವರು ಹಲವಾರು ಮಂದಿ. ಅಂಥವರಲ್ಲಿ ವಿಜಯ ಸುಮಂತರೂ ಒಬ್ಬರು.

ವಿಜಯ ಸುಮಂತರು ಡಾ|| ಎನ್. ಆರ್. ವಿಜಯೇಂದ್ರರಾವ್ ಮತ್ತು ಶ್ರೀಮತಿ ಮಂಜುಳಾ-ಈ ದಂಪತಿಗಳ ಪುತ್ರರು. ಇವರು ೧೯೪೮ರ ಜನವರಿ ಐದರಂದು ಮದ್ರಾಸ್‌ನಲ್ಲಿ ಜನಿಸಿದರು. ತಮ್ಮ ಪ್ರಾಥಮಿಕ ಶಿಕ್ಷಣವನ್ನು ಇವರು ಬೆಂಗಳೂರಿನಲ್ಲಿ ಮುಗಿಸಿ, ಆನಂತರ ರಾಯಚೂರಿನ 'ಹಮ್‌ದರ್ದ್' ಪ್ರೌಢಶಾಲೆಯಲ್ಲಿ ಎಸ್.ಎಸ್.ಎಲ್.ಸಿ. ಮಾಡಿದರು. ಲಕ್ಷ್ಮೀವೆಂಕಟೇಶ ಕಾಲೇಜಿನಲ್ಲಿ ಪಿ.ಯು.ಸಿ. ಶಿಕ್ಷಣ ಪಡೆದ ಮೇಲೆ ಸರ್ಕಾರಿ ಪಾಲಿಟೆಕ್ನಿಕ್ ಶಾಲೆಯಲ್ಲಿ ಮೆಕ್ಯಾನಿಕಲ್ ಡಿಪ್ಲೊಮೊ ಪಡೆದರು.

೧೯೬೭-೬೮ರಲ್ಲಿ ಸರ್ಕಾರೀ ಪಾಲಿಟೆಕ್ನಿಕ್ ಯೂನಿಯನ್ನಿನ ಕಾರ್ಯದರ್ಶಿಯಾಗಿಯೂ, ಮರುವರ್ಷ ಉಪಾಧ್ಯಕ್ಷರಾಗಿಯೂ ಚುನಾಯಿತರಾದರು. ಇವರು ಉತ್ತಮ ಕ್ರಿಕೆಟ್ ಆಟಗಾರರೂ ಆಗಿದ್ದು 'ಕ್ರಿಕೆಟ್ ಬ್ಲೂ' ಎಂದು ಹೆಸರು ಗಳಿಸಿದ್ದರು.

ಇವರನ್ನು ರಕ್ಷಣಾ ಪಡೆಯ ಇಂಜನಿಯರಿಂಗ್ ಕೋರ್ಸಿಗೆ ಆಯ್ಕೆಮಾಡಲಾಯಿತು. ಶಿಕ್ಷಣ ಪಡೆದ ನಂತರ ಅಹಮದಾಬಾದ್ ಮಿಲಿಟರಿ ಶಿಬಿರದಲ್ಲಿ ಇವರನ್ನು ಕೆಲಸಕ್ಕೆ ನೇಮಿಸಿಕೊಳ್ಳಲಾಯಿತು. ಸಮರದ ಸಮಯದಲ್ಲಿ ಇವರನ್ನು ಪೂರ್ವಗಡಿಯ ರಕ್ಷಣೆಗಾಗಿ ಸಿಲ್‌ಗುರಿಗೆ ಕಳುಹಿಸಲಾಯಿತು. ಶತ್ರುಗಳೊಡನೆ ಕಾದಾಡುತ್ತ ತೀವ್ರವಾಗಿ ಗಾಯಗೊಂಡರು. ಕೂಡಲೇ ಸಿಲ್‌ಗುರಿಯ ಆಸ್ಪತ್ರೆಗೆ ಸೇರಿಸಲಾಯಿತು. ಅಲ್ಲಿಯ ವೈದ್ಯರ ಪ್ರಯತ್ನಗಳೆಲ್ಲ ವಿಫಲವಾಗಿ ವಿಜಯ ಸುಮಂತರು ಮರಣವನ್ನಪ್ಪಿ ಅಮರರಾದರು. ಇವರು ತಮ್ಮ ತಾಯಿ, ತಂದೆ ಆರು ಮಂದಿ ಸೋದರರು ಹಾಗೂ ಒಬ್ಬ ಸೋದರಿಯನ್ನು ಅಗಲಿರುವರು.

ವಿಜಯ ಸುಮಂತರ ಸೋದರ ಶ್ರೀ ರತನ್‌ರವರೂ ಸಹ ವಾಯುದಳದಲ್ಲಿ ಫ್ಲೈಟ್ ಲೆಫ್ಟಿನೆಂಟ್ ಆಗಿದ್ದಾರೆ. ಇನ್ನೊಬ್ಬ ಸೋದರ ಶ್ರೀ ವೇಣುಗೋಪಾಲ್‌ರವರು ಮಹಾರಾಷ್ಟ್ರದ ನಂದೇಲ್‌ನಲ್ಲಿ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ನೌಕರರಾಗಿದ್ದಾರೆ. ಸೋದರಿ ನೀರಜಾರವರು ರಾಯಚೂರಿನ ಠಾಕೂರ್ ಪ್ರೌಢಶಾಲೆಯಲ್ಲಿ ಅಧ್ಯಾಪಕಿಯಾಗಿದ್ದಾರೆ. ತಂದೆ ನಿವೃತ್ತ ಪಶುವೈದ್ಯ ಡಾಕ್ಟರು.

ವಿಜಯಸುಮಂತರ ಮರಣದ ಸುದ್ದಿ ತಿಳಿದೊಡನೆ ರಾಯಚೂರಿನ ನಗರಸಭೆ, ಹೈಸ್ಕೂಲ್, ಮತ್ತು ಕಾಲೇಜುಗಳಲ್ಲಿ ಸಭೆ ಸೇರಿ ಶ್ರದ್ಧಾಂಜಲಿಯನ್ನರ್ಪಿಸಿದರು.

●

ಹುತಾತ್ಮ ಡೇವಿಡಪ್ಪ

ಪಂಜಾಬ್ ಗಡಿಯಲ್ಲಿ ಪಾಕಿಸ್ತಾನದ ಸೈನಿಕರಿಗೂ, ಭಾರತದ ಸೈನಿಕರಿಗೂ ಹೋರಾಟ ನಡೆಯಿತಷ್ಟೆ. ಆಗ ಉಭಯ ಸೈನ್ಯಗಳಲ್ಲಿಯೂ ಅಪಾರ ನಷ್ಟವೇ ಸಂಭವಿಸಿತು. ಕಟ್ಟಕಡೆಯಲ್ಲಿ ಭಾರತ ಸೈನ್ಯವು ಜಯಗಳಿಸಿದುದೇನೋ ನಿಜ. ಆದರೆ ಆ ಜಯವನ್ನು ಗಳಿಸಬೇಕಾದರೆ ನಮ್ಮ ಸೇನೆಯಲ್ಲಿ ಎಷ್ಟೋ ಮಂದಿ ಯೋಧರು ಪ್ರಾಣ ತ್ಯಾಗ ಮಾಡಬೇಕಾದುದು ಅನಿವಾರ್ಯವಾಯಿತು. ಅಂಥವರಲ್ಲಿ ಶ್ರೀ ಡೇವಿಡಪ್ಪ ಎಂಬುವವರೂ ಒಬ್ಬರು.

ವೀರಸ್ವರ್ಗವನ್ನು ಪಡೆದ ಶ್ರೀ ಡೇವಿಡಪ್ಪನವರು ಹಾಸನದ ಬಳಿಯಿರುವ ಚೌರಿಕೊಪ್ಪಲ್ ಗ್ರಾಮಕ್ಕೆ ಸೇರಿದವರು. ಇವರ ತಂದೆ ಅರಳಪ್ಪ ಮತ್ತು ತಾಯಿ ಚೌಡಮ್ಮನವರು ವೃತ್ತಿಯಲ್ಲಿ ಒಕ್ಕಲಿಗರಾದರೂ ಕ್ರೈಸ್ತಮತಾವಲಂಬಿಗಳು.

ದಿ||ಡೇವಿಡಪ್ಪನವರ ಸೋದರರೊಬ್ಬರೂ ಸಹ ಭೂಸೇನೆಯಲ್ಲಿ ಯೋಧರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅಸ್ಸಾಂ ಗಡಿಯಲ್ಲಿ ನಡೆದ ಯುದ್ಧದಲ್ಲಿ ಅವರು ಪಾಲ್ಗೊಂಡಿದ್ದರು.

೫೪ ವರ್ಷದ ಅರಳಪ್ಪನವರದು ಒಂದು ಬಡತನದ ಕುಟುಂಬ. ಇವರಿಗೆ ಐದು ಮಂದಿ ಗಂಡು ಮಕ್ಕಳು ಮತ್ತು ಒಬ್ಬ ಹೆಣ್ಣು ಮಗಳಿರುವರು. ಇಷ್ಟು ಮಂದಿಯುಳ್ಳ ಕುಟುಂಬಕ್ಕೆ ಹೊಟ್ಟೆಹೊರೆಯಲು ಅವರಿಗಿರುವುದು ಕೇವಲ ಎರಡು ಎಕರೆ ಹೊಲ ಮಾತ್ರ. ಶ್ರೀ ಡೇವಿಡಪ್ಪನವರು ಬದುಕಿದ್ದಾಗ ಈ ಕುಟುಂಬಕ್ಕೆ ಪ್ರತಿ ತಿಂಗಳೂ ತಪ್ಪದೆ ನೂರು ರೂ. ಗಳ ಆದಾಯವಿತ್ತು. ಈಗ ಅದೂ ಇಲ್ಲವಾಗಿ ಕುಟುಂಬದ ಜನ ತುಂಬಾ ಭವಣೆ ಪಡುವಂತಾಗಿದೆ.

ಹಾಸನದ ಜಿಲ್ಲಾಧಿಕಾರಿಗಳಾದ ಶ್ರೀ ಡಿ. ಕೃಷ್ಣರವರು ದಿವಂಗತ ಯೋಧರ ಮನೆಗೆ ತೆರಳಿ ಸರ್ಕಾರದ ಪರವಾಗಿ ಐದು ಸಾವಿರ ರೂ.ಗಳ ಚೆಕ್ಕನ್ನು ಶ್ರೀ ಅರಳಪ್ಪನವರಿಗೆ ಕೊಟ್ಟು ಸಮಾಧಾನ ಹೇಳಿದರು.

ಆದರೇನು? ಆ ಐದು ಸಾವಿರ ರೂ. ಕಂಡೊಡನೆ ಆ ತಾಯಿತಂದೆಗಳ ದುಃಖ ಅಡಗುವುದೇ? ಎಂದೆಂದಿಗೂ ಆರದ ಒಡಲ ಉರಿಯದು.

ವೀರಸ್ವರ್ಗವನ್ನೇರಿದ ಸತ್ಯನಾರಾಯಣಶೆಟ್ಟಿ

ಭಾರತ-ಪಾಕ್ ಯುದ್ಧದಲ್ಲಿ ನೌಕಾಪಡೆಯೂ ಭಾಗವಹಿಸಿ ಹೋರಾಡಿತಷ್ಟೆ. ಆಗ ಐ.ಎನ್.ಎಸ್. ಖುಕ್ರಿ ಎಂಬ ಭಾರತದ ಹಡಗು ಅರೇಬಿಯನ್ ಸಮುದ್ರದಲ್ಲಿ

ತಳವನ್ನು ಕಂಡಿತು. ಅದೂ ಇದ್ದಕ್ಕಿದ್ದಂತೆ ಕೇವಲ ಮೂರೇ ನಿಮಿಷಗಳಲ್ಲಿ ಮುಳುಗಿಹೋಯಿತು. ಭಾರತ ನೌಕಾಪಡೆಗೆ ಇದೇ ಮೊದಲನೇ ಅಪಘಾತ.

೧೯೭೧ರ ಡಿಸೆಂಬರ್ ೯ರಂದು ರಾತ್ರೆ ಐ. ಎನ್. ಎಸ್. ಖುಕ್ರಿ ನೌಕೆ ಶತ್ರುಗಳ ಗುಪ್ತ ನೌಕೆಗಳನ್ನರಸುತ್ತ ಹೊರಟಿತು. ಆದರೆ ಕೆಲವೇ ನಿಮಿಷಗಳಲ್ಲಿ ಶತ್ರು ಧಾಳಿಗೆ ಸಿಕ್ಕಿ ಖುಕ್ರಿ ಅವಸಾನ ಹೊಂದಿತು. ಸಮುದ್ರದ ಗರ್ಭದಲ್ಲಡಗಿದ್ದ ಶತ್ರುಗಳ ಟಾರ್ಪೆಡೋಗಳು ಕಾರ್ಯಾಚರಣೆ ನಡೆಸಿ, ಖುಕ್ರಿಗೆ ಭಾರಿ ಮೋಸ ಮಾಡಿತು.

ಈ ಅಪಘಾತದಲ್ಲಿ ಅನೇಕ ಮಂದಿ ನಾವಿಕದಳದವರು ಮುಳುಗಿ ವೀರಸ್ವರ್ಗವನ್ನೇರಿದರು. ಇವರಲ್ಲಿ ಶ್ರೀ ಎಲ್. ಸತ್ಯನಾರಾಯಣಶೆಟ್ಟಿಯವರೂ ಒಬ್ಬರು. ಈ ಹಡಗಿನ ಕ್ಯಾಪ್ಟನ್ ಮುಲ್ಲಾರವರು ಕಡೇ ಘಳಿಗೆಯವರೆಗೂ ತಮ್ಮ ಕೈಲಾದಷ್ಟು ಸಹಾಯ ಮಾಡಿ ಎಷ್ಟೋ ಮಂದಿ ಸಿಬ್ಬಂದಿ ವರ್ಗದವರನ್ನು ಬದುಕಿಸಿದರು. ಕಟ್ಟಕಡೆಯ ಘಳಿಗೆಯಲ್ಲಿ ತಾವೂ ಹಡಗಿನೊಡನೆ ಮುಳುಗಿಹೋದರು. ಸೈನಿಕನೊಬ್ಬನು ಲೈಫ್ ಜಾಕೆಟ್ಟನ್ನು ತಂದು ಮುಂದೊಡ್ಡಿದಾಗ ಕ್ಯಾಪ್ಟನ್ ಮುಲ್ಲಾರವರು—"ನೀನು

ನಿನ್ನ ಜೀವ ಉಳಿಸಿಕೋ. ನನ್ನ ಬಗ್ಗೆ ಚಿಂತಿಸಬೇಡ." ಎಂದು ಹೇಳಿದರಂತೆ. ಈತನ ಸಾಹಸದಿಂದಾಗಿ ಆರುಜನ ಅಧಿಕಾರಿಗಳು ಅರವತ್ತೊಂದು ಮಂದಿ ನೌಕಾಸೈನಿಕರು ಬದುಕಿಕೊಂಡರು. ಸತ್ತವರ ಸಂಖ್ಯೆಯೆಂದರೆ ಹದಿಮೂರು ಮಂದಿ ಅಧಿಕಾರಿಗಳು ಮತ್ತು ನೂರ ಎಪ್ಪತ್ತಾರು ಮಂದಿ ಸೈನಿಕ ವರ್ಗದವರು.

ಈ ಖುಕ್ರಿ ಹಡಗು ಭಾರತಕ್ಕಾಗಿ ೧೯೫೮ರಲ್ಲಿ ಬ್ರಿಟನ್ನಿನಲ್ಲಿ ತಯಾರಾಯಿತು. ೧೫೦೦ಟನ್ ತೂಕವಿದ್ದ ಈ ಹಡಗು ೯೪.೫ಮೀಟರ್‌ಗಳಷ್ಟು ಉದ್ದವಿತ್ತು.

ಶ್ರೀ ಸತ್ಯನಾರಾಯಣ ಶೆಟ್ಟಿಯವರು ಹಾಸನ ಜಿಲ್ಲೆಯ ಹೊಳೆನರಸೀಪುರದವರು. ಇವರ ತಂದೆ ಶ್ರೀ ಪಿ. ಜಿ. ಲಕ್ಷ್ಮಯ್ಯಶೆಟ್ಟಿಯವರು ೮೭ವರ್ಷ ವಯಸ್ಸಿನ ವೃದ್ಧರು. ತಾಯಿ ಶ್ರೀಮತಿ ಭಾಗ್ಯಲಕ್ಷಮ್ಮನವರು. ಶ್ರೀ ಸತ್ಯನಾರಾಯಣಶೆಟ್ಟಿಯವರು ಈಗ್ಗೆ ಏಳುವರ್ಷಗಳ ಕೆಳಗೆ ನಾವಿಕ ಸೈನಿಕರಾಗಿ ನೌಕರಿಗೆ ಸೇರಿದರು. ಮನೆಯಲ್ಲಿ ವೃದ್ಧತಾಯಿತಂದೆಗಳು ಮತ್ತು ನಾಲ್ಕು ಮಂದಿ ಸೋದರರು. ಈ ಕುಟುಂಬಕ್ಕೆ ಶ್ರೀ ಸತ್ಯನಾರಾಯಣ ಶೆಟ್ಟಿಯವರ ಸಂಪಾದನೆಯೇ ಏಕೈಕ ಆಧಾರವಾಗಿತ್ತು. ಉಳಿದ ಮಕ್ಕಳಲ್ಲಿ ಹಿರಿಯ ಮಗ ಮೂವತ್ತಾರು ವರ್ಷ ವಯಸ್ಸಿನ ಲಕ್ಷ್ಮೀನಾರಾಯಣ ಹುಟ್ಟು ಮೂಗ. ಇಪ್ಪತ್ತೈದು ವರ್ಷ ವಯಸ್ಸಿನ ಎರಡನೆಯ ಮಗನೇ ಶ್ರೀ ಸತ್ಯನಾರಾಯಣಶೆಟ್ಟಿ. ದೇಶಕ್ಕಾಗಿ ಪ್ರಾಣಾರ್ಪಣೆ ಮಾಡಿದ ವೀರ. ಮೂರನೆಯ ಮಗ ಬಾಬು ಸುಬ್ರಹ್ಮಣ್ಯ. ಈತ ತಪ್ಪಿಸಿಕೊಂಡು ಮನೆಬಿಟ್ಟು ಹೋಗಿರುವನು. ನಾಲ್ಕನೆಯವನು ಹದಿನಾಲ್ಕು ವರ್ಷದ ರಂಗನಾಥ. ಇವನೂ ಮೂಗನೆ. ಕಡೆಯವನು ಕೇವಲ ಹನ್ನೆರಡು ವರ್ಷದ ಬಾಲಕ ವೆಂಕಟಾಚಲಪತಿ. ಇವನಂತೂ ಮೂಗನಷ್ಟೇ ಅಲ್ಲ ಹೆಳವನೂ ಕೂಡ. ಇಂಥ ನತದೃಷ್ಟ ಮಕ್ಕಳಿಂದ ವೃದ್ಧ ತಂದೆ ತಾಯಿಗಳಿಗೆ ಎಷ್ಟರ ಮಟ್ಟಿಗೆ ಸುಖ ದೊರತೀತು ? ಈ ಕುಟುಂಬಕ್ಕೆ ಇದ್ದ ಒಂದೇ ಆಧಾರವೆಂದರೆ ಶ್ರೀ ಸತ್ಯನಾರಾಯಣ ಶೆಟ್ಟಿ.

ಈ ದುರಂತ ಕತೆಯನ್ನು ಕೇಳಿದೊಡನೆ ಎಂಥವರಿಗಾದರೂ ದುಃಖ ಉಮ್ಮಳಿಸಿ ಬರುವುದು. ಸರ್ಕಾರದವರು ಪರಿಹಾರಾರ್ಥವಾಗಿ ಐದು ಸಾವಿರ ರೂ.ಗಳನ್ನೇನೋ ವೃದ್ಧತಂದೆತಾಯಿಗಳಿಗೆ ಕೊಟ್ಟರು. ಆದರೆ ಅಷ್ಟರಿಂದ ಅವರ ಸಮಸ್ಯೆ ಬಗೆಹರಿಯುವುದೇ?

ಸತ್ಯನಾರಾಯಣ ಶೆಟ್ಟಿ ತಂದೆ ತಾಯಿಗಳಿಗೆ ಬರೆದಿದ್ದ ಕಡೆಯ ಪತ್ರದಲ್ಲಿ ಕುಟುಂಬಕ್ಕೆ ಸಂಬಂಧಿಸಿದ್ದ ವಿಷಯಗಳನ್ನು ಪ್ರಸ್ತಾಪಿಸಿದ್ದರಲ್ಲದೆ ಯುದ್ಧ ಸಂಭವಿಸಿರುವ ಸಲುವಾಗಿ ಹಣ ಕಳುಹಿಸುವುದು ತಡವಾಗಿದೆಯೆಂದೂ, ಇಷ್ಟರಲ್ಲಿಯೇ ಕಳುಹಿಸಲಿರುವ ಹಣದಲ್ಲಿ ತಪ್ಪದೆ ಮನೆಗೆ ನಲ್ಲಿಯ ಸೌಕರ್ಯ ಮಾಡಿಕೊಳ್ಳಬೇಕೆಂದೂ ತಿಳಿಸಿದ್ದನೆಂದು, ವೃದ್ಧದಂಪತಿಗಳು ಜಿಲ್ಲಾಧಿಕಾರಿಗಳಿಗೆ ತಿಳಿಸಿದರು.
(ಕನ್ನಡ ಪ್ರಭ ೨೨-೧ ೭೨)

ಅನೇಕ ಗಣ್ಯವ್ಯಕ್ತಿಗಳು ಈ ಬಡಕುಟುಂಬಕ್ಕೆ ಸಹಾಯ ಮಾಡಲು ಮುಂದೆ ಬಂದಿರುವುದಾಗಿ ಪತ್ರಿಕೆಗಳಲ್ಲಿ ವರದಿ ಬಂದಿದೆ. ಹೀಗಾದರೂ ಸ್ವಲ್ಪ ನೆರವು ದೊರೆತಲ್ಲಿ ದೇಶಕ್ಕಾಗಿ ಆತ್ಮಾರ್ಪಣೆ ಮಾಡಿದ ಆ ಜೀವಕ್ಕೆ ಸ್ವಲ್ಪ ಶಾಂತಿ ದೊರಕೀತು.

ಶ್ರೀ ಸತ್ಯನಾರಾಯಣಶೆಟ್ಟಿಯವರ ಪ್ರಾಣತ್ಯಾಗ ದೇಶಾಭಿಮಾನಿಗಳ ಕಣ್ತೆರೆಯಿಸುವಂತಿದೆ. ಇವರ ಆದರ್ಶ ದೇಶಪ್ರೇಮವನ್ನು ವಿಧಿ ದುರಂತವಾಗಿ ಹೊರಗೆಡಹಿದೆ. ಎಷ್ಟು ಹೇಳಿದರೇನು ? ಇದೊಂದು ದುರಂತ ಕತೆ.

ಹುತಾತ್ಮ ದತ್ತಾತ್ರೇಯ ಬನೆ

ದತ್ತಾತ್ರೇಯ ಬನೆಯವರು ಇತ್ತೀಚಿನ ಭಾರತ-ಪಾಕ್ ಯುದ್ಧದಲ್ಲಿ ಭಾಗವಹಿಸಿ, ದಿನಾಂಕ ೧೬-೧೨-೧೯೭೧ರಂದು ರಣರಂಗದಲ್ಲಿ ಹೋರಾಡುತ್ತಿದ್ದಂತೆಯೇ ವೀರಸ್ವರ್ಗವನ್ನು ಸೇರಿದರು. ಇವರು ೧೯೪೭ರ ನವೆಂಬರ್ ೧೧ರಂದು ಧಾರವಾಡ ಜಿಲ್ಲೆಯ ಸಪ್ತಾಪುರದಲ್ಲಿ ಜನಿಸಿದರು.



ಧಾರವಾಡದ ಕನ್ನಡ ಪ್ರಾಥಮಿಕ ಶಾಲೆಯಲ್ಲಿ ಇವರ ಶಿಕ್ಷಣವಾಯಿತು. ೧೯೬೨ರ ಮೇ ೨೫ರಂದು ಇವರು ಬೆಂಗಳೂರಿನ ಬಾಲಕರ ಸೇನಾದಳಕ್ಕೆ (Boys Battalion) ಸೇರಿ ಸೈನಿಕ ಶಿಕ್ಷಣ ಪಡೆದರು. ೧೯೬೪ರ ವೇಳೆಗೆ ಈ ಶಿಕ್ಷಣ ಮುಗಿದು ತರಪೇತಿ ಪಡೆದ ಸೈನಿಕರಾಗಿ ಇವರು ಎರಡನೇ ಪ್ಯಾರಾ ಬೆಟಾಲಿಯನ್‌ನಲ್ಲಿ ದಾಖಲಾದರು.

ಸೈನಿಕರಾದ ಮೇಲೆ ಇವರು ಅನೇಕ ಸಲ ರಣರಂಗದಲ್ಲಿ ಹೋರಾಡಿದ್ದರು. ೧೯೬೫ರ ಸೆಪ್ಟೆಂಬರ್ ೧೭ರಿಂದ ೧೯೬೬ರ ಫೆಬ್ರವರಿ ೧೯ರವರೆಗೆ ಪಶ್ಚಿಮ ರಣರಂಗದಲ್ಲಿ ಹೋರಾಟ ನಡೆಸಿದರು. ೧೯೬೬ರ ಅಕ್ಟೋಬರ್ ೧೭ರಿಂದ ೧೯೬೯ರ ಆಗಸ್ಟ್ ೧೩ರ ವರೆಗೆ ಜಮ್ಮು ಮತ್ತು ಕಾಶ್ಮೀರ ಪ್ರಾಂತಗಳಲ್ಲಿ ಸೇವೆ ಸಲ್ಲಿಸಿದರು. ಬಳಿಕ ೧೯೭೧ ಆಗಸ್ಟ್ ೧೫ರಿಂದ ೧೯೭೧ರ ಡಿಸೆಂಬರ್ ೧೬ರ ವರೆಗೆ ಪುನಃ ಪಶ್ಚಿಮ ರಣ

ರಂಗದಲ್ಲಿಯೇ ಹೋರಾಡಿ ಶತ್ರುಗಳ ಧಾಳಿಗೆ ಸಿಕ್ಕಿ ಪ್ರಾಣಾರ್ಪಣೆ ಮಾಡಿದರು.

ದಿ|| ದತ್ತಾತ್ರೇಯ ಬನೆಯವರಿಗೆ ರಾಷ್ಟ್ರಪತಿಯವರ ಸೇನಾಪದಕ ಲಭಿಸಿದೆ. ಇಂತಹ ವೀರ ಯೋಧರು ಕಣ್ಮರೆಯಾದುದು ನಾಡಿನ ದೌರ್ಭಾಗ್ಯ.

ದಿ|| ಬನೆಯವರು ಉತ್ತಮ ಕ್ರೀಡಾಪಟುಗಳೂ ಆಗಿದ್ದರು. ಸಾವಿಗಂಜದ ಈ ವೀರಯೋಧನ ನೆನಪು ಎಂದೆಂದಿಗೂ ಅಳಿಯದಂತಿರುವುದರಲ್ಲಿ ಸಂದೇಹವಿಲ್ಲ.

ಗಣರಾಜ್ಯದಿನೋತ್ಸವದಂದು ಧಾರವಾಡ ಜಿಲ್ಲಾಧಿಕಾರಿಗಳಾದ ಶ್ರೀ ಬಿ.ಕೆ. ಭಟ್ಟಾಚಾರ್ಯರವರು ಮೃತರ ತಂದೆಯವರಾದ ಶ್ರೀ ಹನುಮಂತ ಬನೆ ಅವರಿಗೆ ಸರ್ಕಾರದ ಪರವಾಗಿ ಪರಿಹಾರಧನರೂಪವಾದ ಐದುಸಾವಿರ ರೂ. ಗಳ ಚೆಕ್ ಒಂದನ್ನೂ ರಾಜ್ಯಪಾಲರ ಸಂತಾಪಸೂಚಕಪತ್ರವನ್ನೂ ನೀಡಿದರು.

●

ಹುತಾತ್ಮ ನಾಯಕ್ ಸಹದೇವನ್ ಕೊಟ್ಟಾಯಿ

ಸಹದೇವನ್ ಕೊಟ್ಟಾಯಿಯವರು ಮಂಗಳೂರಿನವರು. ೧೯೪೩ರ ಜೂನ್ ತಿಂಗಳಲ್ಲಿ ಇವರು ಜನಿಸಿದರು. ಮಂಗಳೂರಿನಲ್ಲಿ ಪ್ರಿ-ಯೂನಿವರ್ಸಿಟಿಯವರೆಗೆ ಇವರ ವಿದ್ಯಾಭ್ಯಾಸವಾಯಿತು. ಅನಂತರ ಅದೇ ಊರಿನ ಕರ್ನಾಟಕ ಪಾಲಿಟೆಕ್ನಿಕ್‌ನಲ್ಲಿ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗದಲ್ಲಿ ಎರಡು ವರ್ಷಗಳು ವ್ಯಾಸಂಗಮಾಡಿದರು. ಶಾಲಾದಿನಗಳಲ್ಲಿ ಇವರು ಎನ್.ಸಿ.ಸಿ. ಕ್ಯಾಡೆಟ್ ಆಗಿದ್ದರು.

೧೯೬೦ರ ಡಿಸೆಂಬರ್ ತಿಂಗಳಲ್ಲಿ ಇವರು ಭಾರತೀಯ ಪಡೆಯಲ್ಲಿ ರೇಡಿಯೋ ಮೆಕ್ಯಾನಿಕ್ ಆಗಿ ನೇಮಕಗೊಂಡರು. ೧೯೭೧ರಲ್ಲಿ ನಡೆದ ಭಾರತ-ಪಾಕ್‌ಯುದ್ಧದಲ್ಲಿ ಹೋರಾಡುತ್ತಿದ್ದಂತೆಯೇ ಶತ್ರುಗಳ ಗುಂಡಿನೇಟಿಗೆ ಬಲಿಯಾಗಿ ಡಿಸೆಂಬರ್ ಐದರಂದು ವೀರಮರಣವನ್ನಪ್ಪಿದರು. ಇವರಿಗೆ ಹಿರಿಯ ಸಹೋದರರೊಬ್ಬರು ಇರುವರು. ಇವರ ತಂದೆ ಶ್ರೀ ಪೊನ್ನಾಂಬನ್ ಕೊಟ್ಟಾಯಿಯವರು ಮಂಗಳೂರಿನ ಖಾಸಗೀ ಕಂಪನಿಯೊಂದರಲ್ಲಿ ಮೋಟಾರ್ ಡ್ರೈವರ್ ಆಗಿ ಕೆಲಸಮಾಡುತ್ತಿರುವರು.

ಸರ್ಕಾರದ ಪರವಾಗಿ ಜಿಲ್ಲಾಧಿಕಾರಿಗಳು ಐದುಸಾವಿರ ರೂ.ಗಳನ್ನು ಕೊಟ್ಟಾಯಿಯವರ ಕುಟುಂಬಕ್ಕೆ ನೀಡಿದ್ದಾರೆ.

●

ಹುತಾತ್ಮ ಸಿಪಾಯಿ ಸಿದ್ದಪ್ಪ

ತಾಯಿಯ ಆಶೀರ್ವಾದವನ್ನು ಹೊತ್ತು, ಹೋಗಿಬರುವೆನೆಂದು ತಿಳಿಸಿ ಸಿಪಾಯಿ ಸಿದ್ದಪ್ಪ ಸಮರಭೂಮಿಗೆ ಹೋಗಿದ್ದರು. ಆದರೆ ಆತ ಮತ್ತೆ ಬರಲಿಲ್ಲ.

ಸಿದ್ದಪ್ಪ ಓರ್ವ ಸಿಪಾಯಿ. ಧಾರವಾಡ ಜಿಲ್ಲೆಯ ನವಲಗುಂದ ತಾಲ್ಲೂಕಿನ 'ಹನಸಿ' ಆತನ ಗ್ರಾಮ. ಆತನು ಜನಿಸಿದುದು ಈ ಗ್ರಾಮದಲ್ಲಿಯೇ. ಆತನದು ವ್ಯವಸಾಯವೃತ್ತಿಯ ಕುಟುಂಬ. ಹನಸಿಯ ಪ್ರೈಮರಿ ಶಾಲೆಯಲ್ಲಿ ಮೂರನೆಯ ತರಗತಿಯ ವರೆಗೆ ಆತನ ವಿದ್ಯಾಭ್ಯಾಸವಾಯಿತು. ಅನಂತರ ವ್ಯವಸಾಯ ವೃತ್ತಿಗಿಳಿದು ಹದಿನೈದನೆಯ ವರ್ಷದವರೆಗೂ ಆ ವೃತ್ತಿಯಲ್ಲಿಯೇ ಇದ್ದರು. ಈ ವೃತ್ತಿ ಆತನಿಗೆ ಅಷ್ಟಾಗಿ ಹಿಡಿಸಿದಂತೆ ಕಾಣಲಿಲ್ಲ. ಗೋವಾಕ್ಕೆ ಹೋಗಿ ಸೈನಿಕ ವೃತ್ತಿಗೆ ಸೇರುವ ಪ್ರಯತ್ನ ನಡೆಸಿದರು. ಅವರ ಪ್ರಯತ್ನ ವಿಫಲವಾಗಲಿಲ್ಲ.

ಅವರಿಗೆ ಸೈನಿಕನಾಗುವ ಯೋಗ ಲಭಿಸಿತು. ಮದ್ರಾಸ್ ರೆಜಿಮೆಂಟಿನಲ್ಲಿ ಅವರು ಸೈನಿಕರಾಗಿ ನೇಮಕಗೊಂಡರು. ಆ ರೆಜಿಮೆಂಟಿನಲ್ಲಿಯೇ ಎರಡು ವರ್ಷಗಳಕಾಲ ಕೆಲಸಮಾಡಿದರು. ಇತ್ತೀಚಿನ ಭಾರತ–ಪಾಕ್ ಯುದ್ಧದಲ್ಲಿ ಇವರೂ ಭಾಗವಹಿಸಬೇಕಾದ ಸಂದರ್ಭ ಒದಗಿತು. ಧೈರ್ಯದಿಂದ ಹೋರಾಡುತ್ತಿದ್ದ ಇವರು ಶತ್ರುದಾಳಿಗೆ ಸಿಕ್ಕಿ ತೀವ್ರವಾಗಿ ಗಾಯಗೊಂಡು ೧೯೭೧ರ ಡಿಸೆಂಬರ್ ೧೬ರಂದು ನಿಧನರಾದರು.

ಆತನಿಗೆ ಶ್ರದ್ಧಾಂಜಲಿ ಅರ್ಪಿಸಲು ಆತನ ಹುಟ್ಟೂರಾದ ಹನಸಿಯಲ್ಲಿ ಒಂದು ಸಂತಾಪಸೂಚಕ ಸಭೆ ಏರ್ಪಟ್ಟಿದ್ದಿತು. ಧಾರವಾಡದ ಜಿಲ್ಲಾಧಿಕಾರಿ ಶ್ರೀ ಬಿ. ಕೆ. ಭಟ್ಟಾಚಾರ್ಯರವರು ಸಭೆಗೆ ಆಗಮಿಸಿ ಸರ್ಕಾರದ ಪರವಾಗಿ ಐದುಸಾವಿರ ರೂ. ಗಳ ಚೆಕ್ ಒಂದನ್ನು ಪರಿಹಾರಧನವಾಗಿ ಯೋಧನ ತಾಯಿ ಶ್ರೀಮತಿ ಸಂಗವ್ವ ಹೆಬ್ಬಳ್ಳಿ ಅವರಿಗೆ ನೀಡಿದರು. ದುಡಿಯುತ್ತಿದ್ದ ಮಗನನ್ನು ಕಳೆದುಕೊಂಡ ಆ ಕುಟುಂಬಕ್ಕೆ ಸಾಂತ್ವನ ಹೇಳಿದ ಜಿಲ್ಲಾಧಿಕಾರಿಗಳು, ಆ ಕುಟುಂಬದ ಕ್ಷೇಮಕ್ಕೆ ಎಲ್ಲ ವಿಧದ ನೆರವು ಸಹಕಾರಗಳನ್ನೂ ನೀಡುವುದಾಗಿ ಭರವಸೆಯಿತ್ತರು.

ಮಗನು ಸೈನ್ಯಕ್ಕೆ ಸೇರಿದನೆಂಬ ಸುದ್ದಿ ತಿಳಿದಾಗ ತಾಯಿ ಶ್ರೀಮತಿ ಸಂಗವ್ವ

ದುಃಖಪಟ್ಟಿದ್ದರು. ಸೈನ್ಯಕ್ಕೆ ಸೇರಿದ ಮಗ ಮಡಿದನೆಂಬ ಸುದ್ದಿ ತಿಳಿಯಿತು. ತಾಯ್ಕರುಳು ಕರಗಿ ಕಣ್ಣೀರು ಕೋಡಿಯಾಗಿ ಹರಿಯಿತು. ಆದರೂ ತಮಗೆ ತಾವೇ "ಹಡೆದ ಮಗ ಇಲದ್ದಾಂಗ ಸಂಕಟಾಗ್ತದ. ಏನಾದ್ರ ಆಗಲೇಳಿ, ನನ್ನ ಮಗ ದೇಶಕ್ಕಾಗಿ ಪ್ರಾಣ ಬಿಟ್ಟಾನ. ಅದಕ ಈಟ ಸಮಾಧಾನ ತಂದ್ಕೊಂಡೀನಿ" ಎಂದು ಸಮಾಧಾನಪಟ್ಟುಕೊಂಡು ಧೈರ್ಯತಂದುಕೊಂಡರು.

ತಾಯಿ ಸಂಗವ್ವ ಹೆಬ್ಬಳ್ಳಿ ಅವರು ಸಭೆಯಲ್ಲಿ ಮಗನ ಬಗ್ಗೆ ಒಂದೆರಡು ಮಾತಾನಾಡಲು ಹೊರಟಾಗ ಧ್ವನಿ ಗದ್ಗದಿತವಾಯಿತು. ಅಭಿಮಾನ ತುಂಬಿದ ಕಣ್ಣಹನಿಗಳು ಕೆನ್ನೆಯ ಮೇಲೆ ಹರಿದು ನಿಂತಿತು. ಆ ಹೃದಯಸ್ಪರ್ಶಿ ಸನ್ನಿವೇಶದಲ್ಲಿ ಸಭಿಕರೆಲ್ಲ ಭಾವಪರವಶರಾದರು. ತಮ್ಮೂರಿನ ಅಮರ ಯೋಧ ಸಿದ್ದಪ್ಪನಿಗೆ ಎಲ್ಲರೂ ಶ್ರದ್ಧಾಂಜಲಿಯನ್ನರ್ಪಿಸಿದರು.

ಹುತಾತ್ಮ ಜಯಶೀಲನ್

ಇತ್ತೀಚಿನ ಭಾರತ-ಪಾಕ್ ಸಮರದಲ್ಲಿ ಪ್ರಾಣಾರ್ಪಣೆ ಮಾಡಿದವರಲ್ಲಿ ಜಯಶೀಲನ್‌ರವರೂ ಒಬ್ಬರು. ಇವರು ಕೋಲಾರ ಜಿಲ್ಲೆಯ ಉರಿಗಾಂನಲ್ಲಿ ೧೯೪೩ರ ಸೆಪ್ಟೆಂಬರ್ ೭ರಂದು ಜನಿಸಿದರು. ಕೆ.ಜಿ.ಎಫ್. ಸರ್ಕಾರಿ ವಿದ್ಯುತ್ ಕಾಲೋನಿಯ ಶಾಲೆಯಲ್ಲಿ ಏಳನೆಯ ತರಗತಿಯವರೆಗೂ ಇವರ ವಿದ್ಯಾಭ್ಯಾಸ ನಡೆಯಿತು.

ಇವರು ೧೯೬೨ರ ಫೆಬ್ರವರಿ ೭ರಂದು ಸೈನ್ಯಕ್ಕೆ ಸೇರಿದರು. ಮೊನ್ನಿನ ಸಮರದಲ್ಲಿ ಭಾಗವಹಿಸಿದ್ದ ಇವರು ೧೯೭೧ರ ಡಿಸೆಂಬರ್ ಹತ್ತರಂದು ನಿಧನರಾದರು. ಇವರ ತಂದೆ ಮೊದಲೇ ತೀರಿಹೋಗಿದ್ದುದರಿಂದ ಕುಟುಂಬಕ್ಕೆ ಇವರೇ ಆಧಾರವಾಗಿದ್ದರು. ಇವರೂ ಇಲ್ಲವಾಗಿ ಅನಾಥವಾದ ಇವರ ಕುಟುಂಬಕ್ಕೆ ಸರ್ಕಾರದವರು ಪರಿಹಾರಧನವಾಗಿ ಐದುಸಾವಿರ ರೂ. ಗಳನ್ನು ನೀಡಿದ್ದಾರೆ.

ಹುತಾತ್ಮ ಸಿಪಾಯಿ ಬೆಂಗಳೂರು ವೆಂಕಟ

ಇತ್ತೀಚಿನ ಭಾರತ-ಪಾಕ್ ಸಮರದಲ್ಲಿ ಭಾಗವಹಿಸಿ ಮಡಿದ ಸಿಪಾಯಿ ವೆಂಕಟ ಅವರು ಬೆಂಗಳೂರಿನವರು. ಶ್ರೀ ವೆಂಕಟ ಅವರ ಅಕಾಲನಿಧನದಿಂದಾಗಿ ಸರ್ಕಾರವು ಅವರ ಕುಟುಂಬಕ್ಕೆ ಪರಿಹಾರಧನವನ್ನು ಮಂಜೂರುಮಾಡಿತು. ಆ ಪರಿಹಾರಧನವಾದ ಐದುಸಾವಿರ ರೂ. ಗಳ ಚೆಕ್ ಒಂದನ್ನು ಬೆಂಗಳೂರು ಜಿಲ್ಲಾಧಿಕಾರಿ ಶ್ರೀ ಅಹಮದ್ ಸಿದ್ದಿಕಿ ಅವರು ವೆಂಕಟ ಅವರ ತಂದೆಗೆ ೧೯೭೧ರ ಡಿಸೆಂಬರ್ ೩೦ರಂದು ಒಪ್ಪಿಸಿದರು.

ವೆಂಕಟ ಅವರ ಅಕಾಲಮರಣಕ್ಕಾಗಿ ರಾಜ್ಯಪಾಲರು ಸಂತಾಪ ವ್ಯಕ್ತಪಡಿಸಿ, ಶ್ರೀ ವೆಂಕಟ ಅವರ ನಿಧನದಿಂದ ಅವರ ಕುಟುಂಬಕ್ಕೆ ಭರಿಸಲಾಗದ ನಷ್ಟವಾಗಿ ದೆಯಾದರೂ ದೇಶದ ಸ್ವಾತಂತ್ರ್ಯರಕ್ಷಣೆಗೆ ಪ್ರಾಣಾರ್ಪಣೆ ಮಾಡಿದ ಈ ವೀರನ ತ್ಯಾಗವು ಹೆಮ್ಮೆಯ ವಿಷಯವಾಗಿದೆಯೆಂದು ತಿಳಿಸಿರುವರು.

●

ಹುತಾತ್ಮ ಪುಟ್ಟಮಾದೇಗೌಡ

ಪುಟ್ಟಮಾದೇಗೌಡರವರು ಬೆಂಗಳೂರು ಜಿಲ್ಲೆಯ ಕನಕಪುರ ತಾಲ್ಲೂಕಿನ ಕಂಪಲನಾಥಗ್ರಾಮಕ್ಕೆ ಸೇರಿದವರು. ಇವರು ಗ್ರೆನೇಡರ್ ವೃತ್ತಿಯಲ್ಲಿದ್ದು ಸೇವೆ ಸಲ್ಲಿಸುತ್ತಿದ್ದರು. ಇತ್ತೀಚಿನ ಸಮರದಲ್ಲಿ ಇವರು ಶತ್ರುದಾಳಿಗೊಳಗಾಗಿ ಮರಣವನ್ನಪ್ಪಿದರು.

ಸರ್ಕಾರವು ಪರಿಹಾರಧನರೂಪವಾಗಿ ಐದುಸಾವಿರ ರೂ. ಗಳನ್ನು ಪುಟ್ಟ ಮಾದೇಗೌಡರ ಕುಟುಂಬಕ್ಕೆ ಮಂಜೂರುಮಾಡಿದೆ. ಈ ಮೊಬಲಗಿನ ಚೆಕ್ ಒಂದನ್ನು ಬೆಂಗಳೂರು ಜಿಲ್ಲಾಧಿಕಾರಿ ಶ್ರೀ ಅಹಮದ್ ಸಿದ್ದಿಕಿಯವರು ದಿವಂಗತರ ತಾಯಿಯವರಾದ ಶ್ರೀಮತಿ ದೇವಮ್ಮ ಅವರಿಗೆ ನೀಡಿದರು. ಜೊತೆಗೆ ರಾಜ್ಯಪಾಲರು ಸಂತಾಪ ಸೂಚಿಸಿ ಬರೆದಿದ್ದ ಪತ್ರವನ್ನೂ ಒಪ್ಪಿಸಿದರು.

●

ಹುತಾತ್ಮ ಕಲ್ಲಪ್ಪ ಗುರಪ್ಪ ಪೂಜಾರಿ

ಇವರು ಬಿಜಾಪುರದ ತಾಲ್ಲೂಕಿನ ಕರ್ಜೋಳ್ (Karjol)ಗ್ರಾಮದವರು. ೧೯೪೮ರ ಮಾರ್ಚ್ ಒಂದರಂದು ಇವರು ಜನಿಸಿದರು. ತಮ್ಮ ಇಪ್ಪತ್ತನೆಯ ವಯಸ್ಸಿನಲ್ಲಿ ಇವರು ಸೈನಿಕ ವೃತ್ತಿಗೆ ಸೇರಿದರು. ಭಾರತ-ಪಾಕ್ ಯುದ್ಧದಲ್ಲಿ ಹೋರಾಡುತ್ತಿದ್ದ ಇವರು ೧೯೭೧ರ ಡಿಸೆಂಬರ್ ೬ರಂದು ಶತ್ರುದಾಳಿಗೆ ಸಿಕ್ಕಿ ವೀರ ಮರಣವನ್ನಪ್ಪಿದರು. ಇವರು ತಂದೆ, ತಾಯಿ, ಸಹೋದರ ಸಹೋದರಿಯರನ್ನಗಲಿ ಹೋಗಿರುವರು.

ಹುತಾತ್ಮ ಲಿಂಬಪ್ಪ ದಾಮುಲೆ ಲಮಾನೆ

ಇವರು ಬಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲ್ಲೂಕಿನ ಮುಲ್ವಾಡ್ ಗ್ರಾಮದವರು. ೧೯೪೪ರ ಅಕ್ಟೋಬರ್ ೩ರಂದು ಇವರು ಜನಿಸಿದರು. ಇವರ ವಿದ್ಯಾಭ್ಯಾಸ ಕೇವಲ ಮೂರನೆಯ ತರಗತಿಯವರೆಗೆ ಮಾತ್ರ ಸಾಗಿತು. ಇವರು ತಮ್ಮ ಹತ್ತೊಂಭತ್ತನೆಯ ವಯಸ್ಸಿನಲ್ಲಿ ಸೈನಿಕವೃತ್ತಿಗೆ ಸೇರಿದರು. ಇತ್ತೀಚಿನ ಸಮರದಲ್ಲಿ ಹೋರಾಡುತ್ತಿದ್ದ ಇವರು ೧೯೭೧ರ ನವೆಂಬರ್ ೨೨ರಂದು ಮರಣಹೊಂದಿದರು. ಇವರ ತಂದೆತಾಯಿಗಳಿಗೆ ಇವರ ಅಗಲಿಕೆ ಭರಿಸಲಾಗದ ನಷ್ಟ

ವಾಗಿದೆ. ಮೈಸೂರು ರಾಜ್ಯಪಾಲರ ಪರವಾಗಿ ಕರ್ನಲ್ ಎ. ಎಂ. ಕಡಕೋಳ್‌ರವರು ಸಂತಾಪಗಳನ್ನು ಸೂಚಿಸುತ್ತಾ ಈ ಹುತಾತ್ಮನ ತಂದೆತಾಯಿಗಳಿಗೆ ಐದುಸಾವಿರ ರೂ. ಗಳ ಒಂದು ಚೆಕ್ಕನ್ನು ಕೊಟ್ಟರು.

●

ಹುತಾತ್ಮ ಬಸವಯ್ಯ ಮುರಿಗೆಯ್ಯ ಹಿರೇಮಠ

ಇವರು ಬಿಜಾಪುರ ಜಿಲ್ಲೆಯ ಹಾಲಹಳ್ಳಿ ಗ್ರಾಮದವರು. ಶ್ರೀಮುರಿಗೆಯ್ಯ

ಮತ್ತು ಶ್ರೀಮತಿ ಸಿದ್ದವ್ವ ದಂಪತಿಗಳ ಪುತ್ರರು. ೧೯೫೦ರ ಜೂನ್ ಒಂದರಂದು ಇವರು ಜನಿಸಿದರು. ಇವರು ತಮ್ಮ ಹದಿನೆಂಟನೆಯ ವಯಸ್ಸಿನಲ್ಲಿ ಸೈನಿಕ ವೃತ್ತಿಗೆ ಸೇರಿದರು. ಮೊನ್ನಿನ ಭಾರತ-ಪಾಕ್ ಯುದ್ಧದಲ್ಲಿ ಇವರು ಭಾಗವಹಿಸಿ ಹೋರಾಡುತ್ತಲೇ ೧೯೭೧ರ ಡಿಸೆಂಬರ್ ೫ರಂದು ನಿಧನರಾದರು. ಇವರು ತಂದೆ ತಾಯಿಗಳನ್ನಲ್ಲದೆ ನಾಲ್ಕು ಜನ ಸಹೋದರರನ್ನೂ ಅಗಲಿ ಹೋಗಿರುವರು.

●

ಹುತಾತ್ಮ ಅನ್ವರ್ ಪಾಷಾ

ಇತ್ತೀಚಿನ ಭಾರತ–ಪಾಕ್ ಯುದ್ಧದಲ್ಲಿ ಪಶ್ಚಿಮ ವಲಯದ ಅಮೃತಸರ ವಿಭಾಗದಲ್ಲಿ ಡಿಸೆಂಬರ್ ಹನ್ನೊಂಡರಂದು ಮಡಿದು ಹುತಾತ್ಮರಾದ ಅನ್ವರ್‌ಪಾಷಾ

ರವರು ಕೋಲಾರ ಜಿಲ್ಲೆಯ ಗುಡಿಬಂಡೆ ಗ್ರಾಮಕ್ಕೆ ಸೇರಿದವರು. ಇವರು ಭಾರತದ ಸೇನೆಯಲ್ಲಿ ಗನ್ನರ್ ಆಗಿ ಕಳೆದ ಆರು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದರು.

೧೯೭೨ರ ಜನವರಿ ೨೭ರಂದು ಕೋಲಾರದ ಜಿಲ್ಲಾಧಿಕಾರಿಗಳಾದ ಶ್ರೀ ಆರ್. ಶಂಕರಪ್ಪನವರು ಗುಡಿಬಂಡೆಗೆ ಹೋಗಿ ಸರ್ಕಾರದ ಪರವಾಗಿ ಐದುಸಾವಿರ ರೂ.ಗಳ ಚೆಕ್ ಒಂದನ್ನು ಮೃತರ ತಂದೆ ಅಬ್ದುಲ್‌ಸುಭಾನ್‌ರವರಿಗೆ ಕೊಟ್ಟು, "ನಿಮ್ಮ ಪುತ್ರರು ಶತ್ರುಗಳನ್ನೆದುರಿಸಿ ಹೋರಾಡಿ ರಾಷ್ಟ್ರಕ್ಕಾಗಿ ಪ್ರಾಣಾರ್ಪಣೆ ಮಾಡಿದ್ದಾರೆ. ಸರ್ಕಾರವು ತನ್ನಿಂದ ಸಾಧ್ಯವಾದ ಎಲ್ಲ ನೆರವನ್ನೂ ನೀಡಲು ಸಿದ್ಧವಾಗಿದೆ." ಎಂದು ತಿಳಿಸಿ ಸಂತಾಪವನ್ನು ವ್ಯಕ್ತಪಡಿಸಿದರಲ್ಲದೆ ರಾಜ್ಯಪಾಲ ಶ್ರೀಧರ್ಮವೀರರು ಕಳಿಸಿದ್ದ ಸಂತಾಪ ಸೂಚಕ ಸಂದೇಶವನ್ನು ಚೆಕ್‌ನೊಂದಿಗೆ ಕೊಟ್ಟರು.

ಉನ್ನತ ಸೇನಾಧಿಕಾರಿಗಳಲ್ಲದೆ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರಿಂದಲೂ ಸಂತಾಪ ಸೂಚಕ ಪತ್ರವು ಬಂದಿತ್ತು.

●

ಹುತಾತ್ಮ ಎಸ್. ಆರ್. ಪಳಂಗಪ್ಪ

"ವೀರರಾಜಪೇಟೆ ತಾಲ್ಲೂಕಿಗೆ ಸೇರಿದ ಚೇರಂಗಾಳ ಗ್ರಾಮದ ರಾಮಪ್ಪನವರ ಮನೆ 'ಯೋಧರ ಮನೆ' ಎಂದರೂ ತಪ್ಪಲ್ಲ. ಅದು ಯೋಧರ ಮನೆ ಮಾತ್ರವಲ್ಲ, ಯೋಧರ ಮನೆತನವೂ ಆಗಿದೆ. ೧೯೧೪ರಿಂದ ಹಿಡಿದು ೧೯೭೨ರವರೆಗೂ ಆ ಮನೆತನದ ಸುಮಾರು ಎಪ್ಪತ್ತು ಮಂದಿ ಯೋಧರು ಹಲವಾರು ಸಮರಗಳಲ್ಲಿ ಭಾಗ

ವಹಿಸಿದ್ದಾರೆ.” ಹೀಗೆ ಅಭಿಪ್ರಾಯಪಟ್ಟವರು ಕೊಡಗಿನ ಜಿಲ್ಲಾಧಿಕಾರಿಗಳಾದ ಶ್ರೀ ಟಿ. ಜೆ. ರಾಮಕೃಷ್ಣರವರು.

ಈಗಲೂ ಸಹ ಈ ಮನೆತನಕ್ಕೆ ಸೇರಿದ ಎಂಟುಮಂದಿ ಯೋಧರು ಯುದ್ಧರಂಗದಲ್ಲಿ ಸೇವೆಸಲ್ಲಿಸುತ್ತಿರುವರು.

ನಂ. ೬. ಫೀಲ್ಡ್‌ರೆಜಿಮೆಂಟ್‌ಗೆ ಸೇರಿದ್ದ ಗನ್ನರ್ ಎಸ್. ಆರ್. ಪಳಂಗಪ್ಪನವರು ಇತ್ತೀಚಿನ ಭಾರತ-ಪಾಕ್ ಯುದ್ಧದಲ್ಲಿ ಭಾಗವಹಿಸಿ, ೧೯೭೧ ಡಿಸೆಂಬರ್ ೧೯ರಂದು ವೀರ ಮರಣವನ್ನಪ್ಪಿದರು. ಇದಕ್ಕಾಗಿ ಮೃತರ ತಂದೆ ಶ್ರೀ ರಾಮಪ್ಪನವರಿಗೆ ಪರಿಹಾರಧನವಾದ ಎರಡು ಸಾವಿರ ರೂ.ಗಳನ್ನು ಕೊಡುವುದಕ್ಕಾಗಿ ಜಿಲ್ಲಾಧಿಕಾರಿಗಳು ಚೇರಂಗಾಳ ಗ್ರಾಮಕ್ಕೆ ದಯಮಾಡಿಸಿದ್ದರು.

ಇಷ್ಟೇ ಅಲ್ಲದೆ ಮೃತಯೋಧರ ಪತ್ನಿ ಶ್ರೀಮತಿ ಪೊನ್ನಮ್ಮನವರಿಗೆ ಒಂದು ಹೊಲಿಗೆ ಯಂತ್ರವನ್ನು ಕೊಡಿಸುವುದಾಗಿ ಆಶ್ವಾಸನೆ ನೀಡಿರುವರು. ಅವರ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸದ ಸೌಲಭ್ಯ ಕಲ್ಪಿಸಿಕೊಡುವುದಾಗಿಯೂ ವಾಗ್ದಾನವಿತ್ತಿರುವರು.

ಪಳಂಗಪ್ಪನವರು ಸ್ವದೇಶಕ್ಕಾಗಿ ದೇಹತ್ಯಾಗ ಮಾಡಿರುವರು. ಅವರ ಅಮೂಲ್ಯಸೇವೆಯನ್ನು ಸ್ಮರಿಸುವುದು ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯವಾಗಿದೆ.

ಹುತಾತ್ಮ ಸಮರಯೋಧ ಶರಣಪ್ಪ

ಭಾರತ-ಪಾಕ್ ಯುದ್ಧದಲ್ಲಿ ಅನೇಕಮಂದಿ ವೀರಯೋಧರು ಸಮರಾಂಗಣದಲ್ಲಿ ವೀರಮರಣವನ್ನು ಪಡೆದರು. ಹಳಿಯಾಂಬರ ಗ್ರಾಮದ ವೀರಯೋಧ ಶರಣಪ್ಪನವರೂ ಇವರಲ್ಲಿ ಒಬ್ಬರು. ಶತ್ರು ದಾಳಿಗೆ ತುತ್ತಾದ ಇವರು ತಮ್ಮ ಎದೆಗಾರಿಕೆಗೆ ಹೆಸರನ್ನು ಪಡೆದಿದ್ದರು. ಆದರೆ ಶತ್ರುಗಳು ಮೋಸದ ಬಲೆಯನ್ನೊಡ್ಡಿ ಕೃತ್ರಿಮ ಹೂಡಿದುದರಿಂದ ಇವರು ಸಾವನ್ನಪ್ಪಬೇಕಾಯಿತು. ಇವರು ೨೬ ಮದ್ರಾಸ್ ರೆಜಿಮೆಂಟಿಗೆ ಸೇರಿದವರು. ಬೀದರ್ ಜಿಲ್ಲೆಯ ಡೆಪ್ಯುಟಿ ಕಮಿಷನರ್ ಶ್ರೀ ರಾಜಶೇಖರಪ್ಪನವರು ಪೋಲೀಸ್ ಸೂಪರಿಂಟೆಂಡೆಂಟ್ ಶ್ರೀ ಕೋದಂಡರಾಮಯ್ಯನವರೊಡನೆ ಹಳಿಯಾಂಬರ ಗ್ರಾಮಕ್ಕೆ ಹೋಗಿ ಮಡಿದ ಯೋಧರ ತಂದೆ ಶ್ರೀ ತುಕಾರಾಂರವರಿಗೆ ಪರಿಹಾರಧನವಾಗಿ ಐದು ಸಾವಿರ ರೂ.ಗಳ ಚೆಕ್ ಒಂದನ್ನು ಕೊಟ್ಟಿರುವರು.

●

ಹುತಾತ್ಮ ಜವಾನ್ ಮಲ್ಲಪ್ಪ ಮಾದರ

ಬಿಜಾಪುರ ಜಿಲ್ಲೆಯ ಬಾಗೇವಾಡಿ ತಾಲ್ಲೂಕಿನ ಮಲ್ಘಾನ್ ಗ್ರಾಮದ ವೀರಯೋಧ ಮಲ್ಲಪ್ಪಮಾದರ ಅವರು ಇತ್ತೀಚಿನ ಭಾರತ-ಪಾಕ್ ಸಮರದಲ್ಲಿ ಭಾಗವಹಿಸಿ, ೧೯೭೧ರ ಡಿಸೆಂಬರ್ ಹತ್ತರಂದು ವೀರಮರಣವನ್ನಪ್ಪಿದರು. ಇವರು ಜನಿಸಿದುದು ೧೯೫೦ರ ಆಗಸ್ಟ್ ಒಂದರಂದು. ಇವರು ಕೇವಲ ಐದನೆಯ ತರಗತಿಯವರೆಗೆ ಮಾತ್ರ ಓದಿದ್ದರು. ಇವರು ಸೈನಿಕ ವೃತ್ತಿಗೆ ಸೇರಿದುದು. ೧೯೬೭ರ ಜೂನ್ ಆರರಂದು. ಬಿಜಾಪುರದ ಜಿಲ್ಲಾಧಿಕಾರಿಗಳಾದ ಶ್ರೀ ಎಸ್. ಒಬೇದುಲ್ಲಾರವರು ಮಲ್ಲಪ್ಪ ಮಾದರವರ ಪತ್ನಿ ಶ್ರೀಮತಿ ಶಿವಗಂಗೂಬಾಯಿಯವರಿಗೆ ಐದು ಸಾವಿರ ರೂ.ಗಳ ಚೆಕ್ ಒಂದನ್ನೂ ರಾಜ್ಯಪಾಲ ಶ್ರೀ ಧರ್ಮವೀರರ ಸಂತಾಪಸೂಚಕ ಸಂದೇಶವನ್ನೂ ನೀಡಿದರು.

●

ಎಂ. ಎಸ್. ಪೊನ್ನಣ್ಣ

ಭಾರತ-ಪಾಕ್ ಸಮರದಲ್ಲಿ ಜಯಗಳಿಸಿದರೂ ಅದು ಎಷ್ಟೋ ಮಂದಿ ಸೈನಿಕರನ್ನು—ಉತ್ಸಾಹಿಗಳಾದ ತರುಣರನ್ನೂ ಕಳೆದುಕೊಂಡಿತು. ಅವರಲ್ಲಿ ಮೈಸೂರು ರಾಜ್ಯದ ಕೊಡಗು ಜಿಲ್ಲೆಯ CFN ಎಂ. ಎಸ್. ಪೊನ್ನಣ್ಣನವರೂ ಒಬ್ಬರು.



ಶ್ರೀ ಪೊನ್ನಣ್ಣ ಜನಿಸಿದ್ದು ೨೮-೭-೧೯೪೮ರಂದು (ಬುಧವಾರ). ಅರವತ್ತೊಕ್ಕಲು ಗ್ರಾಮದ ಮುಕ್ಕಾಟೀರ ಜಿ. ಸುಬ್ಬಯ್ಯ ಮತ್ತು ಬೊಳ್ಳಮ್ಮ ಅವರು ಮಾತಾಪಿತೃಗಳು. ಹಿರಿಯ ಮಗನಾದ ಪೊನ್ನಣ್ಣ ಸ್ವಭಾವತಃ ಚಟುವಟಿಕೆ ಪ್ರವೃತ್ತಿಯವರು, ಧೈರ್ಯಶಾಲಿಯೂ ಹೌದು. ಪ್ರಾಥಮಿಕ ವಿದ್ಯಾಭ್ಯಾಸವನ್ನು ಕುಂದಾ ಗೋಣಿಕೊಪ್ಪಲದ ಶಾಲೆಯಲ್ಲಿಯೂ ಮಾಧ್ಯಮಿಕ ವಿದ್ಯಾಭ್ಯಾಸವನ್ನು ಪೊನ್ನಂಪೇಟೆ ಶಾಲೆಯಲ್ಲಿಯೂ ಮುಗಿಸಿ ಗೋಣಿಕೊಪ್ಪಲದ ಪ್ರೌಢಶಾಲೆಯಲ್ಲಿ ಎಸ್.ಎಸ್.ಎಲ್.ಸಿ. ಮುಗಿಸಿದರು. ಸಣ್ಣವರಿದ್ದಾಗಿನಿಂದಲೂ ಸೈನ್ಯಕ್ಕೆ ಸೇರಬೇಕೆಂಬ ಅಭಿಲಾಷೆಯಿತ್ತು. ಎಸ್.ಎಸ್.ಎಲ್.ಸಿ. ಮುಗಿದ ನಂತರ ಮುಂದೇನು ಎಂದು ಚಿಂತಿಸುತ್ತಿದ್ದಾಗ ಇವರ ಸೋದರಮಾವ ನಿವೃತ್ತ ಕರ್ನಲ್ ಚಿರಿಯ ಪಂಡ ಎನ್. ಮಾದಯ್ಯನವರು ಇವರ ನೆರವಿಗೆ ಬಂದರು. ಹೀಗಾಗಿ ೧೯೬೮ರಲ್ಲಿ ಪೊನ್ನಣ್ಣ ಭೂ ಸೈನ್ಯಕ್ಕೆ ಸೇರಿದರು.

ಸಿಕಂದರಾಬಾದ್‌ನಲ್ಲಿ ೨ವರ್ಷಗಳ ಟ್ರೈನಿಂಗ್ ಮುಗಿಸಿದ ಮೇಲೆ ಇವರನ್ನು ರ್‍ಯಾಂಕ್ C.F.N. No. 7110831 ಪದವಿಗೆ ಏರಿಸಲಾಯಿತು. ಅಲ್ಲಿಯೂ ಇವರು ಅಧಿಕಾರಿಗಳ ಪ್ರೀತಿಗೆ ಪಾತ್ರರಾಗಿ ಒಳ್ಳೆಯ ಹೆಸರು ಪಡೆದರು. ೧೯೭೧ರ ಮೇ ತಿಂಗಳಿನಲ್ಲಿ I E.M.E.B.N. Work shopಗೆ ಕಳುಹಿಸಲ್ಪಟ್ಟರು. ಡಿಸೆಂಬರ್‌ನಲ್ಲಿ ಬಂಗ್ಲಾದೇಶಕ್ಕೆ ಹೋದರು.

"ಭಯಂಕರವಾಗಿ ಯುದ್ಧ ನಡೆಯುತ್ತಿದೆ; ಚಿಂತಿಸಬೇಡಿ ; ದೇವರಿದ್ದಾನೆ" ಎಂದು ಅವರು ಮನೆಗೆ ಬರೆದ ಪತ್ರವೇ ಕಡೆಯ ಪತ್ರವಾಯಿತು. ಮುದ್ದು ಮಗನಿಗೆ ಹಿತವನ್ನೇ ಹಾರೈಸುತ್ತಿದ್ದ ತಾಯಿ ತಂದೆಗಳಿಗೆ ಆ ಮಗನನ್ನು ಮತ್ತೆ ನೋಡುವ ಸೌಭಾಗ್ಯ ಒದಗಲಿಲ್ಲ. "ತೀವ್ರವಾಗಿ ಗಾಯಗೊಂಡು ಆಸ್ಪತ್ರೆಯಲ್ಲಿದ್ದಾರೆ" ಎಂಬ

ತಂತಿ ಬಂದು ಹೆತ್ತವರಿಗೆ ಆಘಾತವನ್ನುಂಟು ಮಾಡಿತು. ಏನೂ ಮಾಡಲೂ ತೋಚದೆ ದಿಕ್ಕುಗೆಟ್ಟು ಕುಳಿತಿದ್ದ ತಂದೆತಾಯಿಗಳಿಗೆ ೨೫-೧೨-೭೧ರಂದು ಬಂದ ತಂತಿ ಮತ್ತಷ್ಟು ದಿಗ್ಭ್ರಮೆ ಹಿಡಿಸಿತು. ಆಸ್ಪತ್ರೆಯಲ್ಲೇ ಪೊನ್ನಣ್ಣ ಮೃತಪಟ್ಟಿದ್ದರು. ಹಿರಿಯ ಮಗನನ್ನು ಕಳೆದುಕೊಂಡ ಅವರ ದುಃಖ ಅಪಾರವಾದದ್ದು. ಈ ಜೀವನ ಚರಿತ್ರೆಯನ್ನು ಅವರ ತಾಯಿ ಬೊಳ್ಳಮ್ಮನವರು ಬರೆದು ಕಳುಹಿಸುವಾಗ—"ದುಃಖ ಉಕ್ಕಿಬರುತ್ತದೆ. ಬರೆಯಲು ಕೈಗಳೇ ಬರುವುದಿಲ್ಲ" ಎಂದಿದ್ದಾರೆ. ಈ ದುಃಖದಲ್ಲಿ ನಾವೂ ಭಾಗಿಗಳು.

ದಯಾಮಯನಾದ ಭಗವಂತನು ಮೃತರ ಆತ್ಮಕ್ಕೆ ಶಾಂತಿಯನ್ನೀಯಲಿ.

ಹುತಾತ್ಮ ಸದಾಶಿವ ಬಸಲಿಂಗ ಪಡದಾಳೆ

ಹುತಾತ್ಮ ಸದಾಶಿವ ಬಸಲಿಂಗ ಪಡದಾಳೆಯವರು ಬೆಳಗಾಂ ಜಿಲ್ಲೆಯ ಚಿಕ್ಕೋಡಿ ತಾಣದ ಕಾಡುಪುರ ಗ್ರಾಮಕ್ಕೆ ಸೇರಿದವರು. ಆ ಗ್ರಾಮದ ನಿವಾಸಿಗಳಾದ ಶ್ರೀ ಬಸಲಿಂಗಪ್ಪ ಮತ್ತು ಗೌರವ್ವ ದಂಪತಿಗಳ ಪುತ್ರರು. ಇವರು ೧೯೪೪ ಡಿಸೆಂಬರ್ ೨೮ರಂದು ಜನಿಸಿದರು. ಹುಟ್ಟೂರಿನಲ್ಲಿಯೇ ವಿದ್ಯಾಭ್ಯಾಸ ಮಾಡಿದ ಇವರು ೧೯೬೫ರ ಡಿಸೆಂಬರ್ ೨೮ರಂದು ಸೇನೆಗೆ ಸೇರಿದರು. ಮದ್ರಾಸ್ ರೆಜಿಮೆಂಟ್‌ನಲ್ಲಿ ನೇಮಕಗೊಂಡ ಇವರು ನೇಫಾದಲ್ಲಿಯೂ, 'ಕ್ಯಾಕ್ಟಸ್‌ಲಿಲಿ' ವಲಯದಲ್ಲಿಯೂ ಹೋರಾಡಿದ್ದರು. ಇವರಿಗೆ ಹತ್ತು ಮೆಡಲ್‌ಗಳೂ ಬಂದಿದ್ದುವು. ಮೊನ್ನಿನ ಸಮರದಲ್ಲಿ ಭಾಗವಹಿಸಿ ಹೋರಾಡುತ್ತಿದ್ದ ಇವರು ಶತ್ರುಗಳ ಷೆಲ್‌ದಾಳಿಗೆ ಸಿಕ್ಕಿ ಪ್ರಾಣಾರ್ಪಣೆ ಮಾಡಿದರು. ಇವರ ಅಣ್ಣಂದಿರಾದ ಸಿಪಾಯಿ ಶಂಕರಪಡದಾಳೆಯವರೂ ಸಹ ಸೇನೆ

ಯಲ್ಲಿಯೇ ಸೇವೆಸಲ್ಲಿಸುತ್ತಿದ್ದಾರೆ. ದೇಶಕ್ಕಾಗಿ ಹೋರಾಡಿ ಮಡಿದ ಸದಾಶಿವ ಪಡದಾಳೆಯವರ ಸೇವೆ ಸ್ತುತ್ಯರ್ಹವಾದುದು.

●

ಹುತಾತ್ಮ ಬಲ್ಯಂಡ ಕಾವೇರಪ್ಪ

ಕೊಡಗು ಜಿಲ್ಲೆಗೆ ಸೇರಿದ ವೀರರಾಜಪೇಟೆ ತಾಲ್ಲೂಕಿನ ಕದಂಗ ಮರೂರು ಗ್ರಾಮದ ಪಟ್ಟೇದಾರ್ ಬಿದ್ದಯ್ಯನವರ ಚಿಕ್ಕತಂದೆ ಸೋಣ್ಣಪ್ಪನವರ ದ್ವಿತೀಯ ಪುತ್ರರೇ ಬಲ್ಯಂಡ ಕಾವೇರಪ್ಪನವರು. ಎಸ್.ಎಸ್.ಎಲ್.ಸಿ.ಯವರೆಗೆ ವಿದ್ಯಾಭ್ಯಾಸ ಮಾಡಿ ಅನಂತರ ಕಾವೇರಪ್ಪನವರು ಸೈನ್ಯಕ್ಕೆ ಸೇರಿದರು.

ಈ ಬಲ್ಯಂಡ ಕುಟುಂಬದವರು ಹಿಂದಿನಿಂದಲೂ ಸೈನ್ಯಕ್ಕೆ ಸೇರಿ ಖ್ಯಾತಿ ಹೊಂದಿದ್ದಾರೆ. ಎರಡನೆಯ ಮಹಾ ಯುದ್ಧದಲ್ಲಿ ಶ್ರೀ ಬಲ್ಯಂಡ ಮುತ್ತಣ್ಣನವರು ಸಾಹಸದಿಂದ ಹೋರಾಡಿದ್ದಾರೆ. ಶ್ರೀ ಬಿದ್ದಯ್ಯನವರ ಹಿರಿಯ ಮಗ ಶ್ರೀ ಬಿ.ಬಿ. ಅಪ್ಪಚ್ಚು ಅವರು ಸ್ಕ್ವಾಡ್ರನ್ ಲೀಡರ್ ಆಗಿಯೂ, ಎರಡನೆಯ ಮಗ ಶ್ರೀ ಬಿ.ಬಿ. ಪೂವಯ್ಯನವರು ಸೆಂಟ್ರಲ್ ಇಂಡಸ್ಟ್ರಿಯಲ್ ಸೆಕ್ಯೂರಿಟಿ ದಳದಲ್ಲಿ ಅ|| ಕಮ್ಯಾಂಡೆಂಟ್ ಆಗಿಯೂ ಸೇವೆಸಲ್ಲಿಸುತ್ತಿದ್ದಾರೆ.

ಇಂತಹ ಯೋಧರ ಮನೆತನದಲ್ಲಿಯೇ ಜನಿಸಿದ ಕಾವೇರಪ್ಪನವರು ಇತ್ತೀಚಿನ ಭಾರತ-ಪಾಕ್ ಯುದ್ಧದಲ್ಲಿ ಹೋರಾಡಿದರು. ೧೯೬೫ರಲ್ಲಿ ನಡೆದ ಸಮರದಲ್ಲಿಯೂ ಇವರು ಭಾಗವಹಿಸಿ ತಮ್ಮ ಸಾಹಸವನ್ನು ಪ್ರದರ್ಶಿಸಿದ್ದರು. ಮುಂದೆ ಇವರಿಗೆ ಬಡ್ತಿ ದೊರೆತು, ಸುಬೇದಾರ್ ಮೇಜರ್ ಸ್ಥಾನ ದೊರೆಯಿತು. ಟ್ಯಾಂಕುಗಳ ಚಾಲಕರ ಮುಂದಾಳಾಗಿ ಮುಂದೆ ಮುಂದೆ ಇವರು ಸಾಗುತ್ತಿದ್ದಾಗ ಶತ್ರುಗಳ ಷೆಲ್ ದಾಳಿ ಒಂದೇ ಸಮನೆ ನಡೆದೇ ಇತ್ತು. ಆ ದಾಳಿಯನ್ನೂ ಲೆಕ್ಕಿಸದೆ ಇವರು ಮುನ್ನುಗ್ಗಿದರು. ಗಾಯಗೊಂಡ ಸಹೋದ್ಯೋಗಿಗಳನ್ನು ರಕ್ಷಿಸುವ ಕಾರ್ಯದಲ್ಲಿ ನಿರತರಾದರು. ಆದರೆ ಈ ಕಾರ್ಯದಲ್ಲಿ ತೊಡಗಿದ್ದಾಗ ಶತ್ರುಗಳ ಗುಂಡಿನೇಟು ಶ್ರೀ ಕಾವೇರಪ್ಪನವರಿಗೇ ತಗುಲಿತು. ಒಡನೆಯೇ ವೀರಮರಣವನ್ನಪ್ಪಿದರು. ಇದು ನಿಜವಾದ ವೀರಸ್ವರ್ಗ.

ಇವರಿಗೆ ಪತ್ನಿ ಮತ್ತು ಮೂವರು ಗಂಡು ಮಕ್ಕಳಿದ್ದಾರೆ. ಕಾವೇರಪ್ಪನವರಿಗೆ ಹಾಕಿ ಆಟದಲ್ಲಿ ತುಂಬಾ ಆಸಕ್ತಿಯಿತ್ತು. ಇವರ ವೀರಮರಣವನ್ನು ಕೊಂಡಾಡಿರುವ ಇವರ ಹಿರಿಯ ಸೇನಾಧಿಕಾರಿಗಳು ಇವರ ಸೇವೆಯನ್ನು ಮೆಚ್ಚಿಕೊಂಡಿದ್ದಾರೆ. ●

ಹುತಾತ್ಮ ಸಿಪಾಯಿ ಮರಿ

ಸಿಪಾಯಿ ಮರಿಯವರು ಬೆಂಗಳೂರು ಜಿಲ್ಲೆಯ ಕನಕಪುರ ತಾಲ್ಲೂಕಿನ ಚೊಕ್ಕಸಂದ್ರ ಗ್ರಾಮದವರು. ಇತ್ತೀಚಿನ ಭಾರತ-ಪಾಕ್ ಸಮರದಲ್ಲಿ ಇವರು ಹೋರಾಡುತ್ತಿರುವಂತೆಯೇ ಶತ್ರುದಾಳಿಗೆ ಸಿಕ್ಕಿ ವೀರಸ್ವರ್ಗ ಪಡೆದರು. ಮೈಸೂರು ಸರ್ಕಾರದವರು ಪರಿಹಾರಾರ್ಥವಾಗಿ ನೀಡಿದ ಒಂದು ಸಾವಿರ ರೂ.ಗಳ ಚೆಕ್ಕನ್ನು ಬೆಂಗಳೂರು ಜಿಲ್ಲಾಧಿಕಾರಿ ಶ್ರೀ ಅಹಮದ್ ಸಿದ್ದಿಕಿ ಅವರು ೧೯೭೧ರ ಡಿಸೆಂಬರ್ ೩೦ರಂದು ಮೃತರ ತಂದೆಯವರಾದ ಶ್ರೀ ಸಕ್ರೆನಾಯ್ಕ ಅವರಿಗೆ ನೀಡಿದರು.

●

ಮೇಜರ್ ಎಂ. ಎಸ್. ಜಿ. ರಾವ್

'ಮೋಕ್ಷಗುಂಡಂ' ಎಂದೊಡನೆಯೇ ಪ್ರತಿಭಾನ್ವಿತ ಶಿಲ್ಪಿ ಸರ್. ಎಂ. ವಿ. ಯವರ ನೆನಪಾಗುವುದು ಸಹಜ. ಇದೇ ಮನೆತನದಲ್ಲಿಯೇ ಬಂದ ಇನ್ನೊಬ್ಬ ಬಾಲಕ ದೇಶಸೇವೆ ಮಾಡಬೇಕೆಂಬ ಧ್ಯೇಯವನ್ನೇ ಗುರಿಯಾಗಿಟ್ಟು ಕೊಂಡಿದ್ದ. ಸರ್. ಎಂ. ವಿ.ಯವರ ದೇಶಸೇವೆ ಒಂದು ರೀತಿಯಲ್ಲಿ ಸಂದರೆ, ಈತ ಸಲ್ಲಿಸಿದ ದೇಶಸೇವೆ ಮತ್ತೊಂದು ರೀತಿಯದು.

ಶಾಲೆಯಲ್ಲಿದ್ದಾಗಲೇ ಪ್ರತಿಭಾನ್ವಿತ ವಿದ್ಯಾರ್ಥಿಯೆಂದು ಹೆಸರು ಗಳಿಸಿದ ಈತನಿಗೆ ದೆಹಲಿಯಲ್ಲಿ ನಡೆದ ಯುವ ಜನೋತ್ಸವದಲ್ಲಿ ಭಾಗವಹಿಸಿ, ಕೋಲಾಟ, ಕ್ರಿಕೆಟ್ ಮೊದಲಾದ ಕ್ರೀಡೆಗಳಲ್ಲಿ ಪಾಲ್ಗೊಳ್ಳುವ ಅವಕಾಶ ಲಭಿಸಿತು. ಅಂದ ಮಾತ್ರಕ್ಕೆ ಈತ ಓದಿನಲ್ಲಿ ಹಿಂದಾಗಿದ್ದನೆಂದಲ್ಲ. ಪಾಠಪ್ರವಚನದಲ್ಲಿ ಈತನೇ ಶಾಲೆಯಲ್ಲಿ ಮೊದಲಿಗ ನಾಗಿದ್ದುದು. ಬೆಳೆಯುವ ಪೈರು ಮೊಳಕೆಯಲ್ಲಿ ಎಂಬಂತೆ ಈತನಿಗೆ ಬಾಲ್ಯ

ದಿಂದಲೂ ಎನ್.ಸಿ.ಸಿ.ಯಲ್ಲಿ ಅತ್ಯಂತ ಆಸಕ್ತಿ : ಮುಂದೆ ತಾನು ಸೈನ್ಯಕ್ಕೆ ಸೇರಿ ದೇಶಸೇವೆ ಸಲ್ಲಿಸಬೇಕೆಂಬ ಹಿರಿಯಾಸೆ. ಈ ಹಿರಿಯಾಸೆಯೂ ಕೈಗೂಡಿತು. ಈತ ಸೈನ್ಯಕ್ಕೆ ಸೇರಿ, ದೇಶಸೇವೆಯ ಪರಮಾವಧಿಯನ್ನು ತಲುಪಿ, ತನ್ನ ಪ್ರಾಣವನ್ನೇ ಬಲಿಗೊಟ್ಟು ಹುತಾತ್ಮರ ಸಾಲಿನಲ್ಲಿ ಸೇರಿ ಅಮರನಾದ.

ಈತನ ಹೆಸರು ಎಂ. ಎಸ್. ಜಿ. ರಾವ್. ಬೆಂಗಳೂರಿನ ಶ್ರೀ ಎಂ. ಸುಬ್ಬರಾಯಶಾಸ್ತ್ರಿ ಮತ್ತು ಶ್ರೀಮತಿ ಶಾರದಮ್ಮ ದಂಪತಿಗಳ ಪುತ್ರರಿವರು. ಇವರ ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢ ಶಾಲೆಗಳ ಶಿಕ್ಷಣ ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ ನಡೆಯಿತು. ಕಾಲೇಜು ಶಿಕ್ಷಣವನ್ನು ಅದೇ ಕಾಲೇಜಿನಲ್ಲಿಯೇ ಇವರು ಮುಂದುವರಿಸಬಹುದಾಗಿತ್ತು. ಆದರೆ ಆಗ ನ್ಯಾಷನಲ್ ಕಾಲೇಜಿನಲ್ಲಿ ಎನ್.ಸಿ.ಸಿ. ಶಿಕ್ಷಣ ಲಭಿಸುತ್ತಿರಲಿಲ್ಲವಾದ ಕಾರಣ ರಾವ್‌ರವರು ಎನ್. ಸಿ. ಸಿ. ಶಿಕ್ಷಣ ಪಡೆಯಲೇಬೇಕೆಂಬ ಮಹದಾಶೆಯಿಂದ ನ್ಯಾಷನಲ್ ಕಾಲೇಜನ್ನು ಬಿಟ್ಟು ಸೆಂಟ್ರಲ್ ಕಾಲೇಜಿಗೆ ಸೇರಬೇಕಾಯಿತು. ನ್ಯಾಷನಲ್ ಕಾಲೇಜಿನಲ್ಲಿ ಕೇವಲ ಮೂರು ತಿಂಗಳು ಮಾತ್ರ ಇವರು ವ್ಯಾಸಂಗ ಮಾಡಿದರು. ಅನಂತರ ಅದನ್ನು ಬಿಟ್ಟು ಎನ್.ಸಿ.ಸಿ. ಶಿಕ್ಷಣ ಸೌಲಭ್ಯವಿದ್ದ ಸೆಂಟ್ರಲ್ ಕಾಲೇಜಿಗೆ ಸೇರಿದರು.

ಎನ್.ಸಿ.ಸಿ.ಯಲ್ಲಿದ್ದಷ್ಟು ಕಾಲವೂ ಪ್ರಥಮ ಸ್ಥಾನವು ಇವರಿಗೇ ಮೀಸಲಾಗಿರುತ್ತಿತ್ತು. ಅನಂತರ ಅಂಡರ್ ಆಫೀಸರ್ ಆಗಿ ಎನ್. ಸಿ. ಸಿ. ಯ ಎಲ್ಲ ಪರೀಕ್ಷೆಗಳನ್ನೂ ಮುಗಿಸಿಕೊಂಡರು.

ಇವರು ತಮ್ಮ ಇಪ್ಪತ್ತನೆಯ ವರ್ಷದಲ್ಲಿ (೧೯೬೦ರಲ್ಲಿ) ಇಂಡಿಯನ್ ಮಿಲಿಟರಿ ಅಕ್ಯಾಡೆಮಿಗೆ ಆಯ್ಕೆಯಾದರು. ೧೯೬೧ರ ಜುಲೈ ೨೫ರಂದು ಇವರ ಸೈನಿಕ ವೃತ್ತಿ ಆರಂಭವಾಗಿ ಸಿಗ್ನಲ್ ಕಾರ್ಡ್‌ನಲ್ಲಿ ಸೆಕೆಂಡ್ ಲೆಫ್ಟಿನೆಂಟ್ ಆಗಿ ನೇಮಕಗೊಂಡರು.

ಅತ್ಯಂತ ಕಡಿಮೆ ಅವಧಿಯಲ್ಲಿ ಎಲ್ಲ ಬಡ್ತಿಗಳನ್ನೂ ದೊರಕಿಸಿಕೊಂಡ ಇವರು ಮೇಜರ್ ಪದವಿಗೇರಿದರು.

ಇವರು ಸೇನೆಗೆ ಸೇರಿದ ಅನಂತರದಲ್ಲಿ ನಡೆದ ಎಲ್ಲ ಸಮರಗಳಲ್ಲಿಯೂ ಅಂದರೆ, ೧೯೬೨ರ ೧೯೬೫ರ ಹಾಗೂ ೧೯೭೧ರ ಸಮರ ಕಾರ್ಯಾಚರಣೆಗಳಲ್ಲಿ ಇವರು ಭಾಗವಹಿಸಿ, ದೇಶಸೇವೆ ಸಲ್ಲಿಸಿದರು.

ಗಡಿಪ್ರದೇಶದ ಕಾರ್ಗಿಲ್ ಕಾರ್ಯಕ್ಷೇತ್ರದಲ್ಲಿ ಇವರು ಕಾರ್ಯಾಚರಣೆಯಲ್ಲಿ ತೊಡಗಿದ್ದಾಗಲೇ ೧೯೭೨ರ ಆಗಸ್ಟ್ ೧೯ರಂದು ಇವರು ಮರಣವನ್ನಪ್ಪಿದರು. ಇವರಿಗೆ ಕೇವಲ ೩೩ ವರ್ಷ ವಯಸ್ಸಾಗಿತ್ತು.

ತಮ್ಮ ೨೫ನೆಯ ವರ್ಷದಲ್ಲಿ ವಿವಾಹವಾಗಿದ್ದ ಇವರು ಪತ್ನಿ, ಮೂರು ವರ್ಷದ ಗಂಡು ಮಗು ಮಾತ್ರವಲ್ಲದೆ, ಒಬ್ಬ ಸೋದರ, ಮತ್ತು ಇಬ್ಬರು ಸೋದರಿ

ಯರು ಮತ್ತು ವೃದ್ಧ ಮಾತಾಪಿತೃಗಳನ್ನೂ ಅಗಲಿದ್ದಾರೆ.

ಮೃತರ ಪತ್ನಿಯವರಿಗೆ ಮತ್ತು ತಂದೆತಾಯಿಗಳಿಗೆ ಜ||ಮಣೆಕ್ ಷಾ ಮತ್ತು ಇತರ ಅಧಿಕಾರಿಗಳು ಸಂತಾಪಸೂಚಕ ಪತ್ರಗಳನ್ನು ಬರೆದು, ರಾವ್ ಅವರ ಸೇವೆಯನ್ನು ಶ್ಲಾಘಿಸಿದ್ದಾರೆ.

●

ಅನುಬಂಧ–೧

ಈ ಕೆಳಗೆ ಕಂಡ ಪ್ರಶಸ್ತಿ ವಿಜೇತರ ವಿಳಾಸಗಳಾಗಲಿ, ಜೀವನ ಪರಿಚಯುಗಳಾಗಲಿ ದೊರೆಯದೇ ಇದ್ದ ಕಾರಣ ಅವರ ಪರಿಚಯಗಳನ್ನು ಪ್ರಕಟಿಸಲು ಸಾಧ್ಯವಾಗಲಿಲ್ಲ.

ಭೂಸೇನೆ

ವೀರಚಕ್ರ

೧. ಲೆ|| ಕ|| ಎಸ್. ಜಿ. ಓಸೆನರ್

ಸೇನಾಪದಕ

೨. ಸುಬೇದಾರ್ ಜಮೀಲ್ ಅಹಮದ್
೩. ಹವಾಲ್ದಾರ್ ಶಾಂತಯ್ಯ
೪. ಗ್ರೆನೇಡಿಯರ್ ರಾಮಮೂರ್ತಿ

ಮೆನ್ಷನ್ ಇನ್ ಡೆಸ್ಪಾಚಸ್

೫. ಲೆ|| ಕ|| ನರಹರಿ
೬. ಲೆ|| ಕ|| ಜೆ. ಜಾರ್ಜ್
೭. ಲೆ|| ಕ|| ಟಿ. ಕೃಪಾಳು
೮. ಮೇಜರ್ ಎಸ್. ವಿಜಯಕುಮಾರ್
೯. ಸುಬೇದಾರ್ ಎ. ಕೆ. ತಿಮ್ಮಯ್ಯ
೧೦. ಸುಬೇದಾರ್ ಬಾಲಸುಂದರಂ
೧೧. ಸುಬೇದಾರ್ ಜಿ. ಬಾಗೀಮಣಿ
೧೨. ಹವಾಲ್ದಾರ್ ಹೆಚ್. ಆರ್ ಈಶ್ವರಜೋಯಿಸ್
೧೩. ಸಿಗಮಣಿ
೧೪. ಸಿಪಾಯಿ ಸತ್ಯಪ್ಪ ಕಂಬ್ಳೆ
೧೫. ಮಂಜುನಾಥ ಸಿದ್ದಲಿಂಗಪ್ಪ
೧೬. ಮೇಜರ್ ಹೆಚ್. ಎಂ. ಎಸ್. ಮೂರ್ತಿ

೧೭. ಮೇಜರ್ ಎಸ್. ಕೆ. ಪರಾಂಜಪೆ
೧೮. ಮೇಜರ್ ಬಿ. ಜಿ. ಡಿ. ಕ್ರೂಜ್
೧೯. ಕ್ಯಾಪ್ಟನ್ ಆರ್ಕಾಟ್ ತಂಗವೇಲು ಗಜರಾಜ್
೨೦. ಲೆ|| (ಕುಮಾರಿ) ಡೈಸಿ ಕ್ರಾಸ್ಕೋ
೨೧. ಸಬ್ ಮೇಜರ್ ಸೀತಾರಾಂ ಜಾಧವ್
೨೨. ಸುಬೇದಾರ್ ಎ. ವೆಂಕಟರಮಣ ಹೆಬ್ಬಾರ್
೨೩. ಸುಬೇದಾರ್ ಪಿ. ವಿ. ಚಾಕೋ
೨೪. ನಾಯಕ್ ಅಹಮದ್ ಅಲಿ ಸಯ್ಯದ್
೨೫. ಸಿಗ್ನಲ್‌ಮನ್ ವಿದ್ಯಾಸಾಗರ
೨೬. ಲೆ|| ಕ|| ಎಸ್. ದೇವಸೇನ್
೨೭. ಲೆ|| ಕ|| ಬಿ. ಸಿ. ನಂದಾ
೨೮. ಕ್ಯಾಪ್ಟನ್ ಓಂಕಾರ್‌ಸಿಂಗ್
೨೯. ಸೆಕೆಂಡ್ ಲೆಫ್ಟಿನೆಂಟ್ ಎನ್. ಕೆ. ಅಪ್ಪಯ್ಯ

ನೌಸೇನೆ

ನೌಸೇನಾಪದಕ

೧. ಕ್ಯಾಪ್ಟನ್ ವಿಠಲ್ ಅಮೃತರಾವ್ ಧಾರೇಶ್ವರ್

ಮೆನ್ಷನ್ ಇನ್ ಡೆಸ್ಪಾಚಸ್

೨. ಪಿ. ಎಂ. ಸುಬ್ಬಯ್ಯ
೩. ಡೇವಿಡ್ ಡಿಸೌಜಾ
೪. ಸಿಕಂದರ್ ತಹಸೀಲ್ದಾರ್

ವಾಯುಸೇನೆ

ವೀರಚಕ್ರ

೧. ಸ್ಕ್ವಾಡ್ರನ್ ಲೀಡರ್ ಎಸ್. ಸುಬ್ಬರಾಮು
೨. ವಿಂಗ್ ಕಮಾಂಡರ್ ಡಿ. ಎಂ. ಕಾನ್‌ಕ್ವೆಸ್ಟ್
೩. ಫ್ಲೈಟ್ ಲೆಫ್ಟಿನೆಂಟ್ ಕೆ. ಎಸ್. ಸಹೋತಾ

ಮೆನ್ಷನ್ ಇನ್ ಡೆಸ್ಪಾಚೆಸ್

೪. ಸ್ಕ್ವಾಡ್ರನ್ ಲೀಡರ್ ಸಿ. ಎಸ್. ದೊರೆಸ್ವಾಮಿ
೫. ವಿಂಗ್ ಸ್ಕ್ವಾಡ್ರನ್ ಲೀಡರ್ ವಿ. ವಿ. ಪ್ರಭು
೬. ಫ್ಲೈಟ್ ಲೆಫ್ಟಿನೆಂಟ್ ಬಿ. ಎನ್. ಬೋಪಯ್ಯ
೭. ಫ್ಲೈಟ್ ಲೆಫ್ಟಿನೆಂಟ್ ಜಿ. ಎಂ. ಡೇವಿಡ್
೮. ಫ್ಲೈಟ್ ಸಾರ್ಜೆಂಟ್ ಹೆಚ್. ಎಸ್. ಎನ್. ಮೂರ್ತಿ
೯. ಸಾರ್ಜೆಂಟ್ ಎಸ್. ಪಿ. ಖಡ್ಕೆ
೧೦. ಸ್ಕ್ವಾಡ್ರನ್ ಲೀಡರ್ ಪಿ. ಎಸ್. ರಘುನಾಥ್
೧೧. ಫ್ಲೈಟ್ ಲೆಫ್ಟಿನೆಂಟ್ ಯು. ಆರ್. ಆರ್. ಪೇಜಾವರ್
೧೨. ಫ್ಲೈಟ್ ಲೆಫ್ಟಿನೆಂಟ್ ಪಿ. ಆರ್. ಎನ್. ಮೂರ್ತಿ
೧೩. ಸ್ಕ್ವಾಡ್ರನ್ ಲೀಡರ್ ಸಿಲ್‌ವೆಸ್ಟರ್ ಡಿ:ಮೆಗ್ರಿ
೧೪. ಫ್ಲೈಯಿಂಗ್ ಆಫೀಸರ್ ಎಸ್. ಟಿ. ಸಿಂಗ್ ಪಾಲ್
೧೫. ಪೈಲಟ್ ಆಫೀಸರ್ ಡಿ. ಕೆ. ಹೆಗ್ಗಡೆ

ಅನುಬಂಧ-೨

ಮೈಸೂರು ಸರ್ಕಾರದ ಆರ್ಥಿಕ ನೆರವು

ಯುದ್ಧದಲ್ಲಿ ತೋರಿರುವ ಶೌರ್ಯ ಸಾಹಸಗಳಿಗಾಗಿ ಬಹುಮಾನ ಪಡೆದ ಯೋಧರಿಗೆ ಮೈಸೂರು ಸರ್ಕಾರವು ನೀಡಿರುವ ಧನಸಹಾಯದ ವಿವರ.

ಸರ್ಕಾರಿ ಆರ್ಡರ್ ನಂಬರ್ H.D. 146 M.S.S. 71 Dated 27-12-1971 ಮತ್ತು (೧) G.O. No. D.D. 119 M.D.B./63 Dated 27-12-1963. (೨) G.O. No. 1+D. 139 M.S.S. 71 Dated 17-12-1971.

* * *

೨೭-೧೨-೬೩ರ ಸರ್ಕಾರಿ ಆರ್ಡರ್ ಪ್ರಕಾರ ಈಗಿರುವ ಆರ್ಥಿಕ ಸೌಕರ್ಯಗಳನ್ನು ಅನುಸರಿಸಿ ಮೈಸೂರು ದೇಶದ ಸೈನಿಕರುಗಳಿಗೆ ಅಥವಾ ಅವರ ಸಂಬಂಧಪಟ್ಟವರಿಗೆ ಅವರು ಯುದ್ಧದಲ್ಲಿ ತೋರಿದ ಶೌರ್ಯ ಸಾಹಸಗಳಿಗಾಗಿ ಕೆಳಕಂಡಂತೆ ಆರ್ಥಿಕ ಸಹಾಯವನ್ನು ಸರ್ಕಾರದವರು ಮಂಜೂರ್ಮಾಡಿ, ಈ ಕೆಳಕಂಡಂತೆ ಮೊಬಲಗನ್ನು ಹೆಚ್ಚಿಸಿರುತ್ತಾರೆ.

೧) ಪರಮವೀರಚಕ್ರ ಪಡೆದವರಿಗೆ : ರೂ. ೧೦,೦೦೦ ಗಳಿಂದ ೧೫,೦೦೦ಗಳಿಗೆ

೨) ಮಹಾವೀರಚಕ್ರ ಪಡೆದವರಿಗೆ : ರೂ. ೭,೫೦೦ಗಳಿಂದ ೧೦,೦೦೦ಗಳಿಗೆ

೩) ವೀರಚಕ್ರ ಪಡೆದವರಿಗೆ : ರೂ. ೩,೦೦೦ಗಳಿಂದ ೫.೦೦೦ಗಳಿಗೆ

ಹಾಗೂ ಸೇನಾ ಪ್ರಶಸ್ತಿ ಪಡೆದವರಿಗೆ ೩೦೦೦ ರೂ.ಗಳನ್ನೂ, 'ಮೆನ್‌ಷನ್ಡ್ ಇನ್ ಡೆಸ್‌ಪ್ಯಾಚಸ್' ಪದವಿ ಪಡೆದವರಿಗೆ ೧,೫೦೦ ರೂ.ಗಳನ್ನೂ ಮಂಜೂರು ಮಾಡಿದ್ದಾರೆ.

ಅಲ್ಲದೆ ಯುದ್ಧದಲ್ಲಿ ಮಡಿದವರ ಅಥವಾ ಅಂಗವಿಕಲರಿಗೆ ೧೭-೧೨-೧೯೭೧ರ ಸರ್ಕಾರಿ ಆಜ್ಞೆಯಲ್ಲಿ ಮಂಜೂರು ಮಾಡಿರುವ ೫,೦೦೦ ರೂ.ಗಳ ಜೊತೆಗೆ ಎರಡು ಎಕರೆ ತರಿ ಜಮೀನು ಅಥವಾ ನಾಲ್ಕು ಎಕರೆ ಮಳೆಯಿಂದ ಬೆಳೆಯಾಗುವ ತರಿ ಜಮೀನು ಅಥವಾ ಎಂಟು ಎಕರೆ ಖುಷ್ಕಿ ಜಮೀನನ್ನು ಮುಫತ್ತಾಗಿ ಮಂಜೂರು ಮಾಡಿದ್ದಾರೆ.

ಈ ಮೇಲ್ಕಂಡ ಮೊಬಲಗನ್ನು ಸಂಬಂಧಪಟ್ಟ ಯೋಧರಿಗೆ ಕೊಡಲು ಮೈಸೂರು ರಾಜ್ಯದ ಸೈನಿಕ, ನಾವಿಕ ಮತ್ತು ವೈಮಾನಿಕ ಬೋರ್ಡಿನ ಕಾರ್ಯದರ್ಶಿಗಳಿಗೆ ಅಧಿಕಾರ ನೀಡಲಾಗಿದೆ.

ಮರಣೋತ್ತರ ಪ್ರಶಸ್ತಿ ವಿಜೇತರಿಗೆ ಆಯಾ ಜಿಲ್ಲಾಧಿಕಾರಿಗಳು ವಿಚಾರಣೆ ನಡೆಸಿ, ಸಂಬಂಧಪಟ್ಟ ವಾರಸುದಾರರಿಗೆ ಹಣವನ್ನು ನೀಡುತ್ತಾರೆ.

ಕೆ. ಅನಂತಶಾಸ್ತ್ರಿ,
ಅಧೀನ ಕಾರ್ಯದರ್ಶಿ, ಗೃಹಖಾತೆ,
ಮೈಸೂರು ಸರ್ಕಾರ.

§ § §

ಭಾರತ-ಪಾಕ್ ಯುದ್ಧದಲ್ಲಿ ಗಾಯಗೊಂಡ ಅಥವಾ ಮಡಿದ ಯೋಧರಿಗೆ ಧನಸಹಾಯ ಮಾಡಿದ ಬಗ್ಗೆ ವಿವರಗಳು.

೧) ಈ ಯುದ್ಧದಲ್ಲಿ ಮೈಸೂರು ರಾಜ್ಯಕ್ಕೆ ಸೇರಿದ ೬೨ ಮಂದಿ ಯೋಧರು ಮಡಿದಿದ್ದಾರೆ. ೧೧೨ ಮಂದಿ ಗಾಯಗೊಂಡಿದ್ದಾರೆ. ಈ ೧೧೨ ಮಂದಿಯಲ್ಲಿ ೧೦ ಮಂದಿ ತೀವ್ರ ಗಾಯಗೊಂಡಿದ್ದು, ಅಂಗವಿಕಲರಾಗುವ ಸಂಭವವಿದೆ.

೨) ಮಡಿದವರ ಕುಟುಂಬಕ್ಕೆ ಶೀಘ್ರ ಪರಿಹಾರ ಕೊಡುವ ದೃಷ್ಟಿಯಿಂದ ಸರ್ಕಾರದವರು ಪ್ರತಿ ಸಂಸಾರಕ್ಕೂ ೫,೦೦೦ ರೂ.ಗಳನ್ನು ಮಂಜೂರು ಮಾಡಿದ್ದಾರೆ. ಆ ಮೊಬಲಗನ್ನು ಮಡಿದವರ ಎಲ್ಲ ಕುಟುಂಬಗಳಿಗೂ ಹಂಚಲಾಗಿದೆ. ಗಾಯಗೊಂಡ ಸೈನಿಕರ ಪ್ರತಿ ಕುಟುಂಬಕ್ಕೂ ೧೦೦೦ ರೂ.ಗಳ ಧನಸಹಾಯ ನೀಡಲಾಗಿದೆ. ಅಲ್ಲದೆ ತೀವ್ರ ಗಾಯಗೊಂಡ ಅಂಗವಿಕಲರಿಗೆ ಮತ್ತು ಯುದ್ಧದಲ್ಲಿ ಮಡಿದವರ ಕುಟುಂಬಗಳಿಗೆ ಈ ಧನಸಹಾಯದ ಜೊತೆಗೆ ಮೂರು ಎಕರೆ ತರಿ ಜಮೀನು, ನಾಲ್ಕು ಎಕರೆ ಮಳೆಯಿಂದ ಬೆಳೆಯಾಗುವ ತರಿಜಮೀನು, ಅಥವಾ ಎಂಟು ಎಕರೆ ಖುಷ್ಕಿ ಜಮೀನನ್ನು ಮುಫತ್ತಾಗಿ ಆದ್ಯತೆಯ ಮೇಲೆ ಮಂಜೂರು ಮಾಡಲು ಸಂಬಂಧಪಟ್ಟ ಜಿಲ್ಲಾಧಿಕಾರಿಗಳನ್ನು ಕೇಳಿಕೊಳ್ಳಲಾಗಿದೆ. ಯುದ್ಧದಲ್ಲಿ ಮಡಿದವರನ್ನು ಅವಲಂಬಿಸಿರುವವರಿಗೆ ವಿದ್ಯಾಭ್ಯಾಸದ ರಿಯಾಯಿತಿಯನ್ನು ಮಂಜೂರು ಮಾಡಲಾಗಿದೆ.

೩) ನೌಕರಿ ಬಗ್ಗೆ ಸರ್ಕಾರದ ಆರ್ಡರ್ O.M. No. G.A.D. 155 R.R. 72 D/23--2-72ರ ಪ್ರಕಾರ ಆದ್ಯತೆಯನ್ನು ಕೊಡಲು ಆದೇಶ ನೀಡಲಾಗಿದೆ.

೧) ಅಂಗವಿಕಲ ಮಾಜಿ ಸೈನಿಕರಿಗೆ ನೌಕರಿ ವಿನಿಮಯ ಕೇಂದ್ರದಲ್ಲಿ ಹೆಸರನ್ನು ರಿಜಿಸ್ಟರ್ ಮಾಡಲು ಆದ್ಯತೆ ಕೊಡಬೇಕು.

೨) ಯುದ್ಧದಲ್ಲಿ ಮಡಿದವರ ಕುಟುಂಬದ ಇಬ್ಬರಿಗೆ ನೌಕರಿ ವಿನಿಮಯ ಕೇಂದ್ರದಲ್ಲಿ ಎರಡನೆಯ ಆದ್ಯತೆ ಕೊಡಬೇಕು.

೩) ಯುದ್ಧದಲ್ಲಿ ಮಡಿದವರ ಕುಟುಂಬದ ಇಬ್ಬರಿಗೆ ಅವರು ನೌಕರಿ ವಿನಿಮಯ ಕೇಂದ್ರದಲ್ಲಿ ಹೆಸರು ರಿಜಿಸ್ಟರ್ ಮಾಡಿಸದಿದ್ದರೂ ವಿನಿಮಯ ಕೇಂದ್ರದ

ಮೂಲಕ ಆಯ್ಕೆ ಮಾಡುವ ಕೆಲಸಗಳಿಗೆ ನೇಮಿಸಿಕೊಳ್ಳಬೇಕು.

೪) ಯುದ್ಧದಲ್ಲಿ ಮಡಿದ ಯೋಧರ ಕುಟುಂಬಕ್ಕೆ ಮನೆಗಳನ್ನು ಕಟ್ಟಿಸುದಕ್ಕಾಗಿ ಮೈಸೂರು ಸರ್ಕಾರದ ಮುಖ್ಯ ಇಂಜನಿಯರ್ ಅವರಿಗೆ ೫.೫ ಲಕ್ಷ ರೂ. ನೀಡಲಾಗಿದೆ. ಮಡಿದ ಹಾಗೂ ಅಂಗವಿಕಲ ಯೋಧರ ಕುಟುಂಬಗಳಿಗೆ ಮನೆ ಕಟ್ಟಲು ನಿವೇಶನವನ್ನು ಮುಫತ್ತಾಗಿ ಕೊಡಲಾಗುವುದು.

೫) ಯುದ್ಧದಲ್ಲಿ ಮಡಿದ ಹಾಗೂ ಅಂಗವಿಕಲ ಯೋಧರ ಕುಟುಂಬದವರಿಗೆ ರಾಜ್ಯದ ಸಿವಿಲ್ ಸರ್ವಿಸಿನ ಬಗ್ಗೆ ಮಾಡಲಾಗುವ ಅರ್ಜಿ, ಪರೀಕ್ಷೆ, ನೌಕರಿಗಳಿಗೆ ವಿಧಿಸಲಾದ 'ಫೀ'ಯನ್ನು ಮನ್ನ ಮಾಡಲಾಗಿದೆ.

ಕರ್ನಲ್ ಎ. ಎಂ. ಕಡಕೋಳ್, ಎ.ವಿ.ಎಸ್.ಎಂ.
ಕಾರ್ಯದರ್ಶಿ,
ಮೈಸೂರು ರಾಜ್ಯ ಸೈನಿಕ, ನಾವಿಕ ಮತ್ತು
ವೈಮಾನಿಕ ಮಂಡಳಿ, ಬೆಂಗಳೂರು.

4241
Rs. 5-00
23.2.73

Vijaya Evening College Library
BANGALORE

This book should be returned on or before the date last stamped. An overdue charge of 10 paise will be levied for each day, if the book is kept beyond that date.

Call No: ಬೆ. ನ. ಸುಂದರರಾವ್

Author: ಕರ್ನಾಟಕದ ವೀರರಮಣಿಯರು

Title :

Signature	Borrowing Date

Vija

Acc